॥ ಶ್ರೀಃ ಹರಿಃ ಓಂ ॥

॥ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯ ನಮಃ॥

# ಶ್ವಾಸಸಂಧಿ

## ಸಂಧಿ ೧೫

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ॥ಪ॥

### ಪದ್ಯ ೧

**ಮೂಲ**

ಭಾರತೀಶನು ಘಳಿಗೆಯೊಳು ಮು ।
ನ್ನೂರ ಅರವತ್ತು ಸುರಜಪಗಳ ।
ತಾ ರಚಿಸುವನು ಸರ್ವಜೀವರೊಳಿದ್ದು ಬೇಸರದೆ ॥
ಕಾರುಣಿಕನವರವರ ಸಾಧನ ।
ಪೂರೈಸಿ ಭೂ ಸ್ವರ್ಗ ನರಕವ ।
ಸೇರಿಸುವ ಸರ್ವಜ್ಞ ಸಕಲೇಷ್ಟಪ್ರದಾಯಕನು ॥೧॥

**ಅವತರಣಿಕೆ**

ಭಾರತೀಪತಿಯಾದ ಶ್ರೀಮುಖ್ಯಪ್ರಾಣದೇವರು ತ್ರಿವಿಧಜೀವರ

ಸ್ಥೂಲಶರೀರಗಳಲ್ಲಿದ್ದು ಹಂಸಮಂತ್ರಜಾಪಕರರಾಗಿ ಅವರವರ ಗತಿಯನ್ನು ನೀಡುವರೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಭಾರತೀಶನು**=ಭಾರತೀಪತಿಯಾದ ಶ್ರೀವಾಯುದೇವರು, **ಘಳಿಗೆಯೊಳು**=ಒಂದು ಘಳಿಗೆಯ ಅವಧಿಯಲ್ಲಿ, ಅಂದರೆ ೨೪ ನಿಮಿಷಗಳಲ್ಲಿ, **ಮುನ್ನೂರ ಅರವತ್ತು**=೩೬೦ ಸಂಖ್ಯಾಕವಾದ, **ಸುರಜಪಗಳ**=ಹಂಸನಾಮಕ ಪರಮಾತ್ಮನ ನಾಮೋಚ್ಚಾರಣಾರೂಪವಾದ ಶ್ವಾಸಜಪಗಳನ್ನು (ಇದೇ ಷಡಕ್ಷರಾತ್ಮಕವಾದ ಹಂಸಮಂತ್ರವು) **ಸರ್ವಜೀವರೊಳಿದ್ದು**=ಸಕಲ ತ್ರಿವಿಧಜೀವರ ಸ್ಥೂಲದೇಹಗತರಾಗಿದ್ದು (ಸಮಸ್ತ ಜೀವ ಜಂತುಗಳೂ ಇದರಲ್ಲಿ ಗ್ರಾಹ್ಯ) **ಬೇಸರದೆ**=ಸ್ವಲ್ಪವೂ ಬೇಸರ ಪಡದೆ ನಿರಾಯಾಸವಾಗಿ (ಇದು ಭಗವತ್ಕಾರ್ಯವೆಂಬ ಅನುಸಂಧಾನದಿಂದ) **ಕಾರುಣಿಕ**=ದಯಾಳುವಾದ ಶ್ರೀವಾಯುದೇವರು, ಅವರವರ=ಆಯಾಯ ಜೀವರ, **ಸಾಧನ ಪೂರೈಸಿ**=ದಿನಕ್ಕೆ ೨೧,೬೦೦ರಂತೆ ಆ ಜೀವರ ಆಯುರ್ಮಾನ ಪರ್ಯಂತ ಶ್ವಾಸಕ್ರಿಯಾ ದ್ವಾರಾ, ಸಾಧನ ಮಾಡಿಸಿ, **ಭೂ**=ರಾಜಸರಿಗೆ ಸಾಂತಾನಿಕ ಲೋಕಗಳು, **ಸ್ವರ್ಗ**=ಸಾತ್ವಿಕರಿಗೆ ನಿತ್ಯಾನಂದರೂಪವಾದ ಮುಕ್ತಿಧಾಮವಾದ ವೈಕುಂಠ, **ನರಕವ**=ತಮೋಯೋಗ್ಯರಿಗೆ ನಿತ್ಯ ದುಃಖರೂಪವಾದ ಅಂಧಂತಮಸ್ಸು, **ಸೇರಿಸುವ**=ಅವರವರ ಸ್ವರೂಪ ಯೋಗ್ಯತಾನುಸಾರ ಆಯಾಯ ಗತಿಗಳನ್ನು ಕೊಡುವವನು, **ಸರ್ವಜ್ಞ**=ಜೀವರ ಯೋಗ್ಯತೆ ಬಲ್ಲವರು, **ಸಕಲೇಷ್ಟಪ್ರದಾಯಕನು**=ಅವರವರ ಇಷ್ಟಗಳನ್ನು ಸಲ್ಲಿಸುವವನು. ॥೧॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀವಾಯುದೇವರು ಶ್ವಾಸಜಪಗಳ ನಡಸಿ ಗತಿಗಳ ಕೊಡತಾರೆಂದು ಹೇಳತಾರೆ.

ಭಾರತೀದೇವಿಯರ ಪತಿಯಾದ ಶ್ರೀವಾಯುದೇವರು ಒಂದು ದಿನಕ್ಕೆ ಅರವತ್ತು ಘಳಿಗೆ, ಒಂದು ಘಳಿಗೆ ಒಳಗೆ ಮುನ್ನೂರಾ ಅರವತ್ತು ಹಂಸ ಎಂಬ ಸಮೀಚೀನವಾದ ಹಂಸನಾಮಕ ಪರಮಾತ್ಮನ ನಾಮೋಚ್ಚಾರಣ ರೂಪವಾದ ಜಪಗಳ ವಾಯುದೇವರು ತಾವು ಮಾಡತಾರೆ. ಜಾಮಿತಾದಿ ದೋಷಗಳಿಂದ ರಹಿತರಾಗಿ, ಸಮಸ್ತ ಪ್ರಾಣಿಗಳಲ್ಲಿದ್ದು ಆಯುಸ್ಸು ಕ್ಷೀಣಕ್ಕೆ ಕಾರಣರಾದ ವಾಯುದೇವರ ಕಡಿಯಿಂದ, ಶ್ವಾಸನಿಮಿತ್ತದಿಂದ ೨೧,೬೦೦ ಜಪಗಳು ದಾವಾಗ ಮುಗಿಯುತ್ತವೆ ಆಗ ಒಂದು ದಿನದ ಆಯುಸ್ಸು ಕ್ಷೀಣವಾಗುತ್ತದೆ. ಈ ಪ್ರಕಾರ ಆಯುಸ್ಸಿಗೆ ಕಾರಣರಾದವರು, ೨೧,೬೦೦ ಶ್ವಾಸಕ್ಕೆ ಆಗತಕ್ಕ ಪ್ರತಿಯೊಂದು ದಿನದ ಆಯುಸ್ಸು ಕಾಲದಲ್ಲಿ ಸರ್ವತತ್ತ್ವಗಳಿಗೆ, ತತ್ತ್ವಾಭಿಮಾನಿಗಳಿಗೆ ನಿಯಾಮಕರಾಗಿ ಇದ್ದು, ಅವರವರ ಸ್ವರೂಪ ಯೋಗ್ಯತಾವನ್ನನುಸರಿಸಿ, ಅವರವರಿಗೆ ಯೋಗ್ಯವಾದ ಸಾಧನಿಗಳ ಸ್ಥೂಲ ದೇಹೇಂದ್ರಿಯಗಳ ದ್ವಾರಾ ಪೂರ್ಣಮಾಡಿ, ಕೆಲವು ಕಾಲ ಭೂಮಿಯಲ್ಲಿ ಸಕಾಮಪುಣ್ಯವಿಶೇಷಗಳಿಂದ ಸ್ವರ್ಗದಲ್ಲಿ ಹಾಂಗೇ ತದ್ವ್ಯತಿರಿಕ್ತ ಭೋಗ ಭೂಮಿಗಳಾದ ಇತರ ಖಂಡಗಳಲ್ಲಿ ಪಾಪಕರ್ಮವಶಾತ್ ನರಕದಲ್ಲಿ ಸೇರಿಸೋವರಾಗತಾರೆ ಎಂದರೆ, ಹಾಗೆ ಸೇರತಕ್ಕ ಕರ್ಮ ಮಾಡಿಸೋದರಲ್ಲಿ ಕಾರಣರಾದ್ದರಿಂದ ತದ್ದ್ವಾರ ಸೇರಸತಾರೆ. ಇದು ಅಪಕ್ವ ದಶಾದಲ್ಲಿ ಅನಾದಿ ಕರ್ಮವನ್ನನುಸರಿಸಿ ಮಾಡಿಸಿದ ಕಾಮ್ಯಕರ್ಮಫಲ ತ್ರಿವಿಧರಾದವರಿಗೂ ಆಗೋದಾಗತದೆ. ಸರ್ವಪ್ರಾಣಿಗಳ ಸ್ವರೂಪಯೋಗ್ಯತಾ ಬಲ್ಲ ವಾಯುದೇವರು, ಸರ್ವಜೀವರ ಸ್ವರೂಪಯೋಗ್ಯತಾಕ್ಕೆ ಅನುಸರಿಸಿದ ಇಷ್ಟಗಳ ಭಗವಂತನಿಗೆ ವಿಜ್ಞಾಪನಾ ಮಾಡಿ, ಲಿಂಗಭಂಗಾನಂತರ ಭಗವದಾಜ್ಞಾದಿಂದ ಕೊಡತಕ್ಕವರು. **ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ** ಎಂಬ ವಚನರೀತ್ಯಾ, ದೇವರ ಆಜ್ಞಾನುಸಾರ ಮುಮುಕ್ಷುಗಳಿಗೆ ಮೋಕ್ಷ ಕೊಡತಾರೆಂತಲೂ, ಹುಂಕಾರದಿಂದ ನಿತ್ಯಸಂಸಾರಿಗಳಿಗೆ ಲಿಂಗಭಂಗಮಾಡಿ ಸುಖದುಃಖಗಳ ಕೊಡತಾರೆಂತಲೂ ತಾತ್ಪರ್ಯ.

ಶ್ರೀವಾಯುದೇವರು ದೇಹದಲ್ಲಿ ದಾವಸ್ಥಳದಲ್ಲಿದ್ದು ಜಪ ಮಾಡತಾರೆ ಎಂದರೆ, ಸ್ಥೂಲದೇಹಗತ ಹೃದಯಕಮಲದಲ್ಲಿ ಕರ್ಣಿಕಾಮೂಲಗತ ಮೂಲೇ

ಶನ ಪಾದಮೂಲದಲ್ಲಿ ಇದ್ದು, ಹಂಸ ಎಂತ ಜಪಿಸೋವರಾಗತಾರೆ. (೬ನೇಸಂಧಿ ೧೯ನೇ ಶ್ಲೋಕ). ಅನ್ಯರಾದ ರುದ್ರಾದಿ ದೇವತೆಗಳಿಗೆ ಈ ಅಧಿಕಾರವಿಲ್ಲ. ಹಂ ಎಂಬ ವರ್ಣ ಉಚ್ಚಾರ ಕಾಲಕ್ಕೆ, ಆ ವರ್ಣ ವಾಯುದೇವರ ಮುಖದಿಂದ ಬಾಹ್ಯದಲ್ಲಿ ವ್ಯಕ್ತವಾಗಿ, ಶ್ವಾಸದಲ್ಲಿ ಅಂತರ್ಭೂತವಾಗಿ ಶ್ವಾಸದ್ವಾರಾ ಬಾಹ್ಯದಲ್ಲಿ ನಾಸಿಕಾ ದ್ವಾರದಿಂದ ವ್ಯಕ್ತವಾಗತದೆ. ಸ ಎಂಬ ವರ್ಣ ಉಚ್ಚಾರಕಾಲಕ್ಕೆ ಅದೂನೂ ಶ್ವಾಸದಲ್ಲಿ ಪ್ರವಿಷ್ಟವಾಗಿ, ನಾಸಿಕಾದ್ವಾರದಿಂದ ಶ್ವಾಸ ಒಳಗೆ ಪ್ರವೇಶಕಾಲದಲ್ಲಿ ಸ ಎಂಬ ವರ್ಣಸಹಿತವಾಗಿ ಒಳಗೆ ಪ್ರವೇಶ ಮಾಡತದೆ. ಉಚ್ಛ್ವಾಸ ನಿಶ್ವಾಸಗತ ಎರಡೂ ವರ್ಣಗಳೂ ಸೇರಿ ಹಂಸ ಎಂತ ಮಂತ್ರವಾಯಿತು. ವಾಯುದೇವರು ದೇಹಗತ ಜಡವಾಯು ಅಧಿಷ್ಠಿತರಾಗಿ ಗಾಳಿರೂಪ ಧರಿಸಿ ಒಳಗೆ ಹೊರಗೆ ಸಂಚರಿಸತಾ ಇದ್ದಾರೆ. ಆಯುಸ್ಸಿಗೆ ಕಾರಣವಾದದ್ದು ಈ ಶ್ವಾಸ. ಇದರಲ್ಲಿ ಈ ಪ್ರಕಾರ ಹಂಸಮಂತ್ರ ವಾಯುದೇವರು ತಾವು ಮಾಡತಾರೆ. ಆದರೆ ಜೀವರ ಅತ್ಯಣುಸ್ವರೂಪದಲ್ಲಿ ಎಂತ ತಾತ್ಪರ್ಯವಲ್ಲ. ಜೀವಾಂತರ್ಗತ, ವಾಯುಃಪ್ರವೇಶವಿಲ್ಲ. ಮತ್ತು ಶ್ವಾಸ ಎಂಬುದು ಮೇಲೆ ಹೇಳಿದ ಪ್ರಕಾರ ಆಯುಸ್ಸಿಗಾಗಿ ನೇಮಕವಾದದ್ದು. ಆಯುರ್ನೇಮ ಜೀವಗೆ ಇಲ್ಲ, ಬಾಹ್ಯವಾದ ಸ್ಥೂಲದೇಹಕ್ಕೇ ಆದ್ದರಿಂದ ಜೀವಶಬ್ದ ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವಪರ ಎಂಬುದು ಅರ್ಥಾತ್ ಸಿದ್ಧವು. ಈ ಹಂಸಮಂತ್ರ ತ್ರಿವಿಧಜೀವರೊಳು ವಾಯುದೇವರು ಏಕಪ್ರಕಾರ ಮಾಡೋವರಾಗತಾರೆ ||೧||

**ಭಾವಪ್ರಕಾಶಿಕೆ**

ಶ್ರೀಭಾರತೀಪತಿಯಾದ ಮುಖ್ಯಪ್ರಾಣದೇವರು ಸರ್ವಪ್ರಾಣಿಗಳೊಳಗಿದ್ದು ಒಂದು ಘಳಿಗೆಯ ಕಾಲದೊಳಗೆ ೩೬೦ ಶ್ವಾಸ ಜಪಗಳನ್ನು ತಾವು ಮಾಡಿ ಮಾಡಿಸಿ, ಮಹಾ ಕರುಣಾಳುವಾದ, ಸರ್ವಜ್ಞರಾದ, ಸಕಲ ಮನೋಭೀಷ್ಟಪೂರಕರಾದ ಮುಖ್ಯಪ್ರಾಣದೇವರು, ತ್ರಿವಿಧ ಜೀವರಾಶಿಗಳ ಯೋಗ್ಯತಾನುಸಾರವಾದ ಸಾಧನಗಳನ್ನು ಮಾಡಿಸಿ, ರಾಜಸರನ್ನು ಭೂಲೋಕಕ್ಕೂ, ಸಾತ್ವಿಕರನ್ನು ಸ್ವರ್ಗಲೋಕಕ್ಕೂ, ತಾಮಸರನ್ನು ನರಕ

ಲೋಕಕ್ಕೂ ಕಳುಹಿಸುವರು. ಇಲ್ಲಿ ಭೂಲೋಕ ಶಬ್ದದಿಂದ ಸುಖದುಃಖ ಮಿಶ್ರವಾದ ಸಂತಾನಿಕ ಲೋಕವೆಂಬ ನಿತ್ಯಸಂಸಾರಿಗಳು ವಾಸವಾಡುವ ಲೋಕ ವನ್ನೂ ಗ್ರಹಣ ಮಾಡಬೇಕು. ಸ್ವರ್ಗಶಬ್ದದಿಂದ ಮುಕ್ತಿಸ್ಥಾನವನ್ನೂ ತೆಗೆದುಕೊಳ್ಳಬೇಕು. ನರಕ ಶಬ್ದದಿಂದ ತಮಸ್ಸನ್ನು ತೆಗೆದುಕೊಳ್ಳಬೇಕು.

## ಭಾವದರ್ಪಣ

ಈಗ ಏಕವಿಂಶತ್ಸಹಸ್ರಾತ್ಮಾ ಷಟ್‌ಶತಾಧಿಮಹರ್ನಿಷಂ| ಶ್ವಾಸರೂಪೋ ಜಪೇನ್ನಿತ್ಯಂ | ಎಂಬ ತಂತ್ರಸಾರೋಕ್ತ್ಯಾನುಸಾರ ಘಟಿಕಾ ಪ್ರಾರಂಭಮಾಡಿ ಒಂದು ಸಂವತ್ಸರದವರೆಗೂ ಆಗತಕ್ಕ ಶ್ವಾಸಜಪ ವಿವರ ಹೇಳುವುದಕ್ಕೆ ಶ್ವಾಸ ಸಂಧಿ ಉಪಕ್ರಮಿಸುತ್ತಾರೆ, ಹರೀತಿ. ಘಟಿಕೆಗೆ ೩೬೦ ಶ್ವಾಸ ಆಗುವವೆಂದು ಸೂಚಿಸುತ್ತಾರೆ, ಭಾರತೀಶೇತಿ. ಉಸುರು=ಶ್ವಾಸ. ॥೧॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶ್ರೀಗುರುಭ್ಯೋನಮಃ ॥ ಹರಿಃ ಓಂ॥ ಶ್ವಾಸರೂಪಃ ಜಪಃ ॥ ಏಕ ವಿಂಶತ್ಸಹಸ್ರಾತ್ಮಾ ಸ ಷಟ್‌ಶತಮಹರ್ನಿಶಮ್॥ ಅರ್ಪಣೀಯಃ ಹರೌ ನಿತ್ಯಂ॥ ಇತಿ ಚ ವ್ಯಕ್ತೀ ಕುರ್ವನ್ ಶ್ವಾಸಾನ್ ಗಣಯನ್ ತತ್ಸಂಧಿಂ ಆರಭತೇ ಭಾರತೀಶ ಇತಿ ॥

ಉಸಿರು=ಶ್ವಾಸ॥ ಶ್ವಾಸಸಂಖ್ಯಾಕ್ರಮೇಣೈವ ವರ್ಣಯಾಮೀಶ ತುಷ್ಟಯೇ ॥ ಭಾರತೀರಾಟ್ ಜಯತಿ ಷಟ್ಸ್ಯುತ್ತರಶತತ್ರಯಮ್ ॥ ಘಟಿಕಾಯಾಮ್ ॥೧॥

## ಕನ್ನಡಾರ್ಥ

೨೧,೬೦೦ ಶ್ವಾಸರೂಪ ಜಪಗಳನ್ನು ನಿತ್ಯದಲ್ಲಿಯೂ ಶ್ರೀಹರಿಯಲ್ಲಿ ಸಮರ್ಪಿಸತಕ್ಕದ್ದು ಎಂಬ ವಿಷಯವಾಗಿ ನಿರೂಪಿಸಲು ಶ್ವಾಸಗಳನ್ನು ಗಣನ ಮಾಡಿ ಹೇಳುತ್ತ ಶ್ವಾಸಸಂಧಿಯನ್ನು ಪ್ರಾರಂಭಿಸುತ್ತಾರೆ, ಭಾರತೀಶನು ಎಂಬ ಪದ್ಯದಿಂದ.

ಉಸಿರು=ಶ್ವಾಸ. ಪರಮಾತ್ಮನ ಪ್ರೀತಿ ವಿಶೇಷವಾಗಲು ಶ್ವಾಸಸಂಖ್ಯೆಯನ್ನು ಕ್ರಮದಿಂದ ಹೇಳುತ್ತೇನೆ. ಭಾರತೀಪತಿಪ್ರಾಣದೇವರು ಘಳಿಗೆಯೊಂದರಲ್ಲಿ ೩೬೦ ಶ್ವಾಸಮಂತ್ರ ಜಪಗಳನ್ನು ಮಾಡುತ್ತಾರೆ. ||೧||

## ಶ್ರೀ ಗುರುಹೃದಯಪ್ರಕಾಶಿಕೆ

ಶ್ರೀಹರಿಃ ಓಂ|| ಹಂಸರೂಪ ಶ್ರೀಹರಿಯನ್ನು ನೂರಹದಿನಾರು ವರ್ಷಗಳಲ್ಲಿಯೂ ಶ್ವಾಸರೂಪ ಜಪದಿಂದ ಪ್ರಾಣದೇವರು ಉಪಾಸನೆ ಮಾಡಿ ಜೀವರಿಂದ ಮಾಡಿಸುತ್ತಾರೆಂದು ತಿಳಿಯಬೇಕಂತ ಹನ್ನೆರಡನೇ ಸಂಧಿಯಲ್ಲಿ ಹೇಳಿದ್ದನ್ನು ವಿಸ್ತರಿಸಿ ಹೇಳಿ, ಪ್ರಾಣಾಗ್ನಿಹೋತ್ರ ಸಂಕ್ಷೇಪವನ್ನು, ವಾಙ್ಮನಸ್ಸಿನಲ್ಲಿ ಪ್ರಾಣದೇವರು ಇದ್ದು ದೇವರ ಗುಣೋಪಾಸನೆ ಮಾಡಿ ಜೀವರನ್ನು ರಕ್ಷಿಸುವ ಬಗ್ಗೆ ಅಲ್ಲೇ ಸಂಕರ್ಷಣರೂಪ ಸ್ಮರಣೆ, ಶ್ರೀಹರಿಯ ವೈಕುಂಠಾದಿ ಲೋಕದ ಐದು ಬಾಗಲಿನಿಂದ ದೇವರನ್ನು ಹೊಂದುವ ಐದುವಿಧ ಜೀವರ ತಾರತಮ್ಯಸ್ಮರಣೆ ಮುಂತಾದ ಪ್ರಮೇಯವನ್ನು ಈ ಹದಿನೈದನೇ ಸಂಧಿಯಲ್ಲಿ ವಿವರಿಸುತ್ತಾರೆ. ಹರಿಕಥೆ ಎಂಬ ಅಮೃತಕ್ಕಿಂತ ಸಾರವಾದ ಪ್ರಮೇಯವನ್ನು ಭಗವದ್ಭಕ್ತರು ಕೇಳತಕ್ಕದ್ದು. ಗುರುಕೃಪಾದಿಂದ ಯಥಾಶಕ್ತಿ ಹೇಳುವೆ. ||ಸೂ||

ಭಾರತೀಶನು ಎಂಬ ಪದ್ಯದಿಂದ ಎಂಟು ಪದ್ಯದ ತನಕ, ಪ್ರಾಣದೇವರು ಶ್ವಾಸಮಂತ್ರ ಜಪವನ್ನು ಮಾಡಿ, ಜೀವರನ್ನು ರಕ್ಷಿಸುವ ಸ್ಮರಣೋಪಾಸನೆ ತಿಳಿಸುತ್ತಾರೆ, ಭಾರತೀಶನು ಎಂದು ಮೊದಲು. ಭಾರತೀಪತಿಯಾದ ಪ್ರಾಣದೇವರು ಒಂದು ಘಳಿಗೆಯೊಳಗೆ ಮೂನ್ನೂರರವತ್ತು ಶ್ವಾಸಜಪಗಳನ್ನು ಸರ್ವಜೀವರಲ್ಲೂ ಇದ್ದು ಆಯಾಸವಿಲ್ಲದೆ ಮಾಡುವರು. ಸರ್ವತ್ರದಲ್ಲಿದ್ದು ಜೀವರ ತತ್ತದ್ಯೋಗ್ಯತಾದಿಗಳನ್ನು ತಿಳಿದ ಸರ್ವಜ್ಞನಾದ, ತತ್ಕಾಲದಲ್ಲಿ ಅವರವರ ಇಷ್ಟವನ್ನು ಕೊಡುವ ಕರುಣಾಶಾಲಿ ಪ್ರಾಣದೇವರು ಅವರವರ ಸಾಧನ ಪೂರೈಸಿ ಸ್ವರ್ಗ ಭೂ ನರಕವೆಂಬ ಶಬ್ದಗಳಿಂದ ಸೂಚಿತವಾದ ನಿತ್ಯಾನಂದ, ನಿತ್ಯ ಸುಖದುಃಖ, ನಿತ್ಯ ದುಃಖಗಳನ್ನು ಸಹ ದೇವರ ಆಜ್ಞೆ ಮೇರೆಗೆ ಕೊಡುವನು ||೧||

# ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧಜೀವರ ಆಯುರ್ಮಾನಕ್ಕೆ ಕಾರಣರಾದ ಶ್ರೀವಾಯುದೇವರು, ಜೀವರ ಸ್ಥೂಲದೇಹಗತರಾಗಿ ಮಾಡುವ ಶ್ವಾಸಕ್ರಿಯಾರೂಪವಾದ ಹಂಸ ಮಂತ್ರ ಜಪ ವಿಧಾನವನ್ನು ತಿಳಿಸುತ್ತಾರೆ.

ಶ್ರೀಮುಖ್ಯಪ್ರಾಣದೇವರೇ ಭಾರತೀಶರು. ಅಂತಹ ಶ್ರೀವಾಯು ದೇವರು ಸರ್ವತ್ರಿವಿಧಜೀವರ ಸ್ಥೂಲಶರೀರಗತರಾಗಿದ್ದು, ೭೨,೦೦೦ ನಾಡಿ ಗಳಲ್ಲಿ ಪರಿಸರ ನಾಮಕರಾಗಿ, ಸಂಚಾರ ಮಾಡುತ್ತಾ ಒಂದು ಘಳಿಗೆಯಲ್ಲಿ ೩೬೦ ಸಂಖ್ಯಾಕವಾದ ಹಂಸಮಂತ್ರ ಮಾಡುತ್ತಾರೆ.

ಇದರ ಲೆಕ್ಕದ ವಿವರಣೆ ಹೀಗಿದೆ :

ಜೀವರು ಉಸಿರಾಡುತ್ತಿರುವ ಕ್ರಿಯೆಯಲ್ಲಿ ಮೂರು ಹಂತಗಳಿವೆ.

ಹೊರಗಿನ ಶುದ್ಧ ಗಾಳಿಯನ್ನು ನಾಸಿಕದ್ವಾರದಿಂದ ಒಳಗೆ ತೆಗೆದು ಕೊಳ್ಳುವುದು. ಇದು ಉಚ್ಛ್ವಾಸ ಕ್ರಿಯೆ. ಇದಕ್ಕೆ ಪೂರಕ ಎನ್ನುವರು.

ಒಳಗೆ ಸೇದಲ್ಪಟ್ಟ ಶುದ್ಧ ವಾಯುವು ಶ್ವಾಸಕೋಶದ ಸೂಕ್ಷ್ಮಕೋಶ ಗಳನ್ನು ಸೇರಿ, ಅಲ್ಲಿ ಚೈತನ್ಯ ಶಕ್ತಿಯು ಉತ್ಪತ್ತಿಯಾಗುವುದು. ಈ ಕ್ರಿಯೆಗೆ ಕುಂಭಕ ಎಂದು ಹೆಸರು. ಇದಕ್ಕೆ ಮುಖ್ಯ ಕಾರಣರಾದ ಶ್ರೀವಾಯುದೇವ ರಿಗೆ ಸರ್ವಜೀವರ ಚೈತನ್ಯ ಪ್ರದಾಯಕರೆಂದು ಹೆಸರು. ಇದರಿಂದಲೇ ಜಗತ್ಪ್ರಾಣರು.

ಗಾಳಿಯನ್ನು ನಾಸಿಕದ್ವಾರಾ ಹೊರಬಿಡುವುದು. ಇದು ನಿಶ್ವಾಸ ಕ್ರಿಯೆಯು ಇದಕ್ಕೆ ರೇಚಕ ಎಂದು ಹೆಸರು.

ಪೂರ್ವೋಕ್ತ ಮೂರು ಹಂತಗಳಲ್ಲಿ ನಡೆಯುತ್ತಿರುವ ಈ ಆವರ್ತನಕ್ಕೆ ಒಂದು ಶ್ವಾಸ ಎಂದು ಹೆಸರು. ಪ್ರತಿ ೪ ಸೆಕೆಂಡುಗಳಲ್ಲಿ ಒಂದು ಶ್ವಾಸಕ್ರಿಯೆ ನಡೆಯುವುದು.

ಒಂದು ಘಳಿಗೆಯ ಕಾಲವೆಂದರೆ ೨೪ ನಿಮಿಷಗಳು. ಒಂದು ನಿಮಿಷಕ್ಕೆ ೬೦ ಸೆಕೆಂಡುಗಳು. ಆದ್ದರಿಂದ ೨೪ ನಿಮಿಷಗಳು = ೨೪ × ೬೦ = ೧೪೪೦ ಸೆಕೆಂಡುಗಳು. ೪ ಸೆಕೆಂಡುಗಳಲ್ಲಿ ಒಂದು ಶ್ವಾಸಜಪದಂತೆ, ೧೪೪೦ ಸೆಕೆಂಡುಗಳಲ್ಲಿ ೧೪೪೦ ÷ ೪ = ೩೬೦ ಶ್ವಾಸಮಂತ್ರಗಳಾಗುವುವು.

**ಸುರಜಪಗಳ**

ಸರ್ವಜೀವರ ಸ್ಥೂಲದೇಹಗತ ಹೃದಯಕಮಲದಲ್ಲಿ ಕರ್ಣಿಕಾಮೂಲದಲ್ಲಿ ಮೂಲೇಶನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಇವನೇ ಜೀವರ ಬಿಂಬನು. ಆ ಮೂಲೇಶನ ಪಾದಮೂಲದಲ್ಲಿ ಶ್ರೀವಾಯುದೇವರು ಬಿಂಬನಿಗೆ ಅಭಿಮುಖರಾಗಿ ಅಂಜಲೀಬದ್ಧರಾಗಿ ನಿಂತಿದ್ದಾರೆ. ಶ್ರೀವಾಯುದೇವರ ಪಾದಮೂಲದಲ್ಲಿ ಆಶ್ರಯವನ್ನು ಹೊಂದಿ ಲಿಂಗಾನಿರುದ್ಧ ಶರೀರ ಸಹಿತನಾದ ಜೀವನಿದ್ದಾನೆ. ಮೂಲೇಶನಾಮಕನಾದ ಬಿಂಬನೇ ಹಂಸನಾಮಕನಾಗಿ ಹೃತ್ಪದ್ಮದ ಅಷ್ಟದಳಗಳಲ್ಲಿ ಕುಲಾಲಚಕ್ರದಂತೆ ತಿರುಗುತ್ತಾ, ಜೀವರ ಮನೋಪ್ರವೃತ್ತಿಗಳನ್ನು ಪ್ರವರ್ತಿಸುತ್ತಿರುವನು. ಶ್ರೀವಾಯುದೇವರು ತತ್ತತ್ಸ್ಥಳದಲ್ಲಿ ತಾವೇ ತತ್‌ಕ್ಷಣದಲ್ಲಿ ರಚಿಸುವ ಶ್ವಾಸಜಪವನ್ನು ಹಂಸನಾಮಕ ಶ್ರೀಪರಮಾತ್ಮನ ಪಾದಪದ್ಮಗಳಲ್ಲಿ ಅರ್ಪಿಸುತ್ತಾ, ಜೀವರ ಆಯುಸ್ಸನ್ನು ನಿಯಮಿಸುತ್ತಿರುವರು. ಇದರಿಂದ ಶ್ರೀವಾಯುದೇವರಿಗೆ ಶ್ವಾಸಪತಿಗಳೆಂದು ಹೆಸರು. ಹಂಸನಾಮಕ ಶ್ರೀಪರಮಾತ್ಮನೇ ಈ ಮಂತ್ರ ಪ್ರತಿಪಾದ್ಯನಾದ್ದರಿಂದ ಇದಕ್ಕೆ ಹಂಸಮಂತ್ರ ಎಂದು ಹೆಸರು. ಇದರಲ್ಲಿ ಎರಡು ವರ್ಣಗಳು ವಿಶಿಷ್ಟವಾಗಿವೆ. ಹಂ ವರ್ಣ ವಿಶಿಷ್ಟವಾಗಿ ಉಚ್ಛ್ವಾಸ ಕ್ರಿಯೆಯು ನಡೆಯುವುದು. ಸ ವರ್ಣ ವಿಶಿಷ್ಟವಾಗಿ ನಿಶ್ವಾಸ ಕ್ರಿಯೆಯು ನಡೆಯುವುದು. ಹಂಸ ಎಂದರೆ ನಿರ್ದೋಷವಾದ, ಅನಂತ ಕಲ್ಯಾಣಗುಣಗಣಪೂರ್ಣನಾದ ಭಗವನ್ನಾಮವು. ಜೀವರನ್ನು ಸಂಸಾರ ಕ್ಲೇಶಾದಿಗಳಿಂದ ತಾರಣ ಮಾಡಿಸಿ ಸದ್ಗತಿ ಕೊಡುವುದರಿಂದ ಶ್ರೀಪರಮಾತ್ಮನಿಗೆ ಹಂಸ ಎಂದು ಹೆಸರು. ಇಂತಹ ಹಂಸಮಂತ್ರವು ಹಂಸ–ಸೋಹಂ–ಸ್ವಾಹಾ ಎಂದು ಆರು ಅಕ್ಷರಗಳಿಂದ ಯುಕ್ತವಾಗಿದೆ.

ಇಂತು ಭಾರತೀಶರು ಇದು ಹಂಸನಾಮಕ ಶ್ರೀಹರಿಗೆ ಪರಮಪ್ರೀತ್ಯರ್ಥವಾದ ಕಾರ್ಯವೆಂಬ ಅನುಸಂಧಾನದಿಂದ, ಸ್ವಾಭಾವಿಕವಾಗಿ ಶ್ವಾಸಕ್ರಿಯೆಗಳನ್ನು ನಡೆಯಿಸುತ್ತಿರುವರು. ಆಯುಸ್ಸು ಸ್ಥೂಲದೇಹವು ಇರುವ ಪರ್ಯಂತ ನಿಯಮಿತವಾಗಿರುವ ಕಾಲಾವಧಿ. ಒಂದು ಘಳಿಗೆಗೆ ೩೬೦ ಶ್ವಾಸಜಪಗಳಿವೆ. ಒಂದು ದಿನದ ೨೪ ತಾಸುಗಳಲ್ಲಿ ೨೧,೬೦೦ ಶ್ವಾಸಜಪಗಳನ್ನು ಮಾಡುತ್ತಾ ಆಯುಸ್ಸನ್ನು ಅಳೆಯುತ್ತಿರುವರು. ಒಂದು ದಿನ ಕಳೆದರೆ ಮಾನವನ ಆಯುಸ್ಸಿನಲ್ಲಿ ಒಂದು ದಿನ ಕ್ಷೀಣವಾಗುವುದು. ಹೀಗೆ ಯಾವ ಜೀವನ ಪರ್ಯಂತ ಶ್ರೀವಾಯುದೇವರಿಂದ ಶ್ವಾಸಕ್ರಿಯಾರೂಪವಾದ ಶ್ವಾಸಜಪಗಳು ನಡೆಯುತ್ತಲೇ ಇರುವುವು. ಶ್ವಾಸನಿಯಾಮಕರಾದ ಮುಖ್ಯಪ್ರಾಣರು ಜೀವರಿಗೆ ಅದೆಂತಹ ಆಪದ್ಬಾಂಧವರು! ಶ್ವಾಸಕಾರ್ಯಕ್ಕೆ ಕಾರಣರಾಗಿರುವುದರಿಂದ ಭಾರತೀಶರು ಕಾರುಣಿಕರು ಎಂದಿದ್ದಾರೆ. ಕಾರಣಾರ್ಥವನ್ನು ಗ್ರಹಿಸಿದಾಗ ಈ ಅರ್ಥ. ಸರ್ವಜೀವರ ವಿಷಕ್ಷಾ, ಶ್ರೀಮುಖ್ಯಪ್ರಾಣರು ಆಪ್ತರಾಗಿರುವುದರಿಂದ ಕರುಣಾಳುಗಳು. ಇದು ವಿಶಾಲಾರ್ಥ.

ಆಯುಸ್ಸು ಸ್ಥೂಲದೇಹಕ್ಕೇ ಹೊರತು ಅನಾದಿನಿತ್ಯನಾದ ಜೀವನಿಗಲ್ಲ. ಮರಣದಿಂದ ಸ್ಥೂಲಶರೀರನಾಶ. ಇದರಿಂದ ಶ್ರೀಭಾರತೀಶರು ಸ್ಥೂಲದೇಹಗತರಾಗಿದ್ದು ಶ್ವಾಸಜಪಗಳನ್ನು ಮಾಡುತ್ತಾರೆ ಜೀವರ ಸ್ವರೂಪದೇಹದಲ್ಲಿ ಅಲ್ಲ–ಎಂದು ಶಾಸ್ತ್ರಸಿದ್ಧವು.

ಜೀವರಲ್ಲಿ ತ್ರಿವಿಧ ವರ್ಗಗಳಿವೆ.

**ಸಾತ್ವಿಕರು :** ಇವರಲ್ಲಿ ಹಂಸ ಎಂಬ ಶಬ್ದೋಚ್ಚಾರಣಾಪೂರ್ವಕ ಶ್ವಾಸಜಪಮಾಡಿ ಅವರಿಗೆ ನಿತ್ಯಾನಂದ ರೂಪವಾದ ವೈಕುಂಠಾದಿ ಮುಕ್ತಿಧಾಮಗಳಲ್ಲಿ ಸದ್ಗತಿಯನ್ನು ಶ್ರೀಹರಿಯ ಆಜ್ಞಾನುಸಾರ ಕೊಡಿಸುವರು. ಸ್ವರ್ಗ ಎಂದರೆ ಮುಕ್ತಸ್ಥಾನ ಎಂದರ್ಥ.

**ರಾಜಸರು :** ಇವರು ಮಧ್ಯಮ ಜೀವರು. ಇವರಲ್ಲಿ ಸ್ವಾಹಾ ಎಂಬ ಶಬ್ದೋಚ್ಚಾರಣಾಪೂರ್ವಕ ಶ್ವಾಸಮಂತ್ರ ರಚನಾ ಮತ್ತು ಕ್ರಿಯಾ. ಸ್ವರ್ಗ ಭೂ-ನಿರಯ ಪ್ರಚುರವಾದ ಸಾಂತಾನಿಕಲೋಕಗಳಲ್ಲಿದ್ದು, ಸುಖ-ದುಃಖ ಮಿಶ್ರವಾದ ಮಿಶ್ರಗತಿಯನ್ನು ಕೊಡಿಸುವರು. ಇದನ್ನು ಭೂ ಎಂದಿದ್ದಾರೆ.

**ತಾಮಸರು :** ತಮೋಯೋಗ್ಯರಾದ ಭಗವದ್ದ್ವೇಷಿಗಳು, ವಿಷ್ಣುಭಕ್ತ ದ್ವೇಷಿಗಳು ಸೋಹಂ ಉಪಾಸಕರು. ಅವರಿಗೆ ಸೋಹಂ ಎಂಬ ಶಬ್ದೋಚ್ಚಾರಣಾಪೂರ್ವಕ ಶ್ವಾಸಮಂತ್ರದ ರಚನೆ ಮತ್ತು ಕಾರ್ಯ. ಅವರಿಗೆ ನಿತ್ಯ ದುಃಖರೂಪವಾದ ಅಂಧಂತಮಸ್ಸು ಪ್ರಾಪ್ತಿ. ಇದನ್ನು ನರಕ ಎಂಬ ಶಬ್ದದಿಂದ ಸೂಚಿಸಿದ್ದಾರೆ.

ಮೋಕ್ಷಪ್ರದನು ವಿಷ್ಣುವೇ, ಅವನ ಆಜ್ಞಾನುಸಾರ ಶ್ರೀವಾಯು ದೇವರು ತ್ರಿವಿಧ ಜೀವರಿಗೆ ಅವರವರ ಸ್ವರೂಪಯೋಗ್ಯತಾನುಸಾರ ಮುಕ್ತಿಪ್ರದರು.

ಸರ್ವಜೀವರ ಯೋಗ್ಯತೆಯನ್ನು ಬಲ್ಲವರಾದ್ದರಿಂದ ಶ್ರೀವಾಯು ದೇವರು ಸರ್ವಜ್ಞರು. ||೧||

## ಪದ್ಯ ೨

**ಮೂಲ**

**ತಾಸಿಗೊಂಭೈನೂರು ಶ್ವಾಸೋ ।**
**ಚ್ಛ್ವಾಸಗಳ ನಡೆಸುತಲಿ ಚೇತನ ।**
**ರಾಶಿಯೊಳು ಹಗಲಿರುಳು ಜಾಗೃತನಾಗಿ ನಿತ್ಯದಲಿ ॥**
**ಈ ಸುಮನಸೋತ್ತಂಸ ಲೇಶಾ ।**
**ಯಾಸವಿಲ್ಲದೆ ಪೋಷಿಸುತ ಮೂ ।**
**ಲೇಶನಂಘ್ರಿ ಸರೋಜ ಮೂಲದಲಿಪ್ಪ ಕಾಣಿಸದೆ ॥ ॥೨॥**

**ಅವತರಣಿಕೆ**

ಈ ಸ್ಥೂಲಶರೀರಗತರಾಗಿ ಶ್ರೀವಾಯುದೇವರು ಒಂದು ಗಂಟೆಗೆ ೯೦೦ ಸಂಖ್ಯಾಕವಾದ ಶ್ವಾಸಜಪಗಳನ್ನು ಸದಾ ಜಾಗ್ರತರಾಗಿದ್ದು ಮಾಡುತ್ತಾ, ಅಗೋಚರರಾಗಿ ಸರ್ವತ್ರಿವಿಧಜೀವರನ್ನು ಸಂರಕ್ಷಿಸುತ್ತಾರೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ತಾಸಿಗೆ**= ಒಂದು ಘಂಟೆಯ ಅವಧಿಯಲ್ಲಿ (ಎರಡೂವರೆ ಘಳಿಗೆ ಕಾಲ) **ಒಂಬೈನೂರು**= ೯೦೦ ಸಂಖ್ಯಾಕವಾದ, **ಶ್ವಾಸೋಚ್ಛ್ವಾಸಗಳ**= ಶ್ವಾಸ-ಉಚ್ಛ್ವಾಸರೂಪವಾದ ಶ್ವಾಸಕ್ರಿಯ ಶ್ವಾಸಜಪಗಳನ್ನು **ನಡೆಸುತಲಿ**= ನಡೆಯಿಸುತ್ತಾ, **ಚೇತನರಾಶಿಯೊಳು**= ಸಮಸ್ತ ತ್ರಿವಿಧ ಜೀವವರ್ಗದಲ್ಲಿ, **ಹಗಲಿರುಳು**= ಹಗಲು ರಾತ್ರಿ, **ಜಾಗ್ರತರಾಗಿ**= ತಾವು ಜಾಗ್ರತರಾಗಿದ್ದು (ಜೀವರು ನಿದ್ರಾಸಕ್ತರಾದಾಗಲೂ ಶ್ವಾಸಕಾರ್ಯ ನಡೆಯುತ್ತಲಿರುವುದು) **ನಿತ್ಯದಲಿ**= ಪ್ರತಿದಿನದಲ್ಲಿಯೂ **ಈ ಸುಮನಸೋತ್ತಂಸ**= ದೇವ ಶ್ರೇಷ್ಠರಾದ (ಜೀವೋತ್ತಮರಾದ) ಈ ವಾಯುದೇವರು, **ಲೇಶಾಯಾಸವಿಲ್ಲದೆ** = ಸ್ವಲ್ಪವೂ ಆಯಾಸ ಪಡದೇ (ನಿರಾಯಾಸವಾಗಿ), **ಪೋಷಿಸುತ**= ದೇಹ ಸಂರಕ್ಷಣ ದ್ವಾರಾ ಜೀವರನ್ನು ರಕ್ಷಿಸುತ್ತಾ, **ಮೂಲೇಶನಂಘ್ರಿ ಸರೋಜ ಮೂಲದಲಿ**= ಜೀವರ ಹೃತ್ಪದ್ಮಗತ ಕರ್ಣಿಕೆಯ ಮೂಲದಲ್ಲಿರುವ ಮೂಲೇಶ ನಾಮಕ ಬಿಂಬನ ಪಾದ ಕಮಲಗಳ ಮೂಲದಲ್ಲಿ, **ಕಾಣಿಸದೆ**= ಜೀವರಿಗೆ ಗೋಚರನಾಗದೆ, **ಇಪ್ಪ**= ಸ್ಥೂಲದೇಹದಲ್ಲಿ ಜೀವನಿಗೆ ಆಶ್ರಯರಾಗಿ ವಿದ್ಯಮಾನರಾಗಿದ್ದಾರೆ. ॥೨॥

## ವ್ಯಾಖ್ಯಾನಗಳು

**ಸಂಕರ್ಷಣ ಒಡೆಯರ ವ್ಯಾಖ್ಯಾನ**

ಶ್ರೀಪ್ರಾಣದೇವರು ಒಂದು ಮುಹೂರ್ತಕ್ಕೆ ಆಗೋ ಶ್ವಾಸದಲ್ಲಿದ್ದು ಯಾವ ಜಪ ಮಾಡತಾರೋ ಅದರನ್ನು ಹೇಳತಾರೆ.

ಎರಡುವರೆ ಘಳಿಗೆಗೆ ಒಂದು ತಾಸು (ಒಂದು ಘಂಟೆ). ಇಂಥಾ ತಾಸು ಒಂದಕ್ಕೆ ಒಂಭತ್ತುನೂರು, ಹ್ಯಾಂಗೆಂದರೆ, ಒಂದು ಘಳಿಗೆಗೆ ಮುನ್ನೂರರವತ್ತು ಮತ್ತೊಂದು ಘಳಿಗೆಗೆ ಮುನ್ನೂರರವತ್ತು, ಅರ್ಧ ಘಳಿಗೆಗೆ ನೂರೆಂಭತ್ತು ಅಂತು ಒಂಭೈನೂರು ಒಂದು ತಾಸಿಗೆ. ೧. ಶ್ವಾಸ ಒಳಗಿನಿಂದ ಹೊರಗೆ ಬರೋ ಶ್ವಾಸರೂಪವಾದ ಹಂ ಎಂಬ ಅಕ್ಷರದಿಂದ ಯುಕ್ತವಾಗಿ ನಾಸಿಕದ್ವಾರ ದಿಂದ ಹೊರಗೆ ಬರತದೆ. ೨. ಉಚ್ಛ್ವಾಸ, ಹೊರಗೆ ಬಂದ ಶ್ವಾಸ ಎಂಬುದು ಸ ಎಂಬ ವರ್ಣದಿಂದ ಸಹಿತವಾಗಿ ನಾಸಿಕಾದ್ವಾರದಿಂದ ಒಳಗೆ ಪ್ರವೇಶವಾಗ ತದೆ. ಅಂತು ಶ್ವಾಸೋಚ್ಛ್ವಾಸಗಳು ಎರಡೂ ಸೇರಿ ಒಂದು ಶ್ವಾಸ ಎಂತ ತಾತ್ಪರ್ಯ. ತದ್ಗತ ಎರಡೂ ವರ್ಣಗಳು ಸೇರಿ ಹಂಸಮಂತ್ರವಾಯಿತು. ಈ ರೀತ್ಯಾ ಹಂಸಮಂತ್ರವ ಅಹೋರಾತ್ರಿಗಳಲ್ಲಿ, ಸ್ಥಾವರ-ಜಂಗಮಾತ್ಮಕ ತ್ರಿವಿಧ ಜೀವರಾಶಿಗಳು ಧರಿಸಿರುವ ಸ್ಥೂಲದೇಹದೊಳು-ಚೇತನ ಶಬ್ದದಿಂದ ಸ್ವರೂಪದೇಹವೇ ತೆಗೆದುಕೊಂಬೋಣ ಎಂದರೆ ಘಳಿಗೆ, ತಾಸು, ಹಗಲು, ಇರುಳು ಸಾಂಕೇತ, ಸ್ಥೂಲದೇಹವನ್ನು ಅನುಸರಿಸಿದ ಕಾಲವನ್ನು ಪ್ರದರ್ಶನ ಮಾಡಿ ಇರೋಣದರಿಂದ, ಸ್ಥೂಲದೇಹ ಎಂತ ತಾತ್ಪರ್ಯವು, ಜೀವನ ಅಣುಸ್ವರೂಪ ದಲ್ಲಿ ಅಲ್ಲ. ಇದಕ್ಕೆ ಸಮಾಖ್ಯಾ ಉದಾತ್ತಾನುದಾತ್ತಸಂಧಿ ೧೨ನೇ ಶ್ಲೋಕವು. ಸ್ಥಾವರಗಳಿಗೂ ಆಯುರ್ನೇಮ ಇರೋಣದರಿಂದ ಅಲ್ಲಿನೂ ಶ್ವಾಸಜಪ ಮಾಡತಾರಂತಲೇ ಹೇಳಬೇಕು. ಸ್ಥಾವರಜೀವರಲ್ಲಿ ಮಾಡಸತಕ್ಕ ಶ್ವಾಸಕಾರ್ಯ ಅನ್ಯರಿಗೆ ಕಾಣಿಸದೇ ಆಗತಾ ಅದೆ. ಆಯಾ ಸ್ಥಾವರಗಳಿಗೂ ತಿಳಿಯೋದಿಲ್ಲ. ಜಂಗಮ ಜೀವರಲ್ಲಿ ನಿದ್ರಾಕಾಲದಲ್ಲಿ ಮಾಡತಕ್ಕ ಶ್ವಾಸಕಾರ್ಯ ಆಯಾ ಪ್ರಾಣಿ ಗಳಿಗೆ ಹ್ಯಾಂಗೆ ತಿಳಿಯೋದಿಲ್ಲವೋ ತದ್ವತ್, ಜಡಜೀವರಿಗೆ ತಿಳಿಯೋದಿಲ್ಲ. ಈ ಪ್ರಕಾರ ಶ್ವಾಸಗಳ ನಡೆಸುತ್ತಲೇ ಸ್ವಲ್ಪವಾದರೂ ಆಯಾಸವಿಲ್ಲದೇನೆ ಈ ದೇವೋತ್ತಮರಾದ ವಾಯುದೇವರು, ಜೀವರು ನಿದ್ರಾಯುಕ್ತರಾಗಿ ದೇಹದಲ್ಲಿ ಸ್ಮರಣೆ ಇಲ್ಲದೆ ಮಲಗಿದ್ದ ಕಾಲಕ್ಕೂ ತಾವು ಜಾಗೃತರಾಗಿ, ಪ್ರತಿದಿನದಲ್ಲೂ ಆಯಾ ದೇಹಗಳ ಸಂರಕ್ಷಿಸುತ್ತಾ, ಸ್ಥೂಲಹೃದಯಗತ ಅಷ್ಟದಳ ಕಮಲದಲ್ಲಿ ಸಂಚಾರ ಮಾಡತಕ್ಕ ಶ್ರೀಮೂಲೇಶನಾಮಕ ಪರಮಾತ್ಮನ (ಇದರ ಬಗ್ಗೆ ಉದಾತ್ತಾನುದಾತ್ತಸಂಧಿ,೮ ರಿಂದ ೧೧ನೇ ಶ್ಲೋಕಗಳು ಪೂರ್ತಿ)ಪಾದಗಳೆಂಬ

ಕಮಲಗಳ ಮೂಲದಲಿ ಎಂದರೆ ಪಾದಗಳ ಅಂಗುಷ್ಠ ಮಧ್ಯಭಾಗದಲ್ಲಿ ಇರೋವರಾಗಿದ್ದಾರೆ. ಶ್ವಾಸಗಳು ಸ್ಥೂಲನಾಸಿಕಾದಿಂದ ಬರತಾ ಅವೆ. ಆದಕಡಿಯಿಂದ ಸ್ಥೂಲದೇಹದಲ್ಲೇ ಈ ಶ್ವಾಸಕಾರ್ಯಗಳೆಂದು ತಾತ್ಪರ್ಯ. ||೨||

**ಭಾವಪ್ರಕಾಶಿಕೆ**

ಶ್ರೀವಾಯುದೇವರು ಸಕಲ ಜೀವರಾಶಿಗಳ ಹೃದಯ ಕಮಲದಲ್ಲಿರುವ ಮೂಲೇಶನಾಮಕ ಶ್ರೀಪರಮಾತ್ಮನ ಪಾದಕಮಲದಲ್ಲಿದ್ದುಕೊಂಡು ನಿತ್ಯದಲ್ಲೂ ಒಂದು ಘಳಿಗೆಗೆ ೩೬೦ ಶ್ವಾಸಗಳಂತೆ ಒಂದು ಘಂಟೆಗೆ ಅಂದರೆ ೨ವರೆ ಘಳಿಗೆಗೆ (೩೬೦ × ೨ವರೆ = ೯೦೦) ಶ್ವಾಸೋಚ್ಛ್ವಾಸ ರೂಪವಾದ ಹಂಸಮಂತ್ರ ಜಪ ವನ್ನು ಮಾಡಿ ಮಾಡಿಸುತ್ತ, ಸ್ವಲ್ಪವಾದರೂ ಆಯಾಸವಿಲ್ಲದೆ ರಾತ್ರಿ ಹಗಲು ಗಳಲ್ಲಿ ಎಚ್ಚರದಿಂದ ತಾವು ಮತ್ತೊಬ್ಬರಿಗೆ ಕಾಣಿಸಿಕೊಳ್ಳದೆ ಜೀವರಾಶಿಗಳನ್ನು ಪೋಷಿಸುತ್ತಿರುವರು. ||೨||

**ಭಾವದರ್ಪಣ**

ನಿದ್ರಾರಹಿತನಾಗಿ ಸರ್ವದಾ ಮೂಲೇಶನ ಪಾದಾಶ್ರಯ ಮಾಡಿಕೊಂಡು ಒಂದು ತಾಸಿಗೆ ೯೦೦ ಶ್ವಾಸಜಪ ಮಾಡುತ್ತಾರೆಂದು ಹೇಳುತ್ತಾರೆ. ತಾಸೀತಿ॥ ಸುಮನಸೋತ್ತಂಸ = ದೇವಶ್ರೇಷ್ಠ ಎಂಬರ್ಥ.

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ತಾಸಿಗೆ ಇತಿ|| ಮುಹೂರ್ತೇತು ನವಾತ್ಮಶತಸಂಖ್ಯಯಾ|| ಮುಹೂರ್ತ ಪದಂ ಘಟೀದ್ವಯಪರಮ್॥ ಮುಹೂರ್ತಾತ್ ಸಂಗಂ ಉತ್ಸೃಜ್ಯ ಇತಿ ಪದ ವ್ಯಾಖ್ಯಾನೇ ಶ್ರೀಲೋಲನಾ ನೆಸದೆರಡು ಘಳಿಗೆಯೊಳಗೊಬ್ಬ ಇತಿ. ವೈಕುಂಠ ವರ್ಣನೋಕ್ತೇಃ ॥ ಪ್ರಾಣಾಗ್ನಯಃ ಇತಿ ಶ್ರುತೇಃ ||೨||

**ಕನ್ನಡಾರ್ಥ**

ಒಂದು ಮುಹೂರ್ತದಲ್ಲಿ ೯೦೦ ಶ್ವಾಸಜಪಗಳನ್ನು ಪೂರೈಸುತ್ತಾರೆ.

"ಮುಹೂರ್ತ"ವೆಂದರೆ ಎರಡು ಘಳಿಗೆಗಳೆಂದು ಅರ್ಥ. (ಸ್ಥೂಲಮಾನದಿಂದ) "ಮುಹೂರ್ತಾತ್ = ಮುಹೂರ್ತದಲ್ಲಿ, ಸಂಗಂ = ಸಹವಾಸವನ್ನು, ಉತ್ಸೃಜ್ಯ = ತೊರೆದು" ಎಂಬ ಅರ್ಥವನ್ನು ವಿವರಿಸುತ್ತ "ಎರಡು ಘಳಿಗೆಗಳಲ್ಲಿ" ಎಂದು ವೈಕುಂಠವರ್ಣನೆಯಲ್ಲಿ ಹೇಳಿರುತ್ತಾರೆ.

ತಾಸು ಎಂದರೆ ಎರಡು ಘಳಿಗೆ ಒಂದು ಮುಹೂರ್ತವೆಂದು ಸಾಮಾನ್ಯವಾಗಿ ಅರ್ಥ ಹೇಳಿದ್ದರೂ ಅದು ಸ್ಥೂಲಮಾನವೆಂದು ತಿಳಿದು, ತಾಸು ಎಂದರೆ **ಎರಡುವರೆ ಘಳಿಗೆಯ ಮುಹೂರ್ತ ವಿಶೇಷವೆಂದು** ತಿಳಿದರೆ ಹಿಂದಿನ ಪದ್ಯದಲ್ಲಿ ಹೇಳಿದ ಒಂದು ಘಳಿಗೆಯ ಶ್ವಾಸಗಳ ಗಣನೆಗೂ ಈಗ ಈ ಪದ್ಯದಲ್ಲಿ ಹೇಳಿದ ತಾಸಿನ ಶ್ವಾಸಗಳ ಸಂಖ್ಯೆಗೂ ಸರಿಯಾಗಿ ಹೊಂದಿಕೆಯಾಗುತ್ತದೆ. ಇಲ್ಲವಾದರೆ ಅರ್ಧಘಳಿಗೆಯ ಶ್ವಾಸ ಸಂಖ್ಯೆಯು ೧೮೦ ಶ್ವಾಸಗಳು ಕಡಿಮೆಯಾಗಿ ತಾಸಿನ ಶ್ವಾಸಸಂಖ್ಯೆಯು ೭೨೦ ಆಗುತ್ತದೆ. ಆದುದರಿಂದ ಎರಡುವರೆ ಘಳಿಗೆಯ ತಾಸನ್ನು ತಿಳಿದರೆ ಸರಿಹೊಂದುತ್ತದೆ. ॥೨॥

### ಶ್ರೀಗುರುಹೃದಯಪ್ರಕಾಶಿಕೆ

ಈ ಸುಮನಸೋತ್ತಂಸ ಎಂಬ ದೇವೋತ್ತಮನು ಪ್ರಾಣದೇವರ ಹೃದಯದಲ್ಲಿರುವ ಮೂಲೇಶನೆಂಬ ನಾರಾಯಣರೂಪದ ಪಾದಕಮಲ ಮೂಲಾಶ್ರೈಸಿದ್ದು ಅಜ್ಞರಿಗೆ ಗೋಚರವಾಗದೆ ತಾಸೆಂಬ ಒಂದು ಮುಹೂರ್ತಕ್ಕೆ ಒಂಭತ್ತುನೂರು ಶ್ವಾಸೋಚ್ಛ್ವಸರೂಪ ಹಂಸಮಂತ್ರಗಳನ್ನು ಆಚರಿಸಿ ಸರ್ವಜೀವರಲ್ಲೂ ಅಹೋರಾತ್ರಿ ಸಹ ಜಾಗ್ರತನಾಗಿ ಸದಾ ಶ್ರಮವಿಲ್ಲದೆ ಎಲ್ಲರನ್ನೂ ಸಲಹುವನು. ॥೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ತಾಸಿಗೆ ೯೦೦ ಸಂಖ್ಯಾಕವಾದ ಹಂಸ ಮಂತ್ರಗಳನ್ನು ಜಪಿಸುತಾರೆಂದು ತಿಳಿಸುತ್ತಾರೆ–

ಒಂದು ತಾಸು ಎಂದರೆ ಒಂದು ಘಂಟೆಯ ಕಾಲಾವಧಿಯು

ಒಂದು ತಾಸಿಗೆ ಎರಡೂವರೆ ಘಳಿಗೆಗಳಾಗುವುವು. ೨೪ ನಿಮಿಷಕ್ಕೆ ಒಂದು ಘಳಿಗೆಯ ಲೆಕ್ಕದಂತೆ, ೬೦ ನಿಮಿಷಗಳಿಗೆ, ಅಂದರೆ, ಒಂದು ತಾಸಿಗೆ ಎರಡೂವರೆ ಘಳಿಗೆಗಳಾಗುವುವು. ಪೂರ್ವೋಕ್ತ ಪದ್ಯದಂತೆ ಒಂದು ಘಳಿಗೆಗೆ ೩೬೦ ಶ್ವಾಸಜಪದ ಮೇರೆ, ಒಂದು ತಾಸಿಗೆ ೩೬೦ × ಎರಡೂವರೆ = ೯೦೦ ಶ್ವಾಸಜಪಗಳಾಗುವುವು. ಈ ರೀತಿ ಮುಖ್ಯಪ್ರಾಣದೇವರು ತ್ರಿವಿಧಜೀವರ ಸ್ಥೂಲದೇಹಗತರಾಗಿದ್ದು ಶ್ವಾಸೋಚ್ಛ್ವಾಸಗಳ ನಡೆಯಿಸುತ್ತಲಿರುವರು. ಚೇತನ ಶಬ್ದದಿಂದ ಜಂಗಮ ಮತ್ತು ಸ್ಥಾವರ ಜೀವರೂ ಗ್ರಾಹ್ಯರು. ವೃಕ್ಷ, ಲತೆ, ಗುಲ್ಮಾದಿ ಸ್ಥಾವರಜೀವಗಳಲ್ಲಿಯೂ ಶ್ವಾಸಕ್ರಿಯೆ ನಡೆಯುತ್ತಿರುವುದು. ಚೇತನದ ಲಕ್ಷಣವೇ ಶ್ವಾಸಕ್ರಿಯೆಯು.

ಶ್ರೀವಾಯುದೇವರು ಸ್ಥಾವರಜಂಗಮ ಜೀವರಾಶಿಗಳಲ್ಲಿ ಹಗಲು ರಾತ್ರಿ ಎಡಬಿಡದೆ ಶ್ವಾಸಕಾರ್ಯ ನಡೆಯಿಸುತ್ತಿರುವರು. ಜೀವರು ರಾತ್ರಿಯಲ್ಲಿ ನಿದ್ರಾಸಕ್ತರಾಗಿದ್ದಾಗಲೂ ಶ್ವಾಸಕ್ರಿಯೆ ನಡೆಯುತ್ತಲೇ ಇರುವುದು. ಇದಕ್ಕೆ ಶ್ರೀವಾಯುದೇವರು ಸದಾ ಜಾಗ್ರತರಾಗಿರುವುದೇ ಕಾರಣವು. ಈ ಕಾರ್ಯವನ್ನು ಶ್ರೀವಾಯುದೇವರು ನಿರಾಯಾಸವಾಗಿ ಭಗವತ್ಪ್ರೀತ್ಯರ್ಥರಾಗಿ ಮಾಡಿ ಮಾಡಿಸುತ್ತಿರುವರು. ಇದರಿಂದ ಭಗವತ್ಕಾರ್ಯಸಾಧಕರು.

ಸುಮನಸರು ಎಂದರೆ ದೇವತೆಗಳು ಎಂದರ್ಥ. ಅಂತಹ ದೇವತಾ ವರ್ಗದಲ್ಲಿ ಶ್ರೇಷ್ಠರು ಶ್ರೀಮುಖ್ಯಪ್ರಾಣರಾದ್ದರಿಂದ ಅವರು ಸುಮನಸೋತ್ತಂಸರು. ಅಂದರೆ ಜೀವೋತ್ತಮರೆಂದರ್ಥ.

ಶ್ರೀವಾಯುದೇವರು ಸರ್ವಜೀವರ ಹೃತ್ಕಮಲದ ಕರ್ಣಿಕಾ ಮೂಲದಲ್ಲಿರುವ ಮೂಲೇಶನಾಮಕ ಬಿಂಬನ ಪಾದಕಮಲದ ಮೂಲದಲ್ಲಿ ವಿದ್ಯಮಾನರಾಗಿದ್ದಾರೆ. ಶ್ರೀಮುಖ್ಯಪ್ರಾಣರ ಪಾದಮೂಲದಲ್ಲಿ ಲಿಂಗಾನಿರುದ್ಧ ಶರೀರ ಸಹಿತನಾಗಿ ಜೀವನು ಆಶ್ರಯ ಹೊಂದಿ ಇದ್ದಾನೆ. ಈ ಜೀವನು ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋ ವ್ಯಾಪ್ತನಾಗಿದ್ದಾನೆ. ಶ್ರೀವಾಯುದೇವರು ಜೀವರಿಗೆ ಗೋಚರಿಸದೆ, ಶ್ವಾಸಮಂತ್ರಗಳನ್ನು

ಜಪಿಸುತ್ತಾ, ಜೀವರ ಸ್ಥೂಲದೇಹಗತದ ಆಯುರ್ಮಾನವನ್ನು ನಿಯಮಿಸುತ್ತಾ ದೇಹದ ಸಂರಕ್ಷಣೆಯನ್ನು ಮಾಡುತ್ತಾ, ಪೋಷಿಸುತ್ತಿರುವರು. ॥೨॥

## ಪದ್ಯ ೩

### ಮೂಲ

ಅರಿವುದೊಂದ್ಯಾಮದೊಳು ಶ್ವಾಸ ।
ಗಳೆರಡುಸಾವಿರದೇಳುನೂರು ।
ಶರಸಹಸ್ರದ ಮೇಲೆ ನಾನೂರಹವು ದ್ವಿತಿಯಕೆ ॥
ಮರಳಿ ಯಾಮತ್ರಯಕೆ ವಸುಸಾ ।
ವಿರದ ಮೇಲ್ಮೂರೆಣಿಕೆಯಲಿ ಹ ।
ನ್ನೆರಡು ತಾಸಿಗೆ ಹತ್ತುಸಾವಿರದೆಂಟು ನೂರಹವು ॥ ॥೩॥

### ಅವತರಣಿಕೆ

ನಾಲ್ಕು ಯಾಮಗಳ ಒಂದು ಹಗಲಿಗೆ ಎಂದರೆ ೧೨ ತಾಸುಗಳ ಅವಧಿಗೆ ೧೦,೮೦೦ ಶ್ವಾಸಜಪಗಳನ್ನು ಶ್ರೀವಾಯುದೇವರು ಮಾಡುತ್ತಾರೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಒಂದು ಯಾಮದೊಳು** = ಒಂದು ಯಾಮಕ್ಕೆ ಮೂರುಮುಹೂರ್ತಗಳು. ಅಂದರೆ, ಏಳುವರೆ ಘಳಿಗೆಯ ಲೆಕ್ಕ. ಒಂದು ಯಾಮದ ಕಾಲದಲ್ಲಿ, **ಶ್ವಾಸಗಳೆರಡುಸಾವಿರದೇಳುನೂರನು** = ಒಂದು ಮುಹೂರ್ತಕ್ಕೆ ೯೦೦ರಂತೆ ಮೂರು ಮುಹೂರ್ತಗಳಿಗೆ ೯೦೦ × ೩ = ೨,೭೦೦ ಶ್ವಾಸಜಪಗಳನ್ನು ಮಾಡುತ್ತಾರೆ. **ದ್ವಿತಿಯಕೆ** = ೨ನೆಯ ಯಾಮಕ್ಕೆ, **ಶರಸಹಸ್ರದಮೇಲೆ ನಾನೂರಹವು** = ಶರಸಹಸ್ರವೆಂದರೆ ೫೦೦೦. ಅದರ ಮೇಲೆ ನಾನೂರು,

ಎಂದರೆ, ೫೦೦೦+೪೦೦=೫೪೦೦ ಶ್ವಾಸಜಪಗಳಾಗುವುವು. ೨೭೦೦ × ೨= ೫೪೦೦) **ಮರಳಿ**=ಪುನಃ **ಯಾಮತ್ರಯಕೆ**=ಮೂರನೆಯ ಯಾಮಕ್ಕೆ **ವಸುಸಾವಿರದಮೇಲ್ನೂರೆಣಿಕೆಯಲಿ**=ವಸುಎಂದರೆ ಎಂಟು ಎಂಬ ಸಂಖ್ಯಾ ಸಾಂಕೇತ (ಅಷ್ಟವಸುಗಳು) ವಸುಸಾವಿರ=ಎಂಟು × ಒಂದುಸಾವಿರ=ಎಂಟು ಸಾವಿರ ಆಗುವುದು. ಮೇಲೆನೂರು ಎಣಿಕೆ, ಎಂಟುಸಾವಿರ+ನೂರು= ಎಂಟುಸಾವಿರದ ನೂರು ಶ್ವಾಸಜಪಗಳ ಎಣಿಕೆ. (ಎರಡುಸಾವಿರದ ಏಳು ನೂರು × ೩=ಎಂಟುಸಾವಿರದ ನೂರು) **ಹನ್ನೆರಡು ತಾಸಿಗೆ**=ನಾಲ್ಕು ಯಾಮಗಳ ೧೨ ಘಂಟೆಗಳ ಒಂದು ಹಗಲಿನ ಅವಧಿಗೆ, **ಹತ್ತುಸಾವಿರದ ಎಂಟು ನೂರಹವು**=ಹತ್ತುಸಾವಿರದ ಎಂಟುನೂರು ಶ್ವಾಸಜಪಗಳಾಗು ವುವು. (ಎರಡು ಸಾವಿರದಏಳುನೂರು × ನಾಲ್ಕು=ಹತ್ತುಸಾವಿರದ ಎಂಟು ನೂರು ಅಥವಾ ಮುಹೂರ್ತಕ್ಕೆ ಒಂಭೈನೂರರಂತೆ ೧೨ ಮುಹೂರ್ತಗಳಿಗೆ ಅಂದರೆ ೧೨ ತಾಸುಗಳಿಗೆ ಒಂಭೈನೂರು × ಹನ್ನೆರಡು=ಹತ್ತುಸಾವಿರದಎಂಟು ನೂರು ಆಗುವುದು) **ಅರಿವುದು**=ಈ ರೀತಿ ಅರ್ಧದಿನದ ಅವಧಿಯಲ್ಲಿ ನಡೆ ಯಿಸುವ ಶ್ವಾಸಜಪಗಳ ಸಂಖ್ಯೆಯನ್ನು ಅನುಸಂಧಾನಿಸಬೇಕು. ||೩||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಯಾಮಾದಿ ಘಳಿಗೆಗೆ ಆಗುವ ಶ್ವಾಸಸಂಖ್ಯಾ ಹೇಳತಾರೆ.

ಮೂರು ಮುಹೂರ್ತಕ್ಕೆ ಒಂದು ಯಾಮ. ಯಾಮಕ್ಕೆ ಏಳೂವರೆ ಘಳಿಗೆ. ಮುಹೂರ್ತಕ್ಕೆ ೯೦೦ ಶ್ವಾಸಗಳ ಪ್ಯಾರಿಗೆ ಒಂದು ಯಾಮದೊಳಗೆ ಹಂಸಮಂತ್ರಾಖ್ಯ ಶ್ವಾಸಗಳು ಎರಡು ಸಾವಿರದ ಏಳುನೂರು. ಎರಡನೇ ಯಾಮಕ್ಕೆ ಎರಡು ಸಾವಿರದೇಳುನೂರು. ಅಂತು ಸೇರಿ ಎಷ್ಟು ಎಂದರೆ, ಐದುಸಾವಿರದ ಮ್ಯಾಲೆ ನಾಲ್ಕುನೂರು ಆಗುತ್ತದೆ. ಮತ್ತೂ ಮೂರು ಯಾಮಕ್ಕೆ ಎಷ್ಟು ಎಂದರೆ ಎಂಟು ಸಾವಿರದ ಮ್ಯಾಲೆ ನೂರು ಅಂತು ಎಂಟು ಸಾವಿರದ ನೂರು. ತಾಸು ಸಂಕೇತವಾದ ಹನ್ನೆರಡು ಮುಹೂರ್ತದಿಂದ ಯುಕ್ತವಾದ ನಾಲ್ಕು ಯಾಮಕ್ಕೆ ಒಂದು ದಿನ ಹಗಲಿಗೆ ಹತ್ತುಸಾವಿರದೆಂಟು

ನೂರು ಶ್ವಾಸಗಳು ಆಗೋದಾಗತವೆ ಎಂತ ಈ ಪ್ರಕಾರ ಅನುಸಂಧಾನ ಮಾಡಬೇಕಂತ ತಾತ್ಪರ್ಯ. ||೩||

### ಭಾವಪ್ರಕಾಶಿಕೆ

ಮೂರು ಘಂಟೆ ಹೊತ್ತಿಗೆ ಒಂದು ಝಾಮ(ಯಾಮ)ವೆಂದು ಹೆಸರು. ಅದರಂತೆ ಒಂದು ಘಂಟೆ ಹೊತ್ತಿಗೆ ೯೦೦ರಂತೆ ಮೂರು ಘಂಟೆಯ ಹೊತ್ತಿಗೆ ೯೦೦ × ೩ = ೨೭೦೦ ಶ್ವಾಸಗಳಾಗುವುವು. ೬ ಘಂಟೆಯ ಹೊತ್ತಿಗೆ ೯೦೦ × ೬ = ೫೪೦೦ ಶ್ವಾಸಗಳಾಗುವುವು. ೯ ಘಂಟೆಯ ಹೊತ್ತಿಗೆ ೯೦೦ × ೯ = ೮೧೦೦ ಶ್ವಾಸಗಳು. ೧೨ ಘಂಟೆಯ ಹೊತ್ತಿಗೆ ೯೦೦ × ೧೨ = ೧೦೮೦೦ ಶ್ವಾಸಜಪಗಳಾಗುವುವೆಂದು ತಿಳಿಯಬೇಕು. ||೩||

### ಭಾವದರ್ಪಣ

ಯಾಮ ಒಂದಕ್ಕೆ ೨೭೦೦ ಪ್ರಕಾರ ೪ ಯಾಮಕ್ಕೆ ೧೦,೮೦೦ ಶ್ವಾಸಜಪ ಮಾಡುತ್ತಾರೆಂದು ಹೇಳುತ್ತಾರೆ. ಅರಿವದು. ಶರ ಪಂಚ ||೩||

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಅರಿವುದು ಇತಿ || ಶರ ಪಂಚ|| ವಸು ಅಷ್ಟ||೩||

### ಕನ್ನಡಾರ್ಥ

ಮೂರುತಾಸಿಗೊಂದು ಯಾಮದಂತೆ ಒಂದು ಯಾಮಕ್ಕೆ ೨೭೦೦, ಎರಡು ಯಾಮಕ್ಕೆ ೫೪೦೦, ಮೂರುಯಾಮಕ್ಕೆ ೮೧೦೦, ನಾಲ್ಕು ಯಾಮಕ್ಕೆ ೧೦೮೦೦ ಹೀಗೆ ಶ್ವಾಸಗಳನ್ನು ಜಪಿಸುತ್ತಾರೆ. ಶರಸಹಸ್ರದ ಮೇಲೆ ಎಂಬಲ್ಲಿ ಶರವೆಂಬುದು ಜ್ಯೋತಿಷ್ಯಶಾಸ್ತ್ರಕಾರರ ಸಂಖ್ಯಾಸಂಜ್ಞಾಪಕವಾಗಿದೆ. ಶರಗಳು ಐದು ಇರುವುದರಿಂದ ಐದು ಸಹಸ್ರ ಎಂದು ಅರ್ಥ ತಿಳಿಯಬೇಕು. ಅದರಂತೆ ವಸುಗಳು ಎಂಟು ಇರುವುದರಿಂದ ವಸುಸಾವಿರವೆಂದರೆ ೮೦೦೦ ಎಂದು ಅರ್ಥ ತಿಳಿಯಬೇಕು. ||೩||

**ಶ್ರೀಗುರುಹೃದಯ ಪ್ರಕಾಶಿಕೆ**

ಯಾಮವೆಂಬ ಒಂದು ಝಾಮಕ್ಕೆ ಎರಡು ಸಾವಿರದೇಳುನೂರು, ಎರಡು ಯಾಮಕ್ಕೆ ಐದು ಸಾವಿರದನಾನ್ನೂರು, ಮೂರು ಯಾಮಕ್ಕೆ ಎಂಟು ಸಾವಿರದ ನೂರು, ಹನ್ನೆರಡು ತಾಸೆಂಬ ನಾಲ್ಕು ಯಾಮಕ್ಕೆ ಹತ್ತು ಸಾವಿರದ ಎಂಟುನೂರು ಈ ಮೇರೆಗೆ ಶ್ವಾಸಜಪಗಳನ್ನು ಮಾಡುತ್ತಾರೆಂದು ತಿಳಿವುದು. ||೩||

## ಸರ್ವವ್ಯಾಖ್ಯಾನಸಾರಸಂಗ್ರಹ

೧೨ ತಾಸುಗಳ ಅವಧಿಯಲ್ಲಿ, (ಅರ್ಧದಿನ ಪರಿಮಾಣ) ಶ್ರೀವಾಯು ದೇವರು ರಚಿಸಿ, ಮಾಡುವ ಶ್ವಾಸಜಪಗಳ ವಿಚಾರ ತಿಳಿಸುತ್ತಾರೆ.

ಒಂದು ಯಾಮವೆಂದರೆ ಮೂರು ಮುಹೂರ್ತಗಳ ಕಾಲ ವೆಂದರ್ಥ. ಇದಕ್ಕೆ ಝಾಮ ಎಂತಲೂ ಹೆಸರು, ಒಂದು ಮುಹೂರ್ತಕ್ಕೆ ಎರಡೂವರೆ ಘಳಿಗೆಗಳು. ಅಂದರೆ ೬೦ ನಿಮಿಷಗಳ ಒಂದು ತಾಸು ಅಥವಾ ಒಂದು ಘಂಟೆ. ಮೂರುತಾಸುಗಳ ಕಾಲಾವಧಿಗೆ ಒಂದು ಯಾಮವಾಗು ವುದು. ಒಂದು ತಾಸಿಗೆ ೯೦೦ ಶ್ವಾಸಜಪಗಳಂತೆ, ಮೂರುತಾಸುಗಳ ಒಂದು ಯಾಮಕ್ಕೆ ೯೦೦ × = ೩ = ೨,೭೦೦ ಶ್ವಾಸಜಪಗಳನ್ನು ಶ್ರೀಮುಖ್ಯಪ್ರಾಣ ದೇವರು ತ್ರಿವಿಧಜೀವರ ಸ್ಥೂಲದೇಹದಲ್ಲಿದ್ದು ಮಾಡಿ ಮಾಡಿಸುತ್ತಾರೆ. ಈ ಸಂಖ್ಯೆಯನ್ನು ದಾಸರಾಯರು ಎರಡು ಸಾವಿರದೇಳುನೂರನು ಎಂದಿದ್ದಾರೆ.

ಎರಡು ಯಾಮಕ್ಕೆ ಅಂದರೆ ೬ ತಾಸುಗಳ ಅವಧಿಯಲ್ಲಿ, ೯೦೦ × ೬ = ೫೪೦೦ (ಐದು ಸಾವಿರದ ನಾನ್ನೂರು) ಶ್ವಾಸಜಪಗಳಾಯಿತು. ಈ ಸಂಖ್ಯೆಯನ್ನು ಶರಸಹಸ್ರದ ಮೇಲೆ ನಾನೂರಹವು ಎಂದಿದ್ದಾರೆ.

ಅಂದರೆ ಶರಸಹಸ್ರ ೫೦೦೦. (ಇಲ್ಲಿ ಶರ ಶಬ್ದವು ಪಂಚಸಂಖ್ಯಾ ಸಾಂಕೇತ ಮನ್ಮಥನ ಪಂಚಬಾಣಗಳು) ಮೇಲೆ ನಾನೂರು ೪೦೦, ಒಟ್ಟು ೫೪೦೦ ಐದು ಸಹಸ್ರ ನಾಲ್ಕು ನೂರು ಆಯಿತು.

ಪುನಃ (ಮರಳಿ) ಮುಂದಿನ ಯಾಮಕ್ಕೆ ಅಂದರೆ ೯ ತಾಸುಗಳ ಮೂರು ಯಾಮಕ್ಕೆ (ಯಾಮತ್ರಯಕೆ) ೯೦೦ × ೯ = ೮೧೦೦ ಶ್ವಾಸಜಪ ಗಳಾಗುವುವು. ಈ ಸಂಖ್ಯೆಯನ್ನು ದಾಸರಾಯರು ಚಮತ್ಕಾರವಾಗಿ ವಸು ಸಾವಿರ ಮೇಲ್ನೂರೆಣಿಕೆಯಲಿ ಎಂದು ಹೇಳಿರುತ್ತಾರೆ.

ಅಂದರೆ ವಸುಸಾವಿರ ೮೦೦೦ (ವಸುಗಳು ೮ ಮಂದಿ. ಅಷ್ಟಸಂಖ್ಯಾ ಸಾಂಕೇತ), ಮೇಲ್ನೂರು ೧೦೦. ಅಲ್ಲಿಗೆ ಒಟ್ಟು ೮೧೦೦.

ನಾಲ್ಕನೆಯ ಯಾಮಕ್ಕೆ ೧೨ ತಾಸುಗಳು. ಅಂದರೆ ಒಂದು ಹಗಲು (ಅರ್ಧದಿನ ಪ್ರಮಾಣ) ತಾಸಿಗೆ ೯೦೦ರಂತೆ ೧೨ ತಾಸುಗಳಿಗೆ ೯೦೦ × ೧೨ = ೧೦,೮೦೦ ಆಗುವುದು. ಈ ರೀತಿ ಭಾರತೀಶರು ಸರ್ವಜೀವರ ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದು ಅರ್ಧದಿನದ ೧೨ ತಾಸುಗಳಲ್ಲಿ ಅಂದರೆ ನಾಲ್ಕು ಯಾಮಗಳಲ್ಲಿ ಹತ್ತುಸಾವಿರದಎಂಟುನೂರು ಶ್ವಾಸಜಪಗಳನ್ನು ರಚಿಸಿ ಮಾಡಿ ಮಾಡಿಸುತ್ತಿರುವರು. ||೩||

## ಪದ್ಯ ೪

**ಮೂಲ**

**ಒಂದು ದಿನದೊಳಗನಿಲ ಇಪ್ಪ ।**
**ತ್ತೊಂದುಸಾವಿರದಾರುನೂರು ಮು ।**
**ಕುಂದನಾಜ್ಞದಿ ಮಾಡಿ ಮಾಡಿಸಿ ಲೋಕಗಳ ಪೊರೆವ ॥**
**ನೆಂದು ಪವನನ ಪೊಗಳುತಿರು ಎಂ ।**
**ದೆಂದು ಮರಿಯದೆ ಈ ಮಹಿಮೆ ಸಂ ।**
**ಕ್ರಂದನಾದ್ಯರಿಗುಂಟೆ ನೋಡಲು ಸರ್ವಕಾಲದಲಿ ॥ ||೪||**

## ಅವತರಣಿಕೆ

ಈ ರೀತಿ ೨೪ ತಾಸುಗಳ ಒಂದು ದಿನದಲ್ಲಿ ಅನಿಲದೇವರು, ೨೧೬೦೦ ಸಂಖ್ಯಾಕವಾದ ಶ್ವಾಸಜಪಗಳನ್ನು ಮುಕುಂದನ ಆಜ್ಞಾನುಸಾರ ಮಾಡಿ, ಆ ಕ್ರಿಯಾದ್ವಾರದಿಂದ ಸಂರಕ್ಷಿಸುತ್ತಾರೆಂದು ತಿಳಿದು ಕೊಂಡಾಡುತ್ತಿರಬೇಕೆಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

**ಒಂದುದಿನದೊಳಗೆ**= ಹಗಲು, ರಾತ್ರಿ ಸೇರಿ ೨೪ ತಾಸುಗಳ ಒಂದು ದಿನದಲ್ಲಿ, **ಅನಿಲ**= ಜೀವೋತ್ತಮರಾದ ಶ್ರೀವಾಯುದೇವರು, **ಇಪ್ಪತ್ತೊಂದು ಸಾವಿರದಾರುನೂರು**= ೨೧,೬೦೦ ಸಂಖ್ಯಾಕವಾದ (ಒಂದು ಯಾಮಕ್ಕೆ ೨,೭೦೦ರಂತೆ ೮ ಯಾಮಗಳಿಗೆ ೨೭೦೦ × ೮ = ೨೧೬೦೦ ಆಗುವುದು) ಶ್ವಾಸಜಪಗಳನ್ನು, **ಮುಕುಂದನಾಜ್ಞದಿ**= ಮುಕ್ತಿಪ್ರದಾತನಾದ ಶ್ರೀಹರಿಯ ಆಜ್ಞಾನುಸಾರ, **ಮಾಡಿ**= ತಾವು ರಚನಾ ಮಾಡಿ, ಶ್ವಾಸಕ್ರಿಯಾದ್ವಾರಾ ಮಾಡುತ್ತಾ, **ಮಾಡಿಸಿ**= ಕ್ರಿಯಾರೂಪದಿಂದ ಜೀವನದ್ವಾರಾ ಮಾಡಿಸುತ್ತಾ, **ಲೋಕಗಳ**= ತ್ರಿಲೋಕಗತ ಸಮಸ್ತ ತ್ರಿವಿಧ ಜೀವರುಗಳನ್ನು (ಸ್ಥಾವರ-ಜಂಗಮಾದಿ ಜೀವರಾಶಿಗಳನ್ನು) **ಪೊರೆವ**= ಶ್ವಾಸಾಖ್ಯ ಆಯುರ್ಮಾನ ಕಾಲದಲ್ಲಿ ಜೀವರ ದೇಹ ರಕ್ಷಣೆಯನ್ನು ಮಾಡುತ್ತಾರೆ, **ಎಂದು**= ಈ ರೀತಿಯಾಗಿ, ತಿಳಿದು, **ಪವನನ**= ದೇಹಾಂತರ್ಗತ ಶ್ವಾಸಪತಿಗಳಾದ ಪವಮಾನನಾಮಕ ಜೀವೋತ್ತಮರಾದ ಶ್ರೀಮುಖ್ಯಪ್ರಾಣದೇವರನ್ನು, **ಪೊಗಳುತಿರು**= ಕೊಂಡಾಡುತ್ತಿರು, **ಎಂದೆಂದು ಮರಿಯದೆ**= ಯಾವ ಕಾಲದಲ್ಲೂ ಅವರ ಪರಮೋಪಕಾರವನ್ನು ಮರೆಯದೆ, **ಈ ಮಹಿಮೆ**= ಇಂತಹ ಮಹಾತ್ಮ್ಯೆಯು, **ಸಂಕ್ರಂದನಾದ್ಯರಿಗೆ**= ಇಂದ್ರಾದಿದೇವರಿಗೆ, **ಉಂಟೆ**= ಇರುವುದೇ? **ಸರ್ವಕಾಲದಲಿ**= ಎಲ್ಲ ಕಾಲಗಳಲ್ಲಿ, **ನೋಡಲು**= ವಿಚಾರಿಸಲು. ||೪||

# ವ್ಯಾಖ್ಯಾನಗಳು

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಒಂದು ದಿನದ ಅಹೋರಾತ್ರಿಗೆ ಆಗುವ ಶ್ವಾಸಗಳ ಹೇಳತಾರೆ.

ಹಗಲು ರಾತ್ರಿ ಎರಡೂ ಸೇರಿ ಒಂದು ದಿನ. ಎಂಟು ಯಾಮದಿಂದ ಯುಕ್ತವಾದ ಒಂದು ದಿನದೊಳಗೆ, ಜೀವೋತ್ತಮರಾದ ವಾಯುದೇವರು, ಇಪ್ಪತ್ತೊಂದು ಸಾವಿರದ ಆರ್ನೂರು, ಇಷ್ಟು ಜಪಗಳು ಮೋಕ್ಷದಾತನಾದ ದೇವರ ಆಜ್ಞಾದಿಂದ ಶ್ವಾಸಾದ್ವಾರಾ ತಾವು ಮಾಡಿ, ತಮ್ಮ ಕ್ರಿಯಾದ್ವಾರ ದಿಂದ ಜೀವನಕಡಿಯಿಂದ ಮಾಡಿಸಿ ಎಂದರೆ, ಸ್ಥೂಲದೇಹೇಂದ್ರಿಯಗಳಲ್ಲಿ ಜೀವ ಪ್ರಕಾಶತೋ ವ್ಯಾಪ್ತನಾಗಿದ್ದಾನೆ. ತದ್ವತ್ ಜೀವನ ಹಂಸಮಂತ್ರಾಖ್ಯ ಶ್ವಾಸವು ಸ್ಥೂಲದೇಹಗತ ಜಡಶ್ವಾಸದಲ್ಲಿ ವ್ಯಾಪ್ತ ಆಗಿ ಅದೆ. ಈ ವ್ಯಾಪ್ತ ಶ್ವಾಸಾಂತರ್ಗತರಾಗಿ ಚತುರ್ವಿಂಶತಿ ತತ್ತ್ವೇಶರು ಇದ್ದಾರೆ. ಎಲ್ಲರೂ ಶ್ವಾಸ ರೂಪದಿಂದಲೇ ಇದ್ದಾರೆ. ಈ ಶ್ವಾಸ ಪ್ರತಿಪಾದ್ಯನಾದವ ಹಂಸರೂಪಿ ಪರಮಾತ್ಮ. ಶ್ವಾಸಗಳು ತದ್ಗತ ಹಂಸ ಎಂಬ ಎರಡು ವರ್ಣಗಳು ಜಡಗಳು ಇದರಲ್ಲಿ ಜೀವನ ಶ್ವಾಸ, ತದ್ಗತ ವರ್ಣಗಳು ಇರೋವಾಗಿ ಅವೆ. ಇದರಲ್ಲಿ ವಾಯ್ವಾದಿ ತತ್ತ್ವೇಶರು ತದಾಕಾರದಿಂದ ಇದ್ದಾರೆ. ವಾಯುದೇವರು ಮೂಲೇಶನ ಪಾದಮೂಲದಲ್ಲಿ ಇದ್ದವರಾಗಿ ಉಚ್ಚಾರ ಮಾಡತಕ್ಕ ಹಂಸ ಎಂಬ ಜಪಾತ್ಮಕ ವರ್ಣಗಳಲ್ಲಿ ಪ್ರವಿಷ್ಟರಾಗತಾ ಇರತಾರೆ. ವಾಯುದೇವರ ಶರೀರ ಎಂಥಾದ್ದೋ ಅಂಥಾದ್ದೇ ಅವರ ಮುಖವೂ. ಈ ಪ್ರಕಾರ ಜಡ ಶ್ವಾಸದ್ವಾರಾ, ಜೀವನಶ್ವಾಸ ದ್ವಾರಾ ಹಂಸಮಂತ್ರ ತಾವು ಮಾಡಿ ಜೀವನ ದ್ವಾರಾ ಪೂರ್ವೋಕ್ತರೀತ್ಯಾ ಮಾಡಿಸತಾರೆ. ಈ ವಾಯುದೇವರಲ್ಲಿ ಪರಮಾತ್ಮ ತಾನೇ ಶ್ವಾಸಕಾರ್ಯ ಮಾಡತಾನೆ. ಮುಕ್ತಿಯೋಗ್ಯ ಜೀವರ ಸ್ವರೂಪದಲ್ಲಿ ತದ್ಗತ ಬಿಂಬ ಹಂಸ ಎಂಬ ಶ್ವಾಸಜಪ ಮಾಡತಾನೆ. ಅನಾದಿ ಯಾದ ಅವನ ಸ್ವರೂಪ ಯೋಗ್ಯತಾಕ್ಕೆ ಅನುಸರಿಸಿದ ಶ್ವಾಸ ಅಂಥಾದ್ದೇ. ಅದು ಈಶ್ವರನಿಂದ ರಚಿತವಲ್ಲ. ಅನಾದಿಸಿದ್ಧ. ಅದರನ್ನ ವ್ಯಾಪ್ತವಾದ ಜೀವ ಕೂಡಾ ಸ್ಥೂಲದಲ್ಲಿ ಅಭಿವ್ಯಕ್ತಿ ಮಾಡತಾನೆ. ಅದರನ್ನನುಸರಿಸಿ

ವಾಯುದೇವರು ತಾವು ಹಂಸಮಂತ್ರ ಜಪಿಸಿ ಪೂರ್ವೋಕ್ತಪ್ರಕಾರ ಜೀವನ ದ್ವಾರಾ ಮಾಡಸತಾರೆ. ಶ್ವಾಸಾಖ್ಯ ಆಯುವರ್ಧನಕಾಲದಲ್ಲಿ ದೇಹಾಂತ ರ್ಗತರಾಗಿ, ಪ್ರಾಣಿಗಳ ಯೋಗ್ಯತಾನುಸಾರ ತ್ರಿವಿಧ ಸಾಧನಗಳ ಮಾಡಸತಾ ದೇಹಗಳ ಸುರಕ್ಷಣೆ ಮಾಡತಾರೆಂದು ದೇಹಾಂತರ್ಗತರಾದ, ಶ್ವಾಸನಿಯಾಮಕ ರಾದ, ಜೀವೋತ್ತಮರಾದ ವಾಯುದೇವರ ದಾವಾಗ್ಯೂ ಮರಿಯದೇನೆ ಸ್ತೋತ್ರ ಮಾಡತಾ ಇರೋವನಾಗು. ಜಾಗ್ರದ್ದಶಾವಾದ ಸರ್ವಕಾಲದಲ್ಲಿ ವಾಯುದೇವರ ಮರಿಯಬ್ಯಾಡ. ರುದ್ರಾದಿ ತೃಣಾಂತ ತ್ರಿವಿಧ ಜೀವರಲ್ಲಿ ಶ್ವಾಸಕಾರ್ಯ ಮಾಡತಕ್ಕ ಈ ವಾಯುದೇವರ ಮಹಿಮಾ, ವಾಯುದೇವರ ಬಲ ಪರಾಕ್ರಮ ಮೊದಲಾದವು ವಿಚಾರಮಾಡಿ ನೋಡಲು ರುದ್ರದೇವರೆ ಆದಿಯಾದ ಇಂದ್ರಾದಿಗಳಿಗೆ ಉಂಟೆ ಅಂದರೆ, ಇಲ್ಲ ಎಂತ ತಾತ್ಪರ್ಯ. ಶ್ವಾಸ ಕಾರ್ಯ ಮಾಡಸತಕ್ಕ ಮಹಾತ್ಮೆ ವಾಯುದೇವರದೇ ಹೊರತು ಅನ್ಯರಿಗಿಲ್ಲ ಎಂತ ತಾತ್ಪರ್ಯ. ॥೪॥

### ಭಾವಪ್ರಕಾಶಿಕೆ

ಏಕವಿಂಶತ್ಸಹಸ್ರಾತ್ಮಾ ಸಷಟ್ಶತಮಹರ್ನಿಶಂ ಎಂಬ ತಂತ್ರಸಾರದ ವಾಕ್ಯ ರೀತ್ಯಾ ಒಂದು ದಿವಸದೊಳಗೆ ೨೧,೬೦೦ ಶ್ವಾಸಜಪವನ್ನು ಶ್ರೀ ವಾಯುದೇವರು ಭಗವದಾಜ್ಞಾ ಪ್ರಕಾರ ಜೀವರಲ್ಲಿದ್ದು ಮಾಡಿ ಮಾಡಿಸುತ್ತ ಲೋಕಗಳನ್ನು ಅಂದರೆ ಸರ್ವ ಪ್ರಾಣಿಗಳನ್ನು ಸಂರಕ್ಷಣೆ ಮಾಡುವರೆಂದು ಶ್ರೀವಾಯುದೇವರನ್ನು ಎಂದಿಗೂ ಮರೆಯದೆ ಸ್ತುತಿಸುತ್ತಿರು, ಇಂತಹ ಮಹಿಮೆಯು ಯಾವ ಕಾಲದಲ್ಲೂ ಇಂದ್ರಾದಿಗಳಿಗೆ ಇಲ್ಲವೆಂದು ತಿಳಿಯ ಬೇಕು. ॥೪॥

### ಭಾವದರ್ಪಣ

ಎಂಟು ಯಾಮಕ್ಕೂ ಶ್ವಾಸಜಪಗಳು ಮಾತರಿಶ್ವ ಮಾಡತಕ್ಕದ್ದು ೨೧,೬೦೦ ಇಷ್ಟೆ ಎಂದು ಹೇಳುತ್ತಾರೆ. ಒಂದು. ಈ ಶ್ವಾಸಜಪ ಸಂಕ್ರಂದನಾ ಎಂದರೆ ಇಂದ್ರ ಈತನೇ ಮೊದಲಾದ ದೇವತೆಗಳಿಂದ ಆಗೋದುಂಟೇ ?

(ಇಲ್ಲೆಂಬ ಭಾವ). ಇಂಥಾ ಶ್ವಾಸನಿರೋಧ ಮಾಡಿ ಶ್ರೀಪರಮಾತ್ಮನ ಚರಣ ಕಮಲದಲ್ಲಿ ಭೃಂಗವತ್ ಮನಸ್ಸು ಇಟ್ಟು ಧ್ಯಾನಮಾಡತಕ್ಕ ಪುರುಷಗೆ ಆಯುರ್ವೃದ್ಧಿ ಆಗುವದೆಂದು ಶ್ರೀಮದ್ವಿಜಯದಾಸರಾಜಪ್ರಭೃತಿಗಳು ಸುಳಾದಿಗಳಲ್ಲಿ ಬಹಳ ವಿವರಮಾಡಿ ಹೇಳಿರುತ್ತಾರೆ. ಸುಜ್ಞರಾಚರಿಸ ತಕ್ಕದ್ದು. ||೪||

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಮೇಲಯತಿ ಒಂದು ಇತಿ || ಸಂಕ್ರಂದನಃ ಇಂದ್ರಃ ||೪||

### ಕನ್ನಡಾರ್ಥ

ಘಳಿಗೆಯಿಂದ ಆರಂಭಿಸಿ ೪ ಯಾಮಗಳಿಗೆ ೧೨ ತಾಸಿಗೆ ಆಗುವ ಶ್ವಾಸ ಗಳ ಸಂಖ್ಯೆಯನ್ನು ಅನುಕ್ರಮವಾಗಿ ತಿಳಿಸಿ, ದಿವಸದ ಎಲ್ಲ ಶ್ವಾಸಗಳ ಸಂಖ್ಯೆ ಯನ್ನು ಮೇಳನ ಮಾಡಿ ತಿಳಿಸುತ್ತಾರೆ, "ಒಂದು ದಿನದೊಳು" ಎಂಬ ಪದ್ಯದಿಂದ.

ಸಂಕ್ರಂದನ ಇಂದ್ರ ||೪||

### ಶ್ರೀಗುರುಹೃದಯಪ್ರಕಾಶಿಕೆ

ಶ್ರೀಪ್ರಾಣದೇವರು ಒಂದು ದಿವಸದಲ್ಲಿ ಇಪ್ಪತ್ತೊಂದು ಸಾವಿರದ ಆರ ನೂರು ಶ್ವಾಸಜಪವನ್ನು ಮುಕ್ತಿಪ್ರದ ದೇವರ ಆಜ್ಞೆಯಿಂದ ಸರ್ವಲೋಕದ ಜೀವರಲ್ಲೂ ಮಾಡಿ ಮಾಡಿಸಿ ರಕ್ಷಿಸುವನು. ಹೀಗೆಂದು ಸದಾ ಸ್ತುತಿಸುತ್ತಾ ಎಂದೆಂದಿಗೂ ಮರೆಯದಿರು. ಸಂಕ್ರಂದನನೆಂಬ ಇಂದ್ರ ಮೊದಲಾದವರಿಗೂ ಕೂಡ ಈ ಮಹಿಮೆ ಎಂದೆಂದಿಗೂ ದೊರಕದೆಂದು ತಿಳಿಯುವುದು. ||೪||

## ಸರ್ವವ್ಯಾಖ್ಯಾನಸಾರಸಂಗ್ರಹ

ಪರಮೋಪಕಾರಿಗಳಾದ ಪವಮಾನರಾಯರು ತ್ರಿವಿಧಜೀವರ ಸ್ಥೂಲ ದೇಹಗತರಾಗಿದ್ದು ಪ್ರತಿದಿವಸಕ್ಕೆ ೨೧,೬೦೦ ಸಂಖ್ಯಾಕವಾದ ಶ್ವಾಸಜಪಗಳನ್ನು

ಮಾಡಿ ಮಾಡಿಸುತ್ತಾ ಜೀವರ ದೇಹಸಂರಕ್ಷಣೆ ಮಾಡುತ್ತಾರೆಂದು ತಿಳಿಸುತ್ತಾರೆ.

೨೪ ತಾಸುಗಳ ಅವಧಿಗೆ ಒಂದು ದಿನವಾಗುವುದು. ಒಂದು ಹಗಲು ಒಂದು ರಾತ್ರಿ ಸೇರಿ ಒಂದು ದಿನದ ಕಾಲಗಣನೆ. ೩ ತಾಸುಗಳಿಗೆ ಒಂದು ಯಾಮದಂತೆ ಒಂದು ದಿವಸಕ್ಕೆ ೮ ಯಾಮಗಳು.

ಒಂದು ಯಾಮಕ್ಕೆ ಮುಖ್ಯಪ್ರಾಣದೇವರು ೨,೭೦೦ ಶ್ವಾಸಜಪಗಳನ್ನು ಮಾಡುತ್ತಾರೆ ಎಂದು ವಿವರಿಸಲಾಗಿದೆ. ಅದರ ಪ್ರಕಾರ ಒಂದು ದಿವಸಕ್ಕೆ ಅಂದರೆ, ೮ ಯಾಮಗಳಿಗೆ ೨೭೦೦ × ೮ = ೨೧,೬೦೦ ಆಗುವುದು. ಜೀವೋತ್ತಮರಾದ ಶ್ರೀವಾಯುದೇವರು ಮೂಲೇಶನಂಘ್ರಿ ಸರೋಜ ಮೂಲದಲ್ಲಿದ್ದು ಪ್ರತಿದಿನವಲ್ಲಿ ಇಪ್ಪತ್ತೊಂದು ಸಾವಿರದ ಆರುನೂರು ಸಂಖ್ಯಾಕವಾದ ಶ್ವಾಸಜಪಗಳನ್ನು ಮಾಡುತ್ತಿರುವರು.

ಈ ಸಂಖ್ಯಾಗಣನೆಯನ್ನು ಮೂಲತಃ ಹೀಗೆ ತಿಳಿಯಬಹುದು :

ಪ್ರತಿ ೪ ಸೆಕೆಂಡುಗಳಲ್ಲಿ ಒಂದು ಶ್ವಾಸಜಪದಂತೆ, ೬೦ ಸೆಕೆಂಡುಗಳಲ್ಲಿ ಅಂದರೆ ಒಂದು ನಿಮಿಷಕ್ಕೆ ೬೦ ÷ ೪ = ೧೫ ಶ್ವಾಸಜಪಗಳಾಗುವುವು. ೬೦ ನಿಮಿಷಗಳಿಗೆ ಅಂದರೆ ಒಂದು ತಾಸಿಗೆ ೧೫ × ೬೦ = ೯೦೦ ಶ್ವಾಸಜಪಗಳಾಗುವುವು. ೨೪ ತಾಸುಗಳ ಒಂದು ದಿನಕ್ಕೆ ೯೦೦ × ೨೪ = ೨೧,೬೦೦ ಶ್ವಾಸಜಪಗಳಾಗುವುವು. ಈ ಎಣಿಕೆಯ ಕ್ರಮ ನೇರ ಹಾಗೂ ಸುಲಭಗ್ರಾಹ್ಯ.

ಶ್ರೀವಾಯುದೇವರು ಮುಕ್ತಿಪ್ರದನಾದ ಶ್ರೀಮುಕುಂದನ ಆಜ್ಞಾನುಸಾರ ಸರ್ವಜೀವರ ಸ್ಥೂಲಶರೀರದಲ್ಲಿದ್ದು ದಿನ ಒಂದಕ್ಕೆ ೨೧,೬೦೦ ಶ್ವಾಸಮಂತ್ರಗಳನ್ನು ಜಪಿಸುತ್ತಾ, ಜೀವರ ಆಯುಷ್ಯಾರ್ನ ಪರ್ಯಂತ ಅವರ ದೇಹಗಳನ್ನು ಸಂರಕ್ಷಿಸುತ್ತಿರುವರು.

ಈ ರೀತಿಯಲ್ಲಿ ಆ ಪವನರಾಯರ ಮಹಾಮಹಿಮೆಯನ್ನು ಶಾಸ್ತ್ರ

ದ್ವಾರಾ ಅರಿತು, ಗುರೂಪದೇಶದ್ವಾರಾ ಜ್ಞಾನಾನುಸಂಧಾನ ಕ್ರಮದಿಂದ ತಿಳಿದು ಅವರನ್ನು ಪೊಗಳುತಿರಬೇಕು.

ಶ್ರೀಮುಖ್ಯಪ್ರಾಣದೇವರಿಗಿರುವ ಈ ಮಹಾಮಹಿಮೆ ಇಂದ್ರಾದಿ ದೇವತೆಗಳಿಗೆ ಎಂದಾದರೂ ಉಂಟೇ. ಆದ್ಯರಿಗೆ ಎಂಬ ಶಬ್ದದಿಂದ ಗರುಡ, ಶೇಷ, ರುದ್ರರೂ ಗ್ರಾಹ್ಯ. ಸಮಸ್ತ ದೇಶ, ಕಾಲ, ಅವಸ್ಥಾ ವಿಶೇಷಗಳಲ್ಲಿ ಶ್ರೀಹರಿಯ ಪೂರ್ಣಾನುಗ್ರಹ ಪಾತ್ರರಾದ ಪವನರಾಯರು ಜೀವರಲ್ಲಿದ್ದು ಜೀವರ ಪರಮಾಪ್ತ ಬಂಧುವು. ||೪||

### ಪದ್ಯ ೫

**ಮೂಲ**

**ಮೂರುಲಕ್ಷದ ಮೇಲೆ ವಿಂಶತಿ ।**
**ಈರೆರಡುಸಾವಿರವು ಪಕ್ಷಕೆ ।**
**ಆರುಲಕ್ಷದ ಮೇಲೆ ನಾಲ್ವತ್ತೆಂಟುಸಾವಿರವು ।**
**ಮಾರುತನು ಮಾಸಕೆ ಜಪಿಸಿ ಸಂ ।**
**ಸಾರ ಸಾಗರದಿಂದ ಸುಜನರ ।**
**ಪಾರುಗಾಣಿಸಿ ಸಲಹುವನು ಬಹುಭೋಗಗಳನ್ನಿತ್ತು || ||೫||**

**ಅವತರಣಿಕೆ**

ಆರುಲಕ್ಷದ ನಲ್ವತ್ತೆಂಟು ಸಹಸ್ರ ಶ್ವಾಸಜಪಗಳನ್ನು ಮಾರುತನು ಈ ಸ್ಥೂಲಶರೀರದಲ್ಲಿದ್ದು, ಜಪಿಸುತ್ತಾ ಸಜ್ಜನರನ್ನು ಈ ಘೋರವಾದ ಸಂಸಾರ ವೆಂಬ ಸಾಗರದಿಂದ ಉತ್ತರಿಸಿ, ಶ್ರೀಹರಿಯ ಆಜ್ಞೆಯಂತೆ ಮುಕ್ತಿಸುಖವನ್ನು ಈಯುವನೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಪಕ್ಷಕೆ**=೧೫ ದಿವಸಗಳ ಅವಧಿಯಾದ ಒಂದು ಪಕ್ಷಕ್ಕೆ, **ಮೂರು**

**ಲಕ್ಷದ ಮೇಲೆ**= ಮೂರುಲಕ್ಷದ ಮೇಲೆ, **ವಿಂಶತಿ**= ಇಪ್ಪತ್ತು, **ಈರೆರಡು ಸಾವಿರವು**= ೨ × ೨= ನಾಲ್ಕು ಸಾವಿರದ, ಅಂದರೆ, ಮೂರುಲಕ್ಷ+ಇಪ್ಪತ್ತು ನಾಲ್ಕು ಸಾವಿರ=೩,೨೪,೦೦೦ ಸಂಖ್ಯಾಕವಾದ ಶ್ವಾಸಜಪಗಳಾಗುವುವು. (ದಿನಕ್ಕೆ ೨೧,೬೦೦ ಜಪಗಳಂತೆ ೧೫ ದಿನಗಳಿಗೆ, ೨೧,೬೦೦ × ೧೫= ೩,೨೪,೦೦೦ ಆಗುವುವು) **ಮಾಸಕೆ**= ೩೦ ದಿನಗಳ ಅವಧಿಯ ಒಂದು ತಿಂಗಳಿಗೆ, **ಆರುಲಕ್ಷದ ಮೇಲೆ ನಾಲ್ವತ್ತೆಂಟು ಸಾವಿರವು**= ಆರುಲಕ್ಷದ ಮೇಲೆ ನಾಲ್ವತ್ತೆಂಟು ಸಾವಿರ ಸಂಖ್ಯಾಕವಾದ ಶ್ವಾಸ ಜಪಗಳಾಗುವುವು. (ಮಾಸಕ್ಕೆ ೨ ಪಕ್ಷಗಳು ಅದರಂತೆ, ೩,೨೪,೦೦೦ × ೨ =೬,೪೮,೦೦೦ ಆಗುವುವು) **ಮಾರುತನು**= ಶ್ರೀಮುಖ್ಯಪ್ರಾಣದೇವರು, **ಜಪಿಸಿ**= ಮಾಸಕ್ಕೆ ೬,೪೮,೦೦೦ ಶ್ವಾಸಜಪಗಳಂತೆ ಜಪಿಸಿ, **ಸುಜನರ**= ಭಗವದ್ಭಕ್ತರಾದ ಸಜ್ಜನರನ್ನು, **ಸಂಸಾರಸಾಗರದಿಂದ**= ಜನನ ಮರಣಾಖ್ಯವಾದ, ದುಸ್ತರವಾದ ಸಂಸಾರ ಎಂಬ ಈ ಸಮುದ್ರದಿಂದ, **ಪಾರುಗಾಣಿಸಿ**= ದಾಟಿಸಿ, **ಬಹುಭೋಗಗಳನ್ನಿತ್ತು**= ಅಜ್ಞಾನ ಪರಿಹಾರಪೂರ್ವಕ, ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀ ಸಂಪತ್ತನ್ನು ಕರುಣಿಸಿ, ಲಿಂಗಭಂಗಾನಂತರ, ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಶ್ರೀಪರಮಾತ್ಮನದ್ವಾರಾ ಕೊಡಿಸಿ, **ಸಲಹುವನು**= ಸದಾ ಸಂರಕ್ಷಿಸುವನು. ||೫||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಒಂದು ಪಕ್ಷಕ್ಕೆ, ಮಾಸಕ್ಕೆ ಆಗತಕ್ಕ ಶ್ವಾಸಗಳ ಸಂಖ್ಯಾ ಹೇಳತಾರೆ.

ಹದಿನೈದು ದಿನಕ್ಕೆ ಒಂದು ಪಕ್ಷ. ದಿನ ಒಂದಕ್ಕೆ ಇಪ್ಪತ್ತೊಂದು ಸಾವಿರದಾರುನೂರು ಶ್ವಾಸದ ಮ್ಯಾರಿಗೆ ಒಂದು ಪಕ್ಷಕ್ಕೆ, ಮೂರುಲಕ್ಷದ ಇಪ್ಪತ್ತುಸಾವಿರ, ನಾಲ್ಕು ಸಾವಿರ ಅಂತೂ ಮೂರು ಲಕ್ಷದ ಇಪ್ಪತ್ನಾಲ್ಕು ಸಾವಿರ ಆಗೋದಾಗತದೆ. ಎರಡು ಪಕ್ಷಾತ್ಮಕ ಒಂದು ತಿಂಗಳಿಗೆ ಆರು ಲಕ್ಷದ ಮ್ಯಾಲೆ ನಲವತ್ತೆಂಟು ಸಾವಿರ. ಅಂತೂ ಆರುಲಕ್ಷದ ನಲವತ್ತೆಂಟು ಸಾವಿರ

ಶ್ವಾಸಗಳು ಒಂದು ತಿಂಗಳಿಗೆ ಆಗತವೆ. ವಾಯುದೇವರು ಪೂರ್ವೋಕ್ತ ಸಂಖ್ಯಾಕವಾದ ಹಂಸಮಂತ್ರ ಜಪಿಸಿ, ಭಗವದ್ಭಕ್ತರಾದ ಸಜ್ಜನರ ಅಜ್ಞಾನ ಪರಿಹಾರ ಮಾಡಿ, ಜ್ಞಾನಭಕ್ತಿ ವೈರಾಗ್ಯಗಳಿಂದ ಆಗತಕ್ಕ ಅನೇಕವಾದ ಸುಖಗಳ ಐಹಿಕದಲ್ಲಿತ್ತು, ಸಂಸಾರ ಸಮುದ್ರದ ಆಚೆ ದಡವನ್ನು ಸೇರಿಸಿ, ಜೀವನ್ಮುಕ್ತರನ್ನು ಮಾಡಿ ಮಹರಾದಿ ಲೋಕಗಳಲ್ಲಿಟ್ಟು, ಜ್ಞಾನರೂಪವಾದ ಸಾಧನಗಳ ಮಾಡಿಸುತ್ತಾ ಸಂರಕ್ಷಣೆ ಮಾಡತಾರೆ.

ಕರ್ಮಸಾಧನಭೂಮಿ ಭರತಖಂಡ, ಜ್ಞಾನಸಾಧನಭೂಮಿ ಮಹರಾದಿ ಲೋಕ. ಜೀವನ್ಮುಕ್ತ ದಶಾದಲ್ಲಿ ಇದೇ ವಾಯುದೇವರೇ ಬ್ರಹ್ಮಪಟ್ಟಕ್ಕೆ ಒಂದು, ಜೀವನ್ಮುಕ್ತರಾದ ಮಹರಾದಿ ಲೋಕಗತ ಪ್ರಾಣಿಗಳ ರಕ್ಷಿಸತಾರೆ ಎಂತ ತಾತ್ಪರ್ಯ. ||೫||

## ಭಾವಪ್ರಕಾಶಿಕೆ

ತಿಂಗಳಿಗೆ ಎರಡು ಪಕ್ಷಗಳಿರುವವು. ಪಕ್ಷ ಒಂದಕ್ಕೆ ೧೫ ದಿವಸಗಳು. ದಿವಸ ಒಂದಕ್ಕೆ ೨೧೬೦೦ ಶ್ವಾಸಗಳಂತೆ ೨೧,೬೦೦ × ೧೫ = ೩,೨೪,೦೦೦ ಮೂರು ಲಕ್ಷದ ಇಪ್ಪತ್ತಾಲ್ಕುಸಾವಿರ ಶ್ವಾಸಗಳು ಆಗುತ್ತವೆ. ಉಪಲಕ್ಷಣಯಾ ಒಂದು ಪಕ್ಷಕ್ಕೆ ಹೇಳಿದ ಮೇಲೆ ಒಂದು ತಿಂಗಳಿಗೆ ಎರಡು ಪಕ್ಷಗಳು ಒಂದು ಪಕ್ಷಕ್ಕೆ ೩,೨೪,೦೦೦ ಆದರೆ ಎರಡು ಪಕ್ಷಗಳಿಗೆ ೩,೨೪,೦೦೦ × ೨ = ೬,೪೮,೦೦೦ ಶ್ವಾಸಗಳಾದವು ಎಂದು ತಿಳಿದುಕೊಳ್ಳಬೇಕು. ಮಹಾ ಕರುಣಾಳುವಾದ ವಾಯುದೇವರು ಜೀವರಿಂದ ಪ್ರತಿಫಲವನ್ನು ಅಪೇಕ್ಷಿಸದೆ, ಈ ಪರಿಯಾಗಿ ಶ್ವಾಸಜಪಗಳನ್ನು ಮಾಡಿಸಿ, ಯೋಗ್ಯ ಜೀವರನ್ನೂ ಅವರ ಪರಿವಾರ ಜನರನ್ನೂ ಸಹ ಘೋರ ತರವಾದ ಸಂಸಾರ ಸಮುದ್ರದಿಂದ ದಾಟಿಸಿ ಅವರಿಗೆ ಬೇಕಾದ ಭೋಗಗಳನ್ನು ಕೊಟ್ಟು ಪರಿಪಾಲಿಸುವರು. ||೫||

## ಭಾವದರ್ಪಣ

ಪಕ್ಷಕ್ಕೆ ಮೂರು ಲಕ್ಷ ಇಪ್ಪತ್ತುನಾಲ್ಕುಸಾವಿರವೆಂತಲೂ ಮಾಸಕ್ಕೆ

ಆರುಲಕ್ಷನಾಲ್ವತ್ತೆಂಟುಸಾವಿರ ಶ್ವಾಸವೆಂತಲೂ ಹೇಳುತ್ತಾರೆ. ಮೂರುಲಕ್ಷ ಪಾರಾವಾರ= ಸಮುದ್ರ ಎಂಬರ್ಥ. ॥೫॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಮೂರು ಇತಿ ॥೫॥

## ಕನ್ನಡಾರ್ಥ

ಪಕ್ಷ ಮಾಸಗಳಿಗೆ ಆಗುವ ಶ್ವಾಸಸಂಖ್ಯೆಯನ್ನು ಬೇರೆಬೇರೆಯಾಗಿ ತಿಳಿಸುತ್ತಾರೆ–ಮೂರುಲಕ್ಷದಮೇಲೆ ಎಂಬ ಪದ್ಯದಿಂದ. ॥೫॥

## ಶ್ರೀಗುರುಹೃದಯಪ್ರಕಾಶಿಕೆ

ಪಕ್ಷವೆಂಬ ಹದಿನೈದು ದಿವಸಕ್ಕೆ ಮೂರುಲಕ್ಷದ ಇಪ್ಪತ್ನಾಲ್ಕು ಸಾವಿರ, ತಿಂಗಳಿಗೆ ಆರುಲಕ್ಷದ ನಲವತ್ತೆಂಟುಸಾವಿರ ಶ್ವಾಸಜಪಗಳನ್ನು ಮಾರುತದೇವ ಮಾಡಿ ಸಂಸಾರವೆಂಬ ಸಮುದ್ರದಿಂದ ಸಜ್ಜನರನ್ನು ಬಹುವಿಧ ಸೌಖ್ಯಗಳನ್ನು ಕೊಟ್ಟು ಉದ್ಧರಿಸುವನು. ॥೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಒಂದು ಪಕ್ಷಕ್ಕೆ ೧೫ ದಿವಸಗಳ ಲೆಕ್ಕ. ದಿನಕ್ಕೆ ೨೧,೬೦೦ ಶ್ವಾಸಜಪಗಳಂತೆ ೧೫ ದಿವಸಗಳಿಗೆ ೨೧೬೦೦ × ೧೫= ಮೂರುಲಕ್ಷದ ಇಪ್ಪತ್ತುನಾಲ್ಕು ಸಾವಿರ ಜಪಗಳಾಯಿತು.

ಮಾಸಕ್ಕೆ, ಅಂದರೆ ೨ ಪಕ್ಷಗಳಿಗೆ ೩,೨೪,೦೦೦ × ೨= ಆರುಲಕ್ಷದ ನಾಲ್ವತ್ತೆಂಟು ಸಾವಿರ ಶ್ವಾಸಜಪಗಳಾಗುವುವು.

ಶ್ರೀವಾಯುದೇವರು ಜೀವರ ಅನಿಮಿತ್ತ ಬಂಧುವಿನಂತಿದ್ದು, ಮಾಸಕ್ಕೆ ೬,೪೮,೦೦೦ ಶ್ವಾಸಜಪಗಳನ್ನು ಮಾಡಿ ಮಾಡಿಸಿ, ಹಂಸನಾಮಕ ಪರಮಾತ್ಮನ ಅಡಿದಾವರೆಗಳಿಗೆ ಭಕ್ತಿಪೂರ್ವಕ ಸಮರ್ಪಿಸುತ್ತಾ, ಅವರ ಆಯುಸ್ಸಿಗೆ

ನಿಯಾಮಕರಾಗಿ ಸುಜನರಿಗೆ ಇಹದಲ್ಲಿ ಸುಖವನ್ನು ಇತ್ತು ಜೀವನ್ಮುಕ್ತರನ್ನಾಗಿ ಮಾಡಿ ಲಿಂಗಭಂಗಾನಂತರ ಮುಕ್ತಿಸುಖವನ್ನು ಕೊಡಿಸಿ ಸಲಹುವರು. ||೫||

## ಪದ್ಯ ೬

### ಮೂಲ

**ಎರಡು ತಿಂಗಳಿಗಹವು ಋತು ಭೂ ।**
**ಸುರರು ತಿಳಿವದು ಶ್ವಾಸಜಪ ಹ ।**
**ನ್ನೆರಡುಲಕ್ಷದಮೇಲೆ ತೊಂಭತ್ತಾರು ಸಹಸ್ರ ॥**
**ಕರೆಸುವದು ಅಯನಾಹ್ವಯದಲರೆ ।**
**ವರುಷ ಮೂವತ್ತೆಂಟು ಲಕ್ಷೋ ।**
**ಪರಿ ತಿಳಿವದೆಂಭತ್ತು ಎಂಟುಸಹಸ್ರ ಕೋವಿದರು ॥ ||೬||**

### ಅವತರಣಿಕೆ

ಒಂದು ಅಯನದ ಅವಧಿಯಲ್ಲಿ ನಡೆಯುವ ಶ್ವಾಸಜಪಗಳು ೩೮,೮೮,೦೦೦ ಈ ರೀತಿ ಜೀವರ ಪರಮಾಪ್ತ ಬಂಧುಗಳಾದ ಪವಮಾನರಾಯರ ಮಹಾ ಮಹಿಮೆಯನ್ನು ಕೋವಿದರು ತಿಳಿದು ಉಪಾಸಿಸಬೇಕೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಋತು**= ಒಂದು ಋತುವಿಗೆ, **ಎರಡು ತಿಂಗಳಿಗಹುವು**= ಎರಡು ಮಾಸಗಳಾಗುವುವು. **ಶ್ವಾಸಜಪ**= ಒಂದು ಋತುವಿಗೆ ಶ್ರೀವಾಯುದೇವರು ನಡೆಯಿಸುವ ಶ್ವಾಸಜಪಗಳ ಸಂಖ್ಯೆಯು, **ಹನ್ನೆರಡುಲಕ್ಷದಮೇಲೆ ತೊಂಭತ್ತಾರು ಸಹಸ್ರ**= ಹನ್ನೆರಡು ಲಕ್ಷ+ತೊಂಭತ್ತು ಆರು ಸಾವಿರ ಆಗುವುದು. **ಅಯನಾಹ್ವಯದಲಿ**= ಒಂದು "ಅಯನ" ಎಂದು ಕರೆಯಿಸುವ, **ಅರೆವರುಷ** = ಮೂರು ಋತುಗಳಿಂದ ಯುಕ್ತವಾದ ಅರ್ಧವರ್ಷದಲ್ಲಿ (೬ ಮಾಸಗಳಲ್ಲಿ)

**ಮೂವತ್ತೆಂಟು ಲಕ್ಷೋಪರಿ**= ಮೂವತ್ತೆಂಟು ಲಕ್ಷದ ಮೇಲೆ, **ಎಂಭತ್ತು ಎಂಟುಸಹಸ್ರ**=೮೮,೦೦೦ ಅಂದರೆ, ೩೮,೦೦,೦೦೦+೮೮,೦೦೦= ೩೮,೮೮,೦೦೦ (ಮೂವತ್ತೆಂಟುಲಕ್ಷದ ಎಂಭತ್ತೆಂಟು ಸಾವಿರ)ಸಂಖ್ಯಾಕವಾದ ಶ್ವಾಸಜಪಗಳಾಗುವುವು. **ಕೋವಿದರು**= ಜ್ಞಾನಿಗಳಾದವರು, **ತಿಳಿವದು**= ಅರಿಯುವವರಾಗಬೇಕು. **ಭೂಸುರರು**= ಮಹೀಸುರರೆನಿಸಿದ ವಿಪ್ರೋತ್ತಮರು, **ತಿಳಿವರು**=ಅರ್ಧ ವರ್ಷದ ಅವಧಿಯಲ್ಲಿ ಅಂದರೆ, ಒಂದು ಅಯನಕಾಲದಲ್ಲಿ ಶ್ರೀವಾಯುದೇವರು ರಚನಾಮಾಡಿ ಜಪಿಸುವ ಹಂಸಮಂತ್ರಗಳ ಸಂಖ್ಯೆ, ಅದಕ್ಕನುಗುಣವಾಗಿ ಜೀವರ ಆ ಜನ್ಮದ ಆಯುಃ ಪ್ರಮಾಣದ ಗಣನೆಯನ್ನು ತಿಳಿಯುವವರಾಗಬೇಕೆಂದು ಹೇಳುತ್ತಾರೆ. ||೬||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಋತು ಅಯನಕ್ಕೆ ಆಗತಕ್ಕ ಶ್ವಾಸಜಪಗಳ ಹೇಳತಾರೆ.

ಎರಡು ತಿಂಗಳು ಸಂಪೂರ್ಣವಾಗಿ ಗತವಾದರೆ ಒಂದು ಋತು ಎಂತ ಕರಸತದೆ. ಇಂಥಾ ಋತು ಒಂದಕ್ಕೆ ಶ್ವಾಸಜಪಗಳು ಹನ್ನೆರಡುಲಕ್ಷದ ಮ್ಯಾಲೆ ತೊಂಭತ್ತಾರು ಸಾವಿರ. ಅಂತೂ ಸೇರಿ ಹನ್ನೆರಡುಲಕ್ಷದ ತೊಂಭತ್ತಾರು ಸಾವಿರ ಆಗತದೆ. ಅಯನ ಎಂತ ನಾಮದಿಂದ ಮೂರು ಋತುಗಳಿಂದ ಸಹಿತವಾದ ಆರು ತಿಂಗಳು ಅಂದರೆ ಅರ್ಧ ವರುಷ ಎಂತ ಕರಸೋದಾಗತದೆ. ಈ ಅರ್ಧವರುಷದಲ್ಲಿ ಮೂವತ್ತೆಂಟು ಲಕ್ಷದ ಮ್ಯಾಲೆ ಎಂಭತ್ತೆಂಟು ಸಾವಿರ, ಅಂತೂ ಸೇರಿ ಮೂವತ್ತೆಂಟು ಲಕ್ಷದ ಎಂಭತ್ತೆಂಟು ಸಾವಿರ ಜಪಗಳ ಮಾಡಿಸುತ್ತಾರೆಂದು ಜ್ಞಾನಿಗಳಾದವರು ತಿಳಿಯೋವರಾಗಬೇಕು. ಭೂಮಿಗೆ ದೇವತೆಗಳಾದ ಬ್ರಾಹ್ಮಣರು, ಆಯುಸ್ಸಿಗೆ ಕಾರಣವಾದ ಶ್ವಾಸಗಳು ಗತವಾಗಿ ಹೋಗತಾ ಅವೆ ಎಂತ ತಿಳಿದು ಸಾಧನ ಸಂಪೂರ್ಣ ಮಾಡಿಕೋಬೇಕೆಂದೂನೂ ಜ್ಞಾನಪೂರ್ವಕ ತಿಳಿಯೋವರಾಗಬೇಕೆಂತಲೂ ತಾತ್ಪರ್ಯ. ||೬||

## ಭಾವಪ್ರಕಾಶಿಕೆ

ಒಂದು ಋತುವೆಂದರೆ ೨ ತಿಂಗಳ ಕಾಲವು. ತಿಂಗಳು ಒಂದಕ್ಕೆ ಆರುಲಕ್ಷ ನಲ್ವತ್ತೆಂಟು ಸಾವಿರ ಶ್ವಾಸಗಳ ಮೇರೆಗೆ ಎರಡು ತಿಂಗಳುಗಳಿಗೆ (ಆರುಲಕ್ಷ ನಲ್ವತ್ತೆಂಟುಸಾವಿರ × ಎರಡು = ಹನ್ನೆರಡುಲಕ್ಷ ತೊಂಭತ್ತಾರು ಸಾವಿರ) ಶ್ವಾಸಜಪಗಳು ಆಗುವುವು. ಅಯನವೆಂದರೆ ಆರು ತಿಂಗಳ ಕಾಲವು. ಈ ಆರು ತಿಂಗಳಿಗೆ (ಆರುಲಕ್ಷ ನಲ್ವತ್ತೆಂಟುಸಾವಿರ × ಆರು = ಮೂವತ್ತೆಂಟು ಲಕ್ಷದ ಎಂಭತ್ತೆಂಟು ಸಾವಿರ ಶ್ವಾಸಜಪಗಳನ್ನು ಮುಖ್ಯಪ್ರಾಣದೇವರು ಮಾಡಿಸುವರೆಂದು ಜ್ಞಾನಿಗಳು ತಿಳಿಯಬೇಕು. ||೬||

## ಭಾವದರ್ಪಣ

ಹನ್ನೆರಡುಲಕ್ಷದ ತೊಂಭತ್ತಾರುಸಾವಿರ ಜಪ ಋತುವಿಗೆ ಆಗುವ ದೆಂತಲೂ, ಅಯನ ಎಂದರೆ ಆರು ತಿಂಗಳಿಗೆ ಮೂವತ್ತೆಂಟು ಲಕ್ಷ ಎಂಭತ್ತು ಸಾವಿರ ಶ್ವಾಸಜಪ ಎಂತ ಹೇಳುತ್ತಾರೆ, ಎರಡು ಇತಿ. ||೬||

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಎರಡು ಇತಿ, ಅರೆ= ಅರ್ಧಃ ||೬||

## ಕನ್ನಡಾರ್ಥ

ಋತು, ಅಯನ-(ಅರ್ಧವರ್ಷ)ಗಳಲ್ಲಿ ಮಾರುತನು ಮಾಡುವ ಶ್ವಾಸ ಗಳ ಸಂಖ್ಯೆಗಳನ್ನು ಬೇರೆಬೇರೆಯಾಗಿ ತಿಳಿಸುತ್ತಾರೆ "ಎರಡು" ಎಂಬ ಪದ್ಯ ದಿಂದ. ||೬||

## ಶ್ರೀಗುರುಹೃದಯಪ್ರಕಾಶಿಕೆ

ಎರಡು ತಿಂಗಳಿಗೆ ಒಂದು ಋತುವೆಂಬ ಕಾಲದಲ್ಲಿ ಹನ್ನೆರಡುಲಕ್ಷ ತೊಂಭತ್ತಾರುಸಾವಿರ ಶ್ವಾಸಜಪವಾಗುವುದೆಂದು, ಅಯನವೆಂಬ ಅರ್ಧ

ವರುಷಕ್ಕೆ ಮೂವತ್ತೆಂಟು ಲಕ್ಷದ ಎಂಭತ್ತೆಂಟುಸಾವಿರ ಶ್ವಾಸಜಪ ಪ್ರಾಣ ದೇವರು ಮಾಡುತ್ತಾರೆಂದು ಜ್ಞಾನಿಗಳು ತಿಳಿಯಬೇಕು. ||೬||

## ಸರ್ವವ್ಯಾಖ್ಯಾನಸಾರಸಂಗ್ರಹ

ಎರಡು ಮಾಸಗಳಿಗೆ ಒಂದು ಋತುವಾಗುವುದು. ವಸಂತಾದಿ ಶಿಶಿರ ಪರ್ಯಂತ ಒಂದು ಸಂವತ್ಸರದ ಅವಧಿಯಲ್ಲಿ ಅಂತಹ ೬ ಋತುಗಳಿವೆ. ಶ್ರೀವಾಯುದೇವರು ಪ್ರಾಣಿಗಳ ಸ್ಥೂಲದೇಹಗತರಾಗಿ ಮಾಸ ಒಂದಕ್ಕೆ ಮಾಡುವ ಶ್ವಾಸಜಪಗಳ ಸಂಖ್ಯೆ ಆರುಲಕ್ಷ ನಲ್ವತ್ತೆಂಟುಸಾವಿರ. ಆ ಪ್ರಕಾರ ಎರಡು ತಿಂಗಳಿಗೆ ಆರುಲಕ್ಷ ನಲ್ವತ್ತೆಂಟುಸಾವಿರ × ಎರಡು = ಹನ್ನೆರಡುಲಕ್ಷ ತೊಂಭತ್ತಾರುಸಾವಿರ ಶ್ವಾಸಜಪಗಳಾಗುವುವು.

ಅಂತಹ ಮೂರು ಋತುಗಳು ಸೇರಿದರೆ ಒಂದು ಅಯನವೆಂದು ಕರೆಯಿಸುವುದು. ಒಂದು ಸಂವತ್ಸರಕ್ಕೆ ಉತ್ತರಾಯನ ಮತ್ತು ದಕ್ಷಿಣಾಯನ ಎಂದು ಅಯನದ್ವಯಗಳು. ಒಂದು ಅಯನವೆಂದರೆ ೬ ತಿಂಗಳು. (ಮೂರು ಋತುಗಳು) ಅಥವಾ ಅರ್ಧ ವರ್ಷವು.

ಒಂದು ತಿಂಗಳಿಗೆ ಆರುಲಕ್ಷ ನಲ್ವವತ್ತೆಂಟುಸಾವಿರ ಪ್ರಕಾರ ೬ ತಿಂಗಳಿಗೆ ಅಂದರೆ ಒಂದು ಅಯನಕ್ಕೆ ಆರುಲಕ್ಷ ನಲ್ವತ್ತೆಂಟುಸಾವಿರ × ಆರು = ಮೂವತ್ತೆಂಟುಲಕ್ಷ ಎಂಭತ್ತೆಂಟುಸಾವಿರ ಶ್ವಾಸಜಪಗಳಾಗುವುವು.

ಈ ರೀತಿ ಮುಖ್ಯಪ್ರಾಣನಾಮಕರಾದ ಶ್ವಾಸಪತಿಗಳು ಸರ್ವ ಪ್ರಾಣಿಗಳ ಸ್ಥೂಲಶರೀರಗತರಾಗಿದ್ದು ಒಂದು ಋತುವಿಗೆ ಹನ್ನೆರಡುಲಕ್ಷ ತೊಂಭತ್ತಾರುಸಾವಿರ ಶ್ವಾಸಜಪದಂತೆ ಒಂದು ಅಯನಕ್ಕೆ ಮೂವತ್ತೆಂಟುಲಕ್ಷ ಎಂಭತ್ತೆಂಟುಸಾವಿರ ಶ್ವಾಸಜಪಗಳನ್ನು ಜಪಿಸಿ ಪ್ರಾಣಿಗಳ ಆಯುಸ್ಸಿಗೆ ಕಾರಣವಾದ ಶ್ವಾಸಕಾರ್ಯವನ್ನು ಮಾಡಿ ಮಾಡಿಸುತ್ತಿರುವರೆಂದು ಜ್ಞಾನಿಗಳು ತಿಳಿದು, ಆ ಪ್ರಾಣಪತಿಯನ್ನು ಕೊಂಡಾಡುತ್ತಿರಬೇಕೆಂದು ತಿಳಿಸುತ್ತಾರೆ. ||೬||

## ಪದ್ಯ ೭

### ಮೂಲ

ವರುಷಕಿದರಿಮ್ಮಡಿ ಜಪಂಗಳ |
ಗುರುವರ್ಯ ತಾ ಮಾಡಿ ಮಾಡಿಸಿ |
ದುರಿತಗಳ ಪರಿಹರಿಸುವನು ಚಿಂತಿಸುವ ಸಜ್ಜನರ ||
ಸುರವಿರೋಧಿಗಳೊಳಗೆ ನೆಲೆಸಿ |
ದ್ದರವಿದೂರ ತಮೋಧಿಕಾರಿಗೆ |
ಳಿರವರಿತು ಸೋಹಮುಪಾಸನೆ ಮಾಳ್ಪನವರಂತೆ || ||೭||

### ಅವತರಣಿಕೆ

ಒಂದು ವರುಷಕ್ಕೆ ಎಪ್ಪತ್ತೇಳುಲಕ್ಷ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು ಗುರುವರ್ಯರಾದ ಶ್ರೀವಾಯುದೇವರು ತಾವು ಮಾಡಿ, ಸಜ್ಜನರ ಪಾಪಗಳನ್ನು ಪರಿಹರಿಸಿ ತಮೋಯೋಗ್ಯರಲ್ಲಿದ್ದು ಸೋಹಮುಪಾಸನೆ ಮಾಡುವರು ಎಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ವರುಷಕಿದರಿಮ್ಮಡಿ**= ಒಂದು ವರ್ಷದಲ್ಲಿ ಆರುತಿಂಗಳಿನಲ್ಲಿ ಆಗುವ ಎರಡರಷ್ಟು ಅಂದರೆ ಮೂವತ್ತೆಂಟುಲಕ್ಷ ಎಂಭತ್ತೆಂಟುಸಾವಿರ × ಎರಡು= ಎಪ್ಪತ್ತೇಳುಲಕ್ಷ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು, **ಗುರುವರ್ಯ**= ತ್ರೈಲೋಕಾಚಾರ್ಯರಾದ ಶ್ರೇಷ್ಠಗುರುಗಳಾದ ಶ್ರೀವಾಯುದೇವರು, **ತಾ ಮಾಡಿ**= ತಾವು ರಚನಾ ಮಾಡಿ, **ಮಾಡಿಸಿ**= ಶ್ವಾಸಾಭಿಮಾನಿದೇವತೆಗಳ ದ್ವಾರಾ, ಜೀವನ ದ್ವಾರಾ ಮಾಡಿಸಿ, **ಚಿಂತಿಸುವ**= ಈ ರೀತಿಯಿಂದ ತಿಳಿದು ಧ್ಯಾನೋಪಾಸನೆ ಮಾಡುವ, **ಸಜ್ಜನರ**= ಸಾತ್ವಿಕರಾದ ಮುಕ್ತಿಯೋಗ್ಯ ಜೀವರ, **ದುರಿತಗಳ**= ಪಾಪಗಳನ್ನು, **ಪರಿಹರಿಸುವನು**=

ಪರಿಹಾರ ಮಾಡುವರು. **ಸುರವಿರೋಧಿಗಳೊಳಗೆ**= ದೇವತೆಗಳಿಗೆ ಶತ್ರುಗಳಾದ ದೈತ್ಯರಲ್ಲಿ, **ನೆಲೆಸಿದ್ದು** = ಆವಾಸರಾಗಿದ್ದು (ಸ್ಥೂಲದೇಹಗತರಾಗಿ) **ಅರವಿದೂರ**= ದೋಷದೂರರಾದ ಶ್ರೀವಾಯುದೇವರು, **ತನೋಧಿಕಾರಿಗಳ**= ಅಂಧಂತಮಸ್ಸಿಗೆ ಯೋಗ್ಯರಾದ ತಾಮಸ ಜೀವರ, **ಇರವರಿತು**= ಸ್ವರೂಪ ಯೋಗ್ಯತೆಯನ್ನು ತಿಳಿದವರಾಗಿ, **ಅವರಂತೆ**= ಅವರ ಯೋಗ್ಯತಾನುಸಾರವಾಗಿ, **ಸೋಹಮುಪಾಸನೆ ಮಾಳ್ಪರು**= "ಸೋಹಂ" ಅಂದರೆ ಆ ಪರಮಾತ್ಮನೇ ನಾನು. ಜೀವೇಶರಿಗೆ ಭೇದವಿಲ್ಲ ಎಂಬುದಾಗಿ ಉಪಾಸನೆ ಮಾಡುವರು. ||೭||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವರುಷಕ್ಕೆ ಆಗುವ ಶ್ವಾಸಗಳು, ದೈತ್ಯರಲ್ಲಿ ಹಂಸಮಂತ್ರೋಪಾಸನಕ್ರಮ ಹೇಳುತಾರೆ.

ಆರು ತಿಂಗಳಿಗೆ ಆಗುವ ಶ್ವಾಸಗಳನ್ನು ಎರಡರಷ್ಟು ಸೇರಿಸಿದರೆ ಎಪ್ಪತ್ತೇಳು ಲಕ್ಷದ ಎಪ್ಪತ್ತಾರು ಸಾವಿರ ಶ್ವಾಸಗಳು ಆದವು. ಈ ಶ್ವಾಸಾಖ್ಯ ಹಂಸಮಂತ್ರಗಳ ತಾರತಮ್ಯಾನುಸಾರ ಸ್ವಾವರರಿಗೆ ಸ್ವೋತ್ತಮರು ಗುರುಗಳಾಗುತ್ತಾರೆ. ಈ ರೀತ್ಯಾ ಕ್ಷರಜೀವರಿಗೆ ಅಂತ್ಯ ಗುರುಗಳಾದವರು ವಾಯುದೇವರು. ಇವರೇ ಶ್ರೇಷ್ಠ ಗುರುಗಳು. ಜೀವಕೋಟಿ ಒಳಗೆ ಇವರಿಗೆ ಮಿಂಚಿದ ಗುರುಗಳು ದಾರೂ ಇಲ್ಲ. ಇಂಥಾ ಗುರುವರ್ಯರಾದ ವಾಯುದೇವರು ಶ್ವಾಸಜಪಗಳ ತಾವು ಮಾಡಿ, ಶ್ವಾಸಾಭಿಮಾನಿದೇವತೆಗಳ ದ್ವಾರಾ, ಜೀವನ ಶ್ವಾಸದ್ವಾರಾ ದೇಹಗತ ನಾಸಿಕದ್ವಾರಾ ಮಾಡಿಸಿ, ಈ ಪ್ರಕಾರ ಅನುಸಂಧಾನ ಮಾಡಿ ಶ್ವಾಸಗಳ ಯಾವತ್ತೂ ಜಪಗಳೆಂದು ತಿಳಿದು ಕ್ಷಣಕ್ಷಣ ಭಗವದರ್ಪಣೆ ಮಾಡತಕ್ಕ ಭಕ್ತರ ಜ್ಞಾನಕ್ಕೆ ಪ್ರತಿಬಂಧಕವಾದ ಪಾಪಗಳ ಪರಿಹಾರ ಮಾಡುವರು. ಹರಿಸರ್ವೋತ್ತಮ, ವಾಯುಜೀವೋತ್ತಮ ತಾರತಮ್ಯ, ಪಂಚಭೇದ ಸ್ಥಿತಿಕಾಲದಲ್ಲಿ ಮತ್ತು ಮೋಕ್ಷದಲ್ಲಿ ಸತ್ಯ ಎಂಬ ದೃಢ

ಜ್ಞಾನ ಉಳ್ಳವರು ದಾರೋ ಅವರೇ ಸಜ್ಜನರು. ಇಂಥಾ ಸಜ್ಜನರ ಪಾಪ ಪರಿಹಾರ ಮಾಡತಾರೆ ಹೊರತು, ಅನ್ಯರ ಪಾಪ ಪರಿಹರಿಸೋದಿಲ್ಲ ಎಂತ ಭಾವವು. ದೋಷದೂರರಾದ ವಾಯುದೇವರು ದೇವತೆಗಳಿಗೆ ಶತ್ರುಗಳಾದ ದೈತ್ಯರಲ್ಲಿ ಆವಾಸರಾಗಿದ್ದು, ಅಂಧಂತಮಸ್ಸಿಗೆ ಯೋಗ್ಯರಾದ ದೈತ್ಯರ ಸ್ವರೂಪ ಯೋಗ್ಯತಾವರಿತು, ಸೋಹಂ ಎಂತ ಉಪಾಸನೆ ಮಾಡತಕ್ಕ ಅನಾದಿಭೂತ ವಾದ ಅಯೋಗ್ಯತಾ ಉಳ್ಳವರಾದ್ದರಿಂದ ಅದರೋಪಾದಿಯಲ್ಲಿ, ಸಃ, ತದಂತ ರ್ಯಾಮಿಯಾದಂಥಾ ಭಗವಂತನೇ, ಅಹಂ, ಮದಂತರ್ಯಾಮಿಯಾದಂಥವ ಎಂದು ಮುಕ್ತಿಯೋಗ್ಯ ಉಪಾಸನೆ ಮಾಡತಾನೆ; ಸ್ವಾಹಾ ಎಂತ ನಿತ್ಯ ಸಂಸಾರಿ ಉಪಾಸನ ಮಾಡತಾನೆ. ಹ್ಯಾಂಗೆಂದರೆ, ಸ್ವ ಅಂದರೆ ತನಗೂ ವಿಷ್ಣು ಬ್ರಹ್ಮ ರುದ್ರಾದಿದೇವತೆಗಳಿಗೂ ತಾರತಮ್ಯವಿಲ್ಲ, ಸಮಾನರು. ಅಹಂ, ನಾನು ಅವರಿಗೆ ಭೃತ್ಯ ಎಂತ ಉಪಾಸನ; ಸೋಹಂ ಎಂದರೆ, ಸಃ, ಆ ಪರಮಾತ್ಮನೆ, ಅಹಂ ನಾನು, ಎಂತ ದೈತ್ಯರು ಉಪಾಸನ ಮಾಡತಾರೆ. ಶ್ರೀವಾಯುದೇವರ ಉಪಾಸನ ಎಂಥಾದ್ದೆಂದರೆ, ಗುಣಪೂರ್ಣನಾದ, ಪರಮಾತ್ಮನಾದ, ಹಂಸರೂಪನಾದ ಶ್ರೀದೇವರನ್ನ, ಅಹಂ ನಾನು, ಸ್ವಾಹಾ ಉಪಾಸನ ಮಾಡತೇನೆ ಎಂತ ಇರುತ್ತದೆ. ಮುಕ್ತಿಯೋಗ್ಯರಲ್ಲಿ ಪೂಜ್ಯನಾದ ಹಂಸರೂಪಿ ಪರಮಾತ್ಮನ್ನ ನಾನು ಉಪಾಸನ ಮಾಡತೇನೆ ಎಂತ ಉಪಾಸನ ಮಾಡಸತಾರೆ. ನಿತ್ಯಸಂಸಾರಿಗಳಲ್ಲಿ, ಪೂಜ್ಯನಾದ ಹಂಸರೂಪಿ ಪರಮಾತ್ಮ ನಿಗೂ ತನಗೂ ಭೇದ ಎಂತಲೂ ತಾರತಮ್ಯವಿಲ್ಲ, ಸರ್ವಜೀವರೂ ವಿಷ್ಣುವಿಗೆ ಸಮಾನರು ಎಂತಲೂ ಉಪಾಸನ ಮಾಡಸತಾರೆ. ತಮೋಯೋಗ್ಯರಲ್ಲಿ ಹಂಸನಾಮಕ ಪರಮಾತ್ಮನೇ ನಾನು. ಅವನಿಗೂ ನನಗೂ ಭೇದವಿಲ್ಲ. ನನ್ನನ್ನೇ ನಾನು ಉಪಾಸನೆ ಮಾಡತೇನೆ,ಎಂತ ಈ ಪ್ರಕಾರ ಜೀವರ ಕಡಿಯಿಂದ ಮಾಡಿಸಿ, ತಾವು ಮಾಡಿ, ತ್ರಿವಿಧ ಜೀವರ ಗತಿಗಳನ್ನು ಕೊಟ್ಟು ಸಂರಕ್ಷಣ ಮಾಡತಾರೆ. ಸ್ವಾಹಾ ಎಂದರೆ ಹಂಸಮಂತ್ರವನ್ನ ಅರ್ಪಣ ಎಂತಲೂ ತಾತ್ಪರ್ಯವೇ. ||೭||

## ಭಾವಪ್ರಕಾಶಿಕೆ

ಆರು ತಿಂಗಳಿಗೆ ಮೂವತ್ತೆಂಟುಲಕ್ಷ ಎಂಭತ್ತೆಂಟುಸಾವಿರ ಶ್ವಾಸಗಳಂತೆ ವರ್ಷಕ್ಕೆ ಇದಕ್ಕೆ ಇಮ್ಮಡಿ ಅಂದರೆ ಮೂವತ್ತೆಂಟುಲಕ್ಷ ಎಂಭತ್ತೆಂಟುಸಾವಿರ ×ಎರಡು= ಎಪ್ಪತ್ತೇಳುಲಕ್ಷದ ಎಪ್ಪತ್ತಾರುಸಾವಿರ ಜಪಗಳನ್ನು ಶ್ರೀಮುಖ್ಯ ಪ್ರಾಣದೇವರು ಪ್ರಾಣಿಗಳಲ್ಲಿದ್ದು ಮಾಡಿಸುವರು. ಯೋಗ್ಯಜೀವರು, ಹಂಸಃ ಸೋಹಂ ಸ್ವಾಹಾಯೆಂಬುವ ಹಂಸಮಂತ್ರಜಪದ ಅರ್ಥವನ್ನು ಅಂದರೆ ದುಃಖಿಗಳನ್ನು ನಾಶಮಾಡುವುದರಿಂದ ಹಂಸನೆಂದು ಪರಮಾತ್ಮನಿಗೆ ಹೆಸರು. ಸೋಹಂ ಎಂದರೆ ಅವನೇ ನಾನು ಅಂದರೆ ಅವನೇ ನನ್ನ ಅಂತ ರ್ಯಾಮಿ ಎಂದು ಅರ್ಥ ಮಾಡಬೇಕು. ಬ್ರಹ್ಮಸೂತ್ರಭಾಷ್ಯದಲ್ಲಿ ಅಂತ ರ್ಯಾಮಿಣಮೀಶೇಶಮಪೇಕ್ಷ್ಯಾಹಂತ್ವಮಿತ್ಯಪಿ|| ಇರ್ವೇಶಬ್ದಾಃ ಪ್ರಯುಜ್ಯಂತೇ ಸತಿಭೇದೇಪಿ ವಸ್ತುಷು ಎಂಬ ವಾಕ್ಯದಿಂದ ಪರಮಾತ್ಮನನ್ನೇ ಕುರಿತಾಗಲೀ, ಗುರುಗಳು ಮೊದಲಾದವರಲ್ಲಿ ಆಗಲಿ ನೀನೇ ಪರಬ್ರಹ್ಮನು, ನೀನೇ ನಾನು ಎಂಬಿವೇ ಮೊದಲಾದ ವಾಕ್ಯಗಳನ್ನು ಪ್ರಯೋಗ ಮಾಡುವುದುಂಟು. ಅಲ್ಲಿ ಅಂತರ್ಯಾಮಿ ಪರವಾಗಿ ಅರ್ಥವನ್ನಿಟ್ಟುಕೊಂಡು ಹಾಗೇ ಹೇಳಿರುವರು ಎಂದು ತಿಳಿಯಬೇಕು. ಸಾಕ್ಷಾತ್ಪರಬ್ರಹ್ಮನೇ ನಿನ್ನಂತರ್ಯಾಮಿಯು,ಅವನೇ ನನ್ನೊಳಗೂ ಇರುವನೆಂಬ ಭಾವನೆಯಿಂದ ಅವನೇ ನಾನು ಎಂಬಿವೇ ಮೊದಲಾದ ವಾಕ್ಯ ಗಳು ಹೊರಟಿವೆಯೆಂದು ತಿಳಿಯಬೇಕು. ಹೀಗೆ ತಿಳಿದು ಉಪಾಸನೆ ಮಾಡುವ ಸಜ್ಜನರ ದುರಿತಗಳನ್ನು ಪರಿಹರಿಸಿ ಅವರನ್ನುದ್ಧಾರ ಮಾಡುವರು. ದೇವ ಶತ್ರುಗಳಾದ, ತಮೋಯೋಗ್ಯರಾದ, ದೈತ್ಯರ ಯೋಗ್ಯತಾನುಸಾರವಾಗಿ ಅವನೇ ನಾನು ಎಂಬ ಉಪಾಸನೆಯನ್ನು ಮಾಡಿ ಮಾಡಿಸಿ ಜಗದೀಶ್ವರನಾದ ಪರಮಾತ್ಮನಿಗೂ ತನಗೂ ಭೇದವಿಲ್ಲವೆಂದು ಉಪಾಸನೆ ಮಾಡಿದ್ದರಿಂದ ಅದರ ಫಲರೂಪವಾಗಿ ತಮಸ್ಸನ್ನೇ ಕೊಡಿಸುವರು. ||೭||

(ಶ್ವಾಸರೂಪ ಮಂತ್ರಜಪೋಪಾಸನೆ ಕ್ರಮ, ಆ ಮಂತ್ರ, ಮಂತ್ರಾರ್ಥ ಸಹ ಮೊದನೆಯ ಸಂಧಿಯ ನಾಲ್ಕನೆಯ ಪದ್ಯದ ವಿಶೇಷಾರ್ಥದಲ್ಲಿ ವಿಶದವಾಗಿ ಬರಿಯಲ್ಪಟ್ಟಿವೆ, ಎರಡನೆಯ ಸಂಚಿಕೆಯಲ್ಲಿ ನೋಡತಕ್ಕದ್ದು).

**ಭಾವದರ್ಪಣ**

ಎಪ್ಪತ್ತೇಳುಲಕ್ಷ ಎಪ್ಪತ್ತಾರುಸಾವಿರ ಜಪ ಸಂವತ್ಸರಕ್ಕೆ ಆಗುವುದೆಂದು ತ್ರಿವಿಧರಲ್ಲೂ ಅವರವರ ಚೇತನ ಯೋಗ್ಯತಾನುಗುಣವಾಗಿ ಜಪ ಮಾಡುತ್ತಾರೆಂದು ಭಾವ ತೋರಿಸುತ್ತಾರೆ, ವರುಷೇತಿ, ತವೋಧಿಕಾರೇತಿ. ಸೋಹಂ ಎಂದರೆ ಸಃ ತದಂತರ್ಯಾಮಿಯಾದಂಥ ಭಗವಂತನೇ ಅಹಂ ಮದಂತರ್ಯಾಮಿ ಯಾದಂಥ ಎಂಬರ್ಥ. ಯದೋಕ್ತಂ ಭಾಷ್ಯಕಾರೈಃ. ಸೋಹಮಸ್ಮಿ ಸ ಏವಾಹಮಸ್ಮಿತ್ಯಾದಿ ತ್ವದಂತರ್ಯಾಮ್ಯಪೇಕ್ಷಯಾ । ಅಂತರ್ಯಾಮಿಣ ಮೀಶೇಶಮಪೇಕ್ಷಾಹಂತ್ವಮಿತ್ಯಪಿ । ಸರ್ವೇಶಬ್ದಾಃ ಪ್ರಯುಜ್ಯಂತೆ ಸತಿಭೇದೇಪಿ ವಸ್ತುಷ್ವಿತಿ. ಇರವು= ಇರತಕ್ಕಸ್ಥಿತಿ ಎಂಬರ್ಥ ||೭||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ವರುಷ ಇತಿ|| ಇಮ್ಮಡಿ ಎರಡು ಮಡಿ|| ಸೋಹಮ್ ಇತಿ|| ಸಾರಸ್ವಾತ್ ಸಹ|| ಅಹೇಯತ್ವಾತ್ ಅಹಂ ನಾಮಾ ಇತಿ ಬುದ್ಧ್ಯಾ|| ಅತ್ರ ಕೇಚನ ಶಂಕಂತೇ|| ಶತಾಯುರ್ವಾ ಇತಿ ಸರ್ವ ಸಮಾನೇ ವಿಷ್ಣುತೀರ್ಥ ಜಿತಾಮಿತ್ರಾದೀನಾಂ ಅಸಹಸ್ರಾಬ್ದಂ ಆಕಲ್ಪಂ ಆಕೋಟ್ಯಬ್ದ ಜೀವನಂ ಕಥಂ?|| ದೃಷ್ಟತ್ವಾತ್ ಶತಾರ್ವಾಕ್ ಜೀವನಮ್ ಕಿಂ ಚ ಸುಕೃತ್ಯಾ?|| ಪೂರ್ತಿಃ ಚ ಕಿಂ ನಾಮ|| ಅಪಿ ಚ ಪಿಪೀಲಿಕಾದೌ ಕರೋತಿ ವಾ ನ ಚೇತಿ|| ತೇಷಾಂ ಯದ್ದಿನೇ ಶ್ವಾಸನಿಃಸರಣಂ ತದಾರಭ್ಯ ಉಕ್ತರೀತ್ಯಾ ಗಣನೇ ಯದ್ದಿನೇ ವರ್ಷಶತಂ ತದಾ ಸಮಾಪ್ತಿಃ|| ಸೌರಾಂತರಿತಕಾಲಾಧಿಕ್ಯೇಪಿ ನ ದೋಷಃ|| ಅರ್ವಾಕ್ ಜೀವನಂ ತು ಏಕದಿನೇ ಚ ಉಕ್ತಶ್ವಾಸೈಃ ಅಪಿ ಆಧಿಕ್ಯಂ ಚೈತದೇವ| ಪೂರ್ತಿಃ ನಾಮ ಶ್ವಾಸಸಾಮ್ಯಂ ಸರ್ವೇತ್ಯುಕ್ತೇಃ|| ಅಪಿಪೀಲಂ ಕರೋತ್ಯೇವ|| ಧೃತ ಪ್ರಾಣೇಷು ಪಾಂಶು ಹಂಸೋಹಂ ಸಂಚಿಂತಯತಿ ಉಪರತವ್ಯಾಪಾರಃ? (ಇತಿ ಪ್ರಶ್ನಾ ನಿರೂಪಿತಾಃ ಸಾಧಃ) ಇದು ಕೆಲವೆಡೆಗಳಲ್ಲಿ ಇಲ್ಲ. ಅಧಿಕ ಪಾಠ.

**ಕನ್ನಡಾರ್ಥ**

ಸೋಹಂ ಎಂಬಲ್ಲಿ ಸಃ ಅಹಂ ಎರಡು ಪದಗಳಿರುತ್ತವೆ. ಸಾರರೂಪನಾ

ದುದರಿಂದ ಸರ್ವಶ್ರೇಷ್ಠನಾದುದರಿಂದ ಸಃ ಎಂದು ಪರಮಾತ್ಮನಿಗೆ ಕರೆಯು ತ್ತಾರೆ. ೧. ಅಹಂ ಎಂಬ ಶಬ್ದವಾಚ್ಯರಾದ ಜೀವಾದಿಗಳೆಲ್ಲರಿಗೂ ಅಂತ ರ್ಯಾಮಿಯಾಗಿರುವುದರಿಂದಲೂ, ೨. ತಮೇವೈಕಂ ಜಾನಥ ಅಮೃತಸ್ಯೈಷ ಸೇತುಃ ಎಂಬ ವಾಕ್ಯಗಳಿಂದ ಮೋಕ್ಷಜನಕಜ್ಞಾನ ವಿಷಯನಾದುದರಿಂದ ಶ್ರೀಹರಿಯನ್ನೇ ಉಪಾಸಿಸತಕ್ಕದ್ದು. ಮಿಕ್ಕವರನ್ನು ಬಿಡಬೇಕು ಎಂದು ಹೇಳಿ ದಂತೆ. ಅಹೇಯ ಉಪಾಸ್ಯನಾದುದರಿಂದಲೂ "ಅಹಂ" ಎಂದು ಪರಮಾತ್ಮ ನಿಗೆ ಕರೆಯುತ್ತಾರೆ. ಈ ದೃಷ್ಟಿಯಿಂದ ಸಾರನೂ ಅಹೇಯನೂ ಎಂಬ ಅರ್ಥ ವಿವಕ್ಷೆಯಿಂದ ವಾಯುದೇವರು ಸೋಹಮ್ ಎಂದು ತಾಮಸರಲ್ಲಿ ಉಪಾಸಿಸುತ್ತಾರೆಯೇ ಹೊರತು ಜೀವಪರಮಾತ್ಮರು ಅಭಿನ್ನರು ಎಂದು ಉಪಾಸಿಸುವುದಿಲ್ಲ.

ವಾಯುದೇವರು ಮಾಡುವ ಶ್ವಾಸಜಪಗಳ ವಿಷಯದಲ್ಲಿ ಕೆಲವರು ಹೀಗೆ ಸಂಶಯಪಡುತ್ತಾರೆ. ಶತಾಯುರ್ವೈ ಪುರುಷಃ ಎಂದು ಹೇಳಿದಂತೆ ಒಂದು ನೂರು ವರ್ಷ ಆಯುಷ್ಯವು ಸರ್ವರಿಗೂ ಸಾಮಾನ್ಯವಾಗಿ ಅನ್ವಯಿಸಿ ದರೆ ಶ್ರೀವಿಷ್ಣುತೀರ್ಥ, ಜಿತಾಮಿತ್ರ ಮುಂತಾದ ಮಹಾಮಹರ್ಷಿಗಳು ಸಹಸ್ರ ಕೋಟಿ–ಅಬ್ದ-ಕಲ್ಪ ವರ್ಷಗಳ ಪರ್ಯಂತರ ಜೀವಿಸುವುದು ಹೇಗೆ ಯುಕ್ತ ವಾಗುತ್ತದೆ? ನೂರು ವರ್ಷಗಳು ಆಗುವುದಕ್ಕಿಂತ ಪೂರ್ವದಲ್ಲಿಯೇ ಮರಣ ಹೊಂದಿ ಜೀವನ ಮುಗಿಯುವುದಕ್ಕೆ ಪಾಪವು ಕಾರಣವೋ ಹೇಗೆ ? ಮತ್ತು ಪುಣ್ಯವು ನೂರುವರ್ಷದ ಆಯುಷ್ಯಕ್ಕೆ ಕಾರಣವೋ ಹೇಗೆ? ಶತಾವಾರ್ಕ್ ಜೀವಿಗಳು ಶತಸಂವತ್ಸರದ ಜೀವಿಗಳು. ಇವರುಗಳೆಲ್ಲರಿಗೂ ಶ್ವಾಸ ಸಂಖ್ಯೆ ಗಳು ಪೂರ್ತಿಯಾಗುವವೇ ? ಹೇಗೆ ಆಗುವವು? ಇರಿವೆ ಮುಂತಾದ ಪ್ರಾಣಿಗಳಲ್ಲಿ ಶ್ವಾಸಜಪಗಳನ್ನು ಮಾಡುವನೋ ಇಲ್ಲವೋ? ಎಂದು ಸಂಶಯ ಪಡುತ್ತಾರೆ.

ಈ ಸಂಶಯಗಳಿಗೆ ಹೀಗೆ ಉತ್ತರ ದೊರೆಯುತ್ತದೆ. ಯಾವ ದಿವಸ ದಲ್ಲಿ ವಿಷ್ಣುತೀರ್ಥರಂತಹ ಮಹಾಮಹರ್ಷಿಗಳಿಗೆ ಶ್ವಾಸವು-ಶ್ವಾಸೋಚ್ಛ್ವಾಸವು ಶುರುವಾಗುತ್ತದೋ ಆ ದಿವಸದಿಂದ ಆರಂಭಿಸಿ ಹಿಂದೆ ಹೇಳಿದಂತೆ ಘಳಿಗೆ

ಮುಂತಾದ ಕಾಲಗಳಂತೆ ಶ್ವಾಸಗಳನ್ನು ಗಣನೆ ಮಾಡಿದರೆ ಯಾವ ದಿವಸದಲ್ಲಿ ನೂರು ವರ್ಷಗಳಾಗುವವೋ ಆ ದಿವಸದಲ್ಲಿಯೇ ಅವರ ಶ್ವಾಸವು ಪರಿಸಮಾಪ್ತಿಯಾಗುವುದು. ಪ್ರಚಲಿತ ಸೂರ್ಯವರ್ಷಗಳ ಅಂತರವು ಬಂದರೂ ಸಹ ದೋಷವಿಲ್ಲ. ಶ್ವಾಸನಿರೋಧದಿಂದ ಪ್ರಚಲಿತ ಸೂರ್ಯಗತಿಯಿಂದ ಆದ ವರ್ಷಗಳು ಅಧಿಕವಾಗಿ ಕಳೆದು ಹೋದರೂ, ನಿಜವಾದ ವರ್ಷಗಳ ಎಂದರೆ ಹಿಂದೆ ತೋರಿಸಿದಂತೆ ಘಳಿಗೆ-ಮುಹೂರ್ತ–ಯಾಮ–ದಿವಸ-ಪಕ್ಷ-ಮಾಸ–ಋತು–ಆಯನ–ವರ್ಷಗಳ ಅವಧಿಯಂತೆ ವರ್ಷಗಳು ಮುಗಿದಿರುವುದಿಲ್ಲ. ಎಷ್ಟು ಶ್ವಾಸಗಳಾಗಿರುವವೋ ಅಷ್ಟೇ ನಿಜವಾದ ವರ್ಷಗಳು ಕಳೆದು ಹೋಗಿರುತ್ತವೆ. ಹೀಗೆ ಆ ಮಹಾತ್ಮರ ಯೋಗಶಕ್ತಿಗೆ ತಕ್ಕಂತೆ ಅವರವರ ಶ್ವಾಸನಿರೋಧವಾಗಿ ಸೂರ್ಯಗತಿಯಿಂದಾಗುವ ವರ್ಷಗಳು ಸಹಸ್ರಾರು ಕಳೆದುಹೋದರೂ, ಅವರ ಕ್ಲುಪ್ತವಾದ ಶ್ವಾಸಗಳ ಸಂಖ್ಯೆಯೂ, ಅದಕ್ಕೆ ತಕ್ಕಂತೆ ಅವರ ಆಯುರ್ವರ್ಷಗಳೂ ಉಳಿದೇ ಇರುತ್ತವೆ. ಆದುದರಿಂದ ಅವರಿಗೆ ಈ ಸೂರ್ಯಗತಿಯ ಸಹಸ್ರಾರು ವರ್ಷಗಳ ಜೀವನವು (ಬದುಕುವಿಕೆಯು) ಯುಕ್ತವಾಗುತ್ತದೆ. ನೂರು ವರ್ಷಗಳೆಂಬುವ ವಚನಕ್ಕೆ ಸೂರ್ಯಗತಿಯ ನೂರುವರ್ಷಗಳೆಂದು ಅರ್ಥವಲ್ಲ. ಹಿಂದೆ ತೋರಿಸಿದ ರೀತಿಯಲ್ಲಿ ೧೦೦ ವರ್ಷಗಳಿಗೆ ಎಷ್ಟು ಶ್ವಾಸಗಳಾಗುವವೋ ಅಷ್ಟು ಶ್ವಾಸಗಳಾಗುವ ವರ್ಷಗಳೆಂದು ಅರ್ಥಮಾಡಿದರೆ ಸರಿಹೊಂದಿ ಶ್ರುತಿವಿರೋಧವು ದೂರವಾಗುತ್ತದೆ.

ನೂರು ವರ್ಷಗಳಿಗೆ ಕಡಿಮೆ ಜೀವನದಲ್ಲಿಯೂ ಸಹ ಇದೇ ಗತಿಯೆಂದು ತಿಳಿಯಬೇಕು. ಆ ಕಡಿಮೆ ವರ್ಷಗಳಲ್ಲಿಯೇ ಕ್ಲುಪ್ತ ನೂರು ವರ್ಷಗಳ ಶ್ವಾಸಸಂಖ್ಯೆಯು ಮುಗಿದು ಹೋಗಿರುವುದು. ಅವರ ದೈನಂದಿನ ಶ್ವಾಸಗಳ ಸಂಖ್ಯೆಯು ಕ್ಲುಪ್ತ ಶ್ವಾಸಗಳ ಸಂಖ್ಯೆಗಿಂತ ಹೆಚ್ಚಿಗೆ ಇರುತ್ತದೆ. ಇದಕ್ಕೇ ಶ್ವಾಸಪೂರ್ತಿ ಎಂದು ಹೇಳುತ್ತಾರೆ. ಹೀಗೆ "ಸರ್ವರಲ್ಲಿಯೂ ಶ್ವಾಸಗಳು ಸಮವಾಗಿರುತ್ತವೆ" ಎಂದು ಪ್ರಮಾಣಗಳು ಇರುತ್ತವೆ.

ಇರುವೆ ಮುಂತಾದ ಪ್ರಾಣಿಗಳಲ್ಲಿಯೂ ಶ್ವಾಸಜಪಗಳು ಆಗಿಯೇ ಆಗುತ್ತವೆ. ಇರುವೆಯನ್ನಾರಂಭಿಸಿ ಎಷ್ಟು ಪ್ರಾಣಿಗಳು ಸೃಷ್ಟಿಗೆ ಬಂದ

ಚೇತನರು ಇರುತ್ತಾರೋ ಅವರೆಲ್ಲರಲ್ಲಿಯೂ, ಹಿಂದೆ ಹೇಳಿದಂತೆ ಮುಖ್ಯ ಪ್ರಾಣದೇವರು ಶ್ವಾಸಜಪಗಳನ್ನು ನಡೆಸುತ್ತಾರೆ.

ಕಂಠಗತ ಪ್ರಾಣವುಳ್ಳವರಲ್ಲಿ ಮಂದವಾಗಿ ಎಲ್ಲ ವ್ಯಾಪಾರಗಳಿಂದ ನಿವೃತ್ತರಾಗಿ ಹಂಸೋಹಂ ಮೆಲ್ಲಗೆ ಚಿಂತಿಸುತ್ತಿರುತ್ತಾರೆ.

### ಶ್ರೀಗುರುಹೃದಯಪ್ರಕಾಶಿಕೆ

ಸರ್ವಗುರುಶ್ರೇಷ್ಠರಾದ ಪ್ರಾಣದೇವರು ಒಂದು ವರ್ಷದಲ್ಲಿ ಎಪ್ಪತ್ತೇಳುಲಕ್ಷದ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು ಮಾಡಿ ಮಾಡಿಸಿ ನಮ್ಮ ದುರಿತಗಳನ್ನು ಪರಿಹರಿಸುವವನು ಎಂದು ಅನುಸಂಧಾನಕ್ಕೆ ತರುವ ಸಜ್ಜನರನ್ನು ಉದ್ಧರಿಸುವನು. ಸುರವಿರೋಧಿಗಳೆಂಬ ಅಸಜ್ಜನರ ಇರವೆಂಬ ಯೋಗ್ಯತೆ ತಿಳಿದು ದೋಷದೂರನಾದ ಸ್ವಾಮಿಯು ತಮೋಧಿಕಾರಿಗಳ ಯೋಗ್ಯತೆ ಮೇರೆಗೆ, ಸೋಹಮುಪಾಸನೆ ಎಂದರೆ ದೇವರೇ ನಾನು ಎಂಬುವ (ಅಹಂ ಬ್ರಹ್ಮಾಸ್ಮಿ) ಎಂದು ಭಾವಿಸುವ ಬುದ್ಧಿ ಅವರಲ್ಲಿ ವ್ಯಕ್ತಿಮಾಡಿ ಅವರ ಯೋಗ್ಯತೆಯಂತೆ ಆಚರಿಸುವನೆಂದರ್ಥ ॥೭॥

## ಸರ್ವ ವ್ಯಾಖ್ಯಾನಸಾರಸಂಗ್ರಹ

ಒಂದು ಸಂವತ್ಸರಕ್ಕೆ ಶ್ರೀವಾಯುದೇವರು ಪ್ರಾಣಿಗಳ ಸ್ಥೂಲಶರೀರ ಗತರಾಗಿದ್ದು ಎಪ್ಪತ್ತೇಳುಲಕ್ಷ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು ಮಾಡುತ್ತಾರೆ.

ಕ್ಷರನಾಮಕರಾದ ಅನಂತಕೋಟಿ ಜೀವರಾಶಿಗಳಲ್ಲಿ ಶ್ರೀವಾಯುದೇವರು ಜೀವೋತ್ತಮರು. ಇದರಿಂದ ಗುರುವರ್ಯರು. ಶ್ವಾಸಜಪಗಳನ್ನು ಮಾಡಿ ಶ್ವಾಸಾಭಿಮಾನಿ ದೇವತೆಗಳ ದ್ವಾರಾ ಮಾಡಿಸಿ ತದ್ದ್ವಾರಾ ಶರೀರದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಂದ ಮಾಡಿಸುವರು.

ಹರಿಯು ಸರ್ವೋತ್ತಮತ್ವ ವಾಯುಜೀವೋತ್ತಮತ್ವ ಪಂಚಬೇಧ,

ತಾರತಮ್ಯಜ್ಞಾನ, ಪ್ರಪಂಚದ ಸತ್ಯತ್ವ ಇತ್ಯಾದಿ ತತ್ತ್ವಗಳನ್ನು ಬಲ್ಲ ಸಾತ್ವಿಕ ಸ್ವಭಾವದ ಮುಕ್ತಿಯೋಗ್ಯ ಜೀವರು ಸಜ್ಜನರು.

ಶ್ರೀವಾಯುದೇವರ ಹಂಸೋಪಾಸನಾ ಕ್ರಮವನ್ನು ಶಾಸ್ತ್ರದ್ವಾರಾ ಅರಿತು ಜ್ಞಾನಾನುಸಂಧಾನ ಪೂರ್ವಕ ಧ್ಯಾನಿಸುವ ಸಜ್ಜನರ ದುರಿತಗಳನ್ನು ಶ್ರೀಮುಖ್ಯಪ್ರಾಣರು ಪರಿಹರಿಸುವರು.

ವಿಷ್ಣುವಿನಲ್ಲಿ ಮತ್ತು ವಿಷ್ಣುಭಕ್ತರಲ್ಲಿ ದ್ವೇಷಮಾಡುವ ತಮೋಯೋಗ್ಯರು ಸುರವಿರೋಧಿ ದೈತ್ಯರು, ಸುರವಿರೋಧಿಗಳ ಸ್ಥೂಲಶರೀರಗತರಾಗಿದ್ದು, ಅವರಲ್ಲಿ ಶ್ವಾಸಕ್ರಿಯಾರೂಪವಾದ ವ್ಯಾಪಾರವನ್ನು ಮಾಡಿ ಮಾಡಿಸುತ್ತಿರುವರು. ದೈತ್ಯರಲ್ಲಿದ್ದರೂ, ಅವರ ದೋಷಸ್ಪರ್ಶ ಶ್ರೀವಾಯುದೇವರಿಗಿಲ್ಲದುದರಿಂದ ಶ್ರೀಭಾರತೀರಮಣರು ದೋಷದೂರರು. ಅಂತಹ ಸುರವಿರೋಧಿಗಳೊಳಗೆ ನೆಲೆಸಿದ್ದು ಅನಿಲದೇವರು ತಮೋಧಿಕಾರಿಗಳಾದ ಅವರ ಸ್ವರೂಪಯೋಗ್ಯತೆಗನುಗುಣವಾಗಿ ಸೋಹಂಉಪಾಸನೆ ಮಾಡುತ್ತಾರೆ.

ವಾಯುದೇವರು ತ್ರಿವಿಧರಲ್ಲಿ ತ್ರಿವಿಧ ಕ್ರಮದಿಂದ ಹಂಸಜಪ ಮಾಡುವ ವಿವರಣೆಯನ್ನು ಶ್ರೀಸಂಕರ್ಷಣತೀರ್ಥ ವ್ಯಾಖ್ಯಾನದಲ್ಲಿ ನೋಡಬಹುದು.

ಪೂರ್ವೋಕ್ತ ಪದ್ಯಗಳಲ್ಲಿ ಹೇಳಿರುವ ಶ್ವಾಸಮಂತ್ರ ಸಂಖ್ಯಾಕ್ರಮದಂತೆ ಜೀವರ ಒಂದು ಆಯುರ್ಮಾನಕ್ಕೆ ೧೦೦ ಸಂವತ್ಸರಗಳೆಂದು ಪರಿಗಣಿಸಿದರೆ ೭೭,೭೬,೦೦೦ × ೧೦೦ = ೭೭,೭೬,೦೦,೦೦೦ ಶ್ವಾಸಜಪಗಳಾಗುವುವು. ||೭||

## ಪದ್ಯ ೮

ಮೂಲ

ಇನಿತುಪಾಸನೆ ಸರ್ವಜೀವರೊ ।
ಳನಿಲದೇವನು ಮಾಡುತಿರೆ ಚಿಂ ।
ತನೆಯು ಮಾಡದೆ ಕಂಡ ನೀರೊಳು ಮುಳುಗಿ ನಿತ್ಯದಲಿ ॥
ಮನೆಯೊಳಗೆ ಕೃಷ್ಣಾಜಿನಾಪ್ಯಾ ।
ಸನದಿ ಕುಳಿತು ವಿಶಿಷ್ಟ ಬಹು ಸ ।
ಜ್ಜನನೆನಿಸಿ ಜಪಮಣಿಗಳೆಣಿಸಿದರೇನು ಬೇಸರದೆ ॥ ||೮||

**ಅವತರಣಿಕೆ**

ಈ ರೀತಿ ರುದ್ರಾದಿ ತೃಣಾಂತ ಸಮಸ್ತ ತ್ರಿವಿಧ ಜೀವರೊಳು ಜೀವೋತ್ತಮರಾದ ಶ್ರೀವಾಯುದೇವರು ಹಂಸೋಪಾಸನೆ ಮಾಡುತ್ತಾ, ಶ್ವಾಸಕ್ರಿಯಾರೂಪವಾದ ವ್ಯಾಪಾರವನ್ನು ಮಾಡಿ ಮಾಡಿಸುತ್ತಾರೆಂದು ತಿಳಿಯದೆ, ಜನರ ಕಣ್ಣಿಗೆ ಸಜ್ಜನನೆಂದು ತೋರಿಸಿಕೊಳ್ಳುತ್ತಾ, ವರ್ತಿಸಿದರೇನು ಸಾರ್ಥಕ ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಇನಿತು**= ಪೂರ್ವೋಕ್ತ ಪ್ರಕಾರ, **ಉಪಾಸನೆ**= ಹಂಸನಾಮಕ ಪರಮಾತ್ಮನ ಧ್ಯಾನೋಪಾಸನೆಯನ್ನು, **ಸರ್ವಜೀವರೊಳು**= ರುದ್ರಾದಿ ತೃಣಾಂತ ಸಮಸ್ತ ತ್ರಿವಿಧ ಜೀವರಲ್ಲಿದ್ದು, **ಅನಿಲದೇವನು**= ಜೀವೋತ್ತಮರಾದ ಶ್ರೀವಾಯುದೇವರು, **ಮಾಡುತಿರೆ**= ಶ್ವಾಸಜಪಗಳನ್ನು ಮಾಡುತ್ತಿರಲಾಗಿ, **ಚಿಂತನೆಯ ಮಾಡದೆ**= ಶ್ರೀಭಾರತೀರಮಣರ ಮಹಾತ್ಮ್ಯೆಯನ್ನು ಜ್ಞಾನಾನುಸಂಧಾನಪೂರ್ವಕ ತಿಳಿದು ಧ್ಯಾನಿಸದೆ, **ಕಂಡನೀರೊಳುಮುಳುಗಿ**= ಕಂಡಕಂಡ ಸ್ಥಳಗಳಿಗೆ ಹೋಗಿ, ಅಲ್ಲಿ ತೀರ್ಥಸ್ನಾನ ಮಾಡಿ, **ನಿತ್ಯದಲಿ**= ಪ್ರತಿದಿವಸವೂ, **ಮನೆಯೊಳಗೆ**= ತನ್ನ ಗೃಹದಲ್ಲಿ, **ಕೃಷ್ಣಾಜಿನಾದ್ಯಾಸನದಿ**= ಕೃಷ್ಣಾಜಿನವೇ ಮೊದಲಾದ ಆಸನಗಳ ಮೇಲೆ, **ಕುಳಿತು**= ಪದ್ಮಾಸನ ಹಾಕಿ ಕೂತವನಾಗಿ, **ಬಹುಸಜ್ಜನನೆನಿಸಿ**= ನೋಡುವವರಿಗೆ ಅತ್ಯಂತ ಶ್ರೇಷ್ಠನಾದ ಜೀವನೆಂದೆನಿಸಿ, **ಬೇಸರದೆ**= ಬೇಸರಿಕೆ ಇಲ್ಲದೆ, **ವಿಶಿಷ್ಟ**= ಧಾಂಭಿಕವಾಗಿ, **ಜಪಮಣಿಗಳನ್ನು ಎಣಿಸಿದರೇನು** = ಜಪಸರವನ್ನು ಕೈಯಲ್ಲಿ ತಿರುವುತ್ತಾ, ಜಪಗಳನ್ನು ಮಾಡಿದರೇನು ಫಲ ? ಜೀವರಿಗೆ ಆಪದ್ಬಂಧುಗಳಾದ ಶ್ರೀವಾಯುದೇವರ ಮಹಾಮಹಿಮೆ, ಶ್ರೀಹರಿಸರ್ವೋತ್ತಮತ್ವ, ಪಂಚಭೇದ ತಾರತಮ್ಯ ಜ್ಞಾನರಹಿತನಾಗಿ ಏನೇನು ಸತ್ಕರ್ಮಗಳನ್ನು ಆಚರಿಸಿದರೂ ಅದು ಕಾಡಿನ ಬೆಳದಿಂಗಳಂತೆ ವ್ಯರ್ಥ ಎಂದು ಪ್ರಸಕ್ತ ಪದ್ಯಾಭಿಪ್ರಾಯವು. ||೮||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇದರ ಅನುಸಂಧಾನವಿಲ್ಲದೆ ದಾವಜಪ ಮಾಡಿದರೂ ಫಲವಿಲ್ಲ ಎಂತ ಹೇಳತಾರೆ.

ಪೂರ್ವೋಕ್ತ ಪ್ರಕಾರ ಹಂಸನಾಮಕ ಪರಮಾತ್ಮನ ಧ್ಯಾನೋಪಾಸನೆ, ರುದ್ರಾದಿ ತೃಣಾಂತ ತ್ರಿವಿಧ ಜೀವರೊಳು, ಜೀವೋತ್ತಮರಾದ ವಾಯು ದೇವರು ಅರವತ್ತು ಘಳಿಗೆಯೂ ಹಂಸಮಂತ್ರಜಪ ಮಾಡತಾ ಇರಲಾಗಿ, ಅನುಸಂಧಾನದಿಂದ ತಿಳಿದು ಈ ಜಪವನ್ನು ಮಾಡಿ ಭಗವದರ್ಪಣ ಮಾಡಿದರೆ ಆಯುಸ್ಸು ಸಾರ್ಥಕವಾಗಿ ಪುನೀತನಾಗತೇನೆ ಎಂತ ತಿಳಿಯದೆ, ಅನೇಕ ತೀರ್ಥ ಸ್ನಾನ ಮಾಡಿ, ಪ್ರತಿನಿತ್ಯದಲ್ಲೂ ಸ್ವಕೀಯ ಗೃಹದಲ್ಲಿ ಕೃಷ್ಣಾಜಿನ ಮೊದಲಾದ ಆಸನದ ಮ್ಯಾಲೆ ಚಂದಾಗಿ ಕೂತವನಾಗಿ, ಅತ್ಯಂತ ಯೋಗ್ಯತಾ ಉಳ್ಳವನೆಂದು ತಿಳಿಸೋಪಾದಿಯಲ್ಲಿ, ಭ್ಯಾಸರಿಕೆ ಇಲ್ಲದೆ ಸಮಸ್ತ ಜಪಗಳ ಮಾಡತಾ, ಜಪ ಸಂಖ್ಯಾ ತಿಳಿಯೋ ಉದ್ದಿಶ್ಯ ಜಪಮಣಿಗಳನ್ನು ಎಣಿಕೆ ಮಾಡೋಣದರಿಂದ ಫಲವಿಲ್ಲ. ಯಾಕೆಂದರೆ, ಸರ್ವಕ್ರಿಯಾವೂ ಶ್ರೀಹರಿವಾಯುಗಳಿಂದ ನಡೆಯು ತ್ತದೆ ಎಂತಲೂ, ಮಿಥ್ಯಾಜ್ಞಾನ ರಹಿತನಾಗಿ ಶ್ರೀಹರಿ ಸರ್ವೋತ್ತಮ, ವಾಯು ಜೀವೋತ್ತಮ, ತಾರತಮ್ಯ ಪಂಚಭೇದ ಸತ್ಯ ಎಂತ ಇಂಥಾ ದೃಢ ಇಲ್ಲದೆ ಕಾರ್ಯ ಮಾಡಿದರೆ ಫಲವಿಲ್ಲದೆ ಬರೀ ದೇಹಾಯಾಸ ಕೊಟ್ಟು ಹೋಗತದೆ ಎಂತ ತಾತ್ಪರ್ಯ. ||೮||

## ಭಾವಪ್ರಕಾಶಿಕೆ

ಮೇಲಿನ ಪದ್ಯಗಳಲ್ಲಿ ಹೇಳಿದಂತೆ ಶ್ವಾಸರೂಪ ಹಂಸಮಂತ್ರ ಜಪ ಗಳನ್ನು ವಾಯುದೇವರು ಪ್ರತಿಜೀವರೊಳಗೂ ಇದ್ದು ಮಾಡಿಸುತ್ತಾರೆಂದು ಜಪರೂಪೋಪಾಸನೆಯನ್ನು ಮಾಡದೆ ಕಂಡ ನೀರಿನೊಳಗೆ ನಿತ್ಯದಲ್ಲೂ ಮುಳುಗಿ ಮನೆಯೊಳಗೆ ಕೃಷ್ಣಾಜಿನ ಮೊದಲಾದ ಆಸನದ ಮೇಲೆ ಕೂತುಕೊಂಡು, ಈತನು ವಿಶಿಷ್ಟಾಚಾರ ಸಂಪನ್ನನು ಬಹು ಸಜ್ಜನನು ಎಂದು ಪ್ರಖ್ಯಾತನಾಗಿ

ಜಪಮಣಿಗಳನ್ನೆಣಿಸಿದರೆ ಅದರಿಂದೇನೂ ಫಲವಿಲ್ಲ. ಸ್ವತಂತ್ರ ಕರ್ತೃತ್ವಾಭಿಮಾನವನ್ನು ಬಿಟ್ಟು ಭಗವದಾಜ್ಞಾಪ್ರಕಾರ ವಾಯುದೇವರೇ ಸಕಲವೂ ಮಾಡಿಸುತ್ತಾರೆಂದು ತಿಳಿಯದೆ ತಾನೇ ಜಪಾದ್ಯನುಷ್ಠಾನ ಮಾಡುತ್ತೇನೆಂದು ತಿಳಿದು ಮಾಡುವವೆಲ್ಲವೂ ನಿಷ್ಫಲವೆಂದು ತಾತ್ಪರ್ಯ. ||೮||

**ಭಾವದರ್ಪಣ**

ಈ ಕ್ರಮ ತಿಳಿಯದೆ ಇದ್ದ ಪುರುಷನು ಏನು ಜಪ ತಪ ಮಾಡಿದರೂ ವ್ಯರ್ಥವೇ ಸರಿ ಎಂದು ಖಂಡಿತೋಕ್ತಿ ನುಡಿಯುತ್ತಾರೆ, ಇನಿತು ಇತಿ. ||೮||

**ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಇನಿತು ಇತಿ || ಇನಿತು= ಇಷ್ಟು ||೮||

**ಕನ್ನಡಾರ್ಥ**

ಹೀಗೆ ಇರುವ ಹಂಸ ಮಹಾಮಂತ್ರಗಳ (ಶ್ವಾಸಜಪದ) ಉಪಸಂಹಾರ ಹಾಗೂ ಸಂಕಲ್ಪಗಳನ್ನು ಮಾಡಿ ಮುಖ್ಯಪ್ರಾಣಪತಿ ಹಂಸರೂಪೀ ಪರಮಾತ್ಮನನ್ನು ದಿನಾಲೂ ಧ್ಯಾನಿಸದೇ ಮಾಡುವ ಯಾವುದೇ ಜಪವು ವ್ಯರ್ಥವಾಗುವುದು. ಆದುದರಿಂದ ಶ್ರೀವಾಯುದೇವರ ಹಂಸಮಂತ್ರ ಶ್ವಾಸಜಪಗಳನ್ನು ನಿತ್ಯದಲ್ಲಿ ಸಂಸ್ಮರಿಸುವುದು ಮಹಾಮಂತ್ರಜಪಗಳಲ್ಲಿ ಮುಖ್ಯವೆಂಬ ತಾತ್ಪರ್ಯದಿಂದ ಹೇಳುತ್ತಾರೆ "ಇನಿತು" ಎಂಬ ಪದ್ಯವನ್ನು. ||೮||

**ಶ್ರೀಗುರುಹೃದಯಪ್ರಕಾಶಿಕೆ**

ಹೀಗೆ ಪ್ರಾಣದೇವರು ಸರ್ವಜೀವರಲ್ಲೂ ಹಂಸೋಪಾಸನೆ ಮಾಡುವುದನ್ನು ತಿಳಿದು ಚಿಂತಿಸದೆ, ಕಂಡಕಂಡ ನೀರಲ್ಲಿ ಮುಳುಗಿ ಕೃಷ್ಣಾಜಿನಾದ್ಯಾಸನದಲ್ಲಿ ಕುಳಿತುಕೊಂಡು ತಾನು ಸರ್ವರಿಗೂ ಶ್ರೇಷ್ಠನೆಂದು ಬಹು ಸಜ್ಜನರಂತ ಅಜ್ಞರಿಂದ ಅನ್ನಿಸಿಕೊಂಡಾಗ್ಯೂ, ಜಪಮಣಿಗಳನ್ನು ಬೇಜಾರಿಲ್ಲದೆ ಎಣಿಸುತ್ತಿದ್ದರೆ, ಏನೂ ಎಂದರೆ, ಸ್ನಾನಜಪಾದಿಗಳಲ್ಲಿ ಮನಃಪೂರ್ವಕ ಹರಿಸ್ಮರಣೆ

ಮೊದಲಾದ್ದು ಇಲ್ಲದೆ ಇಂಥಾ ಡಾಂಭಿಕ ಆಚಾರವು ಯಾವ ಫಲವನ್ನೂ ಕೊಡದೆಂದು ಅಭಿಪ್ರಾಯ. ||೮||

## ಸರ್ವವ್ಯಾಖ್ಯಾನಸಾರಸಂಗ್ರಹ

ಸಮಸ್ತ ಜೀವರ ಸ್ಥೂಲದೇಹಗಳಲ್ಲಿ ಸ್ಥಿತರಾಗಿದ್ದು ಶ್ರೀವಾಯು ದೇವರು ಪ್ರತಿದಿವಸ ಒಂದಕ್ಕೆ ೨೧೬೦೦ ಸಂಖ್ಯಾಕವಾದ ಶ್ವಾಸರೂಪ ಹಂಸ ಮಂತ್ರಜಪಗಳನ್ನು ತಾವು ಮಾಡುತ್ತಾ ಆಯಾಯ ಜೀವರ ಸ್ವರೂಪಗತ ಯೋಗ್ಯತಾನುಸಾರ ಗತಿಗಳನ್ನು ಶ್ರೀಹರಿಯ ಆಜ್ಞಾನುಸಾರ ಕೊಡುವರು.

ಸರ್ವಜೀವರೊಳು ಅನಿಲದೇವನು ಇನಿತುಪಾಸನೆ ಮಾಡುತಿರೆ ಅವರ ಮಹದುಪಕಾರವನ್ನು ನೆನೆಯದೇ ಅವರ ಮಹಾಮಹಿಮೆಗಳನ್ನು ಚಿಂತಿಸದೇ, ಅಹಂಕಾರ ಮಮಕಾರಗ್ರಸ್ತರಾಗಿ, ಸ್ವಯಂಕರ್ತೃತ್ವಾಭಿಮಾನದಿಂದ ಎಲ್ಲೆಲ್ಲಿ ತೀರ್ಥಗಳನ್ನು ಕಂಡರೆ ಆ ತೀರ್ಥಗಳಲ್ಲಿ ಕೇವಲ ಯಾಂತ್ರಿಕವಾಗಿ ಮಜ್ಜನ ಮಾಡಿದರೆ ಏನೇನೂ ಫಲವಿಲ್ಲ.

ಮನೆಯಲ್ಲಿಯೇ ಕೃಷ್ಣಾಜಿನಾಸನದ ಮೇಲೆ ಪದ್ಮಾಸನ ಹಾಕಿ ಕೂತು ಕೈಯಲ್ಲಿ ಜಪಮಣಿಯ ಸರಗಳನ್ನು ಹಿಡಿದು ಕಣ್ಣುಮುಚ್ಚಿಕೊಂಡು ಪಿಟಪಿಟನೆ ಮಂತ್ರಗಳನ್ನುಚ್ಚರಿಸುತ್ತಾ, ಜಪಮಣಿಗಳನ್ನು ಎಣಿಸುತ್ತಾ, ನೋಡುವ ಜನರ ಕಣ್ಣಿಗೆ ಇವನೊಬ್ಬ ಮಹಾಪುರುಷನು ಎಂದೆನಿಸಿ, ಕೇವಲ ಡಾಂಭಿಕತನವನ್ನು ಪ್ರದರ್ಶಿಸುತ್ತಾ, ಪ್ರೇಕ್ಷಕರನ್ನು ವಂಚಿಸುತ್ತಾ, ಅವರಿಂದ ಸನ್ಮಾನಿತನಾಗುವ ನರನು ಕೇವಲ ಸಾಧುಲಿಂಗ ಪ್ರದರ್ಶಕನೇ ಹೊರತು ನಿಜ ವಾದ ಭಗವದ್ಭಕ್ತನಲ್ಲ. ಸ್ವಯಂ ಕರ್ತೃತ್ವಾಭಿಮಾನ ರಹಿತರಾಗಿ ದೇಹೇಂದ್ರಿಯ ಗಳ ಶುಭ-ಮಿಶ್ರ-ಅಶುಭರೂಪವಾದ ಸಕಲ ಕರ್ಮಗಳನ್ನೂ ಶ್ವಾಸಪತಿಗಳಾದ ಶ್ರೀಮುಖ್ಯಪ್ರಾಣದೇವರೇ ಶ್ರೀಹರಿಯ ಪ್ರೇರಣಾನುಸಾರ ಮಾಡಿ ಮಾಡಿಸು ತ್ತಿರುವರು. ಜೀವನು ಕೇವಲ ಶ್ರೀಹರಿವಾಯುಗಳ ಸೂತ್ರದ ಬೊಂಬೆಯು. ಸ್ವತಂತ್ರಕರ್ತನಲ್ಲ ಎಂಬ ಸುಸಮೀಚೀನವಾದ ಜ್ಞಾನವನ್ನು ಅರಿತವರೇ

ನಿಜವಾದ ಭಗವದ್ಭಕ್ತರು. ಶ್ರೀಹರಿವಾಯುಗಳ ಪೂರ್ಣಾನುಗ್ರಹಪಾತ್ರರು. ಇಂತಹ ಜ್ಞಾನಾನುಸಂಧಾನರಹಿತರಾದ ಜೀವರ ಸಕಲ ಸತ್ಕರ್ಮಗಳೂ, ಜಪ, ಧ್ಯಾನ, ಚಿಂತನಾದಿ ಕಾರ್ಯಗಳೂ ನಿಷ್ಫಲ ಹಾಗೂ ವ್ಯರ್ಥ. ||೮||

**ಪದ್ಯ ೯**

**ಮೂಲ**

**ಓದನೋದಕ ಎರಡು ತೇಜದೊ ।**
**ಳೈದುವವು ಲಯು ತದಭಿಮಾನಿಗ ।**
**ಳಾದ ಶಿವಪವನರು ರಮಾಧೀನತ್ವ ಐದುವರು ॥**
**ಈ ದಿವಿಜರೊಡಗೂಡಿ ಶ್ರೀ ಮಧು ।**
**ಸೂದನನ ಐದುವಳು ಎಂದರಿ ।**
**ದಾದರದಲನ್ನೋದಕವ ಕೊಡುತುಣುತ ಸುಖಿಸುತಿರು॥ ॥೯॥**

**ಅವತರಣಿಕೆ**

ಅನ್ನೋದಕಾದಿಗಳ ಭೋಜನಲಯಾನುಸಂಧಾನಕ್ರಮ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಓದನ**= ಅನ್ನ, **ಉದಕ**= ನೀರು, **ಎರಡು**= ಭೋಜನ ಮಾಡುವ ಅನ್ನ (ಆಹಾರ ಪದಾರ್ಥಗಳು) ಮತ್ತು ಪಾನ ಮಾಡುವ ನೀರು ಇವೆರಡೂ, **ತೇಜದೊಳು**= ತೇಜೋರೂಪವಾದ ಅಗ್ನಿಯಲ್ಲಿ, ಅಂದರೆ, ದೇಹಗತ ಜಠರಾಗ್ನಿಯಲ್ಲಿ, **ಲಯು ಐದುವವು**= ಜೀರ್ಣಸಲ್ಪಟ್ಟು ಲಯಹೊಂದಿ ರಕ್ತಗತವಾಗುವುವು. **ತದಭಿಮಾನಿಗಳಾದ**= ಅನ್ನೋದಕಗಳಿಗೆ ಅಭಿಮಾನಿದೇವತೆಗಳಾದ, **ಶಿವ**= ಅನ್ನಾಭಿಮಾನಿಯಾದ ಶ್ರೀಮಹರುದ್ರದೇವರು, **ಪವನರು**= ಉದಕಾಭಿಮಾನಿಗಳಾದ ಶ್ರೀವಾಯುದೇವರು, **ರಮಾಧೀನತ್ವ ಐದುವರು**= ರಮಾದೇವಿಯರನ್ನು ಸೇರುವರು. ಅಂದರೆ ಶ್ರೀರಮಾದೇವಿಗೆ

ರುದ್ರಪವನರು ಅನ್ನರೂಪರಾಗುವರು. **ಈ ದಿವಿಜರೊಡಗೂಡಿ**= ಅನ್ನೋದಕತ್ವೇನ ಭೋಜನಮಾಡಿದ ರುದ್ರ, ವಾಯುದೇವರುಗಳನ್ನು ಕೂಡಿಕೊಂಡು, **ಶ್ರೀ**= ಶ್ರೀಲಕ್ಷ್ಮೀದೇವಿಯು, **ಮದುಸೂದನನ ಐದುವಳು**= ಮಧುಸೂದನನಾಮಕ ಶ್ರೀಪರಮಾತ್ಮನನ್ನು ಸೇರುತ್ತಾಳೆ. ಅಂದರೆ, ಶ್ರೀಪರಮಾತ್ಮ ಲಕ್ಷ್ಮೀದೇವಿಯರನ್ನು ಅನ್ನವನ್ನಾಗಿ ಮಾಡಿಕೊಂಡು ಭೋಜನ ಮಾಡುತ್ತಾನೆ. **ಎಂದರಿತು**= ಈ ರೀತಿಯಲ್ಲಿ ಜ್ಞಾನಾನುಸಂಧಾನಪೂರ್ವಕ ತಿಳಿದುಕೊಂಡು, **ಆದರದಲಿ**= ಭಕ್ತಿಪೂರ್ವಕವಾಗಿ, **ಅನ್ನೋದಕವ**= ಅನ್ನೋದಕಗಳನ್ನು (ಭೋಜ್ಯ ವಸ್ತುಗಳನ್ನು), **ಕೊಡುತ**= ಬ್ರಾಹ್ಮಣಾಧಿಷ್ಠಾನದಲ್ಲಿ ಭೋಜನ ಮಾಡಿಸುತ್ತಾ, **ಉಣುತ**= ತಾನೂ ಸಹ ಅದೇ ಅನುಸಂಧಾನದಿಂದ ಸ್ವೀಕರಿಸುತ್ತಾ, **ಸುಖಿಸುತಿರು**= ಭಗವಚ್ಚಿಂತನಾ ಕ್ರಮದಿಂದ ಆನಂದವನ್ನು ಹೊಂದು. ||೯||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನ್ನೋದಕಾದಿಗಳ ಭೋಜನ ಲಯಾನುಸಂಧಾನ ಕ್ರಮ ಹೇಳತಾರೆ.

ಅನ್ನಕ್ಕೆ ಅಭಿಮಾನಿಯಾದವರು ರುದ್ರದೇವರು. (ಚಂದ್ರದೇವರಿಗೂ ಹೇಳತಾರೆ.) ಭೋಜನಕಾಲಕ್ಕೆ ಪಾನ ಮಾಡಿದ ಉದಕ, ಈ ಉದಕಾಭಿಮಾನಿಯಾದ ವಾಯುದೇವರು, ಅಂತು ರುದ್ರದೇವರು ವಾಯುದೇವರು ಇವರಿಬ್ಬರೂ, ಅನ್ನೋದಕ ಎರಡೂ ದೇಹಗತ ಜಠರಾಗ್ನಿಯೊಳು ಲಯ ಐದೋವಾಗತವೆ. ಆಗ್ಗೆ ಕ್ಷುತ್ತು ನಿವಾರಣೆ ಆಗತದೆ. ಅನ್ನೋದಕಗಳಿಗೆ ಅಭಿಮಾನಿಗಳಾದ ಪೂರ್ವೋಕ್ತ ರುದ್ರದೇವರು ವಾಯುದೇವರು ಇಬ್ಬರೂ, ರಮಾದೇವಿಯರ ಅಧೀನ ಐದತಾರೆ ಎಂದರೆ ಜಡಾನ್ನ ಜಡ ದೇಹದಿಂದ ಭೋಜನರೂಪದಿಂದ ಜಠರಾಗ್ನಿ ಸೇರತದೆ.ತದ್ವತ್ ರಮಾದೇವಿಯರು ಅನ್ನಾಭಿಮಾನಿಯಾದ ರುದ್ರದೇವರನ್ನು ಅನ್ನವಾಗಿ ಮಾಡಿನ್ನೂ, ಉದಕಾಭಿಮಾನಿಯಾದ ವಾಯುದೇವರನ್ನು ಉದಕವಾಗಿ ಮಾಡಿನ್ನೂ ಭೋಜನ ಮಾಡತಾರೆ. ತಾವು ಅನ್ನೋದಕತ್ವೇನ ಭೋಜನ ಮಾಡಿದ ವಿದ್ಯಮಾನರಾದ ರುದ್ರ ವಾಯು

ದೇವತೆಗಳಿಂದ ಕೂಡಾ ಕೂಡಿಕೊಂಡು, ಲಕ್ಷ್ಮೀದೇವಿಯರು ಶ್ರೀಪರಮಾತ್ಮನ ಹೊಂದೋವರಾಗತಾರೆ. ಅಂದರೆ, ಇಂಥಾ ರಮಾದೇವಿಯರನ್ನು ಅನ್ನವಾಗಿ ಮಾಡಿಕೊಂಡು ಪರಮಾತ್ಮ ಭೋಜನ ಮಾಡೋವನಾಗತಾನೆ. ಜಠರಾಗ್ನಿಗೆ ರಮಾದೇವಿಯರು ಅಭಿಮಾನಿಗಳು. ಅನ್ನೋದಕಗಳು ಜಠರಾಗ್ನಿಯಲ್ಲಿ ಲಯ ಐದೋಣ ದಾವದದೆ ಅದೇ ದೇವತಾಲಯ ಎಂತ ತಾತ್ಪರ್ಯ. ಅಗ್ನ್ಯಂತರ್ಗತ ಮಧುಸೂದನ ಸಾಂಕೇತನಾದ ಶ್ರೀಪರಶುರಾಮದೇವರಿಗೆ ಲಕ್ಷ್ಮೀದೇವಿಯರು ಅನ್ನರೂಪರಾಗುತ್ತಾರೆ ಎಂದು ತಿಳಿದವನಾಗಿ, ಆದರ ಪೂರ್ವಕವಾಗಿ ಅನ್ನೋದಕಾದಿಗಳ ಬ್ರಾಹ್ಮಣಾಧಿಷ್ಠಾನದಲ್ಲಿ ಕೊಡೋ ಕಾಲ ದಲ್ಲೀನೂ, ನೀನು ಭೋಜನ ಮಾಡೋ ಕಾಲದಲ್ಲೀನೂ ಭಗವದ್ಧ್ಯಾನದಿಂದ ಸುಖಪಡತಾ ಇರೋವನಾಗು. ಇದು ದಿಕ್ಪ್ರದರ್ಶನ. ಈ ಪ್ರಕಾರ ಅನ್ನೋದಕಾದಿಗಳಲ್ಲಿ ಯಾವತ್ತೂ ತತ್ತ್ವದೇವತೆಗಳ ರಸವದೆ. ಅವರವರೂ ತಮ್ಮ ತಮ್ಮ ರಸಗಳ ಸ್ವೀಕಾರ ಮಾಡತಾ, ತಾವು ಸ್ವೋತ್ತಮರಿಗೆ ಅನ್ನೋ ದಕರೂಪವಾಗಿ ಅವರವರಲ್ಲಿ ಪ್ರವೇಶರ್ಾಗತಾರೆ. ರುದ್ರದೇವರು ವಾಯು ದೇವರಲ್ಲಿ ಲಯ, ವಾಯುದೇವರು ಲಕ್ಷ್ಮೀಯಲ್ಲಿ ಲಯ, ಲಕ್ಷ್ಮೀ ಪರಮಾತ್ಮ ನಲ್ಲಿ ಲಯವಾಗುತ್ತಾರೆ ವೆಂತ ಈ ಪ್ರಕಾರ ಅನುಸಂಧಾನದಿಂದ ಭೋಜನ ಮಾಡಿಸಿ, ತಾನೂ ಸಹ ಈ ರೀತಿ ಭೋಜನ ಮಾಡಬೇಕೆಂದು ತಾತ್ಪರ್ಯ ||೯||

## ಭಾವಪ್ರಕಾಶಿಕೆ

ನಾವು ಭೋಜನ ಮಾಡುವ ಅನ್ನೋದಕಗಳೆರಡು ಜಠರಾಗ್ನಿಯಲ್ಲಿ ಲಯ ವಾಗುವುವು. ಅನ್ನೋದಕಗಳಿಗೆ ಅಭಿಮಾನಿಗಳು ರುದ್ರದೇವರು, ವಾಯು ದೇವರು. ಇವರಿಬ್ಬರೂ ಅನ್ನೋದಕರೂಪವಾಗಿ ರಮಾದೇವಿಯರಲ್ಲಿ ಸೇರು ವರು. ರಮಾದೇವಿಯರು ಅನ್ನೋದಕರೂಪರಾದ ಶಿವ ವಾಯುಗಳೊಂದೊಡ ಗೂಡಿ ಶ್ರೀಪರಮಾತ್ಮನಲ್ಲಿ ಸೇರುವರು. ಹೀಗೆ ನಾವು ಭೋಜನ ಪಾನ ಮಾಡಿದ ಅನ್ನೋದಕಗಳು ಪರಂಪರಾ ಪರಮಾತ್ಮನಲ್ಲಿ ಲಯವಾಗಿ ಸಾರ್ಥಕ ವಾಗುವವೆಂದು ತಿಳಿದು ಬ್ರಾಹ್ಮಣಾದಿಗಳಿಗೆ ಅನ್ನವನ್ನು ಕೊಡುತ್ತ ನೀನೂ

ಭೋಜನವನ್ನು ಮಾಡುತ್ತ ಈ ಅನುಸಂಧಾನದಿಂದ ಭುಂಜಿಸಿ ಸುಖವಾಗಿರಬೇಕೆಂಬ ಭಾವ. ||೯||

**ಭಾವದರ್ಪಣ**

ಅನ್ನ ಉದಕ ಈ ಎರಡೂ ಅಗ್ನಿಯಲ್ಲಿ ಲಯವೆಂತಲೂ, ತದಭಿಮಾನಿ ರುದ್ರ ವಾಯುಗಳು ಶ್ರೀರಮಾದೇವಿಯಲ್ಲಿ ಲಯವೆಂತಲೂ, ಆ ರಮಾದೇವಿಯು ಅತ್ಯಂತ ಸಾಮೀಪ್ಯಲಕ್ಷಣ ಲಯ ಶ್ರೀಪರಮಾತ್ಮನಲ್ಲಿ ಹೊಂದುತ್ತಾಳೆಂತಲೂ ಹೇಳುತ್ತಾರೆ, ಓದನೋದಕೇತಿ. ವಿಷ್ಣೋರತ್ಯಂತ ಸಾಮೀಪ್ಯಂ ಪ್ರಕೃತೇರ್ಲಯ ಉಚ್ಯತ ಇತಿ ಏಕಾದಶತಾತ್ಪರ್ಯೋಕ್ತೇಃ ||೯||

**ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಓದನ ಇತಿ|| ಓದನ=ಅನ್ನ|| ಪೃಥಿವ್ಯಧಿಕರಣೇ | ಪೃಥಿವೀ ತತ್ರ ಅನ್ನಶಬ್ದೇನ ಉಚ್ಯತೇ|| ಇತಿ ಭಾಷ್ಯೋಕ್ತೇಃ|| ಉಕ್ತ ವಿವರಣಂ|| ಜಡಸ್ಯ ಜಡ ಇತ್ಯೇತಾವತ್ ನ ಇತ್ಯಾಹ ತದಿತಿ|| ತೇಜದಿ ರಮಾಯಾಂ ಪ್ರಾಣಃ ತೇಜಸಿ ಇತ್ಯುಕ್ತೇಃ|| ತೇಜೋಭಿದಾಂ ತು ಶ್ರಿಯಮ್ ಇತ್ಯನುವ್ಯಾಕೃತೌ ತೇಜಃ ಪರಸ್ಯಾಂ ದೇವತಾಯಾಮ್ ಇತ್ಯುಕ್ತೇಃ ಮಧು ಇತಿ|| ಏವಂ ಅನ್ನೋದಕಾನೇ ಅರ್ಪಿತಂ ಜ್ಞಾನಿನಿ ಹರೌ ಅರ್ಪಿತಂ ಭವತಿ ||೯||

**ಕನ್ನಡಾರ್ಥ**

ಪೃಥಿವಿಯಲ್ಲಿರುವುದಕ್ಕೂ ಪೃಥಿವಿಯೆಂದು ಹೇಳುತ್ತಾರೆ. ಆದುದರಿಂದ ಓದನ ಶಬ್ದದಿಂದ ಪೃಥಿವೀ ಹಾಗೂ ಅನ್ನವನ್ನು ತೆಗೆದುಕೊಳ್ಳಬೇಕು. ಅನ್ನ ಶಬ್ದದಿಂದ ಪೃಥ್ವಿಯು ಹೇಳಲ್ಪಡುತ್ತದೆ ಎಂದು ಭಾಷ್ಯವಚನವಿರುತ್ತದೆ. ಈ ವಿವರಣೆಯು ಜಡಗಳಿಗೇ ಮಾತ್ರವಲ್ಲ ಎಂದು ಹೇಳುತ್ತಾರೆ ತದಭಿಮಾನಿ ಎಂಬ ಪದದಿಂದ. ತೇಜೋ ಅಭಿಮಾನಿ ರಮಾದೇವಿಯರಲ್ಲಿ ಪ್ರಾಣನು ಲೀನನಾಗುತ್ತಾನೆ ಎಂದು ಭಾಷ್ಯದಲ್ಲಿ ವಚನವಿರುತ್ತದೆ. ತೇಜೋ (ರೂಪ ಅಭಿಮಾನಿ) ರಮಾದೇವಿಯರು ಪರದೇವತೆಯಾದ ಪರಮಾತ್ಮನಲ್ಲಿ ಸೇರು

ತ್ತಾರೆ ಎಂದು ಅನುವ್ಯಾಖ್ಯಾನ ವಚನವಿರುವುದರಿಂದ ಮಧುಸೂದನನ್ನೈದು ವಳು ಎಂದು ದಾಸರಾಯರು ನಿರೂಪಿಸಿರುತ್ತಾರೆ.

ಅನ್ನೋದಕಗಳನ್ನು ಅತಿಥಿ ಅಭ್ಯಾಗತರಿಗೆ ಕೊಡುವಾಗ ಬ್ರಾಹ್ಮಣಾದಿ ಸಂತರ್ಪಣವನ್ನು ಮಾಡುವಾಗ ಈ ರೀತಿಯಾಗಿ ತಿಳಿದು ಅರ್ಪಿಸಿದರೆ ಭೋಜನಾದಿಗಳನ್ನು ಮಾಡಿಸಿದರೆ ಆ ಭೋಜನವು ಶ್ರೀಹರಿಗೆ ಮುಟ್ಟಿ ಅದು ಸಫಲವಾಗುತ್ತದೆ. ಇದೇ ರೀತಿಯಲ್ಲಿ ತಾನು ಭೋಜನ ಮಾಡುವಾಗಲೂ ಅನುಸಂಧಾನ ಮಾಡಿದರೆ ಶ್ರೀಹರಿಗೆ ಅರ್ಪಿತವಾಗಿ ಅದೂ ಸಫಲವಾಗುತ್ತದೆ. ॥೯॥

## ಶ್ರೀಗುರುಹೃದಯಪ್ರಕಾಶಿಕೆ

ಪ್ರಾಣಾಗ್ನಿ ಹೋತ್ರ ಉಪಾಸನ ಮಹಿಮೆಯನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ ಮೂರು ಪದ್ಯಗಳಿಂದ ಓದನವೆಂಬದಾದಿಯಾಗಿ. ಓದನವೆಂಬ ಅನ್ನವು ಉದಕವೆಂಬ ನೀರೂ, ತೇಜವೆಂಬ ಅಗ್ನಿಯಲ್ಲಿ ಲಯವಾಗುವುದು. ಎಂದರೆ ಜಡವಾದ ಅನ್ನೋದಕಗಳು ಜಠರಾಗ್ನಿಯಲ್ಲಿ ಸೇರಿ ವಿಕಾರ ಹೊಂದುವುದೆಂದರ್ಥ. ಆ ಅನ್ನೋದಕಾಭಿಮಾನಿಗಳಾದ ರುದ್ರ, ವಾಯುಗಳು ರಮಾದೇವಿಯ ಅಧೀನರಾಗಿರುವರು. ಆ ರಮಾದೇವಿ ಈ ದೇವತೆಗಳಿಂದ ಸಹಿತಳಾಗಿ ಮಧುಸೂದನನೆಂಬ ಶ್ರೀಹರಿಯನ್ನು ಐದುವಳು, ಅಧೀನವಾಗಿ ಆಶ್ರಯಿಸಿರುವಳೆಂದು ತಿಳಿದು, ಆದರವೆಂಬ ಸದ್ಭಕ್ತಿಪೂರ್ವಕವಾಗಿ ಅನ್ನೋದಕಾದಿಗಳನ್ನು ಅತಿಥಿಗಳಿಗೆ ಕೊಡುತ್ತಾ, ಭೋಜನವೂ ಮಾಡುತ್ತಾ ಸುಖಿಸುತ್ತಿರು ಎಂದರೆ, ದೇವರ ಸ್ವತಂತ್ರಜ್ಞಾನ ಚಿಂತನೆ ಸ್ಮರಣೆಗಳಿಂದ ಮೇಲ್ಕಂಡ ಅನುಸಂಧಾನಗಳಿಂದ ಸಂತೋಷಿಸಬೇಕೆಂದರ್ಥ.

## ಪ್ರಮಾಣ

ಅಸ್ಯಾಸ್ಮಿನ್ ವಿಲಯೋಭಾವಿತ್ಯೇವಂ ವಿಜ್ಞಾನಮಾಹಂತಿಃ ।
ನ ತು ತತ್ಕಾಲವಿಲಯಸ್ತ್ವನ್ನೋವಾತಸ್ಯ ದರ್ಶನಾತ್ ॥
ಹರೌ ಹರೇರ್ಭವೇನ್ನೀತಿಸ್ತದೇತತ್ವಸ್ಯ ಚಿಂತನಂ ।
ಅನ್ಯತ್ರ ತನ್ನಿಯಮ್ಯಾದಿ ಚಿಂತನಂ ನೀತಿರುಚ್ಯತೇ ॥

ಎಂಬ ಭಾಗವತ ತಾತ್ಪರ್ಯಾರ್ಥ ವಿವರಿಸಲ್ಪಟ್ಟಿತು.

**ವಿಶೇಷಾರ್ಥ :** ಅನ್ನ ಪಂಚ ಭೂತಾತ್ಮಕವಾದ್ದರಿಂದ ಅದಕ್ಕೆ ಜನಕ ರುದ್ರ ಮುಖ್ಯಾಭಿಮಾನಿ. ಅನ್ನಕ್ಕಿಂತ ಉದಕವು ದೇಹಕ್ಕೆ ಆಪ್ಯಾಯನಕರ ವಾದ್ದರಿಂದ ವಾಯುದೇವರು ರುದ್ರಾಪೇಕ್ಷಯಾ ಮುಖ್ಯಾಭಿಮಾನಿಗಳು ಉದಕಕ್ಕೆಂದು ತಿಳಿಯುವುದು. ಚಂದ್ರ ವರುಣಾದಿಗಳು ಅನ್ನ ಮತ್ತು ಉದ ಕಕ್ಕೆ ಅಮುಖ್ಯಾಭಿಮಾನಿಗಳೆಂದು ಸಹ ತಿಳಿಯುವುದು. ಹೀಗೆ ಮುಖ್ಯಾಭಿ ಮಾನಿಗಳಾದ ರುದ್ರ, ವಾಯುಗಳಿಬ್ಬರು ಎಂಬುದೆ ಶಾಸ್ತ್ರರಹಸ್ಯ. ಜಠರಾಗ್ನಿಗೆ ರಮಾದೇವೇರು ಅಭಿಮಾನಿಗಳು. ಅನ್ನ, ಉದಕ ಜಠರಾಗ್ನಿಯಲ್ಲಿ ಲಯವಾಗಿ ಪರುಶುರಾಮನಿಗೆ ಲಕ್ಷ್ಮೀ ಅನ್ನವಾಗುತ್ತಾಳೆ.

ಹೀಗೆ ಅನ್ನೋದಕಾದಿಗಳಲ್ಲಿ ಸರ್ವತತ್ತ್ವೇಶರು ತಮ್ಮ ತಮ್ಮ ರಸ ಸ್ವೀಕಾರ ಮಾಡಿ ತಮ್ಮ ತಮ್ಮ ಸ್ವೋತ್ತಮರಿಗೆ ಅನ್ನೋದಕರೂಪರಾಗು ತ್ತಾರೆ. ಇದೇ ನೈವೇದ್ಯ ಸಮರ್ಪಣ ಮತ್ತು ಭೋಜನದಲ್ಲಿ ಮುಖ್ಯಾನು ಸಂಧಾನ. ಮುಂದೆ ಹನ್ನೊಂದನೇ ಪದ್ಯದಲ್ಲಿ ಇದೇ ಮುಖ್ಯಾನುಸಂಧಾನ ವನ್ನು ವರ್ಣಿಸಿರುವುದನ್ನು ಈ ವಿಷಯದಲ್ಲಿ ಜ್ಞಾಪಕದಲ್ಲಿಡಬೇಕು. ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಾವು ತಿನ್ನುವ ಪದಾರ್ಥಗಳು ಅನ್ನವೆನಿಸುವುದು. ಇದಕ್ಕೆ ಓದನ ಎಂದು ಹೆಸರು.

ಭೋಜನ ಕ್ರಿಯೆಯಲ್ಲಿ ನೀರನ್ನು ಪಾನ ಮಾಡುತ್ತೇವೆ. ಇದಕ್ಕೆ ಉದಕ ಎಂದು ಹೆಸರು.

ಒದನ ಮತ್ತು ಉದಕ ಇವೆರಡೂ ಭೋಜನ ಕ್ರಿಯೆಯಲ್ಲಿ ದೇಹಗತ ಜಠರಾಗ್ನಿಯಲ್ಲಿ ಪಚನ ಹೊಂದುವುವು. ತೇಜೋರೂಪವಾದ ಜಠರಾಗ್ನಿ ಯಲ್ಲಿ ಶ್ರೀಪರಮಾತ್ಮನು ವೈಶ್ವಾನರ ಎಂಬ ನಾಮಧೇಯದಿಂದ ಸ್ಥಿತನಾಗಿದ್ದು ಭೋಜ್ಯ ವಸ್ತುಗಳನ್ನು ಪಚನಗೊಳಿಸಿ, ಜೀರ್ಣಮಾಡಿ ರಕ್ತಗತವಾಗುವಂತೆ ಮಾಡುವನು.

ಅನ್ನವು ಪೃಥ್ವೀಸಂಬಂಧವಾದದ್ದು. ಅದರಲ್ಲಿ ಅಪ್, ತೇಜ, ವಾಯು ಮತ್ತು ಆಕಾಶತತ್ತ್ವಗಳು ಸೂಕ್ಷ್ಮರೂಪದಲ್ಲಿ ಸಮಾವೇಶವಾಗಿವೆ. ಇದರಿಂದ ಅನ್ನವು ಪಂಚಭೂತಾತ್ಮಕವಾದದ್ದು. ಅನ್ನಕ್ಕೆ ಮುಖ್ಯಾಭಿಮಾನಿ ದೇವತೆಯು ಮಹರುದ್ರದೇವರು, ಚಂದ್ರನು ಅಮುಖ್ಯಾಭಿಮಾನಿಯು.

ಕುಡಿಯುವ ನೀರು ಅಪ್‌ತತ್ತ್ವಾತ್ಮಕವಾದದ್ದು. ರಸವು ಅದರ ಸಹಜ ಗುಣಧರ್ಮವು. ಶ್ರೀವಾಯುದೇವರು ಉದಕಾಭಿಮಾನಿಗಳು. ವರುಣನು ಅಮುಖ್ಯಾಭಿಮಾನಿಯು.

ಅನ್ನದ ಪಚನಕ್ರಿಯೆಯಿಂದ ಹಸಿವೆ ಪರಿಹಾರವಾಗುವುದು. ಉದಕ ಪಾನದಿಂದ ಬಾಯಾರಿಕೆ ಉಪಶಮನವಾಗುವುದು.

ಓದನ ಮತ್ತು ಉದಕಗಳು ತೇಜೋರೂಪವಾದ ಜಠರಾಗ್ನಿಯಲ್ಲಿ ಲಯ ಹೊಂದಿದಾಗ, ಓದನಾಭಿಮಾನಿ ರುದ್ರದೇವರು, ಉದಕಾಭಿಮಾನಿ ವಾಯುದೇವರು ಜಠರಾಗ್ನಿಗೆ ಅಭಿಮಾನಿಯಾದ ತೇಜೋಭಿಮಾನಿ ಶ್ರೀರಮಾ ದೇವಿಯಲ್ಲಿ ಲಯ ಹೊಂದುವರು. ಅಂದರೆ ರುದ್ರ ಪವನರು ಶ್ರೀರಮಾ ದೇವಿಗೆ ಆಹಾರವಾಗುವರು.

ಶ್ರೀಲಕ್ಷ್ಮೀದೇವಿಯು ರುದ್ರ ಪವನರೊಡಗೂಡಿ ಅಗ್ನ್ಯಂತರ್ಗತ ಶ್ರೀಪರಶುರಾಮನಲ್ಲಿ ಲಯ ಹೊಂದುವಳು. ಅಂದರೆ, ಶ್ರೀರಮಾದೇವಿಯನ್ನು ಅನ್ನವನ್ನಾಗಿ ಮಾಡಿಕೊಂಡು ಶ್ರೀಪರಮಾತ್ಮ ಭೋಜನ ಮಾಡುವನು.

ಈ ರೀತಿಯಲ್ಲಿ ಭೋಜನ ಕ್ರಿಯೆಯ ರಹಸ್ಯಾರ್ಥವನ್ನು ಕೋವಿದರಿಂದ ಉಪದೇಶದ್ವಾರಾ ತಿಳಿದು, ಉತ್ತಮರಾದ ವಿಪ್ರರಿಗೆ ಅನ್ನೋದಕಗಳನ್ನು ನೀಡಿ ಅವರಿಗೆ ಭೋಜನ ಮಾಡಿಸಬೇಕು. ನೀನೂ ಸಹ ಭೋಜನ ರಸವಿಭಾಗ ಸಂಬಂಧವಾದ ಜ್ಞಾನಾನುಸಂಧಾನದಿಂದ ಭೋಜನ ಮಾಡು ಎಂದಿದ್ದಾರೆ.

**ವಿಶೇಷ ವಿಚಾರ**

ಸ್ಥಾವರರಾದ ದೇವತೆಗಳು ಸ್ವೋತ್ತಮರಾದ ದೇವತೆಗಳಲ್ಲಿ ಲಯ

ಹೊಂದುವರು. ಅಂದರೆ, ಅನ್ನಾಭಿಮಾನಿ ರುದ್ರನು, ಉದಕಾಭಿಮಾನಿ ವಾಯುವಿನಲ್ಲಿ ಲಯ ಹೊಂದುವನು. ರುದ್ರ ಪವನರು ಅವರಿಗಿಂತ ಸ್ವೋತ್ತಮರಾದ ಶ್ರೀರಮಾಧೀನತ್ವ ಐದುವರು. ಶ್ರೀಲಕ್ಷ್ಮೀದೇವಿ ಸಕಲ ದೇವತೆಗಳಿಂದೊಡಗೂಡಿ ಸರ್ವೋತ್ತಮನಾದ ಮಧುಸೂದನನಾಮಕ ಶ್ರೀಪರಮಾತ್ಮನನ್ನು ಸೇರುವಳು. ||೯||

### ಪದ್ಯ ೧೦

**ಮೂಲ**

**ಜಾಲಿತೊಪ್ಪಲಜಾವಿಗಳು ಮೆ |**
**ದ್ದಾಲಯುದಿ ಸ್ವೇಚ್ಛಾನುಸಾರದಿ |**
**ಪಾಲಗರೆವಂದದಲಿ ಲಕುಮೀರಮಣ ತನ್ನವರ ||**
**ಕೀಳುಕರ್ಮವ ಸ್ವೀಕರಿಸಿ ತ |**
**ನ್ನಾಲಯುದೊಳಿಟ್ಟವರ ಪೊರೆವ ಕೃ |**
**ಪಾಳು ಕಾಮದ ಕೈರವದಳ ಶ್ಯಾಮ ಶ್ರೀರಾಮ || ||೧೦||**

**ಅವತರಣಿಕೆ**

ಲಕ್ಷ್ಮೀರಮಣನು ತನ್ನ ಭಕ್ತರು ಅರ್ಪಿಸುವ ಕೀಳು ಕರ್ಮವನ್ನು ಸ್ವೀಕರಿಸಿ, ವೈಕುಂಠಾದಿ ತನ್ನ ಧಾಮಗಳಲ್ಲಿಟ್ಟು, ಅವರನ್ನು ಸಂರಕ್ಷಿಸುತ್ತಾನೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಅಜ**= ಮೇಕೆಗಳು (ಆಡುಗಳು), **ಅವಿಗಳು**= ಕುರಿಗಳು, **ಜಾಲಿ ತೊಪ್ಪಲ**= ಮಾರ್ಗದ ಬದಿಯಲ್ಲಿ ಬೆಳೆದಿರುವ, ಬೇಲಿಯ ಉದ್ದಕ್ಕೂ ಬೆಳೆದಿರುವ ಸಾಮಾನ್ಯವಾದ ಸೊಪ್ಪು, ಸದೆಗಳನ್ನು, **ಸ್ವೇಚ್ಛಾನುಸಾರದಿ**= ತಮ್ಮ ಇಚ್ಛಾನುಸಾರ, **ಮೆದ್ದು**= ತಿಂದು, **ಆಲಯುದಿ**= ತಮ್ಮ ಯಜ

ಮಾನನ ಮನೆಯಲ್ಲಿ, **ಪಾಲಗರೆವಂದದಲಿ**= ಹಾಲನ್ನು ಕರೆವೋಪಾದಿಯಲ್ಲಿ, **ಲಕುಮೀರಮಣ**= ಲಕ್ಷ್ಮೀಪತಿಯಾದ ಶ್ರೀಪರಮಾತ್ಮನು, **ತನ್ನವರ**= ಅಹಂಮಮತಾದಿ ರಹಿತರಾಗಿ, ಜ್ಞಾನ ಭಕ್ತಿ ವೈರಾಗ್ಯಗಳಿಂದ ಸಂಪನ್ನರಾಗಿ, ಸಾಧನ ಪೂರ್ತಿ ಮಾಡಿಕೊಂಡ ತನ್ನ ಭಗವದ್ಭಕ್ತರು ಮಾಡಿದ, **ಕೀಳುಕರ್ಮವ**= ಜಾಲಿ ತೊಪ್ಪಲುಗಳಿಗೆ ಸದೃಶವಾದ ಪಾಪಕರ್ಮಗಳನ್ನು, **ಸ್ವೀಕರಿಸಿ**= ತನಗರ್ಪಿಸಿದ ಕೀಳುಕರ್ಮಗಳನ್ನು ತನ್ನ ಕೃಪಾಕಟಾಕ್ಷವೀಕ್ಷಣದಿಂದ ಭಸ್ಮಗೊಳಿಸಿ, ಅವರನ್ನು ಪಾಪಗಳಿಂದ ನಿರ್ಲಿಪ್ತರನ್ನಾಗಿ ಮಾಡಿ, **ತನ್ನಾಲಯದೊಳಿಟ್ಟು**= ಮುಕ್ತಿಧಾಮಗಳಾದ ವೈಕುಂಠಾದಿ ತನ್ನ ಮಂದಿರದಲ್ಲಿಟ್ಟು, **ಅವರ**= ನಿಜಭಕ್ತರನ್ನು, **ಪೊರೆವ**= ನಿತ್ಯಾನಂದ ಸುಖಪ್ರದನಾಗಿ ಸಂರಕ್ಷಿಸುವನು. **ಕೃಪಾಳು**= ತನ್ನ ಭಕ್ತರ ಪಾಪಗಳನ್ನು ಗಣನೆಗೆ ತಾರದ ಕರುಣಾಮಯನು. **ಕಾಮದ**= ತನ್ನ ಅಪರೋಕ್ಷರೂಪವಾದ ಸಂದರ್ಶನ ಭಾಗ್ಯವನ್ನು ಅವರಿಗೆ ಕೊಡುವವನು. **ಕೈರವದಳಶ್ಯಾಮ**= ನೀಲಕಮಲದಂತೆ ವರ್ಣವುಳ್ಳ, **ಶ್ರೀರಾಮ**= ಲಕ್ಷ್ಮಿಯಲ್ಲಿ ರಮಣ ಮಾಡತಕ್ಕ ಕಾಂತಿಸಂಪನ್ನನಾದ ಸ್ವರಮಣನು. ||೧೦||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಕ್ತರು ಕೊಟ್ಟ ಪಾಪಕರ್ಮವ ಸ್ವೀಕರಿಸಿ ರಕ್ಷಿಸುತ್ತಾನೆಂದು ಹೇಳತಾರೆ.

ಮೇಕೆಗಳು, ಕುರಿಗಳು ಇವುಗಳಿಂದ ಕ್ಷೀರಾಪೇಕ್ಷಿಯಾದ ಪುರುಷ ಅಜ ಆವಿಗಳಿಗೆ ಜಾಲಿತೊಪ್ಪಲು ಆಹಾರತ್ವೇನ ಹಾಕತಾನೆ. ಅವುಗಳು ತಮ್ಮ ಇಚ್ಛಾನುಸಾರದಿ ಭಕ್ಷಿಸಿದವುಗಳಾಗಿ, ಮನೆಗೆ ಬಂದು ಮನೆ ಒಳಗೆ ಹಾಲು ಕರೆಯುವೋಪಾದಿಯಲ್ಲಿ, ಅಜ ಆವಿಗಳಿಗೆ ಸದೃಶನಾದ, ಲಕ್ಷ್ಮೀಪತಿಯಾದ, ಬಿಂಬರೂಪಿಯಾದ ಶ್ರೀನಾರಾಯಣದೇವರು, ಅಹಂ ಮಮತಾದಿಗಳ ತ್ಯಜಿಸಿ ಜ್ಞಾನ ಭಕ್ತಿ ವೈರಾಗ್ಯಗಳಿಂದ ಸಾಧನ ಪೂರ್ತಿ ಮಾಡಿಕೊಂಡು ಸ್ಥೂಲ ದೇಹಾಂತರ್ಗತನಾದ, ಬಿಂಬನಾದ ತನ್ನ ಅಪರೋಕ್ಷೀಕರಿಸಿಕೊಂಡವರ, ಜಾಲಿ

ತೊಪ್ಪಲಿಗೆ ಸದೃಶವಾದ ಪಾಪಕರ್ಮಗಳ ಸ್ವೀಕರಿಸಿ ಎಂದರೆ, ಅರ್ಪಣ ಮಾಡಿದ ಪಾಪಕರ್ಮಗಳ ಸ್ವೀಕಾರ ಮಾಡಿ, ತಲ್ಲೇಪವಿಲ್ಲದಂತೆ ಮಾಡಿ, ಅವಿ ಅಜಗಳು ಕ್ಷೀರ ಕರೆದೋಪಾದಿಯಲ್ಲಿ ಸುಖಫಲಗಳೆಂಬೋ ಕ್ಷೀರ ಕರೆದು, ಭೋಜನರೂಪವಾದ ತನ್ನ ವೈಕುಂಠಾಲಯದೊಳಿಟ್ಟು ಅಂಥಾವರನ್ನ ರಕ್ಷಿಸ ತಾನೆ. ಪರಮಾತ್ಮ ಎಂಥಾವನೆಂದರೆ, ತನ್ನ ನಂಬಿದ ಭಕ್ತರ ಪಾಪಗಳ ಗಣನ ಮಾಡದ ದಯಾಳು, ತನ್ನ ಅಪರೋಕ್ಷವನ್ನು ಅಪೇಕ್ಷಿಸಿದವರಿಗೆ ತನ್ನ ಸಂದರ್ಶನ ಕೊಡತಕ್ಕವ, ನೀಲೋತ್ಪಲದೋಪಾದಿಯಲ್ಲಿ ಶ್ಯಾಮವರ್ಣೋಪೇತನಾದವ, ಶ್ರೀರಾಮ = ಕಾಂತಿಸಂಪನ್ನನಾದ ಸ್ವರಮಣನೆಂದು ತಾತ್ಪರ್ಯ. ||೧೦||

## ಭಾವಪ್ರಕಾಶಿಕೆ

ಕುರಿಗಳು, ಮೇಕೆಗಳು ಅಡವಿಯಲ್ಲಿ ಜಾಲಿ (ಬೊಬ್ಬಳಿ) ತೊಪ್ಪಲನ್ನು ತಿಂದು ಮನೆಗೆ ಬಂದು ಹಾಲು ಕರೆಯುವುವು. ಎಮ್ಮೆ ಆಕಳುಗಳಂತೆ ಅವುಗಳಿಗೆ ಹತ್ತಿಯ ಬೀಜ ತವುಡು ಮೊದಲಾದುವುಗಳನ್ನು ಹಾಕದೆ, ಅಡವಿಯಲ್ಲಿ ಇರುವ ಅಲ್ಪವಾದ ಜಾಲಿ ತೊಪ್ಪಲನ್ನು ತಿಂದು ಹಾಲನ್ನು ಕೊಡುವುವು. ಅದರಂತೆ ಪರಮಾತ್ಮನು ಭಕ್ತರು ಮಾಡುವ ಅಲ್ಪವಾದ ಪೂಜಾದಿ ಕರ್ಮಗಳನ್ನು ಪ್ರಾಕೃತವಾದ ಅನ್ನೋದಕಗಳನ್ನು ಸ್ವೀಕರಿಸಿ, ಅದರ ಫಲರೂಪವಾಗಿ ಅಮೋಘವಾದ ಮುಕ್ತಿಯಲ್ಲಿ ಸ್ವರೂಪಾನಂದವನ್ನು ಕೊಟ್ಟು ರಕ್ಷಿಸುವನು. ||೧೦||

## ಭಾವದರ್ಪಣ

ನಾವು ಕೊಟ್ಟಂಥ ಕೆಟ್ಟ ಕರ್ಮವಾದರೂ ಸ್ವೀಕಾರ ಮಾಡಿ ಮಹಾಫಲ ಕೊಡುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ. ಜಾಲಿ ತೊಪ್ಪಲೇತಿ. ಅಜ= ಮೇಕೆ, ಅವಿ= ಕುರಿ. ||೧೦||

## ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ಜಾಲಿ ಇತಿ|| ಅತ್ರ ಧೇನುಪಾಲ ಇತಿ ಪೂರ್ವಂ ನಿದರ್ಶನೇ ಅಪಿ

ಯಥಾ ಗೌಃ ತೃಣಧಾನ್ಯಾದಿ ಭುಕ್ತ್ವಾ ಕ್ಷೀರವಹಾ ಭವೇತ್|| ಗವಾದಿ ಭಕ್ಷಿತಂ ವಸ್ತು ಕ್ಷೀರ ರಕ್ತಾದಿ ಭೇದತಃ|| ಯತ್ ತತ್ ಮಾಯಾ ಬಲಂ ವಿಷ್ಣೋಃ ಮಹಾಶಕ್ತೇಃ ಮಹಾತ್ಮನಃ|| ಇತಿ ವಿಷ್ಣುರಹಸ್ಯೇ । ಅವಿ ಮೇಷ ಕೀಳು ಕೆಟ್ಟ ||೧೦||

**ಕನ್ನಡಾರ್ಥ**

ಹಿಂದೆ ಗೋಪಾಲನು ಆಕಳ ಕಾಯುವವನು ಎಂದು ದೃಷ್ಟಾಂತವಾಗಿ ಹೇಳಿದ್ದರೂ ಸಹ ಈ ಧೃಷ್ಟಾಂತವನ್ನು ತೋರಿಸಿರುವದು ವಿಷ್ಣುರಹಸ್ಯವನ್ನ ಅನುಸರಿಸಲಿ ಎಂದು ತಿಳಿಯಬೇಕು. ಗೋವು ತೃಣಧಾನ್ಯಗಳನ್ನು ಮೇಯ್ದು ಹಾಲು ಬೆಣ್ಣೆಗಳನ್ನು ಕೊಡುವಂತೆ ಎಂದು ಒಂದು ನಿದರ್ಶನ. ಗೋವು ಮುಂತಾದವುಗಳು ಮೇಯ್ದ ಆಹಾರವು ಕ್ಷೀರ-ರಕ್ತ ಮುಂತಾದುವುಗಳಾಗು ವುದು ಅಚಿಂತ್ಯಶಕ್ತಿಸಂಪನ್ನ ನಾರಾಯಣನ ಮಾಯಾ ಇಚ್ಛಾ ಶಕ್ತಿಯ ವಿಲಾಸವೇ ಆಗಿದೆ ಎಂದು ವಿಷ್ಣುರಹಸ್ಯ ವಚನ. ||೧೦||

**ಶ್ರೀಗುರುಹೃದಯಪ್ರಕಾಶಿಕೆ**

ಸ್ವದೇಹಪೋಷಣೆರೂಪವಾದ ಭೋಜನಾದಿ ಕರ್ಮಗಳು ಲೌಕಿಕವಾದ್ದರಿಂದ ನಿಕೃಷ್ಟವಾದಾಗ್ಯೂ, ಶಾಸ್ತ್ರೋಕ್ತ ಭಾವನೆಯಿಂದ ದೇವರ ಪೂಜೆ ಎಂದು ಸ್ಮರಿಸಿ ಅರ್ಪಿಸುವವರಿಗೆ ಜ್ಞಾನದ್ವಾರಾ ಮೋಕ್ಷಫಲವಾಗುವುದೆಂದು ಸದೃಷ್ಟಾಂತ ಬೋಧಿಸುತ್ತಾರೆ, ಚಾಲಿ ಎಂದು. ಅಜಾವಿಗಳೆಂಬ ಮೇಕೆ ಕುರಿ ಮೊದಲಾದವುಗಳು ಜಾಲೀಸೊಪ್ಪು ಮೊದಲಾದ ಅಸಾರಪದಾರ್ಥಗಳನ್ನು ತಿಂದು ಮನೆಯಲ್ಲಿ ಯಥೇಚ್ಛವಾಗಿ ಕ್ಷೀರವನ್ನು ಕರೆಯುವ ಹಾಗೆ ಲಕ್ಷ್ಮೀಪತಿಯಾದ ದೇವರು ತನ್ನ ಭಕ್ತರು ಮಾಡಿ ಅರ್ಪಿಸುವ ಕೀಳುಕರ್ಮವನ್ನು ಸ್ವೀಕರಿಸಿ ಎಂದರೆ, ದೇಹಪೋಷಣಾತ್ಮಕ ಭೋಜನಾದಿ ಲೌಕಿಕ ಕ್ರಿಯೆಗಳಲ್ಲೂ ದೇವರೇ ಸ್ವತಂತ್ರಪ್ರೇರಕ ಪೋಷಕ ಸ್ವಾನಂದಭೋಕ್ತನೆಂದು ತಿಳಿದು, ಸರ್ವವೂ ತದಧೀನವೆಂದು ಭಾವಿಸುವ ಸರ್ವಸಮರ್ಪಣೆ ಎಂಬ ಕ್ರಿಯಾಫಲ ಅಂಗೀಕರಿಸಿ ಜ್ಞಾನದ್ವಾರ ತನ್ನಾಲಯವೆಂಬ ವೈಕುಂಠಾದಿಲೋಕಗಳಲ್ಲಿ ಆ

ಭಕ್ತರನ್ನು ಇಟ್ಟು ರಕ್ಷಿಸುವನು. ಆದ್ದರಿಂದ ಕೃಪಾಳು, ಭಕ್ತರಿಗೆ ಇಷ್ಟಪ್ರದ, ಕೈರವದಳಶ್ಯಾಮ ಎಂದರೆ ಕೈರವವೆಂಬ ಕನ್ನೈದಿಲೆದಳದಂತೆ ಅಪ್ರಾಕೃತವರ್ಣನಾದ ಶ್ರೀರಾಮ ಎಂಬುದರಿಂದ, ಶ್ರೀರಾಮಚಂದ್ರರೂಪದಿಂದ ಶಬರಿಕೊಟ್ಟ ಬದರಿಫಲಾದಿಗಳ ನಿಮಿತ್ತಮಾಡಿ, ಅವಳಿಗೆ ಸದ್ಗತಿಕೊಟ್ಟನೆಂಬ ಶಾಸ್ತ್ರವು ಇದಕ್ಕೆ ಸಾಕ್ಷಿ ಎಂದು ಭಾವವು. ||೧೦||

## ಸರ್ವ ವ್ಯಾಖ್ಯಾನಸಾರಸಂಗ್ರಹ

ಮೇಕೆ, ಆಡು ಮುಂತಾದ ಪ್ರಾಣಿಗಳಿಗೆ ಅಜ ಎಂದು ಹೆಸರು. ಕುರಿಗಳಿಗೆ ಆವಿ ಎಂದು ಹೆಸರು.

ಅಜ, ಆವಿ ಮುಂತಾದ ಪ್ರಾಣಿಗಳು, ಮಾರ್ಗದಲ್ಲಿ ಬೆಳೆದಿರುವ ಸೊಪ್ಪು ಸದೆಗಳನ್ನು ತಿನ್ನುವುವು.

ಅಜಾವಿಗಳು ಜಾಲಿತೊಪ್ಪಲುಗಳನ್ನು ಹೊಟ್ಟೆ ತುಂಬಾ ತಿಂದು, ಯಥೇಚ್ಛವಾಗಿ ಪುಷ್ಟಿಕರವಾದ ಹಾಲನ್ನು ಕರೆಯುವುವು. ಅದರಂತೆ ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಯ ಪತಿಯಾದ ಶ್ರೀಹರಿಯು ತನ್ನ ಅಂತರಂಗ ಭಕ್ತರು ಮಾಡಿ, ತನಗರ್ಪಿಸಿದ ಕೀಳುಕರ್ಮವನ್ನು ಸಂತೋಷದಿಂದ ಸ್ವೀಕರಿಸುವನು. ಅಂತರಂಗಭಕ್ತರು ಸಕಲ ಕರ್ಮಗಳನ್ನೂ ಬಿಂಬನಾದ ಆ ಜಗದಂಬಾರಮಣನೇ ಮಾಡಿ ಮಾಡಿಸುತ್ತಿರುವನೆಂಬ ಉತ್ತಮ ಜ್ಞಾನಾನುಸಂಧಾನವುಳ್ಳವರು. ಬಿಂಬಕ್ರಿಯಾಭಾವದಿಂದ ತನ್ನ ಭಕ್ತರು ಅರ್ಪಿಸಿದ ಅಲ್ಪವಾದ ಕರ್ಮಗಳನ್ನು ಸರ್ವಸಾರಭೋಕ್ತನಾದ ಆ ಸರಸಿಜಾಕ್ಷನು ಸ್ವೀಕರಿಸಿ, ಅವರ ಪಾಪಕರ್ಮಗಳನ್ನು ತನ್ನ ಕೃಪಾಕಟಾಕ್ಷವೀಕ್ಷಣದಿಂದ ನಾಶಗೊಳಿಸಿ, ಅವರನ್ನು ಪಾಪಲೇಪರಹಿತರನ್ನಾಗಿ ಮಾಡಿ, ಪವಿತ್ರೀಗೊಳಿಸುವನು, ವೈಕುಂಠಾದಿ ತನ್ನ ಮುಕ್ತಿಧಾಮಗಳಲ್ಲಿ ಇಟ್ಟು ಅವರ ಅನಾದಿಕರ್ಮವನ್ನು ಕಳೆದು ನಿತ್ಯಾನಂದ ರೂಪವಾದ ಮುಕ್ತಿಸುಖವನ್ನು ಕರುಣಿಸುವನು. ||೧೧||

ಶ್ರೀರಾಮನೆಂದರೆ ದಶರಥಪುತ್ರನಾದ ಕೌಸಲ್ಯಾರಾಮನೆಂದು ರೂಢ್ಯರ್ಥ- ಶ್ರೀರಾಮಚಂದ್ರನು ಬೇಡರ ಜಾತಿಯವನಾದ ಗುಹನ ಭಕ್ತಿಗೆ ಒಲಿದು, ಅವನಿಗೆ ಸಹಭೋಗ ಕೊಟ್ಟ. ನೀಚಕುಲೋತ್ಪನ್ನಳಾದ ಶಬರಿಯ ಭಕ್ತಿ ಭಾವಕ್ಕೆ ಮೆಚ್ಚಿ ಅವಳು ನೀಡಿದ ಫಲಗಳನ್ನು ತಿಂದು, ಸದ್ಗತಿ ಪಾಲಿಸಿದ. ಶರಣಾಗತನಾದ ರಕ್ಕಸಕುಲಜಾತನಾದ ವಿಭೀಷಣನನ್ನು ಸಂತೈಸಿ, ಅವನಿಗೆ ಲಂಕಾರಾಜ್ಯಾಭಿಷೇಕಗೈದ. ಈ ಹಲವಾರು ಪ್ರಸಂಗಗಳಿಂದ ಶ್ರೀರಾಮನು ಕಾಮದನು. ಈ ಉಪಮಾನದಲ್ಲಿ ಜಾಲಿತೊಪ್ಪಲುಗಳು ಕೀಳುಕರ್ಮಗಳು. ಶ್ರೀಪರಮಾತ್ಮನು ಉತ್ತಮ ಕ್ಷೀರವನ್ನು ಕರೆಯುವ ಅಜಾವಿಗಳ ಸದೃಶನು. ಆಲಯವೆಂದರೆ, ತನ್ನಾಲಯವಾದ ವೈಕುಂಠಾದಿ ಮುಕ್ತಿಧಾಮಗಳು. ಸಾರ ಭೂತವಾದ ಕ್ಷೀರವು ನಿತ್ಯಾನಂದರೂಪವಾದ ಮುಕ್ತಿರಸವು. ||೧೦||

## ಪದ್ಯ ೧೧

**ಮೂಲ**

**ಶಶಿ ದಿವಾಕರ ಪಾವಕರೊಳಿಹ ।**
**ಅಸಿತ ಸಿತ ಲೋಹಿತಗಳಲಿ ಶಿವ ।**
**ಶ್ವಸನ ಭಾರ್ಗವಿ ಮೂವರೊಳು ಶ್ರೀಕೃಷ್ಣ ಹಯವದನ ॥**
**ವಸುಧಿಪಾರ್ದನ ತ್ರಿವೃತು ಎನಿಸಿ ।**
**ವಸುಮತಿಯೊಳನ್ನೋದಕಾನಳ ।**
**ಪೆಸರಿನಿಂದಲಿ ಸರ್ವಜೀವರ ಸಲಹುವನು ಕರುಣಿ ॥ ||೧೧||**

**ಅವತರಣಿಕೆ**

ತ್ರಿವೃತುನಾಮಕನಾದ ಶ್ರೀಹರಿಯನ್ನು ಚಿಂತಿಸಬೇಕೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಕರುಣಿ** = ದಯಾವಂತನಾದ ಶ್ರೀಪರಮಾತ್ಮನು, **ವಸುಮತಿಯೊಳು**

= ಭೂಮಿಯಲ್ಲಿ ಸರ್ವಪ್ರಾಣಿಗಳ ದೇಹ ಸಂರಕ್ಷಣಾರ್ಥವಾಗಿ ಸೃಷ್ಟಿಸಿರುವ, **ಅನ್ನ**= ವ್ರೀಹ್ಯಾದಿ, ತೃಣಾದಿ, ಫಲಾದಿ ಆಹಾರರೂಪವಾದ ಅನ್ನದಲ್ಲಿ, **ಅಸಿತ**= ಮಧ್ಯದಲ್ಲಿ ಕಪ್ಪಾದ ಕಳಂಕಯುಕ್ತನಾದ, **ಶಶಿ**= ಮೊಲದ ಸಾಂಕೇತವನ್ನು ಹೊಂದಿರುವ ಚಂದ್ರ, **ಶ್ರೀಕೃಷ್ಣ**= ಅವನಂತರ್ಗತನಾಗಿ ಕಾಂತಿಸಂಪನ್ನನಾದ ಶ್ರೀಕೃಷ್ಣನು, **ಉದಕ**= ಪಾನ ಮಾಡತಕ್ಕ ಉದಕದಲ್ಲಿ **ಸಿತ**=ಶುಭ್ರವರ್ಣ ವಿಶಿಷ್ಟನಾದ, **ದಿವಾಕರ**= ಸೂರ್ಯ, **ಶ್ವಸನ**= ಶ್ರೀವಾಯುದೇವರು, **ಹಯವದನ**= ತದಂತರ್ಗತನಾಗಿ ಹಯಗ್ರೀವರೂಪೀ ಶ್ರೀಪರಮಾತ್ಮನು, **ಅನಳ**= ತೇಜಃ ಪ್ರಾಚುರ್ಯವಾದ ತುಪ್ಪ, ಎಣ್ಣೆ ಇತ್ಯಾದಿ ವಸ್ತುಗಳಲ್ಲಿ, **ಲೋಹಿತ**= ರಕ್ತವರ್ಣ ವಿಶಿಷ್ಟನಾದ ಅಗ್ನಿದೇವರು **ವಸುಧಿಪಾರ್ದನ**= ದುಷ್ಟರಾಜರನ್ನು ಸಂಹರಿಸಿದ ಶ್ರೀಪರಶುರಾಮದೇವರು (ವಸುಧಿ-ಭೂಮಿ. ವಸುಧಿಪ-ಭೂಪಾಲಕರಾದ ನೃಪರು. ಅರ್ದನ-ಸಂಹಾರಕ). ಪೂರ್ವೋಕ್ತ ಮೂರು ಆಹಾರ ವಸ್ತುಗಳಲ್ಲಿ, **ತ್ರಿವೃತು ಎನಿಸಿ**= ಮೂರು ಪ್ರಕಾರವಾದ ಅಂತರ್ಯಾಮಿ ಎಂದು ಕರೆಯಿಸಿದವನಾಗಿ (ಕೃಷ್ಣ-ಹಯವದನ-ಪರಶುರಾಮ) **ಪೆಸರಿನಿಂದಲಿ**= ಅನ್ನ-ಉದಕ-ಅನಳ ಎಂಬ ಆಯಾಯಾ ಹೆಸರುಗಳಿಂದಲೇ, **ಸರ್ವಜೀವರ**=ಜಗತ್ತಿನಲ್ಲಿರುವ ಸಕಲ ಪ್ರಾಣಿವರ್ಗವನ್ನು, **ಸಲಹುವನು** = ದೇಹಪೋಷಣಾದ್ವಾರಾ ಸಂರಕ್ಷಿಸುವನು. ||೧೧||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನ್ನದ್ವಾರಾ ಸರ್ವಪ್ರಾಣಿಗಳ ಸಂರಕ್ಷಿಸುತ್ತಾನೆಂತ ಹೇಳತಾರೆ.

ಕರುಣಾಸಮುದ್ರನಾದ ಶ್ರೀಪರಮಾತ್ಮ ಭೂಮಿಯೊಳು ಸರ್ವಪ್ರಾಣಿಗಳ ರಕ್ಷಣಾರ್ಥವಾಗಿ, ಅನ್ನಾದಿ ಮೂರು ದ್ರವ್ಯಗಳ ಸೃಷ್ಟಿ ಮಾಡಿದವನಾಗಿದ್ದಾನೆ. ಅವು ದಾವುವೆಂದರೆ, ಸರ್ವಪ್ರಾಣಿಗಳಿಗೆ ಜೀವನೋಪಾಯವಾದ **ವ್ರೀಹ್ಯಾದಿ ತೃಣಾದಿ ನಾನಾ ಜಾತಿ ಅನ್ನಗಳ** (ಇದರಲ್ಲಿ), ಮಧ್ಯದಲ್ಲಿ ಕಪ್ಪಾದ

ಕಳಂಕ ಉಳ್ಳ ಚಂದ್ರದೇವರು, ರುದ್ರದೇವರು ಕಾಂತಿ ಸಂಪನ್ನನಾದ ಶ್ರೀಕೃಷ್ಣದೇವರು, ಪಾನಮಾಡತಕ್ಕ ಉದಕ (ಇದರಲ್ಲಿ) ಶುಭ್ರವರ್ಣ ವಿಶಿಷ್ಟರಾದ ಸೂರ್ಯದೇವರು, ವಾಯುದೇವರು, ತುರಗಗ್ರೀವನಾದ ಶ್ರೀಪರಮಾತ್ಮ, ತೇಜಃ ಪ್ರಾಚುರ್ಯವಾದ ಘೃತ ತೈಲಾದಿಗಳು ಇದರಲ್ಲಿ ರಕ್ತವರ್ಣ ವಿಶಿಷ್ಟನಾದ ಅಗ್ನಿದೇವರು, ಲಕ್ಷ್ಮೀದೇವಿಯರು, ಭೂಪಾಲಕರಾದ ದುಷ್ಟರಾಜರನ್ನ ಸಂಹಾರ ಮಾಡಿದ ಪರಶುರಾಮದೇವರು, ಅನ್ನೋದಕಾದಿ ಮೂರರಲ್ಲಿ ವಿದ್ಯಮಾನರಾಗಿ ಇರತಕ್ಕ ಮೂರುವಿಧರಾದ ಅಭಿಮಾನಿಗಳೊಳು, ಪೂರ್ವೋಕ್ತ ಕೃಷ್ಣಾದಿರೂಪಗಳಿಂದ, ಮೂರು ಪ್ರಕಾರ ಅಂತರ್ಯಾಮಿ ಎಂತ ಕರಸಿದವನಾಗಿ, ಅನ್ನೋದಕಾದಿ ಮೂರು ಪೆಸರಿನಿಂದ ಕರೆಸುತ್ತ ಸರ್ವಪ್ರಾಣಿಗಳ ಸಂರಕ್ಷಣ ಮಾಡುವನು. ||೧೦||

## ಭಾವಪ್ರಕಾಶಿಕೆ

ಪ್ರಾಣಿಗಳು ಪ್ರಾಣಧಾರಣೆ ಮಾಡಬೇಕಾದರೆ ಮುಖ್ಯವಾದುವು ಅನ್ನ, ಉದಕ, ಅಗ್ನಿ ಇವು ಮೂರು. ಇವುಗಳಲ್ಲಿ ಅನ್ನಕ್ಕೆ ಉಪಯುಕ್ತವಾದ ವ್ರೀಹಿ ಅಂದರೆ ಭತ್ತ, ಗೋಧಿ ಮೊದಲಾದ ಸಸ್ಯಗಳು ವೃದ್ಧಿಯಾಗಬೇಕಾದರೆ ಚಂದ್ರನಿಂದಾಗಬೇಕು. ಔಷಧಿ ಮೊದಲಾದವುಗಳಿಗೆ ಚಂದ್ರನನ್ನೇ ರಾಜನನ್ನಾಗಿ ಮಾಡಿದರೆಂದು ಹರಿವಂಶದಲ್ಲಿ ಸ್ಪಷ್ಟ ಮಾಡಿರುವರು. ಅದರಲ್ಲೂ ಮುಖ್ಯವಾದದ್ದು ಚಂದ್ರನ ಮಧ್ಯಭಾಗದಲ್ಲಿರುವ ಭೂಚ್ಛಾಯಾರೂಪವಾದ ಕಪ್ಪು. ಅದಕ್ಕಭಿಮಾನಿಗಳು ರುದ್ರದೇವರು. ಅವರಿಗೆ ನಿಯಾಮಕನು ಶ್ರೀಕೃಷ್ಣರೂಪಿಯಾದ ಪರಮಾತ್ಮ. ಸೂರ್ಯನ ಬಿಳುಪಾದ ಪ್ರಕಾಶದಿಂದ ಉದಕವು ಹುಟ್ಟುವುದು. ಸಮುದ್ರಾದಿಗತ ಉದಕವು ಸೂರ್ಯಕಿರಣದಿಂದ ಆವಿಯಾಗಿ ಮೇಘರೂಪವಾಗಿ ಮಳೆಗರೆದು ಭೂಮಿಯಲ್ಲಿ ಉದಕವಾಗುವ ಕಾರಣ ಸೂರ್ಯನಲ್ಲಿರುವ ಬಿಳಿಯ ಬಣ್ಣವೇ ಉದಕಕ್ಕೆ ಮೂಲಕಾರಣ. ಇದಕ್ಕಭಿಮಾನಿಗಳು ವಾಯುದೇವರು. ಅವರಿಗಂತರ್ಯಾಮಿ ಹಯಗ್ರೀವರೂಪಿಯು. ದೇಹಗತ ಅಗ್ನಿಸಂಬಂಧವಾದ ಕೆಂಪುಬಣ್ಣಕ್ಕಭಿಮಾನಿ ರಮಾದೇವಿಯರು. ತದಂತರ್ಯಾಮಿ ಜನಾರ್ದನರೂಪಿಯು ಕರುಣಾಸಮುದ್ರನಾದ ಶ್ರೀಹರಿಯು ಹೀಗೆ

ಅನ್ನೋದಕಗಳಿಗೆ ಅಭಿಮಾನಿಗಳಾದ ಶಿವ, ವಾಯು ಲಕ್ಷ್ಮೀದೇವಿಯರ ಅಂತರ್ಗತನಾಗಿ ಅನ್ನ, ಉದಕ,ಅಗ್ನಿ ಎಂಬ ಹೆಸರಿನಿಂದ ತ್ರಿವೃತ್ ಎಂದರೆ ಮೂರು ರೂಪದಿಂದ ವಾಸಮಾಡುವವನೆಂದೆನಿಸಿ ರೂಪತ್ರಯಗಳಿಂದ ಸರ್ವಪ್ರಾಣಿಗಳನ್ನು ರಕ್ಷಿಸುವನು. ||೧೧||

## ಭಾವದರ್ಪಣ

ಅಸಿತ ಎಂದರೆ ತಮೋಗುಣ. ಸಿತ ಎಂದರೆ ಸತ್ವಗುಣ. ಲೋಹಿತ ಎಂದರೆ ರಜೋಗುಣ. ಇವಕ್ಕೆ ಅಮುಖ್ಯಾಭಿಮಾನಿಯಾದ ಚಂದ್ರಸೂರ್ರಾಗ್ನಿಗಳಲ್ಲಿ ರುದ್ರ, ವಾಯು, ಲಕ್ಷ್ಮೀ ಇವರಂತರ್ಯಾಮಿ ಶ್ರೀಕೃಷ್ಣ, ಹಯಗ್ರೀವ, ಪರಶುರಾಮ ಈ ಮೂರ್ತಿಗಳು ತ್ರಿವೃತ್ ಎಂದರೆ ಈ ತ್ರಿಗುಣದಲ್ಲಿ ನಿಂತು ರಕ್ಷಿಸುತ್ತಾರೆಂದು ಹೇಳುತ್ತಾರೆ, ಶಶೀತಿ. ||೧೧||

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶಶಾಂಕಸ್ಯ ಓಷಧೀಶತ್ವಾತ್ ಸೂರ್ಯಸ್ಯ ಅಬ್ಜನಕತ್ವಾತ್ ತತ್ಸ್ಥಿತಿಂ ವಕ್ತುಂ ಆಹ ಶಶಿ ಇತಿ || ಅಸಿತಂ ಶಶಿಗತಮ್|| ವಸುಧಾಧಿಪಾರ್ದನ ಭಾರ್ಗವಃ|| ||೧೧||

## ಕನ್ನಡಾರ್ಥ

ಚಂದ್ರಮನು ವ್ರೀಹಿ ಮುಂತಾದ ಸಕಲ ವನಸ್ಪತಿಗೆ ಕಾರಣನು. ಸೂರ್ಯನು ಸಮುದ್ರದಿಂದ ಮೇಘಗಳನ್ನು ನಿರ್ಮಿಸಿ ಮಳೆಗೆ ಕಾರಣನಾಗಿರುತ್ತಾನೆ. ಆದುದರಿಂದ ಈ ಸೂರ್ಯ ಚಂದ್ರ ಅಗ್ನಿಗಳಲ್ಲಿರುವ ಪರಮಾತ್ಮನ ರೂಪಗಳ ಅಧಿಷ್ಠಾನವಿರುವುದರಿಂದಲೇ ಸೂರ್ಯ ಮುಂತಾದವರಿಂದ ಈ ಕಾರ್ಯಗಳಾಗುವವೆಂದು ತಿಳಿಸುತ್ತಾರೆ ಶಶಿ ದಿವಾಕರ ಎಂಬ ಪದ್ಯದಿಂದ. ಅಸಿತ ಕಪ್ಪು ಕಲಂಕವು ಚಂದ್ರಮನಲ್ಲಿ ಇರುತ್ತದೆ. ವಸುಧಾಧಿಪಾರ್ದನ-ಕ್ಷತ್ರಿಯರನ್ನು ಸಂಹರಿಸಿದ ಪರಶುರಾಮ. ||೧೧||

## ಶ್ರೀಗುರುಹೃದಯ ಪ್ರಕಾಶಿಕೆ

ದೇಹವು ತೇಜಸ್ಸು ಉದಕ ಅನ್ನ ಇದರ ವಿಕಾರವಾದ್ದರಿಂದ ಇದರಲ್ಲಿ, ಇವುಗಳ ಅಭಿಮಾನಿಗಳಲ್ಲಿ ಸಹ ತ್ರಿವೃತು ಎಂದಿರುವ ದೇವರ ರೂಪೋಪಾಸನೆ ತಿಳಿಸುತ್ತಾರೆ ಶಶಿ ಎಂದು. ಶಶಿ ಎಂಬ ಚಂದ್ರಮಂಡಲದಲ್ಲಿರುವ ಅಸಿತವೆಂಬ ಭೂಛಾಯಾರೂಪ ಕಪ್ಪಿನಲ್ಲಿ ಶಿವನು ಮುಖ್ಯಾಭಿಮಾನಿ, ತನ್ನಿಯಾಮಕ ಕೃಷ್ಣ ರೂಪ ಒಂದು, ದಿವಾಕರ ಎಂಬ ಸೂರ್ಯನ ಶಿತವೆಂಬ ಶುಭ್ರಪ್ರಕಾಶದಲ್ಲಿ, ಉದಕ ಸೃಷ್ಟಿಕರ್ತನಿಗಿಂತ ಮುಖ್ಯಾಭಿಮಾನಿಯಾಗಿ ಪ್ರಾಣ, ತನ್ನಿಯಾಮಕ ಹಯಗ್ರೀವರೂಪ ಒಂದು, ಪಾವಕನೆಂಬ ಅಗ್ನಿಯ ಲೋಹಿತವೆಂಬ ಕೆಂಪು ಬೆಳಕಿನಲ್ಲಿ ಮುಖ್ಯಾಭಿಮಾನಿ ಪಾಕಕರ್ತೃ ಭಾರ್ಗವಿ ಎಂಬ ಲಕ್ಷ್ಮಿಯಲ್ಲಿ ವಸುಧಾಧಿಪರೆಂಬ ದುಷ್ಟಕ್ಷತ್ರಿಯರನ್ನು ಕೊಂದ ಪರಶುರಾಮ ಒಂದು ಸಹ ಮೂರುರೂಪದಿಂದ ತ್ರಿವೃತು ಎಂತಲೂ, ಅನ್ನ ಉದಕ ಅಗ್ನಿ ಎಂಬ ನಾಮ ಧರಿಸಿ ದೇವರು ಸರ್ವಜೀವರ ದೇಹ ಪೋಷಿಸುವನು. ಆದ್ದರಿಂದ ಕರುಣಾಳು. ||೧೧||

# ಸರ್ವವ್ಯಾಖ್ಯಾನಸಾರಸಂಗ್ರಹ

ದೇಹಪೋಷಣೆಗೆ ಬೇಕಾದ ಅನ್ನ, ಉದಕ, ತೇಜಸ್ಸು ಇವುಗಳ ಅವಾಂತರಾಭಿಮಾನಿ ದೇವತೆಗಳು ತದಂತರ್ಗತ ತ್ರಿವೃತುನಾಮಕನಾದ ಶ್ರೀಪರಮಾತ್ಮನ ರೂಪತ್ರಯಗಳ ವಿಚಾರವನ್ನು ತಿಳಿಸುತ್ತಾರೆ.

ಅನ್ನವು ಪೃಥಿವೀಸಂಬಂಧವಾದದ್ದು. ಧಾನ್ಯಗತ ಆಹಾರವು ಅನ್ನವು. ಚಂದ್ರನು ಅನ್ನಾಭಿಮಾನಿಯು. ಚಂದ್ರನ ಅಮೃತಕಿರಣಗಳಿಂದ ಧಾನ್ಯಗಳಲ್ಲಿ ರಸವು ತುಂಬಿ, ಆಹಾರ ಉತ್ಪತ್ತಿಯಾಗುವುದು. ಧಾನ್ಯಗತ ಆಹಾರವಸ್ತುಗಳ ಉತ್ಪತ್ತಿಗೆ ಚಂದ್ರನ ಅಮೃತಕಿರಣಗಳೇ ಕಾರಣ. ಇದರಿಂದ ಚಂದ್ರನು ಅನ್ನಕ್ಕೆ ಅಭಿಮಾನಿಯು.

ಚಂದ್ರಮಂಡಲದ ಮಧ್ಯದಲ್ಲಿ ಕಪ್ಪಾದ ಕಲೆಯಿದೆ. ಇದನ್ನು ಪ್ರಸಕ್ತ

ಪದ್ಯದಲ್ಲಿ ಅಸಿತ ಎಂದಿದ್ದಾರೆ. ಈ ಕಲೆಯು ಮೊಲದ ಆಕಾರದಲ್ಲಿರುವುದ ರಿಂದ ಚಂದ್ರನಿಗೆ ಶಶಿ ಎಂದು ಹೆಸರು. ಶಶ ಎಂದರೆ ಮೊಲವೆಂಬರ್ಥ.

ಅಸಿತ ವರ್ಣವಿಶಿಷ್ಟವಾದ ಈ ಕಲೆಗೆ ಚಂದ್ರಶೇಖರನಾದ ಶಿವನು ಅಭಿಮಾನಿಯಾಗಿದ್ದಾನೆ.

ಆ ಶಿವನ ಅಂತರ್ಗತನಾದ ಭಗವದ್ರೂಪವು ಶ್ರೀಕೃಷ್ಣನು. ಪೃಥ್ವೀ ತತ್ತ್ವಕ್ಕೆ ಶ್ರೀಕೃಷ್ಣನು ಪರಮ ಮುಖ್ಯಾಭಿಮಾನಿ. ಕೃಷ್ಣನ ವರ್ಣ ಎಂದರೆ ಕಪ್ಪು. ಇದು ತಮೋಗುಣ ಸಾಂಕೇತವು. ಅಂದರೆ ಅನ್ನಾಭಿಮಾನಿಯಾದ ಚಂದ್ರಗತ ಅಸಿತ ವರ್ಣದಲ್ಲಿ ರುದ್ರಾಂತರ್ಗತ ಶ್ರೀಕೃಷ್ಣನ ರೂಪೋಪಾಸನೆ.

ಸೂರ್ಯನು ಉದಕಾಭಿಮಾನಿಯು. ಸೂರ್ಯನ ಪ್ರಖರವಾದ ಕಿರಣ ಗಳಿಂದ ಸಮುದ್ರಾದಿ ಜಲಾಶಯಗಳಿಂದ ನೀರು ಕಾದು, ಆವಿಯಾಗಿ ಮೇಲ ಕ್ಕೇರಿ, ಮೇಘಗಳಾಗಿ, ಆದರಿಂದ ನೀರು ಮಳೆಯ ರೂಪದಲ್ಲಿ ಭೂಮಿಗೆ ಸುರಿಯುವುದು. ಇದರಿಂದ ಸೂರ್ಯನು ಉದಕಾಭಿಮಾನಿಯು.

ಸೂರ್ಯನ ಪ್ರಖರವಾದ ಬೆಳಕು ಬಿಳುಪು ಬಣ್ಣ. ಆ ಸೂರ್ಯನ ಸಿತವರ್ಣವಿಶಿಷ್ಟವಾದ ಕಾಂತಿಗೆ ಶ್ರೀವಾಯುದೇವರು ಅವಾಂತರಾಭಿಮಾನಿ ಗಳು, ಆ ಶ್ವಸನಾಂತರ್ಗತನಾಗಿ ಹಯವದನರೂಪವು. ಪರಮಮುಖ್ಯ ವೃತ್ತಿಯಿಂದ ಪ್ರವರ್ತಿಸುವುದು. ಹಯಗ್ರೀವ ದೇವರ ವರ್ಣ ಅಚ್ಚ ಬಿಳುಪು. ಇದು ಸತ್ವಗುಣ ಸಾಂಕೇತವು.

ಶರೀರದಲ್ಲಿ ರಕ್ತ ಸಂಚಲನೆಯ ದ್ವಾರಾ, ಶಕ್ತಿಯ ಹಂಚಿಕೆ. ಇದಕ್ಕೆ ಮೂಲ ಕಾರಣ ತೇಜಸ್ಸು. ಇದು ನಾವು ಸೇವಿಸುವ ಘೃತ, ತೈಲಾದಿಗಳ ರೂಪದಲ್ಲಿ ಜೀರ್ಣವಾಗಿ ದೊರೆಯುವುದು. ಇದಕ್ಕೆ ತೇಜೋಭಿಮಾನಿಯಾದ ಅಗ್ನಿಯು ಅವಾಂತರಾಭಿಮಾನಿ. ಪಾವಕನು ಕೆಂಪುವರ್ಣ ವಿಶಿಷ್ಟನು. ಇದಕ್ಕೆ ಶ್ರೀಲಕ್ಷ್ಮಿಯು ಅಭಿಮಾನಿ. ಭೃಗುವಂಶದಲ್ಲಿ ಉದ್ಭವಳಾದ್ದರಿಂದ ಶ್ರೀಲಕ್ಷ್ಮಿ ದೇವಿಗೆ ಭಾರ್ಗವಿ ಎಂತ ನಾಮ. ಶ್ರೀಲಕ್ಷ್ಮಿದೇವಿಯ ಅಂತರ್ಗತ ಭಗವ

ದ್ರೂಪವು ಭಾರ್ಗವನು. ಜಮದಗ್ನಿ ಪುತ್ರನಾದ ಪರಶುರಾಮದೇವರು. ಪರಶುರಾಮದೇವರ ಪತ್ನಿ ಲಕ್ಷ್ಮಿಯು ನಾಮ ಹರಿಣಿ. ಅವಳೇ ಭಾರ್ಗವಿಯು, ವಸು-ಭೂಮಿ, ವಸುಪ-ಭೂಪಾಲಕರಾದ ರಾಜರು. ಆರ್ದನ-ದುಷ್ಟರಾದ ಕ್ಷತ್ರಿಯರನ್ನು ಶ್ರೀಪರಶುರಾಮದೇವರು ಗಂಡುಗೊಡಲಿಧಾರಿಯಾಗಿ ಭೂಮಿಯನ್ನು ೨೧ಸಾರಿ ಸಂಚರಿಸಿ, ಸಂಹರಿಸಿದನು. ದುಷ್ಟ ಕ್ಷತ್ರಿಯರ ಸಂಹಾರಕನಾದ್ದರಿಂದ ಭಾರ್ಗವನು ವಸುಧಿಪಾರ್ದನನು.

ಈ ರೀತಿಯಲ್ಲಿ ಶ್ರೀಕೃಷ್ಣ-ಹಯವದನ-ಭಾರ್ಗವ ಎಂಬ ರೂಪತ್ರಯಗಳಿಂದ ಶ್ರೀಪರಮಾತ್ಮನು ಅನ್ನೋದಕ ಪಾವಕರಲ್ಲಿ ಇದ್ದು, ಶರೀರದ ಪೋಷಣೆಯನ್ನು ಮಾಡುವುದರಿಂದ ಅವನ ಈ ರೂಪತ್ರಯಗಳಿಂದ ಅವನಿಗೆ ತ್ರಿವೃತ್ ಎಂದು ಹೆಸರು.

ಈ ಭೂಮಿಯಲ್ಲಿ ತ್ರಿವೃತ್‌ನಾಮಕನಾಗಿ ಶ್ರೀಪರಮಾತ್ಮನು ಚಂದ್ರ-ಸೂರ್ಯ-ಅಗ್ನಿ ಇವರಿಗೆ ನಿಯಾಮಕರಾದ ಶಿವ-ಶ್ವಸನ-ಭಾರ್ಗವಿಯರೊಳಗೆ ಅಂತರ್ಯಾಮಿರೂಪದಿಂದಿದ್ದು, ಅನ್ನ, ಉದಕ, ತೇಜಸ್ಸನ್ನು ಶರೀರಕ್ಕೆ ಉಪಚಯಮಾಡಿ ಅನ್ನ-ಉದಕ-ಅನಳ ಎಂಬ ಹೆಸರಿನಿಂದಲೇ ಸಂರಕ್ಷಿಸುವನು. ||೧೧||

| ಕ್ರಮ ಸಂಖ್ಯೆ | ಆಹಾರ ದ್ರವ್ಯ | ದೇಹೋಪಚಯ | ಅವಾಂತರ ಅಭಿಮಾನಿ ದೇವತಾ | ವರ್ಣ | ಗುಣ ಸಾಂಕೇತ | ಮುಖ್ಯಾಭಿಮಾನಿ | ತ್ರಿವೃತ್ ನಿಯಾಮಕ ಭಗವದ್ರೂಪ |
|---|---|---|---|---|---|---|---|
| ೧ | ಅನ್ನ | ಪೃಥ್ವೀಸಂಬಂಧ ದೇಹಪೋಷಣೆ | ಚಂದ್ರ | ಕಪ್ಪು ಕಲೆ (ಅಸಿತವರ್ಣ) | ತಾಮಸ | ಶಿವ | ಶ್ರೀಕೃಷ್ಣ |
| ೨ | ಉದಕ | ದೇಹದಲ್ಲಿ ಆಹಾರದ ಸಮಾನ ಹಂಚಿಕೆ | ದಿವಾಕರ | ಶುಭ್ರವರ್ಣ (ಸಿತವರ್ಣ) | ಸಾತ್ವಿಕ | ಶ್ವಸನ (ವಾಯು) | ಶ್ರೀಹಯವದನ |
| ೩. | ತೇಜಸ್ಸು | ಶಕ್ತಿ ಪ್ರದತ್ವ (ಘೃತ, ತೈಲಾದಿ ಗಳ ದ್ವಾರಾ) | ಅಗ್ನಿ | ಕೆಂಪು (ಲೋಹಿತ ವರ್ಣ) | ರಾಜಸ | ಭಾರ್ಗವಿ (ಲಕ್ಷ್ಮೀ) | ಶ್ರೀಪರಶು ರಾಮ (ಭಾರ್ಗವ) |

### ಪದ್ಯ ೧೨

**ಮೂಲ**

**ದೀಪಕರದಲಿ ಪಿಡಿದು ಕಾಣದೆ ।**
**ಕೂಪದೊಳು ಬಿದ್ದಂತೆ ವೇದವು ।**
**ಹೋಪನಿಷದರ್ಥಗಳ ನಿತ್ಯದಿ ಪೇಳುವವರೆಲ್ಲ ॥**
**ಶ್ರೀ ಪವನಮುಖವಿನುತನಮಲ ಸು ।**
**ರೂಪಗಳ ವ್ಯಾಪಾರ ತಿಳಿಯದೆ ।**
**ಪಾಪಪುಣ್ಯಕೆ ಜೀವಕರ್ತೃವಕರ್ತೃ ಹರಿಯೆಂಬ ॥ ॥೧೨॥**

**ಅವತರಣಿಕೆ**

ಶ್ರೀಹರಿಯ ಸಕಲ ಕ್ರಿಯೆಗಳ ರಹಸ್ಯವನ್ನು ಅರಿಯದೇ ಪಾಪಪುಣ್ಯಾದಿ ಸಕಲ ಕರ್ಮಗಳಿಗೂ ಜೀವನೆ ಕರ್ತನೆಂದೂ ಶ್ರೀಹರಿಯು ಕರ್ತನಲ್ಲವೆಂದೂ ಹೇಳುವವರು ವಿದ್ವಾಂಸರಾದರೂ ಅನುಸಂಧಾನಜ್ಞಾನರಹಿತರೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ದೀಪ**= ಉರಿಯುತ್ತಿರುವ ದೀಪವನ್ನು (ಲಾಂದ್ರ, ಪಂಜು ಇತ್ಯಾದಿ), **ಕರದಲಿ**= ತನ್ನ ಕೈಯಲ್ಲಿ, **ಪಿಡಿದು**= ಹಿಡಿದುಕೊಂಡು, **ಕಾಣದೆ**= ದೀಪವಿದ್ದರೂ ಕಾಣಿಸದೆ, **ಕೂಪದೊಳು**= ಬಾವಿಯಲ್ಲಿ (ಗುಂಡಿಯಲ್ಲಿ), **ಬಿದ್ದಂತೆ**=ಬಿದ್ದವನೋಪಾದಿಯಲ್ಲಿ, **ವೇದ**= ಋಗಾದಿ ಚತುರ್ವೇದಗಳು, **ಮಹೋಪನಿಷದರ್ಥಗಳ**= ಐತರೇಯಾದಿ ದೊಡ್ಡ ಉಪನಿಷದ್ಗತ ಅರ್ಥಗಳನ್ನು, **ನಿತ್ಯದಿ**= ಪ್ರತಿನಿತ್ಯದಲ್ಲಿಯೂ, **ಹೇಳುವವರೆಲ್ಲ**= ಪಾಠಪ್ರವಚನಾದಿಗಳ ದ್ವಾರಾ ಬೋಧಿಸುವವರೆಲ್ಲಾ, **ಶ್ರೀ ಪವನಮುಖ**= ಲಕ್ಷ್ಮೀದೇವಿಯರು, ಜೀವೋತ್ತಮರಾದ ಶ್ರೀವಾಯುದೇವರು ಇವರೇ ಮೊದಲಾದ ದೇವತಾವರ್ಗದಿಂದ, **ವಿನುತನ**= ಚೆನ್ನಾಗಿ ಸಂಸ್ತುತ್ಯಮಾನವಾದ ಶ್ರೀಪರಮಾತ್ಮನ, **ಅಮಲ**= ದೋಷರಹಿತವಾದ, **ಸುರೂಪಗಳ**

= ಸಮೀಚೀನವಾದ ಭಗವದ್ರೂಪಗಳ, **ವ್ಯಾಪಾರ**= ಸರ್ವಕರ್ತನಾದ ಶ್ರೀಹರಿಯು ಬಿಂಬಕ್ರಿಯಾರೂಪವಾದ ವ್ಯಾಪಾರಗಳನ್ನು, **ತಿಳಿಯದೆ**= ಜ್ಞಾನಾನುಸಂಧಾನಮಾರ್ಗದಿಂದ ಅರಿಯದೇ, **ಪಾಪಪುಣ್ಯಕೆ**= ಜೀವ ನಾಧಿಷ್ಠಾನದಲ್ಲಿ ನಡೆಯುವ ಪಾಪ ಕರ್ಮಗಳಿಗೂ, ಪುಣ್ಯ ಕರ್ಮಗಳಿಗೂ, **ಜೀವಕರ್ತೃ**= ಜೀವರೇಮಾಡುವವರು, ಅಂದರೆ ಕರ್ಮಕರ್ತೃತ್ವ ಜೀವ ರದ್ದೇ, **ಹರಿ**= ಸಕಲ ಪಾಪಪರಿಹಾರಕನಾದ ಶ್ರೀಪರಮಾತ್ಮನು, **ಅಕರ್ತೃ** = ಕರ್ತೃವಲ್ಲ, **ಎಂಬ**= ಈಭಾವವಿರುವವರು ಸಕಲ ಶಾಸ್ತ್ರಕೋವಿದ ರಾದರೂ, ಶ್ರೀಪರಮಾತ್ಮನ ಸರ್ವಕರ್ತೃತ್ವಜ್ಞಾನರಹಿತರಾಗಿ, ಶಾಸ್ತ್ರಗಳೆಂಬ ಸುಜ್ಞಾನರೂಪವಾದ ದೀಪವನ್ನು ಕೈಯಲ್ಲಿ ಹಿಡಿದಿದ್ದರೂ, ಅಜ್ಞಾನವೆಂಬ ಕೂಪದಲ್ಲಿ ಬೀಳುವರೆಂದು ತಿಳಿಸುತ್ತಾರೆ. ||೧೨||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶಾಸ್ತ್ರಜ್ಞರು ಅಜ್ಞಾನದೊಳಗೆ ಬಿದ್ದು ಕೆಡತಾರೆಂತ ಹೇಳತಾರೆ.

ಅಂಧಕಾರಬಾಧಾ ತಪ್ಪಿಸಿಕೊಂಬೊ ನಿಮಿತ್ತವಾಗಿನ್ನು, ಅಂಧಕಾರಗತ ಮಾರ್ಗದಲ್ಲಿ ಇರುವ ಬಾವಿ ಮೊದಲಾದುದರಿಂದ ಪ್ರಾಪ್ತವಾಗತಕ್ಕ ಹಾನಿ ತಪ್ಪಿಸಿಕೊಂಬೊ ನಿಮಿತ್ತವಾಗಿನ್ನು, ದೀಪವನ್ನು ಕೈಯೊಳಗೆ ಹಿಡಕೊಂಡು ಮಾರ್ಗ ನಡೆಯತಕ್ಕ ಪುರುಷ ತನಗೆ ಮುಂಭಾಗದಲ್ಲಿರುವ, ತನಗೆ ಬಾಧಕವಾಗಿ ಇರತಕ್ಕ ಬಾವಿ ಕಾಣದೆ, ತನ್ನ ಎದುರಿಗೆ ಇರುವ ಪದಾರ್ಥವನ್ನು ದೃಷ್ಟಿಸಿ ನೋಡದೆ, ತನ್ನ ಎದುರಿಗೆ ಇರತಕ್ಕ ಬಾವಿಯೊಳು ಬಿದ್ದೋಪಾದಿಯಲ್ಲಿ ಋಗಾದಿ ವೇದಗಳ ಇನ್ನೂ ಐತರೇಯಾದಿ ದೊಡ್ಡ ಉಪನಿಷತ್ತುಗಳ, ಇವು ಗಳಲ್ಲಿ ಹೇಳುವ ಜ್ಞಾನಭಕ್ತ್ಯಾದಿಗಳು ವೃದ್ಧಿಮಾಡಿಕೊಂಡು 'ನ ಪುನರಾ ವರ್ತಿತ' ಆಗೋ ನಿಮಿತ್ತ, ದೀಪಸದೃಶವಾದ ವೇದಾದಿಗಳ ಮನವೆಂಬ ಕೈಯಲ್ಲಿ ಧರಿಸಿ, ದೀಪಪ್ರಕಾಶರೂಪವಾದ ಅರ್ಥಗಳ ಪ್ರತಿನಿತ್ಯದಲ್ಲೂ ಪ್ರಕಾಶ ಚತುರ್ದಿಕ್ಕಿನಲ್ಲಿ ವ್ಯಾಪಿಸಿದೋಪಾದಿಯಲ್ಲಿ, ತಮ್ಮ ತಮ್ಮ ವಾಕ್ಯಗಳಿಂದ

ಸರ್ವತ್ರ ವ್ಯಾಪಿಸುವಂತೆ ಪೇಳತಕ್ಕವರೆಲ್ಲ, ಲಕ್ಷ್ಮೀದೇವಿಯರು ಜೀವೋತ್ತಮ ರಾದ ವಾಯುದೇವರು ಇವರೇ ಮೊದಲಾದ ದೇವತೆಗಳಿಂದ 'ಸರ್ವಕರ್ತ ನೀನು, ನಿನ್ನ ಅಧೀನಕರ್ತರು ಎಲ್ಲರು' ಎಂತ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಪರಮಾತ್ಮನ ನಿರ್ಮಲವಾದ, ನಿರ್ದೋಷಗಳಾದ, ಹೃದಯಗತ ಏಕಾ ದಶೇಂದ್ರಿಯಗತ ರೂಪಗಳ, ಕರ್ತನಾದ ಶ್ರೀದೇವರ ವ್ಯತಿರಿಕ್ತ ಚಲನಾದಿ ಸಾಮರ್ಥ್ಯರಹಿತವಾದ ಸ್ವರೂಪಭೂತಕರ್ತೃತ್ವ ಈಶಾಧೀನವಾಗಿ ಉಳ್ಳ ಜೀವರ ಇಂದ್ರಿಯಸ್ಥನಾದ ಪರಮಾತ್ಮನ ಕ್ರಿಯಾರೂಪವಾದ ಕರ್ಮ ಮಾಡಿಸ ತಕ್ಕ ವ್ಯಾಪಾರಗಳ, ವೇದಾದಿಗಳೆಂಬ ದೀಪವನ್ನು ಮನದಲ್ಲಿ ಧರಿಸಿ ಕೊಂಡೂನೂ, ಪ್ರಕಾಶರೂಪವಾದ ಅರ್ಥಗಳ ಹೇಳತಾನೂ, ತದನುಷ್ಠಾನ ಮಾಡುವ ಕ್ರಮ ತಿಳಿಯದೆ, ಪಾಪಪುಣ್ಯಗಳ ಮಾಡೋದಕ್ಕೆ ಕರ್ತರು ಜೀವರೇ ಹೊರ್ತು, ಪರಮಾತ್ಮನಲ್ಲ ಎಂತ ತಿಳಿದು, ಪಾಪಪುಣ್ಯಗಳ ಮಾಡಿಸೊ ವಿಷಯ ದಲ್ಲಿ ಪರಮಾತ್ಮ ಅಕರ್ತ ಎಂತ ಉಚ್ಚಾರಣರೂಪವಾದ ಪ್ರತ್ಯಕ್ಷ ವಿರುದ್ಧವಾದ ಅರ್ಥ ಹೇಳಿ ಬಾವಿಯಲ್ಲಿ ಬೀಳೋವರಾಗತಾರೆ. ಎಂದರೆ ಜೀವರಿಗೆ ಅನಾದಿ ಸ್ವರೂಪಭೂತವಾದ ಕರ್ತೃತ್ವ ಅದೆ ಎಂತಲೂ, ಸರ್ವಕರ್ತ ಈಶನೇ ಖರೆ ಆದರೂ ಪ್ರಯತ್ನ ಮಾಡೋ ವಿಷಯದಲ್ಲಿ ಪರಮಾತ್ಮನ ಪ್ರೇರಣೆ ಇಲ್ಲ ವೆಂತಲೂ, ಈ ವಿಷಯಕ್ಕೆ ಪರಮಾತ್ಮ ಅಕರ್ತನೆಂತಲೂ ಮತ್ತು ಜೀವರಿಗೆ ಸ್ವಾತಂತ್ರ್ಯವಿಭಾಗ ಮಾಡಿಕೊಟ್ಟಿದ್ದಾನಾದಕಡಿಯಿಂದ ಆದರಿಂದ ಪ್ರಯತ್ನ ನಡಸತಾನೆಂತಲೂ 'ಷಡ್ಭಿಃ ಮಾನುಷಯತ್ನೈಶ್ಚ ಸಪ್ತಮಂ ದೈವಚಿಂತನಂ' ಎಂಬ ವಚನವೇ ಸಾಧಕವೆಂತಲೂ ಹೇಳತಾರೆ. ಪ್ರಯತ್ನಕ್ಕೆ ಮಾತ್ರ ಸ್ವತಂತ್ರ ವಿದ್ದರೆ ತನಗೆ ಹಾನಿ ಆಗತಕ್ಕ ಪ್ರಯತ್ನ ಮಾಡಲಾರ. ಪರಲೋಕಹಾನಿ ಆಗತಕ್ಕ ಪ್ರಯತ್ನಗಳೇ ಮಾಡತಾನೆ. ಆದ್ದರಿಂದ ಪ್ರಯತ್ನ ಕೂಡಾ ಈಶಾ ಧೀನವೇ. ಇದನರಿಯದೆ ಜೀವಗೆ ಸ್ವಾಧೀನಕರ್ತೃತ್ವ ಅಂಗೀಕರಿಸಿ ಪಾಪ ರೂಪವಾದ ಬಾವಿಯೊಳಗೆ ಬೀಳತಾರೆಂತ ತಾತ್ಪರ್ಯ. ಇದರ ವಿವರ ದತ್ತ ಸ್ವಾತಂತ್ರ್ಯಸಂಧಿಯಲ್ಲಿ ಅದೆ. ||೧೨||

### ಭಾವಪ್ರಕಾಶಿಕೆ

ದೀಪ ಕೈಯಲ್ಲಿ ಹಿಡಿದು ಮತ್ತೊಬ್ಬನಿಗೆ ಮಾರ್ಗವನ್ನು ತೋರಿಸುತ್ತ

ತಾನು ಮಾರ್ಗವನ್ನು ಕಾಣದೆ ಬಾವಿಯಲ್ಲಿ ಬೀಳುವುದುಂಟು. ಅದರಂತೆ ವೇದವೇದಾಂತಗಳನ್ನು ವ್ಯಾಸಂಗಮಾಡಿ, ಶಾಸ್ತ್ರಾರ್ಥಗಳನ್ನು ಪರರಿಗೆ ಉಪದೇಶ ಮಾಡುತ್ತ ತಾನು ಅದನ್ನು ಸರಿಯಾಗಿ ಅನುಸಂಧಾನ ಮಾಡದೆ ಸ್ವತಂತ್ರಕರ್ತೃತ್ವವು ತನ್ನದೆಂತಲೂ ಪುಣ್ಯಪಾಪಗಳನ್ನು ಮಾಡುವ ವಿಷಯಗಳಲ್ಲಿ ಪರಮಾತ್ಮನ ಪ್ರೇರಣೆ ಇಲ್ಲವೆಂದೂ ತಿಳಿದು ಕೆಡುತ್ತಾರೆಂಬ ಭಾವ. ||೧೨||

### ಭಾವದರ್ಪಣ

ಶ್ರೀಮತ್ಸಿದ್ಧಾಂತಶಾಸ್ತ್ರ ಚೆನ್ನಾಗಿ ಪರಿಶೋಧಿಸಿ ಅರ್ಥಮಾಡಿಕೊಳ್ಳದೆ ಕೆಡುತ್ತಾರೆಂದು ಹೇಳುತ್ತಾರೆ, ದೀಪೇತಿ. ಕೂಪ–ಭಾವಿ. ||೧೨||

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಪ್ರಾಯೇಣ ಶುದ್ಧಃ ನ ಚಕಾಸ್ತಿ ಸಾಧು ನ ಪತಂತಿ ಬಂಧನಾಃ ಇತಿ ಚ ಉಕ್ತೇಃ ನಾಯಮಾತ್ಮಾ ಇತಿ ಸೂಕ್ತಂ ಶ್ರೀಹರಿ ಸಮೀರಚರಣಾದರಾಭಾವೇ ಅಸ್ಮದುಕ್ತಂ ನಿಪುಣ ಬುದ್ಧ್ಯಾ ವಿಬುಧಾಯುಃ ಕ್ಷೀಣೇಪಿ ದುರ್ಗಮಮ್. ಪಾಂಡಿತ್ಯಮಪಿ ಅಪ್ರಯೋಜಕಮ್ ಇತಿ ಆಹ, "ದೀಪ" ಇತಿ ||೧೨||

### ಕನ್ನಡಾರ್ಥ

ಶುದ್ಧವಾದ ಪದಾರ್ಥವು ಪ್ರಾಯಿಕವಾಗಿ ಬಹುಶಃ ಅಂದವಾಗಿ ತೋರುವುದಿಲ್ಲ. (ಆಪಾತತಃ) ಅಜ್ಞಾನ ಮೋಹಗಳುಳ್ಳವರಿಗೆ ಸರಿಯಾಗಿ ತತ್ವಬೋಧವಾಗುವುದಿಲ್ಲ ಎಂದು ಮುಂತಾಗಿ ಹೇಳಿದಂತೆ, ಹಾಗೂ 'ಈ ಪರಮಾತ್ಮನು ಕೇವಲ ಪ್ರವಚನದಿಂದ ದೊರೆಯುತಕ್ಕ ವಸ್ತುವಲ್ಲ' ಎಂದು ಹೇಳಿದಂತೆ ಹರಿವಾಯುಗಳ ಪಾದಾರವಿಂದದಲ್ಲಿ ಭಕ್ತಿಭಾವಗಳಿಲ್ಲದಿದ್ದರೆ, ನಾವು ನಿರೂಪಿಸಿದ ಈ ರಹಸ್ಯ ವಿಷಯಗಳನ್ನು ದೇವತೆಗಳ ಆಯುಷ್ಯವನ್ನು ಪಡೆದ ಪಂಡಿತವರೇಣ್ಯನೂ ತನ್ನ ನಿಪುಣಮತಿಯಿಂದ ಕೊನೆಯವರೆಗೂ ವಿಚಾರಿಸಿದರೂ ಸುಲಭವಾಗಿ ತಿಳಿಯಲಾರನು. ಅವನ ಬರಿಯ ಪಾಂಡಿತ್ಯವು

ಈ ವಿಷಯದಲ್ಲಿ ಫಲಕಾರಿಯಾಗುವುದಿಲ್ಲ" ಎಂದು ಹೇಳುತ್ತಾರೆ, "ದೀಪ" ಎಂಬ ಪದ್ಯದಿಂದ. ||೧೨||

## ಶ್ರೀಗುರುಹೃದಯಪ್ರಕಾಶಿಕೆ

ಹೀಗೆ ಸರ್ವಕ್ರಿಯಕ್ಕೂ ಪರಮಮುಖ್ಯಕರ್ತೃ ದೇವರನ್ನು ಬಿಟ್ಟು ಜೀವನೇ ಪುಣ್ಯಪಾಪಕ್ರಿಯಕ್ಕೆ ಕರ್ತೃವೆಂಬುವವರು, ಶಾಸ್ತ್ರದ ಹೃದಯ ತಿಳಿದವರಲ್ಲವೆಂದು ಹೇಳುತ್ತಾರೆ, ದೀಪವೆಂದು. ವೇದ ಮಹೋಪನಿಷತ್ತುಗಳ ಅರ್ಥ ನಿತ್ಯದಲ್ಲೂ ಹೇಳತಕ್ಕವರೆಲ್ಲಾ ಶ್ರೀಪ್ರಾಣ ಮುಂತಾದ ದೇವಸ್ತುತನಾದ ಸರ್ವಗತ ದೇವರ ದಿವ್ಯರೂಪಗಳ ಪರಮಸ್ವತಂತ್ರ ಕ್ರಿಯೆಗಳನ್ನು ಅನುಸಂಧಾನಕ್ಕೆ ತರದೆ, ಪಾಪಪುಣ್ಯಾದಿ ಕ್ರಿಯೆಗಳಿಗೆ ಜೀವನೇ ಕರ್ತನೆಂದೂ, ಶ್ರೀಹರಿಯು ಕರ್ತನಲ್ಲನೆಂಬುವರು, ದೀಪವನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ಮುಂದೆನೋಡದೆ ಭಾವಿಯಲ್ಲಿ ಬಿದ್ದವರಂತೆ ಆಗುವರು. ।೧೨।

# ಸರ್ವವ್ಯಾಖ್ಯಾನಸಾರಸಂಗ್ರಹ

ವೇದಾದಿ ಶಾಸ್ತ್ರಗಳನ್ನು ಬಲ್ಲ ಪಂಡಿತರಾದರೂ ಉತ್ತಮ ಜ್ಞಾನಾನುಸಂಧಾನರಹಿತರಾಗಿದ್ದರೆ ಅಜ್ಞಾನರೂಪಕೂಪದಲ್ಲಿ ಬೀಳುತ್ತಾರೆಂದು ತಿಳಿಸುತ್ತಾರೆ.

ಅಂಧಕಾರವನ್ನು ನೀಗಲು ದೀಪಗಳನ್ನು ಹಿಡಿದು ಮಾರ್ಗವನನ್ನು ಸವಿಸುತ್ತಾ ಸಾಗುತ್ತೇವೆ. ಈ ದೀಪವು ಕೈಯಲ್ಲಿ ದೀಪವನ್ನು ಹಿಡಿದಿರುವವನಿಗೂ ಮತ್ತು ಅವನ ಜೊತೆಯಲ್ಲಿ ನಡೆಯುತ್ತಿರುವ ಇತರರಿಗೂ ಮಾರ್ಗದರ್ಶಕವಾಗಿರುವುದು. ಇತರರಿಗೆ ದೀಪದ ಬೆಳಕಿನಿಂದ ಮಾರ್ಗ ತೋರಿಸುತ್ತಾ ತಾನು ಮಾರ್ಗದಲ್ಲಿರುವ ಬಾವಿ ಅಥವಾ ಗುಂಡಿಯಲ್ಲಿ ಬೀಳುವಂತೆ ಅನಂತ ಕಲ್ಯಾಣಗುಣಗಣಪರಿಪೂರ್ಣನಾದ ಆ ಅಪ್ರಮೇಯನನ್ನು ಅವರವರ ಯೋಗ್ಯತಾನುಸಾರ ತಿಳಿಸುವ ಜ್ಞಾನಭಂಡಾರವೇ ಋಗಾದಿ ಚತುರ್ವೇದಗಳು, ವೇದಸಾರಭೂತವಾದ ಐತರೇಯಾದಿ ಉಪನಿಷತ್ತುಗಳು, ತದನುಸಾರಿಯಾದ

ಪುರಾಣಾದಿ ಸ್ಮೃತಿಗಳು, ಬ್ರಹ್ಮಸೂತ್ರ, ಇತಿಹಾಸಾದಿ ಸಚ್ಛಾಸ್ತ್ರಗಳು. ಇಂತಹ ಋಗಾದಿ ವೇದಗಳನ್ನು ಮಹೋಪನಿಷತ್ತುಗಳನ್ನು ನಿತ್ಯವೂ ಅವಲೋಕಿಸುತ್ತಾ ಅದರ ಅಂತರಾರ್ಥಗಳನ್ನು ಪಾಠ ಪ್ರವಚನಗಳ ದ್ವಾರಾ ಇತರರಿಗೆ ಬೋಧಿಸುತ್ತಾ ಇರುವ ಅಧ್ಯಯನಸಂಪನ್ನರು, ಪಂಡಿತೋತ್ತಮರು, ತಾವೇ ಕರ್ತರೆಂಬ ಅಭಿಮಾನದಿಂದ ಅಜ್ಞಾನರೂಪವಾದ ಕೂಪದಲ್ಲಿ ಬೀಳುವರು.

ಸಚ್ಛಾಸ್ತ್ರಗಳಿಂದ ಪರಮಮುಖ್ಯತ್ವೇನ ಪ್ರತಿಪಾದ್ಯನಾದ ಶ್ರೀಪರಮಾತ್ಮನು ಶ್ರೀಲಕ್ಷ್ಮೀದೇವಿಯರಿಂದ ಜೀವೋತ್ತಮರಾದ ಶ್ರೀವಾಯುದೇವರೇ ಮೊದಲಾದ ಸಕಲ ದೇವತಾಪರಿವಾರದಿಂದ 'ಎಲೈ ಮಹಾಪ್ರಭುವೇ ನೀನೇ ಸರ್ವಕರ್ತನು, ಸರ್ವಪ್ರೇರಕನು, ಸರ್ವನಿಯಾಮಕನು. ನೀನೇ ಸಕಲಜೀವರ ಬಿಂಬನು. ನಾವು ನಿನ್ನ ಕ್ರಿಯೆಯಂತೆ ನಡೆಯುವ ನಿನ್ನ ಪ್ರತಿಬಿಂಬಭೂತರು' ಎಂದು ಚೆನ್ನಾಗಿ ಸಂಸ್ತುತ್ಯಮಾನನಾದವನು ಬಿಂಬನು.

ಬಿಂಬನನ್ನು ವೇದಶಾಸ್ತ್ರಾದಿಸಂಪನ್ನರಾದ ಪಂಡಿತರೂ ಕೂಡ 'ಪಾಪ ಪುಣ್ಯ ಕರ್ಮಗಳಿಗೆಲ್ಲಾ ಜೀವನೇ ಕರ್ತನು. ಶ್ರೀಹರಿಯು ಅಕರ್ತನು. ಪಾಪಪುಣ್ಯ ಸಕಲ ಕರ್ಮಗಳೂ ಜೀವನಿಂದಲೇ ನಡೆಯುವುವು. ಏಕೆಂದರೆ ವಿಧಿನಿಷೇಧಗಳೆಲ್ಲವೂ ಜೀವನನ್ನೇ ಕುರಿತು ಹೇಳಿದ್ದು. ಶ್ರೀಹರಿಯು ಅವುಗಳಿಂದ ದೂರನು. ನಮ್ಮ ಅನಾದಿಕರ್ಮಾನುಸಾರ, ನಮ್ಮ ಸ್ವಬುದ್ಧಿಯಿಂದಲೇ ಪಾಪಪುಣ್ಯಾದಿ ಸಕಲ ಕರ್ಮಗಳು ನಡೆಯುವುವು. ಪ್ರಯತ್ನವೆಲ್ಲಾ ಮನುಷ್ಯನದ್ದು, ಫಲಪ್ರದತ್ವ ಮಾತ್ರ ಶ್ರೀಪರಮಾತ್ಮನಿಗೆ ಸೇರಿದ್ದು' ಎಂದು ಹೇಳುತ್ತಾ, 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾ ಚ ನ' ಎಂಬ ಗೀತಾವಚನ ರೀತ್ಯಾ ಇಚ್ಛಾಶಕ್ತಿ, ಪ್ರಯತ್ನ ಇವೆಲ್ಲಾ ಜೀವನಿಂದಲೇ ಪ್ರವರ್ತಿತವಾಗಿರುವುವು. ದೇವರು ನಮಗೆ ಸ್ವತಂತ್ರ ಕೊಟ್ಟಿದ್ದಾನೆ. ನಮಗೆ ಯುಕ್ತಾಯುಕ್ತ ರೂಪವಾದ ವಿವೇಚನಾ ಬುದ್ಧಿ ಇದೆ. ಆ ದತ್ತಸ್ವಾತಂತ್ರ್ಯದಿಂದ ನಾವು ಸಂಕಲ್ಪ ಮಾಡುತ್ತೇವೆ. ಇಂತಹ ಕೆಲಸ ಮಾಡಬೇಕೆಂಬ ಇಚ್ಛೆ ನಮ್ಮ ಮನಸ್ಸಿನಲ್ಲಿ ಸಹಜವಾಗಿ ಹುಟ್ಟುವುದು. ಅದರಿಂದಲೇ ಕಾರ್ಯಪ್ರಯತ್ನ

ದಲ್ಲಿ ತೊಡಗುತ್ತೇವೆ. ನಾವು ಮಾಡುವ ಕರ್ಮಗಳಿಗನುಸಾರವಾಗಿ ಶ್ರೀಪರಮಾತ್ಮನು ಫಲವನ್ನು ಮಾತ್ರ ಕೊಡುತ್ತಾನೆ. ಕರ್ತೃತ್ವಶಕ್ತಿ ಜೀವನದ್ದು, ಫಲಪ್ರದತ್ವ ಮಾತ್ರ ದೇವರದ್ದು' ಈ ರೀತಿಯಲ್ಲಿ ಅಪವ್ಯಾಖ್ಯಾನ ಮಾಡಿ, ಶ್ರೀಪರಮಾತ್ಮನ ಸರ್ವಕರ್ತೃತ್ವ ಗುಣಕ್ಕೆ ಅಪಚಾರ ಮಾಡುವವರು, ದೀಪ ಹಿಡಿದಿದ್ದರೂ ಬಾವಿಯಲ್ಲಿ ಬಿದ್ದವನಂತೆ ಆಗುತ್ತಾರೆ.

ಈ ದೃಷ್ಟಾಂತದಲ್ಲಿ ಸಚ್ಛಾಸ್ತ್ರಗಳು ದೀಪಸದೃಶ, ವೇದೋಪನಿಷತ್ತುಗಳ ಅಂತರಾರ್ಥ ದೀಪದ ಬೆಳಕಿನ ಸದೃಶ. ನಡೆಯುವ ಮಾರ್ಗವು ಮೋಕ್ಷಪಥ ಸದೃಶ, ಅಂಧಕಾರವೇ ಅಜ್ಞಾನ, ಉತ್ತಮ ಜ್ಞಾನಾನುಸಂಧಾನರಾಹಿತ್ಯವೇ ಕೂಪದಲ್ಲಿ ಬೀಳುವುದು, ಸಚ್ಛಾಸ್ತ್ರಗಳನ್ನು ಇತರರಿಗೆ ಬೋಧಿಸುವುದು ಪರೋಪದೇಶ ಪಾಂಡಿತ್ಯ. ||೧೨||

## ಪದ್ಯ ೧೩

### ಮೂಲ

ಅನಿಲದೇವನು ವಾಙ್ಮನೋಮಯ ।
ನೆನಿಸಿ ಪಾವಕ ವರುಣ ಸಂಕ್ರಂ ।
ದನಮುಖಾದ್ಯರೊಳಿದ್ದು ಭಗವದ್ರೂಪಗುಣಗಳನು ॥
ನೆನೆನೆನೆದು ಉಚ್ಚರಿಸುತಲಿ ನ ।
ನ್ನನು ಸದಾ ಸಂತೈಸುವನು ಸ ।
ನ್ಮುನಿಗಣಾರಾಧಿತಪದಾಂಬುಜ ಗೋಜ ಸುರರಾಜ ॥ ||೧೩||

### ಅವತರಣಿಕೆ

ಶ್ರೀವಾಯುದೇವರು ಭಗವನ್ನಾಮೋಚ್ಚಾರಣೆ ಮಾಡುತ್ತಾ ಸರ್ವ ಜೀವರನ್ನು ಸಂರಕ್ಷಿಸುತ್ತಿರುವರೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಗೋ**= ವೇದಗಳು, **ಜ**= ವೇದಗಳಿಂದ ವ್ಯಕ್ತವಾದ, ಗುಣಪೂರ್ಣನಾದ ಶ್ರೀಪರಮಾತ್ಮನ ಮಹಾಮಹಿಮೆಗಳನ್ನು, **ಅನಿಲದೇವನು**= ಜೀವೋತ್ತಮರಾದ ಶ್ರೀವಾಯುದೇವರು, **ವಾಕ್**= ವಾಗೀಂದ್ರಿಯದಿಂದ ಬರತಕ್ಕ ಮಾತುಗಳಲ್ಲಿ, **ಮನಃ**= ಹೃದಯಗೋಳಕಗತ ಮನಸ್ಸಿನಲ್ಲಿ, **ಮಯನೆನಿಸಿ**= ವಾಙ್ಮನೋನಾಮಗಳಿಂದ ಪ್ರಚುರರಾಗಿ, **ಪಾವಕ**= ವಾಗಭಿಮಾನಿ ಅಗ್ನಿದೇವರು, **ವರುಣ**= ಜಿಹ್ವಾಭಿಮಾನಿ ಹಾಗೂ ರಸಾಭಿಮಾನಿ ವರುಣದೇವರು, **ಸಂಕ್ರಂದನ**= ಕಂಠಗತ ಅಣುನಾಲಿಗೆ (ಕಿರುನಾಲಿಗೆ)ಯ ಅಭಿಮಾನಿ ಇಂದ್ರದೇವರು, **ಮುಖಾದ್ಯರೊಳಿದ್ದು**= ಆದಿಯಾಗಿ ಮನೋಭಿಮಾನಿಗಳಾದ ಗರುಡ, ಶೇಷ, ರುದ್ರಾದಿ ದೇವತೆಗಳಲ್ಲಿದ್ದು, **ಭಗವದ್ರೂಪಗಳ**= ಆಯಾಯ ಇಂದ್ರಿಯಗೋಳಕಾಂತರ್ಗತ, ದೇವತಾಂತರ್ಗತ ಶ್ರೀಪರಮಾತ್ಮನ ನಾನಾ ಸುರೂಪಗಳನ್ನು, **ಗುಣಗಳನು**= ಅಪಾರ ಮಹಿಮನ ಅನಂತಗುಣಗಳನ್ನು, **ನೆನೆನೆದು**= ಮನಸಾ ಧ್ಯಾನಿಸುತ್ತಾ (ಮನೋಮಯರಾಗಿ), **ಉಚ್ಚರಿಸುತಲಿ**= ಕಿರುನಾಲಿಗೆ, ಜಿಹ್ವೆ, ವದನಗಳ ದ್ವಾರಾ ಭಗವಂತನ ಗುಣಗಳನ್ನು ಗಟ್ಟಿಯಾಗಿ ಉಚ್ಚಾರ ಮಾಡುತ್ತಾ (ವಾಙ್ಮಯರಾಗಿ), **ಸನ್ಮುನಿಗಣ**= ಸಮೀಚೀನರಾದ ರುದ್ರಾದಿ ಬ್ರಹ್ಮಜ್ಞಾನಿಗಳ ಸಮೂಹದಿಂದ, **ಆರಾಧಿತ**= ಪೂಜಿತರಾದ, **ಪದಾಂಬುಜ**= ಚರಣ ಕಮಲಗಳುಳ್ಳ, **ಸುರರಾಜ**= ದೇವೋತ್ತಮರಾದ ಶ್ರೀವಾಯುದೇವರು, **ನಮ್ಮನು**= ಭಕ್ತರಾದ ಸಜ್ಜನರನ್ನು, **ಸದಾ**= ಯಾವಾಗಲೂ **ಸಂತೈಸುವನು**= ಅಜ್ಞಾನಾದಿ ದೋಷಗಳಿಂದ ದೂರಮಾಡಿ ಜ್ಞಾನ ಭಕ್ತಿ ವೈರಾಗ್ಯ ಭಾಗ್ಯಗಳನ್ನಿತ್ತು ಸಂರಕ್ಷಿಸುವರು. ||೧೩||

## ವ್ಯಾಖ್ಯಾನಗಳು

**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

ಸ್ವರೂಪತಃ ಸಜ್ಜನರಾದವರ ಸಾಧನಿ ವಾಯುದೇವರು ಮಾಡಿಸುತಾರೆಂದು ಹೇಳತಾರೆ.

ವೇದಗಳು ಇದರಿಂದ ಉತ್ಪನ್ನಗಳಾದ ವ್ಯಕ್ತಗಳಾದ ಗುಣಪೂರ್ಣನಾದ ಪರಮಾತ್ಮಮಹಿಮಾ ಮತ್ತು ವೇದಗಳಿಂದ ಉತ್ಪನ್ನಗಳಾದ ಪುರಾಣಾದಿಗತ ಭಗವನ್ಮಹಿಮಾ, ಅನೇಕ ವಿಧಗಳಾದ ಭಗವನ್ಮಹಿಮಾಗಳು, ಜೀವೋತ್ತಮ ರಾದ ವಾಯುದೇವರು ವಾಗಿಂದ್ರಿಯವಾದ, ವಾಕ್ಯಗಳ ನುಡಿಯುತಕ್ಕ ಮುಖ ದಲ್ಲೇನು, ಹೃದಯಗೋಳಕಗತ ಮನಸ್ಸಿನಲ್ಲೇನು, ವಾಙ್ಮನೋನಾಮಗಳಿಂದ ಪ್ರಚುರರಾಗಿ, ಆಯಾ ನಾಮಗಳಿಂದ ಪ್ರಚುರರಾಗಿ, ಆಯಾ ನಾಮಗಳು ಉಳ್ಳವರೆನಿಸಿ, ಆಯಾ ಸ್ಥಾನದಲಿ ಇರೋವರಾಗಿದ್ದಾರೆ. ಅಗ್ನಿಯು ವಾಗಭಿ ಮಾನಿ. ವರುಣದೇವರು ಸ್ಥೂಲಜಿಹ್ವಾಭಿಮಾನಿ. ಇಂದ್ರದೇವರು ಕಂಠಗತ ಅಣುನಾಲಿಗೆಗೆ ಅಭಿಮಾನಿ. ಹಾಂಗೇ ಮನೋಭಿಮಾನಿಗಳಾದ ಗರುಡ ಶೇಷ ರುದ್ರಾದಿಗಳು ಭಗವನ್ಮಹಾತ್ಮೆ ಉಚ್ಚಾರ ಮಾಡಬೇಕಾದರೆ, ಭಗವ ದ್ಧ್ಯಾನ ಮಾಡಬೇಕಾದರೆ ಪೂರ್ವೋಕ್ತ ಇಂದ್ರಿಯ ಸ್ಥಾನಗಳು ತದಭಿಮಾನಿ ಗಳು ತನ್ನಿಯಾಮಕರು ಹೊರತು ಆಗೋದಿಲ್ಲ. ಆದ್ದರಿಂದ ವಾಯುದೇವರು ವಾಙ್ಮನೋನಾಮದಿಂಡ ವಾಕ್ ಮತ್ತು ಮನಃಸ್ಥಾನದಲ್ಲಿ ವರುಣದೇವರೇ ಮೊದಲಾದ ಪೂರ್ವೋಕ್ತ ದೇವತೆಗಳಲ್ಲಿದ್ದು, ಹೃದಯಾಕಾಶದಲ್ಲಿ ಭಗವಧ್ಯಾನ ರುದ್ರಾದಿಗಳ ದ್ವಾರಾ ಜೀವನಕಡಿಯಿಂದ ಮಾಡಿಸುತಲಿ, ಶ್ರೀಪರಮಾತ್ಮನ ಗುಣಗಳನ್ನು ತಾವು ಬಾರಿಬಾರಿಗೆ ನೆನೆದು ತಮ್ಮ ಕ್ರಿಯಾದ್ವಾರಾ ವರುಣಾದಿ ದೇವತೆಗಳ ಕ್ರಿಯಾದ್ವಾರಾ ವರ್ಣಗಳು ನುಡಿಯೋದಕ್ಕೆ ಅಧಿಷ್ಠಾನ ಹಾಂಗೂ ಸಹಕಾರಿಯಾದ ಅಣು ನಾಲಿಗೆ ವದನ ಜಿಹ್ವೆ ಇವುಗಳಲ್ಲಿ ಹಾಂಗೆ ಮನದಲ್ಲಿ ತಾವಿದ್ದು ಉಚ್ಚಾರ ಮಾಡುತಲಿ, ಜೀವನ ದ್ವಾರಾ ವಾಗಿಂದ್ರಿಯದಿಂದ ಉಚ್ಚಾರ ಮಾಡಿಸುತಲಿ, ಸಮೀಚೀನರಾದ ಜ್ಞಾನಿಗಳಾದ ರುದ್ರಾದಿ ದೇವತೆ ಗಳೇ ಮೊದಲಾದ ಸಮೂಹಗಳಿಂದ ಪೂಜಿತರಾದ ಪಾದಕಮಲಗಳುಳ್ಳ ದೇವೋತ್ತಮರಾದ ವಾಯುದೇವರು, ಪೂರ್ವೋಕ್ತಪ್ರಕಾರ ಸ್ವಂತಂತ್ರಾ ಸ್ವತಂತ್ರತತ್ತ್ವಗಳ ತಿಳದು, ಅಹಂಮಮತಾದಿಗಳ ತ್ಯಜಿಸಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪರಮಾತ್ಮನ ಭಜಿಸತಕ್ಕ ನಮ್ಮನ್ನು, ಭಗವದಾಜ್ಞಾ ದಿಂದ ನಿರಂತರದಲ್ಲೂ ಅಜ್ಞಾನಾದಿ ದೋಷಗಳು ಪ್ರಾಪ್ತವಾಗದಂತೆ ಜ್ಞಾನ ಭಕ್ತಿ ವೈರಾಗ್ಯಾದಿಗಳನ್ನು ಕೊಟ್ಟು ಸಂರಕ್ಷಣೆ ಮಾಡತಾರೆಂದು ತಾತ್ಪರ್ಯ. ॥೧೩॥

**ಭಾವಪ್ರಕಾಶಿಕೆ**

ಮುನಿ ಶಬ್ದಕ್ಕೆ ಜ್ಞಾನಿ ಎಂದರ್ಥ. ಉತ್ತಮರಾದ ಜ್ಞಾನಿ ಸಮೂಹದಿಂದ ಅಥವಾ ವಸಿಷ್ಠಾದಿ ಸನ್ಮುನಿಗಳಿಂದ ಪೂಜಿತವಾದ ಪಾದಕಮಲಗಳುಳ್ಳವರು ವಾಯುದೇವರು ಮತ್ತು ಗೋಜ ಅಂದರೆ ಗೌಃ–ವೇದಾಂತರೂಪವಾದ ವಾಣಿ, ಜಾತಾ ಯಸ್ಮಾತ್ ಸಃ ಗೋಜಃ. ಗೌಃ ಅಂದರೆ ವೇದಾಂತ ವಾಕ್ಯಗಳೆಂದರ್ಥ. ವೇದಾಂತಗ್ರಂಥಗಳು ಯಾರ ದೆಸೆಯಿಂದ ಹುಟ್ಟಿದವೋ ಅವರಿಗೆ ಗೋಜ ಎಂದು ಹೆಸರು, ವಾಯುದೇವರೇ ಮಧ್ವಾವತಾರದಿಂದ ವೇದಾಂತ ಗ್ರಂಥಗಳನ್ನು ರಚಿಸಿವರೆಂದರ್ಥ. ಇವರು ರುದ್ರದೇವರು ಮೊದಲಾದ ದೇವತೆಗಳಿಗೆ ಅರಸರು. ಇಂತಹ ವಾಯುದೇವರು ವಾಗಭಿಮಾನಿ ಅಗ್ನಿ, ನಾಲಿಗೆಗೆ ಅಭಿಮಾನಿ ವರುಣ, ಮನೋಶಬ್ದದಿಂದ ಚಿತ್ತವನ್ನು ತೆಗೆದುಕೊಳ್ಳಬೇಕು, ಚಿತ್ತಾಭಿಮಾನಿಗಳು ತಾವೇ ಆಗಿರುವರು ಅಥವಾ ಮನೋಭಿಮಾನಿ ಚಂದ್ರ ಇವರುಗಳಲ್ಲಿ ವಾಙ್ಮಯ, ಮನೋಮಯ ಎಂಬ ಹೆಸರಿನಿಂದ, ಇರುವದಲ್ಲದೆ, ಕರಚರಣಾದಿಗಳಿಗೆ ಅಭಿಮಾನಿಗಳಾದ ಇಂದ್ರಾದಿ ತತ್ವೇಶರಲ್ಲೂ ಇದ್ದು ಸರ್ವಕಾಲದಲ್ಲೂ ಪರಮಾತ್ಮನ ಗುಣರೂಪಗಳನ್ನು ಸ್ಮರಿಸುತ್ತ ಬಾಯಿಯಿಂದಲೂ ಉಚ್ಚರಿಸುತ್ತ ಇರುವರು. ಅಂದರೆ ನಮ್ಮಗಳ ವಾಕ್ಯದಲ್ಲೂ ಮನಸ್ಸಿನಲ್ಲೂ ಇದ್ದಂತೆ, ಇಂದ್ರಾದಿ ತತ್ತ್ವಾಭಿಮಾನಿಗಳ ವಾಕ್ಯದಲ್ಲೂ, ಮನಸ್ಸಿನಲ್ಲೂ ಸಹ ವಾಙ್ಮಯ, ಮನೋಮಯನೆನಿಸಿ ವಾಸವಾಗಿದ್ದು, ಭಗವನ್ಮಾಹಾತ್ಮೆಗಳನ್ನು ಮನಸ್ಸಿನಿಂದ ಸ್ಮರಿಸಿ ಬಾಯಿಂದ ಉಚ್ಚರಿಸಿ, ಸಕಲ ಪ್ರಾಣಿಗಳೂ ಮನೋವಾಕ್ಯಗಳಿಂದ ಸ್ಮರಿಸುವಂತೆಯೂ ಉಚ್ಚರಿಸುವಂತೆ ಮಾಡಿ ಉದ್ಧಾರ ಮಾಡುವರೆಂಬ ತಾತ್ಪರ್ಯ. ||೧೩||

**ಭಾವದರ್ಪಣ**

ಅನಿಲದೇವೇತಿ. ||೧೩||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಅನಿಲ ಇತಿ|| ಪದಾಂಬುಜಸ್ಯ ಭಗವತ್ಪಾದಪದ್ಮಸ್ಯ|| ಸಜ್ಜನೇಷು

ಪ್ರಕಾಶೇ ಗೋಜಃ ಗೋಭಿಃ ದೀಧಿತಿಭಿಃ ಜಾಯತೇ ಪ್ರಾದುರ್ಭವತಿ ಇತಿ ಸಃ ತಥಾ|| ಅಪವಿಶಾಧ್ವನಿ ಮಾರುವತಃ ಇತ್ಯುಕ್ತೇಃ ||೧೩||

## ಕನ್ನಡಾರ್ಥ

ಸನ್ಮುನಿಗಣಾರಾಧಿತ ಪದಾಂಭೋಜ ಗೋಜ ಎಂಬಲ್ಲಿ ಸನ್ಮುನಿಗಣದಿಂದ ಆರಾಧಿತನಾದ ಹರಿಯು ಪಾದಪದ್ಮದ ಪ್ರಕಾಶವು ಸಜ್ಜನರಲ್ಲಿ ಆಗುವುದರ ಸಲುವಾಗಿ ಕಾಂತಿಗಳ ರೂಪದಿಂದ ಪ್ರಾದುರ್ಭವಿಸುವವನು ಎಂದು ಅರ್ಥ ತಿಳಿಯಬೇಕು. ಸಜ್ಜನರಲ್ಲಿ ಭಗವದ್ವಿಷಯಕವಾದ ತತ್ವಜ್ಞಾನವು ಉದಯಿಸಬೇಕಾದರೆ ಜ್ಞಾನರಶ್ಮಿಗಳಿಂದ ರಾರಾಜಿಸುವ ಸವಿೂರ ಸೂರ್ಯನ ಅವತಾರವಾಗಬೇಕು. ಆದುದರಿಂದ ಸಜ್ಜನರಲ್ಲಿ ತತ್ವಜ್ಞಾನಪ್ರದವಾದ ತನ್ನ ಕಾಂತಿಗಳಿಂದ ಪ್ರಾದುರ್ಭಾವವನ್ನು ಹೊಂದುವನು ಎಂಬ ಭಾವವನ್ನು ತಿಳಿಯಬೇಕು.

ಶ್ರೀವಾಯುದೇವರ ಅವತಾರ-ಅವರ ಉಪದೇಶಗಳಿಂದಲೇ ನಿಜವಾದ ತತ್ವಜ್ಞಾನ, ಸಂಸಾರವಿಮೋಚನಗಳು. ಮಿಕ್ಕವುಗಳಿಂದ ಆಗುವುದಿಲ್ಲ ಎಂಬ ವಿಷಯವು ಅಪವಿಶಾಧ್ವನಿ ಮಾರುವತಃ ಎಂಬ ಶ್ರುತಿಗೀತಾದಿ ವಾಕ್ಯಗಳಲ್ಲಿ ಉಪಪಾದಿತವಾಗಿರುತ್ತದೆ. ||೧೩||

## ಶ್ರೀಗುರುಹೃದಯಪ್ರಕಾಶಿಕೆ

ಮುಖ್ಯಕರ್ತೃ ಪ್ರಾಣದೇವರ ವಾಙ್ಮನೋಮಯರೂಪ ಸ್ಮರಣೋಪಾಸನೆ ತಿಳಿಸುತ್ತಾರೆ, ಅನಿಲ ಎಂದು, ಅನಿಲ ಎಂಬ ಪ್ರಾಣದೇವರು ವಾಕ್ಕು ಮನಸ್ಸು ಎರಡರಲ್ಲೂ ವ್ಯಾಪ್ತನಾದ್ದರಿಂದ ವಾಙ್ಮಮನೋಮಯನೆಂತ ಹೇಳಿಸಿಕೊಂಡು, ತನ್ನ ಸ್ವಾಧೀನರಾದ ವಾಗಭಿಮಾನಿ ಪಾವಕನೆಂಬ ಅಗ್ನಿ, ಜಿಹ್ವಾಭಿಮಾನಿ ವರುಣ, ಮನೋಭಿಮಾನಿ ಸಂಕ್ರಂದನನೆಂಬ ಇಂದ್ರ ಇವರೊಳಗಿದ್ದು ದೇವರ ರೂಪಗುಣಗಳನ್ನು ಸದಾ ಸ್ಮರಿಸುತ್ತಾ, ಉಚ್ಚಾರಣೆಯನ್ನು ಮಾಡಿಸುತ್ತಾ ಸದಾ ನಮ್ಮನ್ನು ರಕ್ಷಿಸುವನು. ಸನ್ಮುನಿಗಣಾರಾಧಿತಪದಾಂಬುಜ ಅಂದರೆ, ಜ್ಞಾನಿಗಳ ಸಮೂಹದಿಂದ ಪೂಜಿಸಲ್ಪಟ್ಟ ಚರಣಕಮಲ ಉಳ್ಳವನು.

ಗೋಜ ಅಂದರೆ ವೇದಪ್ರತಿಪಾದ್ಯನಾದ ದೇವರು. ಸುರರಾಜ ಎಂದರೆ ದೇವಾನುದೇವತೆಗಳಿಗೆ ಸ್ವಾಮಿಯಾದವನು ಎಂದರೆ, ಅಮುಖ್ಯಕರ್ತೃಗಳಾದ ಜೀವರ ಸಾಧನೆ ಪ್ರಕಾಶ ಮಾಡಿ ಕೊಡುವನೆಂದರ್ಥ. ||೧೩||

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ಪ್ರಥಮಾಂಗಭೂತರಾದವರೂ, ಜೀವೋತ್ತಮರಾದವರೂ ಶ್ರೀಭಾರತೀರಮಣರಾದ ಶ್ರೀವಾಯುದೇವರು.

ಶ್ರೀವಾಯುದೇವರು, ಉಚ್ಚರಿಸುವ ವಾಕ್ಯಗಳಲ್ಲಿದ್ದು ವಾಙ್ಮಯರಾಗಿರುವರು. ಮನೋಗೋಳಕದಲ್ಲಿ ಅಂತಸ್ಥಿತರಾಗಿದ್ದು ಮನೋಮಯರೆಂದೆನಿಸಿರುವರು.

ಅಗ್ನಿಯು ಜಿಹ್ವೇಂದ್ರಿಯದಲ್ಲಿದ್ದು ವಾಗಭಿಮಾನಿಯಾಗಿ ಉಚ್ಚಾರಣಾ ಕ್ರಿಯಾರೂಪವಾದ ವಾಕ್ಯಗಳನ್ನು ನುಡಿಸುವನು. ಶ್ರೀಅನಿಲದೇವರು ಪಾವಕನಲ್ಲಿದ್ದು, ವಾಙ್ಮಯರಾಗಿ ಅಗ್ನಿಯ ದ್ವಾರಾ ವಾಕ್ಯರೂಪವಾದ ವಾಕ್‌ಕ್ರಿಯೆಗಳನ್ನು ನುಡಿದು ನುಡಿಸುವರು.

ಜಿಹ್ವಾಭಿಮಾನಿಯಾದ ವರುಣನಲ್ಲಿ ಅಂತಸ್ಥಿತರಾಗಿದ್ದು, ಅನಿಲದೇವರು ಅಪ್‌ತತ್ತ್ವದ ತನ್ಮಾತ್ರಾಗುಣವಾದ ರಸದಲ್ಲಿದ್ದು, ತದ್ದ್ವಾರಾ ವಾಗ್ರೂಪರಾದ ಕ್ರಿಯೆಗಳನ್ನು ವರುಣನದ್ವಾರಾ ಮಾಡಿ ಮಾಡಿಸುತ್ತಿರುವರು.

ಸಂಕ್ರಂದನನಾಮಕರಾದ ಇಂದ್ರದೇವರು ಮನೋಭಿಮಾನಿಗಳು. ಪದನದಲ್ಲಿ ಸ್ಥಿತರಾಗಿರುವ ಅಗ್ನಿಯದ್ವಾರಾ, ಜಿಹ್ವೇಂದ್ರಿಯಸ್ಥಿತರಾದ ವರುಣನದ್ವಾರಾ, ತತ್ತದ್ದೇವತೆಗಳ ಅಂತಸ್ಥಿತರಾದ ಶ್ರೀವಾಯುದೇವರು ವಾಗ್ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾ ವಾಙ್ಮಯರೆನಿಸಿದ್ದಾರೆ. ಅಂತೆಯೇ ಮನೋಗೋಳಕದಲ್ಲಿದ್ದು ಕಂಠಗತ ಕಿರುನಾಲಿಗೆಯಲ್ಲಿರುವ ಮನೋಭಿಮಾನಿಗಳಾದ ಇಂದ್ರನಲ್ಲಿದ್ದು, ಮನೋವ್ಯಾಪಾರಗಳನ್ನು ಮಾಡಿ

ಮಾಡಿಸುತ್ತಾ, ಮನೋಽಮಯರೆನಿಸಿದ್ದಾರೆ. ಆಯಾಯಾ ತತ್ತ್ವಗಳಲ್ಲಿ ವಿದ್ಯಮಾನವಾಗಿರುವ ಭಗವದ್ರೂಪಗಳನ್ನೂ ಮತ್ತು ಆಯಾಯಾ ತತ್ತ್ವ ದೇವತಾಂತರ್ಗತ ಕೇಶವಾದಿ ಕೃಷ್ಣಪರ್ಯಂತ ಚತುರ್ವಿಂಶತಿ ಸಂಖ್ಯಾಕವಾದ ಭಗವದ್ರೂಪ, ನಾಮಗಳನ್ನು ನಿರಂತರದಲ್ಲಿ ಶ್ರೀವಾಯುದೇವರು ಉಪಾಸನಾ ರೂಪವಾದ ಧ್ಯಾನಗೈಯುತ್ತಾ, ವಾಗ್ರೂಪದ್ವಾರಾ ಉಚ್ಚರಿಸುತ್ತಾ ತತ್ತ್ವ ಕಾರ್ಯಗಳನ್ನು ತಮ್ಮ ಬಿಂಬನ ಪ್ರೇರಣಾನುಸಾರ ನಿರ್ವಹಿಸುತ್ತಿರುವರು.

ಮುನಿಗಳೆಂದರೆ ಜ್ಞಾನಿಗಳೆಂದರ್ಥ. ಭಗವನ್ಮಾಹಾತ್ಮೆಯನ್ನು ಅರಿತ ಅಂತಹ ಬ್ರಹ್ಮಜ್ಞಾನಿಗಳೇ ಸನ್ಮುನಿಗಳು. ಸನ್ಮುನಿಗಳ ಗಣದಿಂದ ಆರಾಧಿತ ಪಾದಪಂಕಜಗಳುಳ್ಳವನೇ ಶ್ರೀಹರಿಯು. ಇದರಿಂದ ಶ್ರೀಹರಿಯ ಪ್ರಥ ಮಾಂಗಭೂತರೂ, ಭಗವತ್ಕಾರ್ಯ ಸಾಧಕರೂ ಆದ ಶ್ರೀವಾಯುದೇವರೂ ಸಹ ಸನ್ಮುನಿಗಳಿಂದ ಸೇವಿತವಾದ ಪಾದಗಳುಳ್ಳವರು. ಗೌಃ ಎಂದರೆ ವೇದ ಗಳು. ಅದರಿಂದ ಅಭಿವ್ಯಕ್ತವಾದ ವೇದಾಂತರೂಪವಾದ ವಾಣಿ ವೇದಾಂತಾ ರ್ಥವಾದ ಗ್ರಂಥಗಳು ಯಾರ ದೆಸೆಯಿಂದ ಪ್ರಚುರವಾದವೋ, ಅಂತಹ ಶ್ರೀವಾಯುದೇವರಿಗೆ ಗೋಜ ಎಂದು ಹೆಸರು. ಆ ವಾಯುದೇವರ ತೃತೀಯಾವತಾರಭೂತರಾದ ಶ್ರೀಮನ್ಮಧ್ವಮುನಿಗಳು ವೇದಾಂತ ಗ್ರಂಥಗಳನ್ನು ರಚಿಸಿದರು. ಪರಮಮುಖ್ಯವೃತ್ತಿಯಿಂದ ಸಕಲ ವೇದಪ್ರತಿಪಾದ್ಯನಾದ ಪ್ರಣವಸ್ವರೂಪಿ ಶ್ರೀಪರಮಾತ್ಮನೇ ಗೋಜನಾಮಕನು. ಬಳಿತ್ಥಾ ಸೂಕ್ತಾದಿ ವೇದಪ್ರತಿಪಾದ್ಯರಾದ ಶ್ರೀವಾಯುದೇವರೂ ಸಹ ಗೋಜನಾಮಕರು.

ಗರುಡ ಶೇಷ ರುದ್ರಾದಿ ಸುರವರ್ಗಕ್ಕೆ ತಾರತಮ್ಯದಲ್ಲಿ ಶ್ರೇಷ್ಠರೂ, ನಿಯಾಮಕರೂ ಆದ ಶ್ರೀವಾಯುದೇವರು ಸುರರಾಜರೆಂದೆನಿಸಿದ್ದಾರೆ. ಶ್ರೀಪರಮಾತ್ಮನು ಪರಮ ಮುಖ್ಯವೃತ್ತಿಯಿಂದ ಸನ್ಮುನಿಗಣಾರಾಧಿತ ಪದಾಂ ಬುಜ ಗೋಜನು ಮತ್ತು ಸುರರಾಜನು. ಶ್ರೀಹರಿಯ ಪ್ರಸಾದಬಲದಿಂದ ಶ್ರೀವಾಯುದೇವರು ಗೋಜನಾಮಕರು ಮತ್ತು ಸುರರಾಜರೆಂದು ತಾತ್ಪರ್ಯ.

||೧೩||

### ಪದ್ಯ ೧೪

**ಮೂಲ**

**ಪಾದವೆನಿಪವು ವಾಙ್ಮನೋಮಯ ।**
**ಪಾದರೂಪದ್ವಯದೊಳು ಪ್ರ ।**
**ಲ್ಹಾದ ಪೋಷಕ ಸಂಕರುಷಣಾಹ್ವಯದಿ ನೆಲೆಸಿದ್ದು ॥**
**ವೇದಶಾಸ್ತ್ರ ಪುರಾಣಗಳ ಸಂ ।**
**ವಾದರೂಪದಿ ಮನನಗೈವುತ ।**
**ಮೋದಮಯ ಸುಖವಿತ್ತು ಸಲಹುವ ಸರ್ವಸಜ್ಜನರ ॥೧೪॥**

**ಅವತರಣಿಕೆ**

ಆನಂದಸ್ವರೂಪಿಯಾದ ಶ್ರೀಪರಮಾತ್ಮನು ಸಕಲ ಸಜ್ಜನರಾದ ಭಗವದ್ಭಕ್ತರಿಗೆ ಸದಾ ಸಂತೋಷವನ್ನಿತ್ತು ಸಲಹುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ವಾಕ್**= ವಾಗಿಂದ್ರಿಯವಾದ ಜಿಹ್ವೆ ಒಂದು, **ಮನ**= ಮನಸ್ಸೆಂಬ ಇಂದ್ರಿಯ ಒಂದು, **ಪಾದವೆನಿಪವು**= ಈ ಪ್ರಕಾರ ಉಭಯ ಇಂದ್ರಿಯಗಳು ಉಭಯ ಪಾದಗಳೆನಿಸುವುವು. **ಪಾದರೂಪದ್ವಯದೊಳು**= ಪಾದ ಸಾಂಕೇತವಾದ ವಾಕ್ ಮತ್ತು ಮನಗಳೆಂಬ ಉಭಯ ಇಂದ್ರಿಯಗಳಲ್ಲಿ ವಿದ್ಯಮಾನರಾದ ವಾಙ್ಮನೋಮಯರಾದ ಶ್ರೀವಾಯುದೇವರ ರೂಪದ್ವಯಗಳಲ್ಲಿ, **ಪ್ರಹ್ಲಾದಪೋಷಕ**= ಭಾಗವತೋತ್ತಮನಾದ ಪ್ರಹ್ಲಾದ ಬಾಲಕನನ್ನು ರಕ್ಷಿಸಿದ ಶ್ರೀನರಸಿಂಹನಾಮಕ ಪರಮಾತ್ಮನು ವಾಙ್ಮಯರಾದ ಶ್ರೀವಾಯುದೇವರಲ್ಲಿ, **ಸಂಕರುಷಣಾಹ್ವಯದಿ**= ಶ್ರೀವಾಯುದೇವರಲ್ಲಿ ಶ್ರೀಸಂಕರ್ಷಣ ನಾಮಕ ಪರಮಾತ್ಮನು, **ನೆಲೆಸಿದ್ದು**= ವಾಯ್ವಂತರ್ಗತನಾಗಿ ಆವಾಸನಾಗಿದ್ದು, **ವೇದ**= ಋಗಾದಿ ಚತುರ್ವೇದಗಳು, **ಶಾಸ್ತ್ರ**= ಭಾಗವತ, ಇತಿಹಾಸಾದಿ ಸಚ್ಛಾಸ್ತ್ರಗಳು, **ಪುರಾಣಗಳ**= ವಿಷ್ಣು ಪುರಾಣಾದಿಗಳನ್ನು, **ಸಂವಾದರೂಪದಿ**= ಮನಸ್ಸಿಗೂ ಮತ್ತು ವಾಕ್ಕಿಗೂ ಸಂವಾದ ರೂಪವಾದ

ಕ್ರಿಯೆಗಳನ್ನು ನಡೆಯಿಸುತ್ತಾ (ಮನಸ್ಸಿನ ದ್ವಾರಾ ಮನನ ಕ್ರಿಯೆ, ವಾಗಿಂದ್ರಿಯದ ದ್ವಾರಾ ಸಂಭಾಷಣೆ, ಉಪದೇಶ ಇತ್ಯಾದಿ ಕ್ರಿಯಾ ವಿಶೇಷಗಳು) **ಮನನಗೈವುತ**= ಪರಮಾತ್ಮನು ಬಿಂಬಕ್ರಿಯಾದ್ವಾರಾ ಚಿಂತನಕಾರ್ಯ ನಡೆಸಿ, ಜೀವರದ್ವಾರಾ ನಡೆಯಿಸುತ್ತಾ, **ಮೋದಮಯ**= ಆನಂದಸ್ವರೂಪಿಯಾದ ಬಿಂಬನು, **ಸರ್ವಸಜ್ಜನರ**=ಸಕಲ ಭಗವದ್ಭಕ್ತರನ್ನು **ಸುಖವಿತ್ತು** = ಅಪರೋಕ್ಷಾಖ್ಯ ಸುಖವನ್ನು ಕೊಟ್ಟು, **ಸಲಹುವ**= ಸಂರಕ್ಷಿಸುವನು. ||೧೪||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ವಾಙ್ಮನೋಮಯ ಭಗವದ್ರೂಪಗಳ ಹೇಳುತಾರೆ.

ಸಾಧನೆಗೆ ಪ್ರಚುರವಾದ, ಪ್ರಸಿದ್ಧವಾದ ಇಂದ್ರಿಯಗಳು ವಾಗಿಂದ್ರಿಯ ಒಂದು, ಮನೋ ಇಂದ್ರಿಯ ಒಂದು, ಅಂತು ಎರಡು ಇಂದ್ರಿಯಗಳು. ಗ್ರಾಮದಿಂದ ಗ್ರಾಮಾಂತರಕ್ಕೆ ಹೋಗಬೇಕಾದರೆ ಎರಡು ಪಾದಗಳು ವ್ಯತಿರಿಕ್ತ ನಡೆಯೋಣ ಹ್ಯಾಂಗೆ ಆಗೋದಿಲ್ಲವೋ, ತದ್ವತ್ ವೈಕುಂಠಾಖ್ಯಗ್ರಾಮಕ್ಕೆ ಇಹಲೋಕವೆಂಬ ಗ್ರಾಮದಿಂದ ಹೋಗಲಿಕ್ಕೆ ಪಾದಗಳು ಎರಡು ದಾವವೆಂದರೆ ವಾಕ್ ಮನ ಎಂಬ ಎರಡು ಇಂದ್ರಿಯಗಳು. ಇವುಗಳು ಗಮನಾಗಮನ ಸದೃಶಗಳು. ಅಹಂಮಮತಾ ತ್ಯಾಗಪೂರ್ವಕ ಜ್ಞಾನ ಭಕ್ತಿ ವೈರಾಗ್ಯಗಳು ಪಾದಸಂಕೇತವಾದ ವಾಙ್ಮನಗಳೆಂಬ ಎರಡರೊಳು ವಿದ್ಯಮಾನಗಳಾದ ವಾಙ್ಮನೋನಾಮಗಳಿಂದ ಯುಕ್ತರಾದ ವಾಯುದೇವರ ರೂಪದ್ವಯಗಳೊಳು ವಾಙ್ಮಯನಾದ ವಾಯುದೇವರಲ್ಲಿ ಪ್ರಲ್ಹಾದಪೋಷಕ ನರಸಿಂಹ, ಮನೋಮಯನಾದ ವಾಯುದೇವರಲ್ಲಿ ಸಂಕರ್ಷಣ ಈ ಉಭಯರು, ವಾಙ್ಮನೋನಾಮದಿಂದ ಅಂತರ್ಗತರಾಗಿ ಆವಾಸರಾಗಿದ್ದು, ಋಗಾದಿ ವೇದಗಳು ಹಾಂಗೆ ಶ್ರೀಮಹಾಭಾರತ, ಭಾಗವತಾದಿ ಶಾಸ್ತ್ರಗಳು, ವಿಷ್ಣು ಪುರಾಣಾದಿಗಳೂ

ಮನಸ್ಸಿಗೂ ವಾಕ್ಕಿಗೂ ಸಂವಾದರೂಪವಾದ ಕ್ರಿಯೆಗಳ ನಡಸತಾ, ತನ್ನಾಮದಿಂದ ಅಂತರ್ಗತನಾಗಿ ಇದ್ದು, ಪರಮಾತ್ಮನಾದ ತಾನು ಮನಃ ಕ್ರಿಯಾ ನಡಸತಾ, ತದ್ದ್ವಾರಾ ಜೀವರ ಕಡಿಯಿಂದ ನಡಸತಾ, ಮನನ ಎಂದರೆ ಸರ್ವದಾ ಮನಸ್ಸಿನಲ್ಲಿ ಜ್ಞಾಪಕ ಕೊಡತ, ಕ್ರಿಯಾ ವಾಕ್ಕಿನಿಂದ ನಡಸತಾ, ಆನಂದಮಯನಾದ ಬಿಂಬರೂಪಿ ಪರಮಾತ್ಮನು ಅಪರೋಕ್ಷಾಖ್ಯ ಸುಖವನ್ನು ಕೊಟ್ಟು, ಈ ಪ್ರಕಾರ ಅನುಸಂಧಾತೃಗಳಾದ ಭಗವದ್ಭಕ್ತರ ಸಂರಕ್ಷಣ ಮಾಡತಾನೆ ಎಂತ ತಾತ್ಪರ್ಯ.

### ವಿಶೇಷಾರ್ಥ

ಛಾಂದ್ಯೋಪನಿಷದ್ಭಾಷ್ಯಾರ್ಥವನ್ನು ತಿಳಿಸುತ್ತಾರೆ. ಏಷ ಹ ವೈ ಯಜ್ಞೋಯೋಽಯಂ ಪವತ ಏಷ ಯನ್ನಿದಂ ಸರ್ವಂ ಪುನಾತಿ ಯದೇಷ ಯನ್ನಿದಂ ಸರ್ವಂ ಪುನಾತಿ, ತಸ್ಮಾದೇಷ ಏವ ಯಜ್ಞಃ ತಸ್ಯ ಮನಶ್ಚ ವಾಕ್ ಚ ವರ್ತನೀ ತಯೋರನ್ಯತರಾಂ ಮನಸಾ ಸಂಸ್ಕರೋತಿ

(ಛಾಂ ಅ.೪, ಖಂ.೪).

**ಭಾಷ್ಯ**—ವಾಙ್ಮನಃಪಾದಯಜ್ಞಾಖ್ಯಪ್ರತಿಮೋ ವಾಯುರೀರಿತಃ ।
ಧ್ಯಾಯನ್ ವಾಯುಂ ಹರಿಂ ಚೈವ ತತೋ ಬ್ರಹ್ಮಾ ಮುನಿರ್ಭವೇತ್॥
ಇತಿ॥ ॥೧೪॥

### ಭಾವಪ್ರಕಾಶಿಕೆ

ನಡೆಯುವವರಿಗೆ ಪಾದಗಳು ಹೇಗೆ ಮುಖ್ಯವಾದವೋ ಹಾಗೆ ಜ್ಞಾನ ಮಾರ್ಗವನ್ನು ನಡೆದು ಮುಕ್ತಸ್ಥಾನವನ್ನು ಸೇರುವುದಕ್ಕೆ ವಾಕ್, ಮನಸ್ಸು. ಇವೆರಡೂ ಮುಖ್ಯವಾದವು. ಮೇಲಿನ ಪದ್ಯದಲ್ಲಿ ವಾಙ್ಮನೋಭಿಮಾನಿಗಳಲ್ಲಿ ವಾಯುದೇವರೇ ಇರುವರೆಂದು ಹೇಳಿದ್ದರು. ಮುಕ್ತಿಗೆ ಹೋಗಲಿಕ್ಕೆ ವಾಙ್ಮಯ ಒಂದು ಪಾದ, ಮನೋಮಯ ಒಂದು ಪಾದ. ವಾಯುದೇವರೇ ಪಾದದ್ವಯರೂಪರಾಗಿ ಇರುವರು. ಈ ಪಾದದ್ವಯದಲ್ಲಿ ವಾಙ್ಮಯರೂಪ

ದಲ್ಲಿ ನರಸಿಂಹದೇವರು, ಮನೋಮಯರೂಪದಲ್ಲಿ ಸಂಕರ್ಷಣದೇವರು ಇರುವರು. ಭಾರತಾದಿ ಶಾಸ್ತ್ರಗಳು, ಋಗಾದಿ ವೇದಗಳು, ಭಾಗವತಾದಿ ಪುರಾಣಗಳು ಇವುಗಳ ಶ್ರವಣ, ಪಠನ, ಮನನಗಳೇ ಜ್ಞಾನಕ್ಕೆ ಸಾಧನವು. ಇವುಗಳನ್ನು ಪಠನ ಮಾಡುವುದು, ವಾಙ್ಮಯ ವ್ಯಾಪಾರ. ಈ ವಾಙ್ಮಯ ರೂಪಿಯಾದ ವಾಯುದೇವರಲ್ಲಿ ನರಸಿಂಹರೂಪಿಯಾದ ಪರಮಾತ್ಮನಿದ್ದು ವೇದ ಶಾಸ್ತ್ರಾದಿಗಳನ್ನು ಪಠನ ಮಾಡಿಸುವನು. ಶ್ರವಣಮಾಡಿ ಅವುಗಳನ್ನು ಮನನ ಮಾಡುವುದು ಮನೋವ್ಯಾಪಾರವು. ಇಲ್ಲಿ ಮನೋರೂಪಿಯಾದ ವಾಯುದೇವರಲ್ಲಿ ಸಂಕರ್ಷಣನಾಮಕ ಪರಮಾತ್ಮನಿದ್ದು ಮನನ ಮಾಡಿಸುವನು. ಪರಮಾತ್ಮನು ಸ್ವಯಂ ನಿತ್ಯಾನಂದಮಯನು. ಗ್ರಂಥಗಳ ಪಠನ ಶ್ರವಣಾದಿಗಳನ್ನು ಮಾಡಿಸಿ ಸಜ್ಜನರಿಗೆ ಜ್ಞಾನ ಹುಟ್ಟಿಸಿ ಸಾಧನ ಪೂರ್ತಿ ಮಾಡಿಸಿ ಅಪರೋಕ್ಷಜ್ಞಾನವನ್ನು ಹುಟ್ಟಿಸಿ ಮುಕ್ತಿಯನ್ನು ಕೊಟ್ಟುದ್ಧರಿಸುವನು. ||೧೪||

### ಭಾವದರ್ಪಣ

ಸಂಕರ್ಷಣನಾಮಕ ಶ್ರೀಹರಿ ವಾಙ್ಮನೋಧಿಷ್ಠಾನದಲ್ಲಿ ತನ್ನಾಮ ರೂಪ ದ್ವಯದಿಂದ ನಿಂತು ವೇದಶಾಸ್ತ್ರಪುರಾಣಗಳನ್ನು ಸಂವಾದರೂಪದಿಂದ ಅಧಿಕಾರಿಗಳಿಗೆ ಮನನ ಮಾಡಿಸಿ ಪೊರೆವನೆಂದು ಹೇಳುತ್ತಾರೆ, ಪಾದೇತಿ. ||೧೪||

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಪಾದ ಇತಿ॥ ವಾಙ್ಮಯಪಾದಃ, ಮನೋಮಯ ಪಾದಃ ಇತಿ ವಾಙ್ಮನಸ್ಥ ವಾಯು ಯಜ್ಞಸ್ಯ ದ್ವೌ ಪಾದೌ ದ್ವೌ ಅಂಶೌ ತತ್ರ ನೃಹರಿಃ ಇತ್ಯರ್ಥಃ। ಅತಃ ವಾಯುಃ ಯಜ್ಞನಾಮಾ ತತ್ಪಾದೌ ವಾಙ್ಮನಃ ಸ್ಥಿತೌ॥ ವಾಙ್ಮನಃ ಪಾದ ಯಜ್ಞಾಖ್ಯ ಪ್ರತಿಮಃ ವಾಯುರೀರಿತಃ॥ ಇತಿ ಛಾಂದೋಗ್ಯೇ॥ ಮನನ ಇತಿ ಗುರುಸ್ಥಃ ಸನ್ ಇತಿ ಶೇಷಃ ॥ ||೧೪||

## ಕನ್ನಡಾರ್ಥ

ಪಾದವೆನಿಪವು ಎಂಬ ಈ ಪದ್ಯದಲ್ಲಿ ವಾಯುಯಜ್ಞೋಪಾಸನೆಯನ್ನು ನಿರೂಪಿಸುತ್ತಾರೆ. ಈ ವಿದ್ಯೆಯು ಏಷ ಹ ವೈ ಯಜ್ಞಃ ಎಂದು ಛಾಂದೋಗ್ಯೋಪನಿಷತ್ತಿನಲ್ಲಿ (ಅಧ್ಯಾಯ ೪, ಖಂಡ ೧೬ರಲ್ಲಿ) ನಿರೂಪಿತವಾಗಿರುತ್ತದೆ.

ಯನ್ = ಹೋಗುತ್ತ ಸಂಚಾರಗತಿಗಳಿಂದ, ಜ್ಞ = ಪವಿತ್ರೀಕರಿಸುವುದರಿಂದ "ಯಜ್ಞ"ವೆಂದು ವಾಯುವಿಗೆ ಕರೆಯುತ್ತಾರೆ. ಹೀಗೆ ಸರ್ವಯಜ್ಞಾಭಿಮಾನಿಯೂ ಯಜ್ಞದಲ್ಲಿ ಸನ್ನಿಹಿತನೂ ಆದುದರಿಂದ ಯಜ್ಞನಾಮಕನಾದ ವಾಯುವಿಗೆ ಎರಡು ಪಾದಗಳು. ಮನಸ್ಸು ಒಂದು ಪಾದ. ವಾಕ್ಕು ಇನ್ನೊಂದು ಪಾದ. ಅಂದರೆ ಯಜ್ಞನಾಮಕನಾದ ವಾಯುವಿನ ಎರಡು ಪಾದಗಳು ಮನಸ್ಸಿನಲ್ಲಿ ಹಾಗೂ ವಾಕ್ಕಿನಲ್ಲಿ ಇರುತ್ತವೆ. ಮನಸ್ಸಿನಲ್ಲಿ ದಕ್ಷಿಣ ಪಾದ (ಬಲಪಾದ), ವಾಕ್ಕಿನಲ್ಲಿ ವಾಮಪಾದ (ಎಡಪಾದ), ಹೀಗೆ ವಿವೇಚಿಸಿ ತಿಳಿಯಬೇಕು. ಹೀಗೆ ವಾಕ್ಕು ಮನಸ್ಸುಗಳಲ್ಲಿರುವ ವಾಯುಯಜ್ಞದ ಎರಡು ಅಂಶಗಳಲ್ಲಿ ನರಹರಿ ಹಾಗೂ ಸಂಕರ್ಷಣರಿರುತ್ತಾರೆ ಎಂದು ಅಭಿಪ್ರಾಯ.

ಗತಿಗಳಿಂದಲೇ ಜಗತ್ತನ್ನು ಪವಿತ್ರಿಸುವುದರಿಂದ ಯಜ್ಞವೆಂದು ವಾಯುವಿಗೆ ಹೆಸರು. ಹೀಗೆ ಯಜ್ಞನಾಮಕ ವಾಯುವಿನ ಪಾದಗಳು–ಅಂಶಗಳು ವಾಕ್–ಮನಸ್ಸುಗಳಲ್ಲಿ ಇರುತ್ತವೆ ಎಂದೂ, ವಾಙ್ಮನಃ ಪಾದಗಳುಳ್ಳ ಯಜ್ಞವೇ ಪ್ರತಿಮೆಯಾಗಿ ಉಳ್ಳವನು ಎಂದು ವಾಯುವಿಗೆ ಪ್ರಸಿದ್ಧಿ ಇರುತ್ತದೆ, ಎಂದು ಭಾಷ್ಯದಲ್ಲಿ ನಿರೂಪಿಸಿರುತ್ತಾರೆ. ಗುರುಗಳಲ್ಲಿ ನಿಂತು ಮಾನಸವ್ಯಾಪಾರ ಮಾಡಿಸುವವನೆಂದು ತಿಳಿಯಬೇಕು. ||೧೪||

## ಶ್ರೀಗುರುಹೃದಯಪ್ರಕಾಶಿಕೆ

ಪ್ರಾಣಾಂತರ್ಗತ ಪರಮಮುಖ್ಯಕರ್ತೃ ಸಂಕರ್ಷಣನ ಸ್ಮರಣೋಪಾಸನೆ ತಿಳಿಸುತ್ತಾರೆ, ಪಾದವೆಂದು. ವಾಕ್ಕಿನಲ್ಲೂ ಮನಸ್ಸಿನಲ್ಲೂ ವ್ಯಾಪ್ತರಾದ

ಅಭಿಮಾನಿದೇವತೆಗಳು ವಾಙ್ಮನೋಮಯರೆನಿಸಿ ದೇವರಿಗೆ ಪಾದವೆನಿಪವು ಎಂದರೆ, 'ಪಾದೋಸ್ಯ ವಿಶ್ವಭೂತಾನಿ' ಎಂಬ ರೀತ್ಯಾ ಪುತ್ರಾದಿಗಳಂತೆ ಭಿನ್ನಾಂಶರೆಂದು ಕರೆಸುವರು. ಆ ದೇವತೆಗಳಲ್ಲಿ ಪ್ರಹ್ಲಾದಪೋಷಕನಾದ ನೃಸಿಂಹನು ಸಂಕರ್ಷಣನೆಂಬ ಹೆಸರಿನಿಂದ ನೆಲೆಸಿದ್ದು, ವೇದಶಾಸ್ತ್ರ ಪುರಾಣಗಳ ಸಂವಾದವೆಂಬ ಪಠನಾದಿ ಮೂಲಕ ಮನನಗೈಯ್ಯುತ ಎಂದರೆ, ಅರ್ಥವನ್ನು ಮನಸ್ಸಿಗೆ ತಿಳಿಸಿ ಮೋದವಮಾಯನೆಂಬ ಆನಂದಮೂರ್ತಿಯಾದ ಸ್ವಾಮಿಯು ಸುಖವಿತ್ತು ಸಲಹುವ ಎಂದರೆ, ಸಕಲ ಸಜ್ಜನರನ್ನೂ ಅಮುಖ್ಯಕರ್ತೃಗಳೆನಿಸಿ ಫಲಕೊಟ್ಟು ರಕ್ಷಿಸುವನೆಂದರ್ಥ.

**ವಾಙ್ಮನಃ ಪಾದ ಯಜ್ಞಾಖ್ಯ ಪ್ರತಿನೋ ವಾಯುರೀರಿತಃ ।**
**ಧ್ಯಾಯನ್ ವಾಯುಂ ಹರಿಂ ಚೈವ ತತೋ ಬ್ರಹ್ಮಾ ಮುನಿರ್ಭವೇತ್ ॥**
ಎಂಬ ಛಾಂದೋಗ್ಯಭಾಷ್ಯ.

**ಏಷಹ ವೈ ಯಜ್ಞೋ ಯೋಯಂಪತೇ ಏಷ ಯನ್ನಿಧನಂ ಸರ್ವಂ ಪುನಾತಿ । ತಸ್ಮಾದೇಷ ಏವ ಯಜ್ಞಸ್ತಸ್ಯೈ ಮನಶ್ಚ ವಾಕ್ಚವರ್ತನೀ। ತಯೋರನ್ಯತರಾಂ ಮನಸಾ ಸಂಸ್ಕರೋತಿ ।**

ಇತ್ಯಾದಿ ಛಾಂದೋಗ್ಯೋಪನಿಷದರ್ಥ.

**ವಾಙ್ಮನಃ ಪ್ರಾಣ ಯಜ್ಞಾಖ್ಯ ಪ್ರತಿನೋ ವಾಯುರೀರಿತಃ ।**
**ಧ್ಯಾಯನ್ ವಾಯುಂ ಹರಿಂ ಚೈವ ತತೋ ಬ್ರಹ್ಮಾ ಮುನಿರ್ಭವೇತ್॥**
ಎಂಬ ಭಾಷ್ಯಾರ್ಥ ಸಹ ವಿವರಿಸಿರುತ್ತಾರೆ.

**ವಿಶೇಷಾರ್ಥ**

ಭಗವನ್ಮಾಹಾತ್ಮ್ಯ ಉಚ್ಚಾರ ಮಾಡುವುದಕ್ಕೆ ಮತ್ತು ಧ್ಯಾನ ಮಾಡುವುದಕ್ಕೆ ಮುಖ್ಯ ವಾಗಭಿಮಾನಿ ರುದ್ರ ಅಗ್ನಿ, ವರುಣ ಜಿಹ್ವಾಭಿಮಾನಿ, ಇಂದ್ರ ಕಂಠಗತ ಕಿರುನಾಲಿಗೆ ಅಭಿಮಾನಿ. ಅನಿಲದೇವನು ಇವರುಗಳೊಳಿದ್ದು, ಮನೋಭಿಮಾನಿಗಳಾದ ಗರುಡ ಶೇಷ ರುದ್ರರಲ್ಲಿದ್ದು, ಭಗವದ್ಧ್ಯಾನ ಸಹ ಮಾಡಿಸಿ, ಉಚ್ಚಾರ ಸಹ ಮಾಡಿಸುವುದರಿಂದ ವಾಯುದೇವರು ವಾಙ್ಮನೋ

ಮಯನಾಮದಿಂದ ಕರೆಸಿ, ಭಗವನ್ನಾಮೋಚ್ಚಾರಣೆ ಭಗವದ್ಧ್ಯಾನ ಸಹ ಮಾಡಿಸುತ್ತಾರೆಂಬುದೇ ರಹಸ್ಯಾರ್ಥ. ||೧೪||

# ಸರ್ವವ್ಯಾಖ್ಯಾನಸಾರಸಂಗ್ರಹ

ವಾಙ್ಮನೋಮಯರಾದ ಶ್ರೀವಾಯುದೇವರಲ್ಲಿ ಅಂತಸ್ಥಿತ ಶ್ರೀನರಸಿಂಹ ಮತ್ತು ಶ್ರೀಸಂಕರ್ಷಣನಾಮಕ ಶ್ರೀಪರಮಾತ್ಮನ ಧ್ಯಾನೋಪಾಸನಾ ಕ್ರಮ ವನ್ನು ತಿಳಿಸುತ್ತಾರೆ.

ಸಾಧಕನಿಗೆ ಮೋಕ್ಷಸ್ಥಾನವೆಂಬ ಗುರಿಯನ್ನು ಸೇರಲು ಉಭಯಪಾದ ಗಳು ಅತ್ಯವಶ್ಯಕ. ವಾಕ್ಕು ಮತ್ತು ಮನಸ್ಸು ಎಂಬ ಇಂದ್ರಿಯಗಳೇ ಈ ಚರಣದ್ವಯಗಳು. ನಮ್ಮ ಮನಸ್ಸಿನಲ್ಲಿ ಮೂಡಿದ ಮನೋಭಿಪ್ರಾಯಗಳನ್ನು ಇತರರಿಗೆ ತಿಳಿಸಲು ಸಹಕಾರಿಯಾದ ಇಂದ್ರಿಯವೇ ವಾಗಿಂದ್ರಿಯವು.

ಇಂತಹ ಭಾರತೀರಮಣರ ವಾಙ್ಮಯರೂಪವಾದ ಎಡಪಾದದಲ್ಲಿ ಪ್ರಹ್ಲಾದವರದನಾದ ಶ್ರೀನರಸಿಂಹರೂಪವನ್ನು ಚಿಂತಿಸಬೇಕು.

ಮನೋಮಯರೂಪವಾದ ಬಲಪಾದದಲ್ಲಿ ಶ್ರೀಸಂಕರ್ಷಣರೂಪವನ್ನು ಉಪಾಸಿಸಬೇಕು.

ಇಂತು ಶ್ರೀವಾಯುದೇವರಲ್ಲಿ ನರಸಿಂಹ ಮತ್ತು ಸಂಕರ್ಷಣರೂಪಗಳು ಪಾದರೂಪದ್ವಯದೊಳು ನೆಲೆಸಿದ್ದು, ವೇದಗಳು, ಪಂಚರಾತ್ರಾಗಮಾದಿ ಶಾಸ್ತ್ರಗಳು, ಪುರಾಣಗಳಲ್ಲಿ ಪ್ರತಿಪಾದ್ಯನಾದ ಶ್ರೀಪರಮಾತ್ಮನ ಗುಣಾವಳಿ ಯನ್ನು ವಾಗಿಂದ್ರಿಯ ದ್ವಾರಾ ಸಂವಾದರೂಪವಾದ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಾ ಸಕಲ ಸಜ್ಜನರನ್ನು ಆನಂದಸ್ವರೂಪನಾದ ಶ್ರೀಹರಿಯು ಸುಖಿ ವಿತ್ತು ಸಂರಕ್ಷಿಸುತ್ತಿರುವನು. ||೧೪||

## ಪದ್ಯ ೧೫

### ಮೂಲ

ಗಂಧವಹ ದಶದಿಶಗಳೊಳಗರ ।
ವಿಂದ ಸೌರಭ ಪಸರಿಸುತ ಘ್ರಾ ।
ಣೇಂದ್ರಿಯಗಳಿಗೆ ಸುಖವನೀವುತ ಸಂಚರಿಸುವಂತೆ ॥
ಇಂದಿರೇಶನ ಸುಗುಣಗಳ ದೈ ।
ನಂದಿನದಿ ತುತಿಸುತನುವೋದಿಸು ।
ತಂಧ ಬಧಿರ ಸುಮೂಕನಂತಿರು ಮಂದಜನರೊಡನೆ ॥ ॥೧೫॥

### ಅವತರಣಿಕೆ

ಇಂದಿರಾಪತಿಯ ಸೌರಭಸಾಂಕೇತವಾದ ಕಲ್ಯಾಣಗುಣಗಳನ್ನು ಪ್ರತಿನಿತ್ಯವೂ ಮನನಮಾಡುತ್ತಾ, ಆನಂದಿಸುತ್ತಾ, ಮಂದಜನರ ಕಣ್ಣಿಗೆ ಕುರುಡ, ಕಿವುಡ, ಮೂಕನಂತಿರು ಎಂದು ಸಾಧನೆಯ ಮರ್ಮವನ್ನು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಗಂಧವಹ**= ಪರಿಮಳವನ್ನು ಹೊತ್ತುಕೊಂಡು ಸಂಚರಿಸುವ ವಾಯು, **ಅರವಿಂದ**= ಕಮಲಪುಷ್ಪದಲ್ಲಿರುವ, **ಸೌರಭ**= ಪರಿಮಳವನ್ನು, **ದಶದಿಶಗಳೊಳಗೆ**= ಹತ್ತು ದಿಕ್ಕುಗಳಲ್ಲಿ, ಅಂದರೆ ಸರ್ವತ್ರ, **ಪಸರಿಸುತ**= ಹರಡುತ್ತಾ, **ಘ್ರಾಣೇಂದ್ರಿಯಗಳಿಗೆ**= ನಾಸಿಕೇಂದ್ರಿಯಕ್ಕೆ ವಾಸನೆಯಿಂದ, **ಸುಖವನೀವುತ**=ಆನಂದವನ್ನು ಕೊಡುತ್ತಾ, ತಾನು ಮಾತ್ರ ಇತರರ ಕಣ್ಣಿಗೆ ಕಾಣಿಸದೆ, **ಸಂಚರಿಸುವಂತೆ**= ಸರ್ವತ್ರ ಸಂಚಾರ ಮಾಡುವುದೋಪಾದಿಯಲ್ಲಿ, **ಇಂದಿರೇಶನ**= ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, **ಸುಗುಣಗಳ**= ಪರಿಮಳ ಸಾಂಕೇತವಾದ ಸಮೀಚೀನವಾದ ಕಲ್ಯಾಣ ಗುಣಾವಳಿಗಳನ್ನು, **ದೈನಂದಿನದಿ**= ಪ್ರತಿನಿತ್ಯವೂ, **ತುತಿಸುತ**=

ಸ್ತೋತ್ರ ಮಾಡುತ್ತಾ, **ಅನುಮೋದಿಸುತ**= ಅವುಗಳನ್ನು ಅನುಭವಕ್ಕೆ ತಂದುಕೊಂಡು, ಆನಂದಿಸುತ್ತಾ, **ಮಂದಜನರೊಡನೆ**= ಭಗವದ್ಭಕ್ತಿಶೂನ್ಯ ರಾದ ಅಜ್ಞಾನಿಗಳಲ್ಲಿ, **ಅಂಧ**= ಪ್ರಾಪಂಚಿಕ ದೃಶ್ಯಗಳವಿಚಾರದಲ್ಲಿ ಕುರುಡನಂತೆ, **ಬಧಿರ**= ಲೋಕವಾರ್ತೆ ಕೇಳುವುದರಲ್ಲಿ ಕಿವುಡನಂತೆ, **ಸುಮೂಕನಂತಿರು**= ವಿಷಯಗಳ ಅರಿವಿದ್ದರೂ, ಹಾಳುಹರಟೆಗಳಲ್ಲಿ ತೊಡ ಗದೆ, ಮೂಕನಂತೆ ಇರು ಎಂದು ಭಗವತ್ಸಾಧಕನ ಧರ್ಮಗಳನ್ನು ತಿಳಿಸು ತ್ತಾರೆ. ಇದೇ ಸತ್ಕರ್ಮದ ಮರ್ಮ. ||೧೫||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನಿಯಾದವ ಅಜ್ಞಾನಿಯು ಕೂಡ ಇರಬೇಕಾದರೆ ಇರತಕ್ಕ ಕ್ರಮ ಹೇಳತಾರೆ.

ಗಂಧವಹ ಎಂದರೆ, ಸಮೀಚೀನವಾದ ಗಂಧಯುಕ್ತವಾದ ಪರಿಮಳ ವನ್ನು ಹೊತ್ತುಕೊಂಡು ತಿರುಗುವ ವಾಯು ಎಂತ ತಾತ್ಪರ್ಯ. ಇಂಥಾ ವಾಯು ತಾನು ಅನ್ಯರ ನೇತ್ರಕ್ಕೆ ಗೋಚರನಾಗದೆ ಕಮಲಪುಷ್ಪಗತ ಪರಿಮಳ ವನ್ನು ಹತ್ತುದಿಕ್ಕುಗಳಲ್ಲಿ ಹರವುತ ತಾನು ಅನ್ಯರಿಗೆ ಗೋಚರನಾಗದೆ ನಾಸಿಕೇಂದ್ರಿಯಕ್ಕೆ ವಾಸನೆಯಿಂದಲೂ, ತ್ವಗಿಂದ್ರಿಯಕ್ಕೆ ವಾಯುವಾದ ತನ್ನ ಸ್ಪರ್ಶದಿಂದಲೂ ಈ ಪ್ರಕಾರ ಸಂತೋಷ ಕೊಡುತಾ ಸಂಚಾರ ಮಾಡುವಂತೆ, ಇಂದಿರಾಪತಿಯಾದ ಶ್ರೀನಾರಾಯಣದೇವರ ಪಾದಗಳೆಂಬ ಕಮಲದಲ್ಲಿ ವಿದ್ಯ ಮಾನವಾದ ಸೌರಭಸಾಂಕೇತವಾದ ಮಹಿಮಾಖ್ಯ ಸುಗಂಧವನ್ನ ಗಾಳಿ ಸದೃಶ ನಾಗಿ ಅದರನ್ನ ತೆಗೆದುಕೊಂಡು, ಪರಮಾತ್ಮನ ಪಾದಗತ ಅಸದೃಶವಾದ ಈ ಸುಗುಣಗಳ ದಶದಿಕ್ಕಿನಲ್ಲಿ ವ್ಯಾಪ್ತಿಮಾಡಿ, ತ್ವಗಿಂದ್ರಿಯ, ಘ್ರಾಣೇಂದ್ರಿಯ ಸದೃಶರಾದ ಭಗವದ್ಭಕ್ತರಿಗೆ ಉಪದೇಶ ಮಾಡಿ ಅದರಿಂದ ಅವರಿಗೆ ಸುಖ ಪಡಿಸುತ್ತ, ಪ್ರತಿದಿನದಲ್ಲಿ ನೀನೂನೂ ಅದರನ್ನು ಸ್ವೀಕಾರ ಮಾಡಿ ಪಾದ ಕಮಲಗಳ ಸ್ತೋತ್ರ ಮಾಡುತ್ತ, ಅತ್ಯಂತ ಸಂತೋಷ ಪಡುತ್ತಾ, ಸಮೀಚೀನ

ಗಳಾದ ಕುರುಡ, ಸರ್ವತ್ರ ಅಂತರ್ಗತನಾದವನನ್ನು ನೋಡುತ್ತ, ಬಾಹ್ಯ ವಿಷಯಗಳನ್ನು ನೋಡೋ ವಿಷಯದಲ್ಲಿ ಕುರುಡನಾಗು, ಭಗವನ್ಮಹಿಮಾ ವ್ಯತಿರಿಕ್ತ ಲೋಕವಾರ್ತೆ ಕೇಳುವುದರಲ್ಲಿ ಕಿವುಡನಾಗು. ಭಗವತ್ಕಥಾ ವ್ಯತಿರಿಕ್ತ ಲೋಕವಾರ್ತೆ ಮಾತನಾಡುವುದರಲ್ಲಿ ಮೂಕನಂತಿರು. ಮಂದಜನರಾದ ಅಜ್ಞಾನಿಗಳ ಕೂಡ ಮೂಕನಂತೆ, ಕಿವುಡನಂತೆ, ಕುರುಡನಂತೆ ಇರು. ಯೋಗ್ಯತಾವನ್ನು ಅಯೋಗ್ಯರಿಗೆ ಪ್ರದರ್ಶನ ಮಾಡದೆ ವಾಯುವಿನಂತೆ ಸಂಚರಿಸು. ಗಂಧ ಸದೃಶವಾದ ಜ್ಞಾನ ಸಜ್ಜನರಿಗೆ ಉಪದೇಶಮಾಡಿ ಅವರಿಗೆ ಸುಖವನ್ನು ಕೊಡುವನಾಗು ಎಂತ ತಾತ್ಪರ್ಯ. ||೧೫||

## ಭಾವಪ್ರಕಾಶಿಕೆ

ಗಾಳಿಯು ಕಮಲಪುಷ್ಪದಲ್ಲಿರುವ ಸುವಾಸನೆಯನ್ನು ತಾನು ಸ್ವೀಕರಿಸಿ ಅಲ್ಲಲ್ಲಿ ಕೂತಿರುವ ಜನರ ಘ್ರಾಣೇಂದ್ರಿಯಗಳಿಗೆ ಸುವಾಸನೆಯನ್ನು ಕೊಟ್ಟು, ಆ ಜನರಿಗೆ ಆನಂದವನ್ನುಂಟು ಮಾಡುವುದು. ತಾನು ನಿರ್ಲಿಪ್ತವಾಗಿಯೇ ಇರುವುದು. ಅದರಂತೆ ಇಂದಿರೇಶನ ಉತ್ಕೃಷ್ಟವಾದ ಗುಣಗಳನ್ನು ನೀನು ಸ್ವೀಕರಿಸಿದರೂ ಗಾಳಿಯು ಹೇಗೆ ಆ ಸುಗಂಧವನ್ನು ಪರರಿಗೆ ಕೊಟ್ಟು ತಾನು ನಿರ್ಲಿಪ್ತವಾಗಿರುವುದೋ ಹಾಗೆ ಭಗವಂತನನ್ನು ನಾನು ಸ್ತುತಿಸಿದೆನು. ನಾನು ಜ್ಞಾನಿಯು, ನಾನು ಭಕ್ತನು ಎಂಬ ಕರ್ತೃತ್ವಾಭಿಮಾನವನ್ನು ಇಟ್ಟುಕೊಳ್ಳದೆ, ಪರಮಾತ್ಮನಿಗೆ ಆ ಸ್ತೋತ್ರ ಪೂಜಾದಿಗಳನ್ನು ಸಮರ್ಪಿಸಿ ನಿರ್ಲಿಪ್ತನಾಗಿರು. ಅಥವಾ ಗಾಳಿಯು ಘ್ರಾಣೇಂದ್ರಿಯಗಳಿಗೆ ಮಾತ್ರವೇ ಸುಗಂಧವನ್ನು ಕೊಟ್ಟು ಆನಂದಪಡಿಸುವಂತೆ, ನೀನು ಮಾಡುವ ಸ್ತೋತ್ರಾದಿಗಳನ್ನೂ ಪೂಜಾದಿ ಗಳನ್ನೂ ಸಜ್ಜನರು ಮಾತ್ರ ಕೇಳಿ ಆನಂದ ಪಡುವಂತೆ ಮಾಡು. ಪಾಪಿ ಗಳಾದ ತಮೋಯೋಗ್ಯರನ್ನು ನೋಡುವಾಗ ಕುರುಡನಂತಿರು. ಅವರು ನಿನ್ನನ್ನು ದೂಷಿಸಿದರೆ ಕಿವುಡನಂತಿರು ಅವರ ಕೂಡ ಮಾತನಾಡಬೇಕಾದರೆ ಮೂಕನಾಗು. ಇದೇ ಜ್ಞಾನಿಗಳ ಲಕ್ಷಣವು. ಜ್ಞಾನಿಗಳ ಲಕ್ಷಣವನ್ನು ಜಗನ್ನಾಥದಾಸರಾಯರು ಮೂಕಾಬಧಿರರಂತಿಪ್ಪರೊ ನೊಳ್ಪಾ ಜನಕೆ ಎಂದು ಹೇಳಿರುವರು. ಅದರಂತೆ ಇರಬೇಕೆಂಬ ತಾತ್ಪರ್ಯ. ||೧೫||

## ಭಾವದರ್ಪಣ

ಅಂಧ ಬಧಿರನಂತೆ ಸುಮ್ಮಗೆ ಇದ್ದು ಶ್ರೀಶನ ಸ್ತೋತ್ರ ಮನಸ್ಸಿನಲ್ಲಿ ಮಾಡುತ್ತಿರು ಎಂದು ಹೇಳುತ್ತಾರೆ ಗಂಧವಹೇತಿ. ಗಂಧವಹ=ವಾಯು, ದಿಶ=ದಿಕ್ಕು, ಕಮಲದ ಸೌರಭ=ವಾಸನೆ,ಘ್ರಾಣೇಂದ್ರಿಯ=ನಾಸಿಕ ||೧೫||

## ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ಗಂಧ ಇತಿ|| ಗಂಧವಹ ವಾಯುಃ|| ಅನಿಮಿತ್ತಬಂಧುತೋದಾಹರಣಂ। ಇಂದ್ರಿಯ ಸುಖದಾಸಂ ಅಜ್ಞೈಃ ನ ಜ್ಞಾಯತೇ ಅತಃ ಅಂಧ ಇತಿ॥ ಜಡಾಂಧ ಬಧಿರೇತ್ಯುಕ್ತೇಃ ||೧೫||

## ಕನ್ನಡಾರ್ಥ

ಗಂಧವಹ ಎಂದರೆ ವಾಯು ಎಂದು ಅರ್ಥ. ಭಗವಂತನು ನಿರ್ವ್ಯಾಜ ಪ್ರೀತಿಯಿಂದ ಮಾಡುವ ಅಂತಃಕರಣವು ಅವನ ಅನಿಮಿತ್ತ ಬಂಧುತ್ವವು ಅಜ್ಞರಿಗೆ ಎಷ್ಟು ಹೇಳಿದರೂ ತಿಳಿಯುವುದಿಲ್ಲ. ಇಂದ್ರಿಯಗಳಿಂದ ಪರಮಾತ್ಮನು ಸುಖವನ್ನು ನಮಗೆ ಅನುಗ್ರಹಿಸುತ್ತಾನೆ ಎಂದು ಹೇಳಿದರೆ ಜ್ಞಾನವಿಲ್ಲದ ಅಹಂಕಾರ ಮಮಕಾರಗಳುಳ್ಳ ಮಂದಮತಿಗಳಿಗೆ ತಿಳಿಯುವುದಿಲ್ಲ. ಬುದ್ಧಿಯಲ್ಲಿ ಈ ವಿಷಯವೇ ಸೇರುವುದಿಲ್ಲ. ಆದುದರಿಂದ ಅಂತಹ ಮಂದಮತಿಗಳೊಡನೆ ಮೌನದಿಂದ ವರ್ತಿಸಬೇಕು ಎಂದು ತಾತ್ಪರ್ಯ. ||೧೫||

## ಶ್ರೀಗುರುಹೃದಯಪ್ರಕಾಶಿಕೆ

ಹೀಗೆ ಸಜ್ಜನರಿಗೆ ದೇವರ ಗುಣವರ್ಣನೆ ಪ್ರಕಾಶಮಾಡುತ್ತಾ, ಅಯೋಗ್ಯರಿಗೆ ತಿಳಿಸದ ಹಾಗಿರಬೇಕೆಂದು ಸದೃಷ್ಟಾಂತ ಬೋಧಿಸುತ್ತಾರೆ, ಗಂಧವಹ ಎಂದು. ಗಂಧವಹ ಎಂಬ ವಾಯುವು ದಿಕ್ಕು ವಿದಿಕ್ಕುಗಳ ಮೇಲೆ, ಕೆಳಗೆ ಸಹಾ ಹತ್ತು ದಿಕ್ಕುಗಳಲ್ಲಿಯೂ ಅರವಿಂದವೆಂಬ ಕಮಲದ ಸೌರಭ

ಎಂಬ ಪರಿಮಳವನ್ನು ಘ್ರಾಣೇಂದ್ರಿಯಗಳೆಂಬ ಮೂಗಿಗೆ ಮಾತ್ರ ಪಸರಿಸುತ ಎಂದರೆ, ವಿಸ್ತಾರವಾಗಿ ಹೊಂದಿಸುತ್ತಾ, ಸಂತೋಷಿಸುತ್ತಾ ಮಂದರೆಂಬ ಅಸಜ್ಜನರ ಸಂಗಡ ಅಂಧ ಬಧಿರ ಸುಮೂಕರೆಂಬ ಕುರುಡ ಕಿವುಡ ಮೂಗ ರಂತೆ, ಕಾಣದ ಹಾಗೂ ಕೇಳದ ಹಾಗೂ ಮಾತಾಡದಂತೆಯೂ ಇರಬೇಕೆಂದು ಅರ್ಥ. ||೧೫||

## ಸರ್ವವ್ಯಾಖ್ಯಾನಸಾರಸಂಗ್ರಹ

ಸುಜ್ಞಾನಿಗಳೊಡನೆ ಶ್ರೀಶನ ಗುಣಗಾನ ಮಾಡುತ್ತಾ, ಅಜ್ಞಾನಿಗಳಾದ ಮಂದಜನರೊಡನೆ ಮೂಕಬಧಿರನಂತಿರು ಎಂದು ಸತ್ಸಾಧನಾ ಮಾರ್ಗದ ಮರ್ಮವನ್ನು ತಿಳಿಸುತ್ತಾರೆ.

ಪುಷ್ಪದಲ್ಲಿರುವ ದಿವ್ಯಸೌರಭವನ್ನು ಸರ್ವತ್ರ ಹರಡುವುದರಿಂದ ವಾಯುವಿಗೆ ಗಂಧವಾಹನನೆಂದು ಹೆಸರು.

ಗಂಧವಹನಾದ ವಾಯು ಕಮಲಪುಷ್ಪಗತ ಪರಿಮಳವನ್ನು ತಾನು ಸ್ವೀಕರಿಸುವುದು. ನಂತರ ಸುತ್ತಲೂ ಬೀಸುತ್ತಿರುವಾಗ, ಹತ್ತು ದಿಕ್ಕುಗಳಲ್ಲಿ ಆ ಪರಿಮಳವನ್ನು ಪಸರಿಸುವುದು. ಆ ದಿವ್ಯಸೌರಭವು ನಾಸಿಕೇಂದ್ರಿಯಕ್ಕೆ ಸನ್ನಿಕರ್ಷವಾದಾಗ, ನಾಸಿಕವು ಸ್ವೀಕರಿಸುವುದು. ಗಂಧವಹ ವಾಯುವು ನಾಸಿಕಕ್ಕೆ ಗಂಧವನ್ನು ಕೊಡುವುದಲ್ಲದೆ, ಸ್ಪರ್ಶೇಂದ್ರಿಯವಾದ ತ್ವಗಿಂದ್ರಿಯಕ್ಕೂ ಸ್ಪರ್ಶಸುಖಾನುಭವವನ್ನು ಕೊಡುವುದೆಂದು ಗ್ರಹಿಸಬೇಕು.

ಗಂಧವಹನಂತೆ, ಶ್ರೀಲಕ್ಷ್ಮೀಧವನಾದ ಇಂದಿರೇಶನ ಸಮೀಚೀನವಾದ, ಪರಿಪೂರ್ಣವಾದ ಸುಗುಣಗಳನ್ನು, ರೂಪ ಕ್ರಿಯಾವಿಶೇಷಗಳನ್ನು ಸಾಧಕನಾದವನು. ಸದಾ ಮನಸ್ಸಿನಲ್ಲಿ ನೆನೆಯುತ್ತಾ, ಮನನ ಮಾಡಿದ್ದನ್ನು ಅನುಭವಕ್ಕೆ ತಂದುಕೊಳ್ಳುತ್ತಾ ಒಳಗೇ ಆನಂದ ಪಡುತ್ತಿರಬೇಕೆಂದು ತಿಳಿಸುತ್ತಾರೆ.

ಇಂದಿರೇಶನ ಸುಗುಣಗಳು ಕಮಲಗತ ದಿವ್ಯ ಸೌರಭ ಸದೃಶವು.

ಗುಪ್ತೋಪಾಸಕನಾದ ಸಾಧಕನು ಗಂಧವಹ ವಾಯುವಿನ ಸದೃಶನು. ವಾಯುವು ಪುಷ್ಪಗತ ಪರಿಮಳವನ್ನು ಸ್ವೀಕರಿಸುವಂತೆ, ಗುಪ್ತಸಾಧಕನು ಶ್ರೀಪರಮಾತ್ಮನ ಸುಗುಣಾವಳಿಗಳನ್ನು ಮನನ ದ್ವಾರಾ ಸ್ವೀಕರಿಸಬೇಕು.

ಪ್ರತಿನಿತ್ಯದಲ್ಲೂ ಆ ಪರಾತ್ಪರನ ಗುಣಗಳನ್ನು ಸ್ತೋತ್ರ ಮಾಡುತ್ತಾ, ಸಜ್ಜನರಲ್ಲಿ ಮಾತ್ರ ಭಗವದ್ವಿಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿರಬೇಕು. ಭಕ್ತಿಶೂನ್ಯರಾದ ಅಜ್ಞಾನಿಗಳಿಗೆ ಹೇಳಬಾರದು.

ಭಗವದ್ವ್ಯತಿರಿಕ್ತವಾದ ದೃಶ್ಯಗಳನ್ನು ನೋಡುವುದರಲ್ಲಿ ಕುರುಡನಂತಿರು, ಲೋಕವಾರ್ತೆಗಳನ್ನು ಕೇಳದೆ ಕಿವುಡನಂತಿರು, ದುರ್ಜನರೊಡನೆ ಮಾತನಾಡದೆ ಮೂಕನಂತಿರು. "ಮೂಕಬಧಿರರಂತಿಪ್ಪರೋ ನೋಳ್ಪ ಜನಕೆ" ಶ್ರೀಜಗನ್ನಾಥದಾಸರ ಕೀರ್ತನೆ. ||೧೫||

## ಪದ್ಯ ೧೬

### ಮೂಲ

ಶ್ರೀರಮಣನರಮನೆಯ ಪೂರ್ವ ।
ದ್ವಾರದಲ್ಲಿಹ ಸಂಜ್ಞ ಸೂರ್ಯಗೆ ।
ಭಾರತೀಪತಿಪ್ರಾಣನೊಳಗಿಹ ಲಕುಮಿನರಯಣನ ॥
ಸೇರಿ ಮನುಜೋತ್ತಮರು ಸರ್ವಶ ।
ರೀಶಗತ ನಾರಾಯಣನ ಅವ ।
ತಾರಗುಣಗಳ ತುತಿಸುತಲಿ ನೋಡಿಪರು ಮುಕ್ತಿಯಲಿ ||||೧೬||

### ಅವತರಣಿಕೆ

ವೈಕುಂಠದ ಪೂರ್ವದ್ವಾರದಲ್ಲಿರುವ ದೇವತೆಗಳು, ಅವರಿಂದ ಉಪಾಸ್ಯನಾದ ಶ್ರೀಮನ್ನಾರಾಯಣನ ವಿಚಾರ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಶ್ರೀರಮಣನ**= ಲಕ್ಷ್ಮೀಪತಿಯಾದ ಶ್ರೀಹರಿಯು, **ಅರಮನೆಯು**= ಮುಕ್ತಿಧಾಮವಾದ ವೈಕುಂಠದ, **ಪೂರ್ವದ್ವಾರದಲ್ಲಿಹ**= ಪೂರ್ವದಿಕ್ಕಿನಲ್ಲಿ ರುವ, **ಸಂಜ್ಞ ಸೂರ್ಯಗೆ**= ಸಂಜ್ಞಾದೇವಿ ಮತ್ತು ಅವರ ಪತಿಯಾದ ಸೂರ್ಯರಲ್ಲಿ ವಿದ್ಯಮಾನವಾಗಿರುವ, **ಭಾರತೀಪತಿಪ್ರಾಣನೊಳಗಿಹ**= ಭಾರತೀರಮಣರಾದ ಮುಖ್ಯ ಪ್ರಾಣಾಂತರ್ಗತನಾದ, **ಲಕುಮಿನರಯಣನ** = ಶ್ರೀಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನನ್ನು, **ಸೇರಿ**= ಹೊಂದಿ, **ಮನುಜೋತ್ತಮರು**= ಮಾನುಷಗಂಧರ್ವರಾರಭ್ಯ ತೃಣಾಂತ ಮಾನುಷೋತ್ತಮರಾದ ಜೀವರು, **ಸರ್ವಶರೀರಗತ**= ತಮ್ಮ ತಮ್ಮ ದೇಹದಲ್ಲಿ ವ್ಯಾಪ್ತನಾದ, **ನಾರಾಯಣನ**= ಪೂರ್ವದಿಕ್ಕಿನಲ್ಲಿರುವ ಶ್ರೀಮನ್ನಾರಾಯಣನ, **ಅವತಾರ**= ಅನಂತಾವತಾರ ವಿಶೇಷಗಳನ್ನೂ, **ಗುಣಗಳ**= ಅನಂತಕಲ್ಯಾಣ ಗುಣಸಮೂಹಗಳನ್ನು, **ತುತಿಸುತಲಿ**= ಸ್ತೋತ್ರಮಾಡುತ್ತಾ, **ಮುಕ್ತಿಯಲಿ**= ಮುಕ್ತಾವಸ್ಥೆಯಲ್ಲಿ, **ನೋದಿಪರು**= ಸಂತೋಷಪಡುತ್ತಿರುವರು. ||೧೬||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಉಕ್ತಂಚ ಪಾಂಚರಾತ್ರಾಗಮೇ :

"ಪ್ರಾಣಾಭಿಮಾನೀ ಚಕ್ಷುಶ್ಚ ಸೂರ್ಯ ಏವ ಹ್ಯುದಾಹೃತಃ। ತೇಜೋನ್ನಾದ್ಯಭಿಮಾನೀಚ ಪ್ರಾಗ್ದ್ವಾರಾಧಿಪತಿರ್ಹರೇಃ"||– ಇತಿ.

"ಸೂರ್ಯ ಪ್ರಸಾದಾಸ್ತು ನರಾಃ ಪೂರ್ವದ್ವಾರೇಣ ಕೇಶವಂ ಪ್ರಾಪ್ನುವಂತೀತಿ"–ಛಾಂದೋಗ್ಯಭಾಷ್ಯೇ॥

ಶ್ವೇತದ್ವೀಪಗತ ವಾಸುದೇವನಿಂದ ಇಚ್ಛಾವರಣ ಅಪಸರಣ ವಿಚಾರ ಕ್ರಮವನ್ನು ಹೇಳುತಾರೆ. ಮಾಯಾನಾಮಕ ಲಕ್ಷ್ಮೀಪತಿಯಾದ ವಾಸುದೇವನ

ಶ್ವೇತದ್ವೀಪಗತ ಅರಮನೆಗೆ ಪೂರ್ವದಿಕ್ಕಿನಲ್ಲಿ ಇರತಕ್ಕ ಬಾಗಿಲುಗಳು ಮೂರು. ಈ ಮೂರು ಬಾಗಿಲುಗಳಲ್ಲಿ ಇರತಕ್ಕ ದ್ವಾರಪಾಲಕರು ಇದುವರೆಗೆ ಮುಕ್ತರಾದ ಸಂಜ್ಞಾದೇವಿಯರು, ಇವರಿಗೆ ಪತಿಯಾದ ಸೂರ್ಯ ಇವರು ಪ್ರಥಮ ದ್ವಾರಕ್ಕೆ ದ್ವಾರಪಾಲಕರು. ಭಾರತೀಸಾಂಕೇತದಿಂದ ಮುಕ್ತರಾದ ಸರಸ್ವತೀ ದೇವಿಯರು, ಈಕೆಯ ಪತಿಯಾದ ಪ್ರಾಣಸಾಂಕೇತದಿಂದ ಮುಕ್ತರಾದ ಬ್ರಹ್ಮ ದೇವರು.ಇವರಿಬ್ಬರೂ ಪೂರ್ವದ್ವಾರದ ಎರಡನೇ ಬಾಗಿಲಿನಲ್ಲಿ ಇರತಕ್ಕ ದ್ವಾರಪಾಲಕರು. ಎರಡನೇ ದ್ವಾರಕ್ಕೆ ಒಳಗೆ ಇರತಕ್ಕ ಮೂರನೇ ದ್ವಾರವಾದ ಪೂರ್ವದಿಕ್ಕಿನ ದ್ವಾರದಲ್ಲಿ ಇರತಕ್ಕ ದ್ವಾರಪಾಲಕರಾದ ಲಕ್ಷ್ಮೀಪತಿಯಾದ ನಾರಾಯಣದೇವರನ್ನು ತಿಳಿವುದು. ಮನುಜೋತ್ತಮ ಶಬ್ದದಿಂದ ಮಾನುಷಗಂಧರ್ವರಾರಭ್ಯ ತೃಣಾಂತವರಿಗೂ ಗ್ರಾಹ್ಯ. ಪೂರ್ವದ್ವಾರಗಳಾದ ಮೂರು ದ್ವಾರಗಳು, ಆಯಾ ದ್ವಾರಪಾಲಕರ ಆಜ್ಞಾದಿಂದ ದಾಟಿ ಒಳಗಿನ ವಾಸುದೇವನ ಸೇರಿ, ವಾಸುದೇವನಿಂದ ಇಚ್ಛಾವರಣ ಅಪಸರಿತರಾಗಿ, ನಿರ್ದೋಷರಾಗಿ ಮುಕ್ತರೆಂದು ಕರೆಸಿ ಇಚ್ಛಾವರಣದಿಂದ ಮುಕ್ತರಾಗಿ ಶ್ವೇತದ್ವೀಪಾಖ್ಯ ಸ್ಥಾನಗತ ವಾಸುದೇವನ ಅರಮನೆಯಲ್ಲಿ ವಿದ್ಯಮಾನವಾದ ಪೂರ್ವಭಾಗಗತ ಸ್ಥಾನದಲ್ಲೇ ಸಮಸ್ತರಾದ ಮಾನುಷಗಂಧರ್ವರಾರಭ್ಯ ತೃಣಾಂತ ಸರ್ವರೂ ತಮ್ಮ ತಮ್ಮ ಸ್ವರೂಪದೇಹಗತ ಬಿಂಬನ ಹಾಂಗೆ, ಪೂರ್ವದಿಕ್ಕಿನಲ್ಲಿ ನಾರಾಯಣದೇವರ ವ್ಯಕ್ತವಾದ ಅವತಾರರೂಪಗಳ ಇನ್ನೂ ಈ ರೂಪಗತ ಕಲ್ಯಾಣಗುಣಗಳನ್ನು ಸ್ತೋತ್ರ ಮಾಡುತಲಿ, ಪೂರ್ವದಿಕ್ಕಿನಲ್ಲಿ ಇದ್ದು ತಮ್ಮ ತಮ್ಮ ಸ್ವರೂಪಾನಂದದಿಂದ ಸಂತೋಷಿಸುತ್ತಾ ಇರುತ್ತಾರೆ. ಹೀಗೆ ಹೇಳಿದ್ದು, ಮುಂದೆ ಹೇಳತಕ್ಕದ್ದು ಯಾವತ್ತೂ ಮುಕ್ತರೇವೇ, ಅಮುಕ್ತರಲ್ಲ. ಶುದ್ಧತತ್ತ್ವಾತ್ಮಕ ಶರೀರಗಳ ಧರಿಸಿ ದ್ವಾರಪಾಲಕರಾಗಿ ಇದ್ದಾರೆಂದು ಭಾವ. ||೧೬||

## ಭಾವಪ್ರಕಾಶಿಕೆ

ಪ್ರಾಣಿಗಳ ದೇಹಗಳಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ಗಾಳಿಗಳು ವ್ಯಾಪಿಸಿಕೊಂಡಿರುವವು. ಇವುಗಳಲ್ಲಿ ಪ್ರಾಣಾ

ಪಾನಾದಿ ಹೆಸರಿನಿಂದ ಮುಖ್ಯಪ್ರಾಣದೇವರೇ ಜಡವಾಯುಗಳಿಗೆ ಪ್ರೇರಕರಾಗಿ ಅವುಗಳ ಕಾರ್ಯವನ್ನು ಮಾಡಿಸುತ್ತಿರುವರು. ಇದಲ್ಲದೆ ಪ್ರಾಣಾಪಾನಾದಿ ಜಡವಾಯುಗಳಿಗೆ ಸೂರ್ಯಚಂದ್ರಾದಿಗಳು ಅಭಿಮಾನಿಗಳಾಗಿರುವರು. ಅವರಂತರ್ಯಾಮಿಯಾಗಿ ಪ್ರಾಣಾಪಾನಾದಿ ಹೆಸರಿನಿಂದ ವಾಯುದೇವರು ಇರುವರು. ಯಾವ ಯಾವ ವಾಯುಗಳಿಗೆ ಅಮುಖ್ಯಾಭಿಮಾನಿಗಳಾರು ಅಂದರೆ, ಪಂಚರಾತ್ರಾಗಮದಲ್ಲಿ "ಪ್ರಾಣಾಭಿಮಾನೀ ಚಕ್ಷೋಶ್ಚ ಸೂರ್ಯ ಏವ ಉದಾಹೃತಃ ತೇಜೋನ್ನಾದ್ಯಭಿಮಾನೀಚ ಪ್ರಾಗ್ದ್ವಾರಾಧಿಪತಿರ್ಹರೇಃ" ಪ್ರಾಣವಾಯುವಿಗೂ, ನೇತ್ರಗಳಿಗೂ, ತೇಜಸ್ತತ್ವಕ್ಕೂ, ಅನ್ನಾದಿಗಳಿಗೂ ಸಹ ಅಭಿಮಾನಿಯು ಸೂರ್ಯನು. ಇದೇ ಸೂರ್ಯನು ಪರಮಾತ್ಮನ ಪೂರ್ವದ್ವಾರಾಧಿಪತಿಯಾಗಿರುವನೆಂದು ಹೇಳಿರುವರು. ಛಾಂದೋಗ್ಯಭಾಷ್ಯದಲ್ಲಿ "ಸೂರ್ಯಪ್ರಸಾದಾಸ್ತು ನರಾಃ ಪೂರ್ವದ್ವಾರೇಣ ಕೇಶವಃ ಪ್ರಾಪ್ನುವಂತಿ" ಪೂರ್ವದ್ವಾರಾಧಿಪತಿಯಾದ ಸೂರ್ಯನ ಪ್ರಸಾದದಿಂದ ಮನುಷ್ಯೋತ್ತಮರು ಪೂರ್ವದ್ವಾರದಿಂದ ಪರಮಾತ್ಮನನ್ನು ಹೊಂದುವರೆಂದು ಹೇಳಿರುವರು. ಅದೇ ಅರ್ಥವನ್ನೇ ದಾಸರಾಯರು ಇಲ್ಲಿ ಹೇಳುತ್ತಾರೆ. "ಪೂರ್ವದ್ವಾರದಲ್ಲಿ ಸಂಜ್ಞಾನಾಮಕಳಾದ ಹೆಂಡತಿಯಿಂದೊಡಗೂಡಿ ಪ್ರಾಣಾಭಿಮಾನಿ ಸೂರ್ಯನು ಇರುವನು. ಅವನೊಳಗೆ ಶ್ರೀಭಾರತೀಪತಿಯಾದ ಪ್ರಾಣದೇವರು ಪ್ರಾಣನಾಮಕರಾಗಿ ಇರುವರು. ಮನುಷ್ಯೋತ್ತಮರು ಮುಕ್ತಿಯನ್ನು ಹೊಂದುವಾಗ ಸೂರ್ಯನದ್ವಾರಾ ಪ್ರಾಣದೇವರನ್ನು ಹೊಂದಿ, ಅವರನುಗ್ರಹದಿಂದ ಅವರಂತರ್ಯಾಮಿಯಾದ ಶ್ರೀಲಕ್ಷ್ಮೀನಾರಾಯಣರನ್ನು ಸೇರುವರು. ಆಗಲೇ ಅವರು ಮುಕ್ತರಾದರು. ಅನಂತರ ಬೇಕಾದ ಸ್ಥಳಗಳಲ್ಲಿ ಸ್ವೇಚ್ಛಾವಿಹಾರ ಮಾಡುತ್ತಾ ಸ್ವಭಾವದಿಂದ ಸರ್ವಶರೀರಗತ ಭಗವದ್ರೂಪಗಳನ್ನೂ, ಅವತಾರರೂಪಗಳನ್ನೂ, ಗುಣಗಳನ್ನೂ ಕೊಂಡಾಡುತ್ತಾ ಸ್ವರೂಪಾನಂದವನ್ನು ಹೊಂದಿ ಸುಖದಿಂದ ವಾಸಮಾಡುತ್ತಿರುವರು. ||೧೬||

**ಭಾವದರ್ಪಣ**

ಮನುಷ್ಯೋತ್ತಮರು ಪೂರ್ವದ್ವಾರದಿಂದ ವೈಕುಂಠಪ್ರವೇಶ ಮಾಡಿ

ಸ್ವರೂಪಾನಂದ ಭೋಜನ ಮಾಡುತ್ತಾರೆಂದು ಹೇಳುತ್ತಾರೆ, ಶ್ರೀರಮಣೇತಿ. ಉಕ್ತಂ ಚ ಪಂಚರಾತ್ರಾಗಮೇ. ಪ್ರಾಣಾಭಿಮಾನಿ ಚಕ್ಷುಶ್ಚ ಸೂರ್ಯ ಏವ ಉದಾಹೃತಃ। ತೇಜೋನ್ನಾದ್ಯಭಿಮಾನೀ ಚ ಪ್ರಾಗ್ದ್ವಾರಾಧಿಪತೇರ್ಹರೇರಿತಿ। ಸೂರ್ಯಪ್ರಸಾದಾತ್ತು ನರಾಃ ಪೂರ್ವದ್ವಾರೇಣ ಕೇಶವಂ। ಪ್ರಾಪ್ನುವಂತೀತಿ ಛಾಂದೋಗ್ಯಭಾಷ್ಯೋಕ್ತೇಃ॥ ॥೧೬॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಅಥ ಕಾಂಚನ ಹಾರ್ದೋಪಸನಾಂ ಬ್ರೂತೇ "ಶ್ರೀರಮಣಿ" ಇತಿ ॥ "ಅರಮನಿ"-ಹೃದಯ। ಓಂ ತಸ್ಯ ಹವಾ ಏತಸ್ಯ ಹೃದಯಸ್ಯ ಪಂಚ ದೇವ ಸುಷಯಃ॥ ಸ ಯೋಽಸ್ಯ ಪ್ರಾಙ್ (ಕ್) ಸುಷಿಃ ಸ ಪ್ರಾಣಃ ತಚ್ಚಕ್ಷುಃ॥ ಸ ಆದಿತ್ಯಃ॥ ತತ್ತೇಜಃ ಅನ್ನಾದ್ಯಮ್ ಇತ್ಯುಪಾಸೀತ॥ ತೇಜಸ್ವ್ಯನ್ನಾದೋ ಭವತಿ ಯ ಏವಂ ವೇದ॥

ಪ್ರಾಣಾಭಿಮಾನೀ ಚಕ್ಷುಶ್ಚ ಸೂರ್ಯ ಏವ ಹ್ಯುದಾಹೃತಃ।ತೇಜೋನಾದ್ಯಭಿಮಾನೀ ಚ ಪ್ರಾಗ್'ದ್ವಾರಾಧಿಪತಿಃ ಹರೇಃ॥ ॥೧೬॥

## ಕನ್ನಡಾರ್ಥ

ಹೃದಯದಲ್ಲಿ ಮಾಡಬೇಕಾದ ಶ್ರೇಷ್ಠವಾದ ಉಪಾಸನೆಯನ್ನು ಇನ್ನು ಮೇಲೆ ನಿರೂಪಿಸುತ್ತಾರೆ. "ಶ್ರೀರಮಣಿ" ಇತಿ॥ 'ಅರಮನೆ' ಎಂದರೆ ಹೃದಯರೂಪ ಗೃಹವೆಂದು ತಿಳಿಯಬೇಕು. ಛಾಂದೋಗ್ಯೋಪನಿಷತ್ತು ಹಾಗೂ ಭಾಷ್ಯಗಳಲ್ಲಿ (ಅ.೩. ಖ.೧೩) ಈ ವಿಷಯವು ಹೀಗೆ ನಿರೂಪಿತವಾಗಿರುತ್ತದೆ. "ಭಗವಂತನಿಂದ ಅಧಿಷ್ಠಿತವಾದ (ವಾಸಿಸಲ್ಪಟ್ಟ) ಈ ಹೃದಯಮಂದಿರಕ್ಕೆ ಐದು ದೇವ ಹೊರಗೆ ಬರುವ ಮಾರ್ಗಗಳು ಇರುತ್ತವೆ. ಹೃದಯದ ಪೂರ್ವದ್ವಾರಕ್ಕೆ ಪ್ರಾಣವಾಯ್ವ (ಜಡವಾಯು)ಭಿಮಾನಿಯಾದ ಹಾಗೂ ಚಕ್ಷು (ಕಣ್ಣು)ರಭಿಮಾನಿಯಾದ ಸೂರ್ಯನು ಅಧಿಪತಿಯು. ಈ ಪ್ರಾಣವಾಯು ಚಕ್ಷುಸ್ಸುಗಳಿಗಭಿಮಾನಿಯಾದ ಸೂರ್ಯನನ್ನು ತೇಜ ಅನ್ನಾದಿ

ಗಳಿಗೆ ಅಭಿಮಾನಿಯೆಂದು ಉಪಾಸಿಸಿದರೆ-ತಿಳಿದರೆ ತೇಜಸ್ವಿಯೂ, ಅನ್ನ ಭೋಗಿಯೂ ಆಗುತ್ತಾನೆ"ಭಾಷ್ಯದಲ್ಲಿ ಶ್ವಾಸರೂಪವಾದ ಜಡವಾಯು ವೃತ್ತಿ ರೂಪವಾದ ಪ್ರಾಣಕ್ಕೆ ಅಭಿಮಾನಿಯೂ, ಚಕ್ಷುರಭಿಮಾನಿಯೂ ಸೂರ್ಯ ನೊಬ್ಬನೇ ಆಗಿರುತ್ತಾನೆ. ಅವನು ತೇಜ-ಅನ್ನ ಮುಂತಾದವುಗಳ ಅಭಿ ಮಾನಿಯೂ ಆಗಿರುತ್ತಾನೆ ಮತ್ತು ಹರಿಯ, ಹೃದಯಗೃಹದ ಪೂರ್ವದ್ವಾರ ಪಾಲಕನಾಗಿರುತ್ತಾನೆ ಎಂದು ಹೇಳಲ್ಪಟ್ಟಿರುತ್ತದೆ. ||೧೬||

## ಶ್ರೀಗುರುಹೃದಯಪ್ರಕಾಶಿಕೆ

ಶ್ರೀರಮಣ ಎಂದು ಮೊದಲು ಆರು ಪದ್ಯದ ತಪಕ ದೇವರ ವೈಕುಂಠಾದಿ ಲೋಕದ ಐದು ಬಾಗಿಲ ದ್ವಾರಪಾಲಕರಂತರ್ಗತ ಪ್ರಾಣಭಾರತೀಯರಿಗೆ ಸ್ವಾಮಿ ಪಂಚಮೂರ್ತಿಗಳ ಸ್ಮರಣೆ, ಅಲ್ಲಲ್ಲಿಗೆ ಬರುವ ಪಂಚವಿಧ ಮುಕ್ತಿ ಯೋಗ್ಯರ ತಾರತಮ್ಯ ಸ್ಮರಣೆ, ಸಹಾ ತಿಳಿಸುತ್ತಾರೆ. ಶ್ರೀರಮಣನಾದ ದೇವರ ಲೋಕದ ಪೂರ್ವದಿಕ್ಕಿನ ಬಾಗಿಲಲ್ಲಿರುವ ಸೂರ್ಯದೇವರು ತತ್ಪತ್ನೀ ಸಂಜ್ಞಾದೇವಿಯರಲ್ಲಿ ಸಹ ಇರುವ ಭಾರತೀಪತಿಪ್ರಾಣದೇವರಂತರ್ಗತ ಲಕ್ಷ್ಮೀನಾರಾಯಣರೂಪವನ್ನು ಸೇರಿ ಮನುಷ್ಯೋತ್ತಮರು ಸರ್ವಶರೀರಾಂತ ರ್ಗತ ಶ್ರೀನಾರಾಯಣನ ಅವತಾರಗುಣಗಳನ್ನು ಸ್ತುತಿಸುತ್ತಾ ಮುಕ್ತಿಯಲ್ಲಿ ಸಂತೋಷಿಸುತ್ತಿರುವರು. ||೧೬||

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ವಾಸುದೇವರೂಪವು ಮುಕ್ತಿಪ್ರದರೂಪವು. ಶ್ರೀಪರ ಮಾತ್ಮನ ಮುಕ್ತಿಧಾಮಗಳಲ್ಲಿ ಒಂದಾದ ಶ್ವೇತದ್ವೀಪವು ಶ್ರೀಹರಿಯ ಅರಮನೆ ಎನಿಸುವುದು. ಶ್ವೇತದ್ವೀಪಗತ ಶ್ರೀವಾಸುದೇವರೂಪೀ ಶ್ರೀಪರಮಾತ್ಮನು ಅಲ್ಲಿ ವಿದ್ಯಮಾನನಾಗಿದ್ದಾನೆ.

ಅವನ ಅರಮನೆಯ ಪೂರ್ವ ದಿಕ್ಕಿನ ದ್ವಾರಕ್ಕೆ ಮೂರು ಬಾಗಿಲುಗಳು.

ಪ್ರಥಮದ್ವಾರದಲ್ಲಿ ಸಂಜ್ಞಾದೇವಿ ಮತ್ತು ಅವರ ಪತಿಯಾದ ಸೂರ್ಯ ದ್ವಾರಪಾಲಕರಾಗಿದ್ದಾರೆ. ಪ್ರಸಕ್ತ ಪದ್ಯದಲ್ಲಿ ಮುಕ್ತಿಯಲಿ ಎಂಬ ಶಬ್ದ ವನ್ನು ದಾಸರಾಯರು ಪ್ರಯೋಗಿಸಿರುವುದರಿಂದ ಮುಕ್ತಜೀವರಾದ ಸಂಜ್ಞಾ ದೇವಿ ಮತ್ತು ಸೂರ್ಯ ಎಂದು ಪರಿಗಣಿಸಬೇಕು.

ದ್ವಿತೀಯ ಬಾಗಿಲಲ್ಲಿ ಮುಕ್ತಬ್ರಹ್ಮದೇವರು ಮುಕ್ತರಾದ ಶ್ರೀಸರಸ್ವತಿ ದೇವಿಯರೊಡನೆ ವಿದ್ಯಮಾನರಾಗಿದ್ದಾರೆ. ಇದನ್ನು ಭಾರತೀಪತಿಪ್ರಾಣ ಎಂಬ ಶಬ್ದದಿಂದ ಸೂಚಿಸಿದ್ದಾರೆ. ಭಾರತೀರಮಣರಾದ ಶ್ರೀವಾಯು ದೇವರು ಭಾವೀಬ್ರಹ್ಮರು, ಅವರಿಗೆ ಬ್ರಹ್ಮಪದವಿಯಿಂದ ಮುಕ್ತಿ. ಅಂತೆಯೇ ಶ್ರೀಭಾರತೀದೇವಿಯರು ಭಾವೀಸರಸ್ವತಿ. ಅವರಿಗೆ ಸರಸ್ವತಿ ಪದವಿಯಿಂದ ಮೋಕ್ಷ.

ತೃತೀಯದ್ವಾರದಲ್ಲಿ ಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನು ವಾಸುದೇವನಾಮಕನಾಗಿದ್ದಾನೆ. ಮಾನುಷೋತ್ತಮರಾದ ಜೀವರ ವರ್ಗ, ಈ ದ್ವಾರದಿಂದ ಪ್ರವೇಶಿಸುವರು. ಮಾನುಷಗಂಧರ್ವರಾರಭ್ಯ ತೃಣಾಂತ ಜೀವರ ಪರ್ಯಂತ ಮನುಜೋತ್ತಮರು ಗ್ರಾಹ್ಯ. ಅಂತಹ ಮನುಜೋತ್ತ ಮರು ಪೂರ್ವದಿಕ್ಕಿನ ಕವಾಟ ದ್ವಾರಾ ಶ್ರೀಹರಿಯ ಅರಮನೆಯನ್ನು ಪ್ರವೇಶಿಸಿ ಅಲ್ಲಿ ಶ್ರೀಲಕ್ಷ್ಮೀರಮಣನಾದ ನಾರಾಯಣನ ಸಂದರ್ಶನಭಾಗ್ಯ ವನ್ನು ಹೊಂದಿ ಅವನ ಸಾನ್ನಿಧ್ಯವನ್ನು ಸೇರುವರು. ಅವರು ತಮ್ಮ ತಮ್ಮ ಸ್ವರೂಪದೇಹಗಳಿಂದ ವಿದ್ಯಮಾನರಾಗಿದ್ದು, ಅವರ ಸ್ವರೂಪಶರೀರದಲ್ಲಿ ವ್ಯಾಪ್ತನಾಗಿರುವ ಶ್ರೀಲಕ್ಷ್ಮೀನಾರಾಯಣನ ಅನಂತಗುಣ, ಅವತಾರ, ರೂಪ, ಕ್ರಿಯಾದಿಗಳನ್ನು ನೆನೆನೆನೆದು, ಸ್ತೋತ್ರಮಾಡುತ್ತಾ, ಮೋಕ್ಷಾನಂದನದಲ್ಲಿ ಸಂತೋಷಪಡುತ್ತಿರುವರು ಎಂದು ತಾತ್ಪರ್ಯ. ||೧೬||

## ಪದ್ಯ ೧೭

### ಮೂಲ

ಪ್ರಣವಪ್ರತಿಪಾದ್ಯನ ಪುರದ ದ ।
ಕ್ಷಿಣ ಕವಾಟದಲಿಪ್ಪ ಶಶಿ ರೋ ।
ಹಿಣಿಗತ ವ್ಯಾನಸ್ಥ ಕೃತಿ ಪ್ರದ್ಯುಮ್ನ ರೂಪವನು ॥
ಗುಣಗಳನು ಸಂತುತಿಸುತಲಿ ಪಿತೃ ।
ಗಣ ಗದಾಧರನತಿವಿಮಲ ಪ ।
ಟ್ಟಣದೊಳಗೆ ಸ್ವೇಚ್ಛಾನುಸಾರದಿ ಸಂಚರಿಸುತಿಹರು॥ ॥೧೭॥

### ಅವತರಣಿಕೆ

ಪಿತೃದೇವತೆಗಳು ಅವರ ಉಪಾಸ್ಯಮೂರ್ತಿ ಗದಾಧರನ ವಿಮಲರೂಪ ಗುಣಗಳನ್ನು ಸ್ತೋತ್ರ ಮಾಡುತ್ತಾ, ಸ್ವೇಚ್ಛಾನುಸಾರ ವಿಹರಿಸುತ್ತಿರುವರು ಎಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಪ್ರಣವಪ್ರತಿಪಾದ್ಯನ**= ಓಂಕಾರ ವಾಚ್ಯನಾದ ಶ್ರೀಪರಮಾತ್ಮನ, **ಪುರದ**= ಮುಕ್ತಿಧಾಮವೆಂಬ ಪಟ್ಟಣದ (ಶ್ವೇತದ್ವೀಪಗತ ವಾಸುದೇವನ) **ದಕ್ಷಿಣ**= ದಕ್ಷಿಣದಿಕ್ಕಿನಲ್ಲಿರುವ, **ಕವಾಟದಲಿಪ್ಪ**= ದ್ವಾರಗಳಲ್ಲಿ ಇದ್ದು ಮಾನರಾಗಿರುವ, **ಶಶಿ**= ಚಂದ್ರ (ಮುಕ್ತ), **ರೋಹಿಣೀಗತ**= ಚಂದ್ರನ ಪತ್ನಿ ರೋಹಿಣೀದೇವಿಯರಲ್ಲಿ (ಮುಕ್ತ), ಅಂತಸ್ಥರಾಗಿರುವ, **ವ್ಯಾನಸ್ಥ**= ವ್ಯಾನನಾಮಕ ಮುಕ್ತವಾಯು ಮತ್ತು ತತ್ಪತ್ನೀಯವರಲ್ಲಿ ಅಂತರ್ಯಾಮಿ ಯಾಗಿರುವ, **ಕೃತಿ**= ಕೃತೀನಾಮಕ ಶ್ರೀಲಕ್ಷ್ಮೀದೇವಿ, **ಪ್ರದ್ಯುಮ್ನ**= ಕೃತೀರಮಣ ಪ್ರದ್ಯುಮ್ನನ, **ಪಿತೃಗಣ**= ಪಿತೃದೇವತೆಗಳ ಸಮೂಹವು ಈ ದಕ್ಷಿಣ ದ್ವಾರದ ಮಾರ್ಗವಾಗಿ ಚಂದ್ರ ರೋಹಿಣಿಯರ ಆಜ್ಞಾದಿಂದ ಪ್ರವೇಶಿಸಿ, **ರೂಪವನು**= ರೂಪ ವಿಶೇಷಗಳನ್ನು, **ಗುಣಗಳನು**= ಗುಣಾತಿ

ಶಯಗಳನ್ನು, **ಸಂತುತಿಸುತಲಿ**= ಭಕ್ತಿಭಾವದಿಂದ ಸ್ತೋತ್ರಮಾಡುತ್ತಾ, **ಗದಾಧರನ**= ಪಿತೃದೇವತಾವರ್ಗದ ಉಪಾಸ್ಯಮೂರ್ತಿಯಾದ ಗದಾಧರ ನಾಮಕ ಶ್ರೀಪರಮಾತ್ಮನ, **ಅತಿವಿಮಲ**= ಅತ್ಯಂತ ನಿರ್ಮಲವಾದ (ನಿರ್ದೋಷವಾದ) **ಪಟ್ಟಣದೊಳಗೆ**= ಮುಕ್ತಿಧಾಮವಾದ ಪಟ್ಟಣದ ದಕ್ಷಿಣದ್ವಾರ ಪ್ರದೇಶದಲ್ಲಿ, **ಸ್ವೇಚ್ಛಾನುಸಾರದಿ**= ತಮ್ಮ ಇಚ್ಛಾನುಸಾರ ವಾಗಿ, **ಸಂಚರಿಸುತಿಹರು**= ಸಂಚರಿಸುತ್ತಿರುವರು. ||೧೭||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ದಕ್ಷಿಣಾಧಿಪತಿಃ ಸೋಮೋ ವ್ಯಾನಃ ಶ್ರೋತ್ರಾಭಿಮಾನವಾನ್ । ಪ್ರಾಪ್ನುವಂತ್ಯಥ ಸೋಮಸ್ಯ ಪ್ರಸಾದಾತ್ಪಿತರಸ್ತಥಾ ॥ ದ್ವಾರೇಣ ದಕ್ಷಿಣೇನೈವ॥ ಇತಿ ಛಾಂದೋಗ್ಯಭಾಷ್ಯೇ॥ ಪಾಂಚರಾತ್ರಾಗಮೇ ॥**

ವಾಸುದೇವನ ಅರಮನೆಯ ದಕ್ಷಿಣದ್ವಾರದಿಂದ ಪ್ರವೇಶರಾಗಿ ಇಚ್ಛಾ ವರಣ ಅಪಸರಿತರಾದವರ ಹೇಳುತಾರೆ.

ಓಂಕಾರಪ್ರತಿಪಾದ್ಯನಾದ ವಾಸುದೇವನ ಶ್ವೇತದ್ವೀಪಗತ ಪುರಸಾಂಕೇತ ವಾದ ಅರಮನೆಯ ಪ್ರಥಮ ಕವಾಟದಲ್ಲಿ ಇರತಕ್ಕವರು ಮುಕ್ತನಾದ ಚಂದ್ರನು, ಚಂದ್ರನ ಪತ್ನಿಯಾದ ಮುಕ್ತರಾದ ರೋಹಿಣೀದೇವಿಯರು (ಇವ ರಿಬ್ಬರು). ಈ ದ್ವಾರಕ್ಕೆ ಒಳಭಾಗದಲ್ಲಿ ವಿದ್ಯಮಾನವಾದ ಎರಡನೇ ದ್ವಾರ ದಲ್ಲಿ ವ್ಯಾನನಾಮಕ ಮುಕ್ತವಾಯು, ಇವರ ಪತ್ನಿ ಇವರಿಬ್ಬರು. ಎರಡನೇ ದ್ವಾರದ ಒಳಗೆ ಇರತಕ್ಕ ಮೂರನೇದ್ವಾರದಲ್ಲಿ ಕೃತೀನಾಮಕರಾದ ಲಕ್ಷ್ಮೀ ದೇವಿಯರು, ಈಕೆಯ ಪತಿ ಪ್ರದ್ಯುಮ್ನದೇವರು ಉಭಯರೂ ಇರೋವರಾಗಿ ದ್ದಾರೆ. ಪಿತೃದೇವತೆಗಳ ಸಮೂಹ ಈ ಮಾರ್ಗದಿಂದ ದ್ವಾರಪಾಲಕರ ಆಜ್ಞಾದಿಂದ ಒಳಗೆ ಪ್ರವೇಶಮಾಡಿ,ವಾಸುದೇವನಿಂದ ಇಚ್ಛಾವರಣ ಅಪಸರಿತ ರಾಗಿ, ಈ ಪ್ರದ್ಯುಮ್ನದೇವರ ರೂಪವನ್ನು, ಗದಾಧರದೇವರ ರೂಪವನ್ನು

ಅಂದರೆ, ಪಿತೃದೇವತೆಗಳಿಗೆ ಗದಾಧರ ಸಾಂಕೇತನಾದ ಪರಮಾತ್ಮನೇ ಉಪಾಸ್ಯ ಬಿಂಬನು. ಇಂಥಾ ಬಿಂಬನ ಮಂಗಳಕರವಾದ ಗುಣಗಳನ್ನು ಛಂದಾಗಿ ಸ್ತೋತ್ರಮಾಡುತ್ತಾ, ಅತ್ಯಂತ ನಿರ್ಮಲವಾದ, ನಿರ್ದೋಷವಾದ ಶುಭ್ರ ವರ್ಣೋಪೇತ ಶ್ರೀವಾಸುದೇವನ ಶ್ವೇತದ್ವೀಪಾಖ್ಯ ಪಟ್ಟಣಗತ ಅರಮನೆಯ ದಕ್ಷಿಣದ್ವಾರಭಾಗದಲ್ಲಿ ನಿರ್ದೋಷರಾದ ಮುಕ್ತರಾದ ಪಿತೃದೇವತಾಗಣ ತಮ್ಮ ತಮ್ಮ ಇಚ್ಛಾನುಸಾರದಿಂದ ಸಂಚರಿಸುತ್ತಾ ಇರುವರಾಗಿದ್ದಾರೆ. ||೧೭||

## ಭಾವಪ್ರಕಾಶಿಕೆ

ದೇಹಗತ ವ್ಯಾನನಾಮಕ ಜಡವಾಯುವಿಗೆ ಅಧಿಪತಿಯು ಚಂದ್ರನು. ಅವನು ಕಿವಿಗಳಿಗೂ ಅಧಿಪತಿಯಾಗಿರುವನು. ವ್ಯಾನನಾಮಕರಾದ ಮುಖ್ಯ ಪ್ರಾಣದೇವರು ಅವನಂತರ್ಯಾಮಿಯಾಗಿರುವರು. ಹೀಗೆ ತನ್ನ ಅಂತರ್ಯಾಮಿಯಾದ ವ್ಯಾನನಾಮಕ ಪ್ರಾಣದೇವರಿಂದ ಕೂಡಿ ಪರಮಾತ್ಮನ ಮನೆಯ ದಕ್ಷಿಣ ದಿಕ್ಕಿಗೆ ಚಂದ್ರನು ಅಧಿಪತಿಯಾಗಿರುವನು. "ದಕ್ಷಿಣಾಧಿಪತಿ ಸ್ಸೋಮಃ, ವ್ಯಾನಃ ಶ್ರೋತ್ರಾಭಿಮಾನವಾನ್||" ಎಂಬ ಪಾಂಚರಾತ್ರಾಗಮದ ವಾಕ್ಯದಿಂದ ಈ ಅರ್ಥವು ಸಿದ್ಧವಾಗುವುದು. ಛಾಂದೋಗ್ಯಭಾಷ್ಯದಲ್ಲೂ "ಪ್ರಾಪ್ನುವಂತ್ಯಥ ಸೋಮಸ್ಯ ಪ್ರಸಾದಾತ್ಪಿತರಸ್ತಥಾ" ಎಂದು ಹೇಳಿರುವರು. ಈ ಪ್ರಮಾಣಾರ್ಥವನ್ನೇ ದಾಸರಾಯರು ಇಲ್ಲಿ ವಿಶದ ಮಾಡಿರುತ್ತಾರೆ. ಓಂಕಾರ ಪ್ರತಿಪಾದ್ಯನಾದ ಶ್ರೀಪರಮಾತ್ಮನ ದಕ್ಷಿಣದ್ವಾರಾಧಿಪತಿಯು ರೋಹಿಣೀ ಸಮೇತನಾದ ಚಂದ್ರನು. ಇವನಂತರ್ಗತರು ವ್ಯಾನನಾಮಕ ವಾಯುದೇವರು, ಪಿತೃಗಣಗಳು ಮುಕ್ತರಾಗಿ ಪರಮಾತ್ಮನ ಮನೆಯ ದಕ್ಷಿಣದ್ವಾರದಲ್ಲಿರುವ ಚಂದ್ರನ ಪ್ರಸಾದದಿಂದ ಆ ದ್ವಾರದಲ್ಲಿ ಪ್ರವೇಶಮಾಡಿ ಅಲ್ಲಿ ಚಂದ್ರಾಂತರ್ಗತ ವ್ಯಾನನಾಮಕ ಪ್ರಾಣದೇವರ ಅಂತರ್ಯಾಮಿಯಾದ ಶ್ರೀಕೃತಿದೇವಿ ಸಮೇತನಾದಶ್ರೀ ಪ್ರದ್ಯುಮ್ನರೂಪವನ್ನು ಉಪಾಸನೆಮಾಡುತ್ತ ಅವನ ಗುಣಗಳನ್ನು ಕೊಂಡಾಡುತ್ತಾ ಸ್ವೇಚ್ಛಾನುಸಾರವಾಗಿ ವಿಹಾರಮಾಡಿಕೊಂಡು ಸ್ವರೂಪಸುಖವನ್ನನುಭವಿಸುವರು. ||೧೭||

## ಭಾವದರ್ಪಣ

ಪಿತೃಗಣದವರಿಗೆ ದಕ್ಷಿಣದ್ವಾರದಿಂದ ವೈಕುಂಠಪ್ರವೇಶವೆಂದು ಹೇಳು

ತ್ತಾರೆ, ಪ್ರಣವೇತಿ. ಉಕ್ತಂಚ ಪಂಚರಾತ್ರಾಗಮೇ. "ದಕ್ಷಿಣಾಧಿಪತಿಃ ಸೋಮೋ ವ್ಯಾನಃ ಶ್ರೋತ್ರಾಭಿಮಾನವಾನಿತಿ। ಪ್ರಾಪ್ನುವಂತ್ಯಥ ಸೋಮಸ್ಯ ಪ್ರಸಾದಾತ್ಪಿತರಸ್ತಥಾ। ದ್ವಾರೇಣ ದಕ್ಷಿಣೇನೈವೇತಿ ಛಾಂದೋಗ್ಯಮಾನಾತ್॥ ॥೧೭॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಪ್ರಣವ ಇತಿ॥ ಅಥ ಯೋಽಸ್ಯ ದಕ್ಷಿಣಃ ಸುಷಿಃ ಸ ವ್ಯಾನಃ ತತ್ ಶ್ರೋತ್ರಂ; ಸ ಚಂದ್ರಮಾಃ॥ ತದೇತತ್ ಶ್ರೀಶ್ಚ ಯಶಶ್ಚ ಇತ್ಯುಪಾಸೀತ॥ ಶ್ರೀಮಾನ್ ಯಶಸ್ವೀ ಭವತಿ ಯ ಏವಂ ವೇದ ॥

ದಕ್ಷಿಣಾಧಿಪತಿಃ ಸೋಮಃ ವ್ಯಾನಃ ಶ್ರೋತ್ರಾಭಿಮಾನವಾನ್ । ಯಶೋಲಾವಣ್ಯ ರೂಪಶ್ಚ ಪಶ್ಚಿಮದ್ವಾರಪಃ ತಥಾ॥ ಓಂ (ಇದಂ) ಬರ್ಹಿಃ ಸೋಮಪೇಯಾಯ ಯಾಹಿ ವಹಂತು ತ್ವಾ ಹರಯಃ ಮದ್ಯಂ ಚ ಮಾಂಗೂಷಮಚ್ಛಾತವಸಂ ಮದಾಯ॥ ಓಂ॥ ಗದ್ಯಂತೇ ಸ್ತೂಯಂತೇ ಗದಂತಿ ಸ್ತುವಂತಿ ಇತಿ ವಾ ಸ್ವಪಿತರಃ ತೈಃ ಧ್ರಿಯತೇ ಉಹ್ಯತೇ ಇತಿ ಗದಾಧರಃ ॥ ॥೧೭॥

## ಕನ್ನಡಾರ್ಥ

ಈ ಹೃದಯದ ದಕ್ಷಿಣದ್ವಾರಕ್ಕೆ ವ್ಯಾನವಾಯ್ವಭಿಮಾನಿ, ಶ್ರೋತ್ರಾಭಿಮಾನಿ ಚಂದ್ರನು ಅಧಿಪತಿಯು. ಅವನನ್ನು ಲಾವಣ್ಯರೂಪನೂ, ದಿಗಂತ ವ್ಯಾಪ್ತ ಕೀರ್ತಿವಂತನೂ ಎಂದು ಉಪಾಸಿಸಿದರೆ ಕೀರ್ತಿಲಾವಣ್ಯಗಳು ಸಿಗುತ್ತವೆ.

ಗದಾಧರಃ, ಇದು ಸಹಸ್ರನಾಮಾಂತರ್ಗತವಾದುದು. ಸ್ತೋತ್ರಗಳನ್ನು ಮಾಡಿಸಿಕೊಳ್ಳುವವರು ಅಥವಾ ಸ್ತೋತ್ರಮಾಡುವವರು ಎಂದೂ ಗದಾ ಶಬ್ದಕ್ಕೆ ಪಿತೃಗಳು ಎಂದೂ ಅರ್ಥ. ಅವರುಗಳಿಂದ ಧರಿಸಲ್ಪಡುವವನು. ಸ್ತೋತ್ರ ಮಾಡುವವರ ಅಶ್ವಗಳಿಂದ ಹೋಗತಕ್ಕವನು ಎಂದು ಬೃಹತಿಮಂತ್ರ ಸೂಚಿತವಾದ ಅರ್ಥ. ॥೧೭॥

**ಶ್ರೀಗುರುಹೃದಯಪ್ರಕಾಶಿಕೆ**

ಓಂಕಾರ ಪ್ರತಿಪಾದ್ಯನಾದ ದೇವರ ಲೋಕದ ದಕ್ಷಿಣದಿಕ್ಕಿನ ಬಾಗಿಲಲ್ಲಿರುವ, ಚಂದ್ರ, ತತ್ಪತ್ನಿ ರೋಹಿಣಿಯಲ್ಲಿರುವ, ವ್ಯಾನವಾಯುಸ್ಥಿತ ಕೃತೀರಮಣ ಪ್ರದ್ಯುಮ್ನರೂಪವನ್ನು ಹೊಂದಿ ತದ್ಗುಣಗಳನ್ನು ಸ್ತುತಿಸುತ್ತಾ ಪಿತೃಗಣದ ಜೀವರು ನಿರ್ದೋಷ ಗದಾಧರಮೂರ್ತಿಯ ಲೋಕದಲ್ಲಿ ಸ್ವೇಚ್ಛಾನುಸಾರ ಸಂಚರಿಸುತ್ತಿರುವರು. ||೧೭||

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಮುಕ್ತಿಧಾಮದ ದಕ್ಷಿಣದ್ವಾರಗತ ಕವಾಟದಲ್ಲಿರುವ ದೇವತೆಗಳ ವಿಚಾರ ಮತ್ತು ಆ ದ್ವಾರಾ ಹೋಗುವ ಮುಕ್ತ ಪಿತೃದೇವತಾ ಗಣಗಳ ವಿಷಯ ತಿಳಿಸುತ್ತಾರೆ.

ಶ್ರೀಪರಮಾತ್ಮನು ಪ್ರಣವಪ್ರತಿಪಾದ್ಯನು. ಪ್ರಣವ ಮಂತ್ರವು (ಓಂಕಾರವು) ಅ–ಕಾರ, ಉ–ಕಾರ ಮತ್ತು ಮ-ಕಾರ ವರ್ಣಯುಕ್ತವಾದುದು. ಅಧಿಕನಾದ್ದರಿಂದ ಶ್ರೀಪರಮಾತ್ಮನು ಅ-ಕಾರವಾಚ್ಯನು. ಉಚ್ಚನಾದ ಕಾರಣ ಉ–ಕಾರ ವಾಚ್ಯನು. ವೇದಗಳಿಂದ ಗಮ್ಯನಾದ್ದರಿಂದ ಮ-ಕಾರವಾಚ್ಯನು.

ಪ್ರಣವಪ್ರತಿಪಾದ್ಯನಾದ ಶ್ರೀಹರಿಯ ಮುಕ್ತಿಧಾಮವಾದ ವೈಕುಂಠವೆಂಬ ಪಟ್ಟಣದ ದಕ್ಷಿಣದಿಕ್ಕಿನಲ್ಲಿರುವ ಬಾಗಿಲಿನಲ್ಲಿ ಚಂದ್ರನಿದ್ದಾನೆ. (ಶ್ವೇತದ್ವೀಪಗತ ವಾಸುದೇವನ ಅರಮನೆಯ ದಕ್ಷಿಣದ್ವಾರವೂ ಗ್ರಾಹ್ಯ) ದೇಹಗತ ವ್ಯಾನನಾಮಕ ಜಡವಾಯುವಿಗೆ ಚಂದ್ರನು ಅಧಿಪತಿಯು. ಚಂದ್ರ ಮತ್ತು ತತ್ಪತ್ನೀ ರೋಹಿಣೀದೇವಿ ದಿಗ್ದೇವತೆಗಳಾಗಿದ್ದಾರೆ. ಅವರು ಶ್ರವಣೇಂದ್ರಿಯಗಳಿಗೆ ತತ್ತ್ವಾಭಿಮಾನಿಗಳು. ವದನಕ್ಕೆ ಬಲಗಿವಿಯು ದಕ್ಷಿಣದ್ವಾರವು. ಅದಕ್ಕಭಿಮಾನಿಯು ರೋಹಿಣೀಸಹಿತನಾದ ಚಂದ್ರನು.

ಶಶ ಎಂದರೆ ಮೊಲ ಎಂದರ್ಥ. ಮೊಲದ ಸಾಂಕೇತವುಳ್ಳ ಚಂದ್ರನಿಗೆ ತತ್ಸಂಬಂಧದಿಂದ ಶಶಿ ಎಂದು ಹೆಸರು. ಚಂದ್ರನ ಪತ್ನಿ ರೋಹಿಣೀ.

ಶಶಿ ರೋಹಿಣೀಗತ ವ್ಯಾನನಾಮಕ ಶ್ರೀವಾಯುದೇವರನ್ನು ದಕ್ಷಿಣ ದ್ವಾರದಲ್ಲಿ ಚಿಂತಿಸಬೇಕು.

ಶಶಿರೋಹಿಣೀಗತ ವ್ಯಾನಸ್ಥನಾದ ಕೃತಿರಮಣನಾದ ಶ್ರೀಪ್ರದ್ಯುಮ್ನ ನಾಮಕ ಪರಮಾತ್ಮ ವೈಕುಂಠಪುರದ ದಕ್ಷಿಣ ಕವಾಟದಲ್ಲಿ ವಿದ್ಯಮಾನನಾಗಿದ್ದಾನೆ.

ಪಿತೃದೇವತೆಗಳು ವೈಕುಂಠಪುರದ ದಕ್ಷಿಣದ್ವಾರದ ಮೂಲಕ ಪ್ರವೇಶಿಸುವರು. ಆ ಪಿತೃಗಣದ, ಚಂದ್ರ ಮತ್ತು ರೋಹಿಣೀ ದ್ವಾರಪಾಲಕರ ಆಜ್ಞೆಯಿಂದ ದಕ್ಷಿಣದ್ವಾರದ ಮೂಲಕ ವೈಕುಂಠಪುರವನ್ನು ಪ್ರವೇಶಿಸುವರು. ಅಲ್ಲಿ ವ್ಯಾನನಾಮಕ ಶ್ರೀವಾಯುದೇವರ ಅನುಗ್ರಹ ಪಡೆದು, ವ್ಯಾನನಾಮಕ ವಾಯ್ವಂತರ್ಗತ ಕೃತಿಪತಿಪ್ರದ್ಯುಮ್ನನ ಗುಣರೂಪಗಳನ್ನು ಕೊಂಡಾಡುತ್ತಾ, ದಕ್ಷಿಣದ್ವಾರದಲ್ಲಿ ವಿಹರಿಸುತ್ತಿರುವರು.

ಆ ಪ್ರದ್ಯುಮ್ನರೂಪವೇ ಪಿತೃದೇವತಾಗಣದವರ ಉಪಾಸ್ಯಮೂರ್ತಿಯಾದ ಗದಾಧರನ ರೂಪವು. ಗದಾಧರ ಎಂಬುದು ಶ್ರೀವಿಷ್ಣುಸಹಸ್ರನಾಮಾಂತರ್ಗತವಾದುದು. ಗದಾ ಶಬ್ದಕ್ಕೆ ಪಿತೃಗಳು ಎಂದರ್ಥ. ಪಿತೃಗಳಿಂದ ಧರಿಸಲ್ಪಡುವವನಾದ್ದರಿಂದ ಅವರ ಉಪಾಸ್ಯಮೂರ್ತಿಗೆ ಗದಾಧರನೆಂದು ಹೆಸರು. ಸ್ತೋತ್ರ ಮಾಡುವವರ ಅಶ್ವಗಳಿಂದ ಹೋಗತಕ್ಕವನು ಎಂದು ಬೃಹತೀಮಂತ್ರ ಸೂಚಿತಾರ್ಥವು.

ಅಂತಹ ಗದಾಧರನ ದೋಷರಹಿತವಾದ ಕಲ್ಯಾಣಗುಣಗಳನ್ನು ನಿರಂತರ ಕೊಂಡಾಡುತ್ತಾ, ಮುಕ್ತರಾದ ಪಿತೃದೇವತೆಗಳು ಮುಕ್ತಪುರದಲ್ಲಿ ತಮ್ಮ ಇಚ್ಛಾನುಸಾರ, ಸಂಚರಿಸುತ್ತಾ, ವಿಹರಿಸುತ್ತಾ, ಪರಮಾನಂದವಶರಾಗಿರುವರು. ಶ್ವೇತದ್ವೀಪಗತ ನಿರ್ದೋಷನಾದ ಶುಭ್ರವರ್ಣೋಪೇತ ಶ್ರೀವಾಸುದೇವನೆಂದು ಗ್ರಹಿಸಬಹುದು, ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನದ ಪ್ರಕಾರ. ||೧೭||

## ಪದ್ಯ ೧೮

### ಮೂಲ

**ಅಮಿತವಿಕ್ರಮನಾಲಯದ ಪ ।**
**ಶ್ಚಿಮಕವಾಟದಿ ಸತಿ ಸಹಿತ ಸಂ ।**
**ಭ್ರಮದಿ ಭಗವದ್ಗುಣಗಳನೆ ಪೊಗಳುತಲಿ ನೋದಿಸುವ ॥**
**ಸುಮನಸಾಸ್ಯನೊಳಿಪ್ಪಪಾನಗ ।**
**ದಮನ ಸಂಕರುಷಣನ ನಿಜಹೃ ।**
**ತ್ಕಮಲದೊಳು ಧೇನಿಸುವ ಋಷಿಗಣ ಐದಿ ಸುಖಿಸುವರು॥೧೮॥**

### ಅವತರಣಿಕೆ

ಶ್ರೀಹರಿಯ ವೈಕುಂಠಾಲಯದ ಪಶ್ಚಿಮದಿಕ್ಕಿನಲ್ಲಿರುವ ದ್ವಾರದ ಮೂಲಕ ಪ್ರವೇಶಿಸುವ ಋಷಿಗಣದವರ ವಿಚಾರ ಮತ್ತು ಜಯಾಪತಿ ಸಂಕರ್ಷಣನವಿಷಯಗಳನ್ನು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಅಮಿತವಿಕ್ರಮನ**= ಅಗಣಿತ ಸಾಮರ್ಥ್ಯವಂತನಾದ ಶ್ರೀಪರಮಾತ್ಮನ, **ಆಲಯದ**= ವೈಕುಂಠಾಲಯದ(ಶ್ವೇತದ್ವೀಪಗತ ವಾಸುದೇವನ ಅರಮನೆಯ) **ಪಶ್ಚಿಮಕವಾಟದಿ**= ಪಶ್ಚಿಮದಿಕ್ಕಿನಲ್ಲಿರುವ ಮಹಾದ್ವಾರದಲ್ಲಿ, **ಸತಿ ಸಹಿತ**= ತನ್ನ ಪತ್ನಿಯಾದ ಸ್ವಾಹಾದೇವಿಯಿಂದೊಡಗೂಡಿ, **ಸಂಭ್ರಮದಿ** = ಅತ್ಯಂತ ಸಂತೋಷಯುತವಾದ ಸಡಗರದಿಂದ, **ಭಗವದ್ಗುಣಗಳನೆ**= ಶ್ರೀಪರಮಾತ್ಮನ ಕಲ್ಯಾಣಗುಣಸ್ತೋಮವನ್ನು, **ಪೊಗಳುತಲಿ**= ಕೊಂಡಾಡುತ್ತಾ, **ನೋದಿಸುವ**= ಆನಂದ ಪಡುತ್ತಿರುವ, **ಋಷಿಗಣ**= ಮುಕ್ತಋಷಿವರ್ಗದವರು, **ಸುಮನಸಾಸ್ಯನೊಳು**= ದೇವತೆಗಳಿಗೆ ಮುಖ ನೆಂದೆನಿಸುವ ಅಗ್ನಿದೇವರಲ್ಲಿ (ಸುಮನಸ-ದೇವತೆಗಳು, ಆಸ್ಯ–ಮುಖ) **ಇಪ್ಪ** = ಅಂತಸ್ಥನಾಗಿರುವ, **ಅಪಾನಗ**= ಅಪಾನನಾಮಕ ವಾಯ್ವಂತರ್ಗತನಾದ,

**ದಮನ**= ಲಯಕಾರಕನಾದ, **ಸಂಕರುಷಣನ**= ಜಯಾಪತಿ ಸಂಕರ್ಷಣ ನಾಮಕ ಶ್ರೀಪರಮಾತ್ಮನನ್ನು, **ನಿಜಹೃತ್ಕಮಲದೊಳು**= ತಮ್ಮ ಸ್ವರೂಪ ಗತ ಅಷ್ಟದಳಯುಕ್ತ ಹೃದಯಪದ್ಮದಲ್ಲಿ, **ಧೇನಿಸುವ**= ಧ್ಯಾನಮಾಡುವ ಋಷಿಗಣದವರು, **ಐದಿ**= ಪಶ್ಚಿಮದ್ವಾರದಿಂದ ಶ್ರೀಸಂಕರ್ಷಣನನ್ನು ಸೇರಿ, **ಸುಖಿಸುವರು**= ಆನಂದಪಡುವರು. ||೧೮||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ಉಕ್ತಂ ಚ ಪಾಂಚರಾತ್ರಾಗಮೇ । ಯಶೋಲಾವಣ್ಯರೂಪಶ್ಚ ಪಶ್ಚಿಮದ್ವಾರಪಸ್ತಥಾ। ವಾಗಾಪಾನಾತ್ಮಕೋ ವಹ್ನಿಬ್ರಹ್ಮತೇಜೋಽನ್ನ ದೇವತೇತಿ ||**

**ಅಗ್ನಿಪ್ರಸಾದಾದೃಷಯಃ। ಇತಿ ಛಾಂದೋಗ್ಯಭಾಷ್ಯೇ ||**

ವಾಸುದೇವನ ಅರಮನೆಯ ಪಶ್ಚಿಮಮಾರ್ಗದಿಂದ ಪ್ರವೇಶರಾಗಿ ಇಚ್ಛಾವರಣ ಅಪಸರಿತರಾದವರನ್ನು ಹೇಳುತಾರೆ.

ಆದ್ಯಂತಶೂನ್ಯಗಳಾದ ಪ್ರರಾಕ್ರಮವಂತನಾದ ವಾಸುದೇವನ ಆಲಯ ಸಂಕೇತವಾದ ಅರಮನೆಯ ಪಶ್ಚಿಮದಿಕ್ಕುಗತ ದ್ವಾರಗಳು ಮೂರು. ಇವು ಗಳೊಳಗೆ ಪ್ರಥಮ ಬಾಗಿಲಿನಲ್ಲಿ, ಪತ್ನಿಯಾದ ಸ್ವಾಹಾದೇವಿಯ ಸಹಿತನಾಗಿ, ದೇವತೆಗಳಿಗೆ ಮುಖಸ್ಥಾನಾಪನ್ನನಾದ ಮುಕ್ತನಾದ ಅಗ್ನಿದೇವರು ದ್ವಾರ ಪಾಲಕನು. ಅಗ್ನಿದೇವರು ಇರತಕ್ಕ ದ್ವಾರಕ್ಕೆ ಒಳಭಾಗದಲ್ಲಿ ಇರುವ ಎರಡನೇ ದ್ವಾರದಲ್ಲಿ ಅಪಾನನಾಮಕ ಮುಕ್ತವಾಯು, ಇವರ ಪತ್ನಿ ಸಹ ಇದ್ದಾರೆ. ಮೂರನೇ ಬಾಗಿಲಿನಲ್ಲಿ ಸಂಹಾರಕರ್ತನಾದ ಜಯಾಪತಿ ಸಂಕರ್ಷಣ ತನ್ನ ಪತ್ನಿ ಜಯಾ ಸಹಿತನಾಗಿ ಇದ್ದಾನೆ. ಈ ಪಶ್ಚಿಮದಿಗ್ಭಾಗಗತ ಮಾರ್ಗ ದಿಂದ ದ್ವಾರಪಾಲಕರ ಆಜ್ಞಾದಿಂದ ಪ್ರವೇಶಮಾಡಿ, ವಾಸುದೇವನಿಂದ ಇಚ್ಛಾವರಣ ಅಪಸರಿತರಾಗಿ, ನಿರ್ದೋಷರಾದ ಮುಕ್ತರೆಂದು ಕರೆಸಿ, ತಮ್ಮ

ಸ್ವರೂಪ ದೇಹಗತ ಹೃದಯಗತ ಅಷ್ಟದಳ ಕಮಲದೊಳು ವಿದ್ಯಮಾನಸಾದ ಬಿಂಬಸಾಂಕೇತನಾದ ಜಯಾಸಂಕರ್ಷಣನ ಧ್ಯಾನವನ್ನು ಮಾಡತ ಮತ್ತು ಅತ್ಯಂತ ಸಂತೋಷದಿಂದ ಪರಮಾತ್ಮನ ಗುಣಗಳನ್ನು ಬಾಯಿಂದ ಉಚ್ಚಾರ ಮಾಡತ ಆನಂದಪಡುವ ಮುಕ್ತರಾದ ಋಷಿಗಣ ಪಶ್ಚಿಮಭಾಗದಲ್ಲಿ ತಮ್ಮ ತಮ್ಮ ಇಚ್ಛೆ ಬಂದಂತೆ ಸುಖಿಸೋವರಾಗತಾರೆ. ॥೧೮॥

## ಭಾವಪ್ರಕಾಶಿಕೆ

ಅಪಾನನಾಮಕ ಜಡವಾಯುವಿಗೆ ಅಭಿಮಾನಿಯೂ ಮತ್ತು ವಾಕ್ಕಿಗೂ ಅಭಿಮಾನಿಯಾದ ಅಗ್ನಿಯು ತನ್ನ ಪತ್ನಿಯಾದ ಸ್ವಾಹಾ ಸಮೇತನಾಗಿ ಪರಮಾತ್ಮನ ಮನೆಯ ಪಶ್ಚಿಮದ ಬಾಗಿಲಲ್ಲಿ ಪರಮಾತ್ಮನನ್ನು ಸ್ತುತಿಸುತ್ತ ಇರುವನು. ಅವನಂತರ್ಯಾಮಿ ಅಪಾನವಾಯುದೇವರು. ಋಷಿಗಣಗಳು ಮುಕ್ತರಾಗಿ ಅಗ್ನಿದೇವರ ಪ್ರಸಾದದಿಂದ ಪಶ್ಚಿಮದ್ವಾರದಿಂದ ಪ್ರವೇಶಮಾಡಿ ಅಗ್ನ್ಯಂತರ್ಗತ ಅಪಾನಾಂತರ್ಗತ ಸಂಕರ್ಷಣರೂಪಿಯಾದ ಶ್ರೀಪರಮಾತ್ಮ ನನ್ನು ಹೃದಯ ಕಮಲದಲ್ಲಿ ಧ್ಯಾನಿಸುತ್ತ ಸ್ವೇಚ್ಛಾನುಸಾರವಾಗಿ ವಿಹಾರ ಮಾಡುತ್ತಾ ಸ್ವರೂಪಾನಂದವನ್ನು ಅನುಭವಿಸುತ್ತಿರುವರು. ॥೧೮॥

## ಭಾವದರ್ಪಣ

ಋಷಿಗಣದವರಿಗೆ ಪಶ್ಚಿಮದ್ವಾರದಿಂದ ಪ್ರವೇಶವೆಂದು ಹೇಳುತ್ತಾರೆ. ಅಮಿತೇತಿ. ಉಕ್ತಂ ಚ ಪಂಚರಾತ್ರಾಗಮೇ. "ಯಶೋಲಾವಣ್ಯರೂಪಶ್ಚ ಪಶ್ಚಿಮದ್ವಾರಪಸ್ತಥಾ । ವಾಗಪಾನಾತ್ಮಕೋ ವಹ್ನಿರ್ಬ್ರಹ್ಮತೇಜೋನ್ನ ದೇವತೇತಿ ॥ ಅಗ್ನಿಪ್ರಸಾದಾದೃಷಯಃ" ಇತಿ ಛಾಂದೋಗ್ಯಭಾಷ್ಯಮಾನಾತ್। ದಮನ ಸಂಹಾರಕನಾದ ಸಂಕರ್ಷಣ ಎಂಬರ್ಥ. ॥೧೮॥

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಅಮಿತ ವಿಕ್ರಮ ಇತಿ॥ ಓಂ ಉತೋಪಮಾನಾಂ ಪ್ರಥಮೋ ನಿಷೀದಸಿ ಸೋಮ ಕಾಮಂ ಹಿ ತೇ ಮನಃ ॥ ಆವೃಷಸ್ವ ಪುರೂವಸೋಸುತಸ್ಯೇದ್ರಾಂ

ಧಸಃ ವಿದ್ಮಾಹಿ ತ್ವಾ|| ಓಂ|| ಅಮಿತಾಃ ವಿಕ್ರಮಾಃ ಶಕ್ತಯಾಃ ಯಸ್ಯ ಸಃ ತಥೋಕ್ತಃ ||

ಅಥಯೋಸ್ಯ ಪ್ರತ್ಯಙ್ ಸುಷಿಃ ಸೋಽಪಾನಃ ಸೋವಾಕ್ ಸೋಗ್ನಿಃ|| ತದೇದತ್ ಬ್ರಹ್ಮವರ್ಚಸಮನ್ನಾದ್ಯಮುಪಾಸೀತ || ಬ್ರಹ್ಮವರ್ಚಸ್ವ್ಯ ನ್ನಾದೋ ಭವತಿ ಯ ಏವಂ ವೇದ || ಪಶ್ಚಿಮದ್ವಾರಪಃ ತಥಾ|| ವಾಗ ಪಾನಾತ್ಮಕೋ ವಹ್ನಿಃ ಬ್ರಹ್ಮತೇಜೋನ್ನದೇವತಾ ||

ದಮಃ ಓಂ ಏವಾ ಹ್ಯಸ್ಯ ಸೂನೃತಾ ವಿರಪ್ಶೀ ಗೋಮತೀ ಮಹೀ ಪಕ್ವಾ ಶಾಖಾ ನ ದಾಷುಸೇ | ಯೇ ವಾಹಿತೇ ವಿಭೂತಯಃ ವಾತಯಃ || ಓಂ ಕಲ್ಪಶಾಖೇವ (ಖೀವ) ಭಕ್ತಾಭೀಷ್ಟ ದತ್ವಾತ್ ದಮಃ || ||೧೮||

**ಕನ್ನಡಾರ್ಥ**

ಅಮಿತವಿಕ್ರಮ ಇದು ವಿಷ್ಣುಸಹಸ್ರನಾಮಾಂತರ್ಗತವಾದುದು. ಅಸಂಖ್ಯ ಗಳಾದ ಅನಂತಗಳಾದ ಶಕ್ತಿಗಳುಳ್ಳವನು ಎಂದು ಬೃಹತೀಮಂತ್ರಾನುಗುಣ ವಾದ ಅರ್ಥ.

ಈ ಹೃದಯಮಂದಿರದ ಪಶ್ಚಿಮದ್ವಾರಕ್ಕೆ ಅಪಾನ ವಾಯ್ವಭಿಮಾನಿ ವಾಗಿಂದ್ರಿಯಾಭಿಮಾನಿ ಅಗ್ನಿಯು ಅಧಿಪತಿಯು. ಈ ಅಗ್ನಿಯನ್ನು ಬ್ರಹ್ಮ ವರ್ಚಸ್ಸು ಹಾಗೂ ಅನ್ನಾದ್ಯಭಿಮಾನಿ ಎಂದು ಉಪಾಸಿಸಬೇಕು. ಇದನ್ನು ತಿಳಿದವನು ಬ್ರಹ್ಮವರ್ಚಸ್ವಿಯೂ ಅನ್ನವುಳ್ಳವನೂ ಆಗುತ್ತಾನೆ.

ದಮ ಇದೂ ವಿಷ್ಣುಸಹಸ್ರನಾಮಾಂತರ್ಗತವೇ. ಕಲ್ಪವೃಕ್ಷದಂತೆ ಭಕ್ತರುಗಳಿಗೆ ಅಭೀಷ್ಟಗಳನ್ನು ಕೊಡುವುದರಿಂದ ದಮ ಎಂದು ಹೇಳಿಸಿಕೊಳ್ಳು ತ್ತಾನೆ ಎಂಬುದಾಗಿ ಬೃಹತೀಮಂತ್ರಾಭಿಪ್ರೇತವಾದ ಅರ್ಥ. ||೧೮||

**ಶ್ರೀಗುರುಹೃದಯಪ್ರಕಾಶಿಕೆ**

ಅಮಿತಪರಾಕ್ರಮ ದೇವರ ಲೋಕದ ಪಶ್ಚಿಮದಿಕ್ಕಿನ ಬಾಗಿಲಲ್ಲಿ ಪತ್ನಿ ಯಾದ ಸ್ವಾಹಾದೇವೀ ಸಹಿತವಾಗಿ ಭಗವಂತನ ಗುಣಗಳನ್ನು ಸಂತೋಷದಿಂದ

ಹೊಗಳುತ್ತಾ ಸುಖಿಸುವ ಸುಮನಸಾಸ್ಯ ಎಂದರೆ, ಸುಮನಸರೆಂಬ ದೇವತೆಗಳಿಗೆ ಮುಖರೂಪನಾದ ಅಗ್ನಿದೇವರಲ್ಲಿರುವ ಅಪಾನವಾಯ್ವಂತರ್ಗತ ದುಷ್ಟನಿಗ್ರಾಹಕ ಸಂಕರ್ಷಣನನ್ನು ತಮ್ಮ ಹೃತ್ಕಮಲದಲ್ಲಿ ಧೇನಿಸುವ ಋಷಿಗಳು ಹೊಂದಿ, ಅಲ್ಲಿ ಬಂದು ಸುಖದಿಂದಿರುವರು. ||೧೮||

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀರಮಣನ ಅರಮನೆಯ ಪಶ್ಚಿಮದ್ವಾರದಿಂದ ಪ್ರವೇಶಿಸುವ ಋಷಿಗಳ ವಿಚಾರವನ್ನು ಹೇಳುತ್ತಾರೆ.

ಯಾವುದನ್ನು ಎಣಿಸಲು ಸಾಧ್ಯವಿಲ್ಲವೋ ಅದಕ್ಕೆ ಅಮಿತ ಎಂದು ಹೆಸರು. ಅದರ ವ್ಯಾಪ್ತಿಗೆ ಮಿತವಿಲ್ಲ. ವಿಕ್ರಮ ಶಬ್ದಕ್ಕೆ ಸಾಮರ್ಥ್ಯವಂತ ಎಂದರ್ಥ. ಯಾರಿಂದಲೂ ಅಜೇಯನೆಂದರ್ಥ. ಅಪರಿಮಿತವಾದ ಶಕ್ತಿ ಸಾಮರ್ಥ್ಯ ಗುಣಧರ್ಮವುಳ್ಳವನೇ ಶ್ರೀಪರಮಾತ್ಮನು. ಈ ಶಬ್ದವು ವಿಷ್ಣುಸಹಸ್ರನಾಮಾಂತರ್ಗತವಾದದ್ದು. ಅಸಂಖ್ಯಗಳಾದ, ಅನಂತಗಳಾದ ಶಕ್ತಿಗಳುಳ್ಳವನು ಎಂದು ಬೃಹತೀಮಂತ್ರದ ಅರ್ಥಾನುವಾದವು.

ಶ್ರೀಪರಮಾತ್ಮನ ಮುಕ್ತಿಧಾಮವಾದ ವೈಕುಂಠವೆಂಬ ಅರಮನೆಯೇ ಅವನ ಆಲಯವು. ಅಮಿತವಿಕ್ರಮನ ಆಲಯದ ಪಶ್ಚಿಮದಿಕ್ಕಿನಲ್ಲಿರುವ ದ್ವಾರದಲ್ಲಿ ಅಗ್ನಿದೇವರು ತಮ್ಮ ಪತ್ನಿಯಾದ ಸ್ವಾಹಾದೇವಿಯೊಡಗೂಡಿ ವಿದ್ಯಮಾನರಾಗಿರುವರು. ಅಪಾನನಾಮಕ ಜಡವಾಯುವಿಗೆ ಅಗ್ನಿಯು ಅಧಿಪತಿಯು. ವಾಗಿಂದ್ರಿಯಾಭಿಮಾನಿಯಾದ ಅಗ್ನಿಯು ಬ್ರಹ್ಮವರ್ಚಸ್ಸು ಹಾಗೂ ಅನ್ನಾದ್ಯಭಿಮಾನಿಯೂ ಆಗಿರುವನು. ಯಜ್ಞಯಾಗಾದಿಗಳಲ್ಲಿ ಕೊಡುವ ಹವಿಸ್ಸನ್ನು ದೇವತೆಗಳಿಗೆ ಅಗ್ನಿಯು ಮುಟ್ಟಿಸುವನು. ಅಗ್ನಿಯು ವೈಕುಂಠದ ಅರಮನೆಯ ಪಶ್ಚಿಮಕವಾಟದಲ್ಲಿ ಸಪತ್ನೀಕನಾಗಿದ್ದಾನೆ.

ಅಗ್ನ್ಯಂತರ್ಗತ ಅಪಾನನಾಮಕ ವಾಯುದೇವರು ಪಶ್ಚಿಮದ್ವಾರದಲ್ಲಿದ್ದಾರೆ. ಅಗ್ನಿಯು ವಾಯ್ವಂತರ್ಗತ ಜಯಾಪತಿ ಸಂಕರ್ಷಣನ ಅನಂತರೂಪ

ಗುಣಗಳನ್ನು ಸ್ತೋತ್ರಮಾಡುತ್ತಲಿರುವನು. ಸಂಕರ್ಷಣನಾಮಕ ಶ್ರೀಹರಿಯು ಸಂಹಾರಕರ್ತನಾದ್ದರಿಂದ ದಮನನೆಂದು ಪದಪ್ರಯೋಗ. ದಮ ಎಂಬ ಶಬ್ದವೂ ವಿಷ್ಣುಸಹಸ್ರನಾಮಾಂತರ್ಗತವೇ. ಕಲ್ಪವೃಕ್ಷದಂತೆ, ಭಕ್ತರಿಗೆ ಅಭೀಷ್ಟಪ್ರದನಾಗಿರುವುದರಿಂದ, ದಮ ಎಂದೂ ಸಂಕರ್ಷಣನಿಗೆ ಹೆಸರು. ಇದು ಬೃಹತೀಮಂತ್ರಾಭಿಪ್ರೇತವಾದ ಅರ್ಥವು.

ಪಶ್ಚಿಮದ್ವಾರದ ಮಾರ್ಗವಾಗಿ ಋಷಿಗಣದ ಜೀವರು ವೈಕುಂಠಾಲಯವನ್ನು ಪ್ರವೇಶಿಸಿ,ಅಲ್ಲಿ ತಮ್ಮ ಹೃತ್ಪದ್ಮದಲ್ಲಿ ವಿರಾಜಮಾನವಾಗಿರುವ ಅಗ್ನ್ಯಂತರ್ಗತ ಅಪಾನನಾಮಕ ವಾಯ್ವಂತರ್ಗತ, ದಮನನಾಮಕನಾದ ಜಯಾಪತಿ ಸಂಕರ್ಷಣನ ಗುಣರೂಪಗಳನ್ನು ಕೊಂಡಾಡುತ್ತಾ, ಅವನ ಆಶ್ರಯವನ್ನು ಹೊಂದಿ ಸ್ವೇಚ್ಛಾನುಸಾರವಾಗಿ ವಿಹರಿಸುತ್ತಾ ಸುಖಪಡುವರು. ||೧೮||

## ಪದ್ಯ ೧೯

### ಮೂಲ

**ಸ್ವರಮಣನ ಗುಣರೂಪ ಸಪ್ತ |**
**ಸ್ವರಗಳಿಂದಲಿ ಪಾಡುತಿಹ ತುಂ |**
**ಬುರನೆ ಮೊದಲಾದಖಿಳ ಗಂಧರ್ವರು ರಮಾಪತಿಯ ||**
**ಪುರದ ಉತ್ತರಬಾಗಿಲಾಧಿಪ |**
**ಸುರಪ ಶಚಿಗೆ ಸಮಾನವಾಯುಗ |**
**ಹರಿನ್ಮಣಿನಿಭ ಶಾಂತಿಪತಿಯನಿರುದ್ಧನೈದುವರು|| ||೧೯||**

### ಅವತರಣಿಕೆ

ಸ್ವರಮಣನ ಅರಮನೆಯ ಉತ್ತರದಿಕ್ಕಿನಲ್ಲಿರುವ ದ್ವಾರದ ಮಾರ್ಗವಾಗಿ ಅನಿರುದ್ಧನನ್ನು ಹೊಂದುವ ತುಂಬರಾದಿ ಗಂಧರ್ವರ ವಿಷಯ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಸ್ವರಮಣನ**= ತನ್ನ ಭಗವದ್ರೂಪಗಳಲ್ಲಿ ತಾನೇ ಕ್ರೀಡೆಯಾಡುವ, ಪರಾಪೇಕ್ಷಾ ರಹಿತನಾದ ಶ್ರೀಪರಮಾತ್ಮನ, **ಗುಣ**= ಅನಂತಕಲ್ಯಾಣಗುಣಗಳನ್ನು, **ರೂಪ**= ರೂಪವಿಶೇಷಗಳನ್ನು, **ಸಪ್ತಸ್ವರಗಳಿಂದ**= ಸಪ್ತಸ್ವರಗಳಿಂದ ಯುಕ್ತವಾದ ರಾಗಾಲಾಪನೆಯ ಸುಮಧುರ ಸಂಗೀತದಿಂದ, **ಪಾಡುತಿಹ**= ಗಾನಮಾಡುತ್ತಿರುವ, **ತುಂಬುರನೆ ಮೊದಲಾದ**= ತುಂಬುರರೇ ಆದಿಯಾಗಿ, **ಅಖಿಳಗಂಧರ್ವರು**= ಸರ್ವದೇವಗಂಧರ್ವರು, **ರಮಾಪತಿಯ**= ಶ್ರೀಲಕ್ಷ್ಮೀಪತಿಯ, **ಪುರದ**= ವೈಕುಂಠಪುರಸಾಂಕೇತವಾದ ಅರಮನೆಯ(ಅಥವಾ ಶ್ವೇತದ್ವೀಪಗತ ಅರಮನೆಯ) **ಉತ್ತರಬಾಗಿಲಾಧಿಪ**= ಉತ್ತರದಿಕ್ಕಿನ ದ್ವಾರಾಧಿಪತಿಯಾದ, **ಸುರಪ**= ಸುರಾಧಿಪತಿಯಾದ, ಇಂದ್ರದೇವರು, **ಶಚಿಗ**= ಇಂದ್ರಪತ್ನಿ ಶಚೀದೇವಿಯರಲ್ಲಿರುವ, **ಸಮಾನವಾಯುಗ**=ಸಮಾನನಾಮಕ ಶ್ರೀವಾಯುದೇವರ ಅಂತರ್ಯಾಮಿಯಾದ, **ಹರಿನ್ಮಣಿನಿಭ**= ಇಂದ್ರನೀಲದಂತೆ ಕಾಂತಿಸಂಪನ್ನನಾದ, **ಶಾಂತಿಪತಿ**= ಶಾಂತೀನಾಮಕ ಲಕ್ಷ್ಮೀದೇವಿಯರ ಪತಿಯಾದ, **ಅನಿರುದ್ಧನ**= ಅನಿರುದ್ಧನಾಮಕ ಶ್ರೀಪರಮಾತ್ಮನನ್ನು, **ಐದುವರು**= ಸೇರಿ, ಅವನ ಆಶ್ರಯ ಹೊಂದಿ, ಸ್ವರೂಪಾನಂದಭೋಗವನ್ನು ಪಡೆಯುತ್ತಿರುವರು. ||೧೯||

## ವ್ಯಾಖ್ಯಾನಗಳು

**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

**ಉಕ್ತಂ ಚ ಪಾಂಚರಾತ್ರಾಗಮೇ-ಹೃದಯೇ ಚೈವ ವಿಷ್ಣುಃ ಲೋಕೇ ಚ ಸರ್ವದಾ । ಅಂತರದ್ವಾರಪಾಹ್ಯೇತೇ ||**
**ಉತ್ತರದ್ವಾರಪಸ್ತ್ವಿಂದ್ರಃ ಸಮಾನೋ ಮನ ಆತ್ಮಕಃ ||**
**ಇತಿ ಛಾಂದೋಗ್ಯಭಾಷ್ಯೇ ||**

ವಾಸುದೇವನ ಅರಮನೆಯ ಉತ್ತರಭಾಗಗತ ದ್ವಾರದಿಂದ ಪ್ರವೇಶರಾಗಿ ಇಚ್ಛಾವರಣ ಅಪಸರಿತರಾದವರ ಹೇಳತಾರೆ.

ಮಾಯಾದೇವಿಯರ ಪತಿಯಾದ ವಾಸುದೇವನ ಶ್ವೇತದ್ವೀಪಗತ ಪುರ ಸಾಂಕೇತವಾದ ಅರಮನೆಯ ಉತ್ತರಭಾಗಗತ ಬಾಗಿಲುಗಳು ಮೂರು. ಅದರೊಳಗೆ ಪ್ರಥಮ ಬಾಗಿಲಿಗೆ ಅಧಿಪರು, ದೇವತೆಗಳನ್ನು ಪಾಲನೆ ಮಾಡ ತಕ್ಕ ಮುಕ್ತರಾದ ಇಂದ್ರದೇವರು, ಇಂದ್ರಪತ್ನಿ ಮುಕ್ತರಾದ ಶಚೀದೇವಿಯರು ಮುಕ್ತರಾದ ಸಮಾನ ವಾಯುದೇವರು, ಇವರ ಪತ್ನಿ ಉಭಯರೂ ಉತ್ತರ ಭಾಗಗತ ಎರಡನೇ ಬಾಗಿಲಿನಲ್ಲಿ ಇದ್ದಾರೆ. ಇಂದ್ರನೀಲದಂತೆ ಕಾಂತಿಸಂಪನ್ನ ನಾದ ಶಾಂತೀನಾಮಕ ಲಕ್ಷ್ಮೀದೇವಿಯ ಪತಿಯಾದ ಅನಿರುದ್ಧನ (ಈ ಉಭಯರೂ ಉತ್ತರಭಾಗಗತ ಮೂರನೇ ಬಾಗಿಲಿನಲ್ಲಿ ಇದ್ದಾರೆ). ರಮಾ ದೇವಿಯರ ಅಪೇಕ್ಷ ಇಲ್ಲದೆ ತನ್ನ ಶ್ರೀರೂಪದಿಂದ ತಾನೇ ರಮಿಸತಕ್ಕ ಶ್ರೀಪರಮಾತ್ಮನ ಉತ್ಕೃಷ್ಟವಾದ ಕಲ್ಯಾಣಗುಣವೇನು, ರೂಪವೇನು ಇವುಗಳ ಸಂಗೀತಶಾಸ್ತ್ರಗತ ಏಳುಸ್ವರಗಳಿಂದ ಗಾನ ಮಾಡುತ್ತಾ ಇರತಕ್ಕ ತುಂಬುರರು ಮೊದಲಾದ ಸರ್ವಗಂಧರ್ವರು, ಉತ್ತರಭಾಗಗತ ದ್ವಾರಪಾಲಕರ ಆಜ್ಞೆ ದಿಂದ ಒಳಗೆ ಪ್ರವೇಶರಾಗಿ ವಾಸುದೇವನ ಐದೋವರಾಗತಾರೆ. ಐದಿ ಇಚ್ಛಾವರಣ ಅಪಸರಿತರಾಗಿ ಆ ಭಾಗದಲ್ಲೇ ಸ್ವೇಚ್ಛಾನುಸಾರ ವಿಹಾರ ಮಾಡತಾ, ಸ್ವರೂಪಾನಂದವನ್ನು ಭೋಗ ಮಾಡತಾ ಇರೋವರಾಗಿದ್ದಾರೆ. ||೧೯||

**ಭಾವಪ್ರಕಾಶಿಕೆ**

"ಉತ್ತರದ್ವಾರಪಸ್ತ್ವಿಂದ್ರಃ ಸಮಾನೋ ಮನ ಆತ್ಮಕಃ"ಎಂಬ ಪಾಂಚ ರಾತ್ರಾಗಮದ ಪ್ರಮಾಣಾನುಸಾರ ಉತ್ತರ ದಿಕ್ಪಾಲಕನು ದೇವೇಂದ್ರನು. ಇವನಲ್ಲಿ ಸಮಾನನಾಮಕ ವಾಯುದೇವರು ಮನಸ್ಸಿನಲ್ಲಿ ಅಂತರ್ಯಾಮಿ ಯಾಗಿರುವನು. ಶ್ರೀಪರಮಾತ್ಮನ ಗುಣರೂಪಗಳನ್ನು ಸಪ್ತಸ್ವರಗಳಿಂದ ಗಾನಮಾಡುತ್ತ ತುಂಬುರರು ಮೊದಲಾದ ಗಂಧರ್ವರು ಇಂದ್ರನಪ್ರಸಾದದಿಂದ ಮುಕ್ತರಾಗಿ ಉತ್ತರದ್ವಾರವನ್ನು ಪ್ರವೇಶಮಾಡಿ ಅಲ್ಲಿ ಶಚಿ ಇಂದ್ರ ಅಂತ ರ್ಯಾಮಿ ಸಮಾನವಾಯುದೇವರ ಅಂತರ್ಯಾಮಿಯಾದ ಶಾಂತಿದೇವಿಯರ ಪತಿ ಯಾದ ಅನಿರುದ್ಧರೂಪವನ್ನು ಉಪಾಸನೆ ಮಾಡುತ್ತಾ ಸ್ವೇಚ್ಛಾವಿಹಾರ ಮಾಡುತ್ತಾ ಸ್ವರೂಪಾನಂದವನ್ನು ಹೊಂದಿ ಸುಖಪಡುತ್ತಿರುವರು. ||೧೯||

**ಭಾವದರ್ಪಣ**

ಗಂಧರ್ವರಿಗೆ ಉತ್ತರ ದ್ವಾರದಿಂದ ಪ್ರವೇಶವೆಂದು ಹೇಳುತ್ತಾರೆ, ಸ್ವರಮಣೇತಿ. ಉಕ್ತಂ ಚ ಪಂಚರಾತ್ರಾಗಮೇ. "ಉತ್ತರ ದ್ವಾರಪಸ್ತ್ವಿಂದ್ರಃ ಸಮಾನಮನ ಆತ್ಮಕ ಇತಿ । ಗಂಧರ್ವಾ ಉತ್ತರೇಣೇಂದ್ರಸಂಶ್ರಯಾದಿತಿ" ಛಾಂದೋಗ್ಯಮಾನಾತ್ ॥ ॥೧೯॥

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಸ್ವರಮಣ ಇತಿ ॥ ಅಥ ಯೋಽಯಂ ಉದಙ್ ಸುಷಿಃ ತತ್ಸಮಾನಃ ಪರ್ಜನ್ಯಃ ತನ್ಮನಃ ತದೇತತ್ ಕೀರ್ತಿಶ್ಚೇತ್ಯುಪಾಸೀತ ಕೀರ್ತಿಮಾನ್ ವ್ಯುಷ್ಟಿಮಾನ್ ಭವತಿ ಯ ಏವಂ ವೇದ ॥

ಉತ್ತರದ್ವಾರಪಸ್ತ್ವಿಂದ್ರಃ ಸಮಾನ ಮನ ಆತ್ಮಕಃ ॥ ಕೀರ್ತ್ಯೈಶ್ವರ್ಯಾತ್ಮಕಃ ನಿತ್ಯಮ್ ॥೧೯॥

**ಕನ್ನಡಾರ್ಥ**

ಭಗವದಧಿಷ್ಠಿತವಾದ ಈ ಹೃದಯಮಂದಿರದ ಉತ್ತರದ್ವಾರಾಧಿಪತಿಯು–ಸಮಾನ ವಾಯ್ವಾಭಿಮಾನಿ-ಮನೋಽಭಿಮಾನಿ ಪರ್ಜನ್ಯನಾಮಕ ಇಂದ್ರನು. ಈ ಉತ್ತರದ್ವಾರಪಾಲಕನಾದ ಇಂದ್ರನನ್ನು ಕೀರ್ತಿ ಐಶ್ವರ್ಯಾಭಿಮಾನಿಯೆಂದು ಉಪಾಸಿಸಬೇಕು. ಅಂದರೆ ಕೀರ್ತಿ ಐಶ್ವರ್ಯಗಳು ಲಭಿಸುವುವು (ಹೀಗೆ ತಿಳಿಯುವವನಿಗೆ) ಎಂದು ಛಾಂದೋಗ್ಯಭಾಷ್ಯಗಳ ಅರ್ಥ. ॥೧೯॥

**ಶ್ರೀಗುರುಹೃದಯಪ್ರಕಾಶಿಕೆ**

ಸ್ವಾನಂದರೂಪನಾದ ದೇವನ ಗುಣರೂಪಗಳನ್ನು ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ ಎಂಬ ವೀಣೆಯ ಸಪ್ತಸ್ವರಗಳಿಂದ ಪಾಡುತ್ತಾ ಇರುವ ತುಂಬುರರೇ ಮೊದಲಾದ ಸಮಸ್ತ ಗಂಧರ್ವರು

ರಮಾಪತಿಯಾದ ದೇವರ ಲೋಕದ ಉತ್ತರದಿಕ್ಕಿನ ಬಾಗಲಲ್ಲಿರುವ ದೇವೇಂದ್ರ ಶಚೀಸಂಸ್ಥಿತ ಸಮಾನವಾಯ್ವಂತರ್ಗತ ಹರಿನ್ಮಣಿ ಎಂಬುವ ಇಂದ್ರನೀಲದಂತೆ ಅಪ್ರಾಕೃತಕಾಂತಿಯುಳ್ಳ ಶಾಂತಿದೇವೀಪತಿ ಅನಿರುದ್ಧರೂಪವನ್ನು ಹೊಂದಿ ಅಲ್ಲಿ ಸಂತೋಷಿಸುತ್ತಿರುವರು. ||೧೯||

## ಸರ್ವ ವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಮುಕ್ತಿಧಾಮಾಖ್ಯವಾದ ಅರಮನೆಯ ಉತ್ತರದಿಕ್ಕಿನಲ್ಲಿರುವ ದ್ವಾರದ ಮೂಲಕ ತುಂಬುರಾದಿ ದೇವಗಂಧರ್ವರು, ಆ ದಿಕ್ಕಿನಲ್ಲಿ ವಿರಾಜಮಾನನಾಗಿರುವ ಶಾಂತೀರಮಣನಾದ ಅನಿರುದ್ಧನ ಆಶ್ರಯಹೊಂದಿ ಸಪ್ತಸ್ವರಯುಕ್ತವಾದ ಸಂಗೀತದಿಂದ ಗಾನಮಾಡುತ್ತಾ ವಿಹರಿಸುತ್ತಿರುವರೆಂದು ತಿಳಿಸುತ್ತಾರೆ.

ಸ್ವಸ್ವರೂಪಗಳಲ್ಲಿ ರಮಿಸುವುದರಿಂದ ಶ್ರೀಪರಮಾತ್ಮನಿಗೆ ಸ್ವರಮಣನೆಂದು ಹೆಸರು. ಶ್ರೀರಮಾಂತರ್ಗತ ತನ್ನದೇ ಆದ ಶ್ರೀರೂಪದಲ್ಲಿ ಕ್ರೀಡಿಸುವನು.

ತುಂಬುರರು ದೇವಗಂಧರ್ವರು. ಸಂಗೀತಶಾಸ್ತ್ರದಲ್ಲಿ ಗಂಧರ್ವಗಾನವು ಶಾಸ್ತ್ರ ಪ್ರಸಿದ್ಧಿ. ತುಂಬುರರು ಮೊದಲಾಗಿ ಅಖಿಳ ಗಂಧರ್ವರು, ಸಪ್ತಸ್ವರಗಳಿಂದ ದಿವ್ಯರಾಗಾಲಾಪನೆ ಮಾಡುತ್ತಾ, ಸುಶ್ರಾವ್ಯವಾದ ಸಂಗೀತವನ್ನು ಪಾಡುತ್ತಾ, ಸ್ವರಮಣನ ಅರಮನೆಯ ಉತ್ತರದ್ವಾರದ ಮೂಲಕ ಮುಕ್ತಿಧಾಮವನ್ನು ಪ್ರವೇಶಿಸುವರು.

ಷಡ್ಜ(ಸ), ಋಷಭಗ(ರಿ), ಗಾಂಧಾರ(ಗ), ಮಧ್ಯಮ(ಮ), ಪಂಚಮ(ಪ), ಧೈವತ(ಧ), ನಿಷಾದ(ನಿ), ಎಂಬುವೇ ಸಪ್ತಸ್ವರಗಳು. ಈ ಸ್ವರಗಳ ಆರೋಹಣ ಅವರೋಹಣ ಗತಿಗಳಿಂದ, ಸ್ವರಪ್ರಸ್ತಾರರೂಪವಾದ ಸುಶ್ರಾವ್ಯ ರಾಗಾಲಾಪನೆ ಸುಮಧುರ ಕಂಠದಿಂದ ಹೊರಹೊಮ್ಮಿದ ಸಂಗೀತನಾದ ತರಂಗಗಳು.

ರಮಾಪತಿಯ ಪುರವೇ ಮುಕ್ತಿಧಾಮಾಖ್ಯ ವೈಕುಂಠವೆಂಬ ಪಟ್ಟಣವು. (ವಾಸುದೇವನ ನಿವಾಸಸ್ಥಾನವಾದ ಶ್ವೇತದ್ವೀಪವೂ ಮುಕ್ತಿಧಾಮವೇ). ರಮಾಪತಿಯ ಪುರದ ಉತ್ತರದ ಬಾಗಿಲಿನಲ್ಲಿ ದೇವತೆಗಳ ಅರಸನಾದ ಇಂದ್ರ ದೇವನು ತನ್ನ ಪತ್ನಿಯಾದ ಶಚೀದೇವಿ ಸಹಿತ ಇದ್ದಾನೆ. ಉತ್ತರ ದ್ವಾರಾಧಿಪತಿಯಾದ ಇಂದ್ರನು ಸಮಾನನಾಮಕ ಜಡವಾಯುವಿನ ಅಧಿಪತಿಯು. ಇಂದ್ರನು ಕೀರ್ತಿ ಮತ್ತು ಐಶ್ವರ್ಯಾಭಿಮಾನಿಯು. ಭಗವದಧಿಷ್ಠಿತರಾದ ಈ ಹೃದಯಮಂದಿರದ ಉತ್ತರದ್ವಾರಾಧಿಪತಿಯಾದ ಇಂದ್ರನ ಅನುಗ್ರಹದಿಂದ ಕೀರ್ತಿ ಐಶ್ವರ್ಯಗಳ ಪ್ರಾಪ್ತಿ.

ಉತ್ತರ ದ್ವಾರಾಧಿಪತಿಯಾದ ಇಂದ್ರ ಮತ್ತು ಶಚಿಯರಲ್ಲಿ ಅಂತಸ್ಥರಾಗಿ ಸಮಾನನಾಮಕ ಶ್ರೀವಾಯುದೇವರು ಇದ್ದಾರೆ. ಆ ವಾಯುದೇವರ ಅಂತರ್ಗತನಾಗಿ ಶಾಂತೀಪತಿ ಅನಿರುದ್ಧನಿದ್ದಾನೆ. ಇಂದ್ರನೀಲಮಣಿಯಂತೆ ಪ್ರಕಾಶಮಾನವಾದ ಶರೀರ ಅನಿರುದ್ಧನದು. ಹರಿನ್ಮಣಿ ಎಂದರೆ ಇಂದ್ರನೀಲ ಮಣಿ ಎಂಬ ಅನರ್ಘ್ಯ ರತ್ನ. ನಿಭ = ರತ್ನದಂತೆ ಕಾಂತಿಸಂಪನ್ನನೆಂದರ್ಥ.

ತುಂಬುರರೇ ಮೊದಲಾದ ಸಕಲ ದೇವಗಂಧರ್ವಗಣ, ಮುಕ್ತರಾಗಿ ವೈಕುಂಠದ ಉತ್ತರದ್ವಾರದ ಮೂಲಕ ಇಂದ್ರ ಮತ್ತು ಶಚಿಯರಲ್ಲಿ ಅಂತಸ್ಥ ಸಮಾನವಾಯುನಾಮಕ ವಾಯ್ವಂತರ್ಗತ ಶಾಂತೀರಮಣನಾದ ಅನಿರುದ್ಧನ ರೂಪಗುಣವಿಶೇಷಗಳನ್ನು ಸಪ್ತಸ್ವರ ತಾಳ ಗತಿ ಬದ್ಧವಾಗಿ ಗಾನಮಾಡುತ್ತಾ ಪ್ರವೇಶಿಸಿ, ಅನಿರುದ್ಧನ ಆಶ್ರಯಪಡೆದು, ಸ್ವರೂಪಾನಂದಭಾಗ್ಯವನ್ನು ಹೊಂದಿ, ಸ್ವೇಚ್ಛೆಯಿಂದ ವಿಹರಿಸುವರು. ||೧೯||

## ಪದ್ಯ ೨೦

### ಮೂಲ

ಗರುಡಶೇಷಮರೇಂದ್ರ ಮುಖ ಪು ।
ಷ್ಕರನೆ ಕಡೆಯಾಗಿಪ್ಪಖಿಳ ನಿ ।
ರ್ಜರರು ಊರ್ಧ್ವದ್ವಾರಗತ ಭಾರತಿ ಉದಾನನೊಳು ॥
ಮೆರೆವ ಮಾಯಾ ವಾಸುದೇವನ ।
ಪರಮಮಂಗಳವಯವಗಳ ಮಂ ।
ದಿರವನೈದಿ ಸದಾ ಮುಕುಂದನ ನೋಡಿ ಸುಖಿಸುವರು ॥೨೦॥

### ಅವತರಣಿಕೆ

ಸರ್ವೋತ್ತಮನ ಅರಮನೆಯ ಊರ್ಧ್ವಭಾಗದಲ್ಲಿರುವ ದ್ವಾರದ ಮೂಲಕ ಪುರ ಪ್ರವೇಶ ಮಾಡುವ ದೇವತಾವರ್ಗದ ವಿಷಯ ತಿಳಿಸುತ್ತಾರೆ.

### ಪ್ರತಿಪದಾರ್ಥ

**ಗರುಡ**= ಗರುಡದೇವರು, **ಶೇಷ**= ಶೇಷದೇವರು, **ಅಮರೇಂದ್ರ** = ದೇವಾಧಿಪತಿಯಾದ ಇಂದ್ರದೇವರು, **ಮುಖ**= ಇವರೇ ಆದಿಯಾಗಿ, **ಪುಷ್ಕರನೆ ಕಡೆಯಾಗಿಪ್ಪ**= ಪುಷ್ಕರನ ಪರ್ಯಂತ, **ಅಖಿಳನಿರ್ಜರರು**= ಸಮಸ್ತ ದೇವತಾಗಣವು, **ಊರ್ಧ್ವದ್ವಾರಗತ**= ಶ್ರೀಹರಿಯ ಮುಕ್ತಿ ಧಾಮಾಖ್ಯ ಅರಮನೆಯ ಊರ್ಧ್ವದ್ವಾರದಲ್ಲಿರತಕ್ಕ ಬಾಗಿಲಿನ ಮೂಲಕ, **ಭಾರತಿ**=ಭಾರತೀನಾಮಕರಾದ ಮುಕ್ತಸರಸ್ವತೀ, **ಉದಾನನೊಳು**= ಉದಾನನಾಮಕ ವಾಯ್ವಾಖ್ಯ ಮುಕ್ತಬ್ರಹ್ಮ ಇವರಲ್ಲಿ ಅಂತರ್ಯಾಮಿಯಾಗಿ, **ಮೆರೆವ**= ಶುಭ್ರವರ್ಣವಿಶಿಷ್ಟನಾಗಿ ಪ್ರಕಾಶಮಾನನಾಗಿರುವ, **ಮಾಯಾ**= ಮಾಯಾನಾಮಕಳಾದ ಶ್ರೀಲಕ್ಷ್ಮೀದೇವಿ, **ವಾಸುದೇವನ**= ಮಾಯಾಪತಿ ವಾಸುದೇವನಾಮಕ ಶ್ರೀಪರಮಾತ್ಮನ, **ಪರಮ**= ಸರ್ವೋತ್ಕೃಷ್ಟವಾದ, **ಮಂಗಳ**= ಶುಭಸ್ವರೂಪವಾದ, **ಅವಯವಗಳ**= ಕರಚರಣಾದಿ ಅವಯವ

ಗಳು ಎನಿಸುವ, **ಮಂದಿರವನು**= ಮುಕ್ತಿಧಾಮವನ್ನು, **ಐದಿ**= ಅಂಗ ಸಾಯುಜ್ಯಗರೂಪದಿಂದ ವಾಸುದೇವನನ್ನು ಹೊಂದಿ, **ಮುಕುಂದನ**= ಮುಕ್ತಿಪ್ರದನಾದ ವಾಸುದೇವನನ್ನು, **ಸದಾ ನೋಡಿ**= ನಿರಂತರದಲ್ಲೂ ನೋಡುತ್ತಾ, **ಸುಖಿಸುವರು**= ಆವನ ದಿವ್ಯದರ್ಶನ ಭಾಗ್ಯದಿಂದ ಆನಂದೋದ್ರೇಕವನ್ನು ಹೊಂದುವರು. ||೨೦||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ಉಕ್ತಂ ಚ ಪಾಂಚರಾತ್ರಾಗಮೆ—ಕೀರ್ತ್ಯೈಶ್ವರ್ಯಾತ್ಮಕೋ ನಿತ್ಯ ಮೂರ್ಧ್ವದ್ವಾರಪ ಏವ ಚ । ಪ್ರಧಾನವಾಯುರಾಕಾಶಃ ಸಾರ್ವಜ್ಞ್ಯಾ ದುನ್ನತೇಸ್ತಥಾ । ಉದಾನ ಊರ್ಜಿತತ್ವಾತ್ಸ ಓಜಃ ಪೂರ್ಣತ್ವತೋ ಮಹಃ । ಪರಸ್ಯ ಬ್ರಹ್ಮಣಸ್ತ್ವೇತೇ ಪುರುಷಾಃ ಪಂಚ ಕೀರ್ತಿತಾಃ || ದ್ವಾರಪಾ ಜಯಾದ್ಯಾ ಬಾಹ್ಯತಃ ಸ್ಮೃತಾಃ ||**

**ಛಾಂದೋಗ್ಯಭಾಷ್ಯೇ– ಪೃಥಿವೀನಾಮಿಕಾ ಶ್ರೀಸ್ತು ದ್ಯೌರ್ದಿಶೋ ವಿದ್ಯುದೇವ ಚ । ವಾಯುಪತ್ನೀ ಸಮುದ್ದಿಷ್ಟಾ ತತ್ತದ್ದ್ವಾರಾಧಿಪಾಶ್ಚ ತೇ । ಅಧಿತಿಷ್ಠಂತಿ ತೇ ಸರ್ವೇ ನಾರಾಯಣಮನಾಮಯಂ ||**

ವಾಸುದೇವನ ಅರಮನೆಯ ಊರ್ಧ್ವದ್ವಾರದಿಂದ ಪ್ರವೇಶರಾಗಿ ಇಚ್ಛಾವರಣ ಅಪಸರಿತರಾದವರನ್ನು ಹೇಳತಾರೆ.

ವಾಸುದೇವನ ಅರಮನೆಗೆ ಗವಾಕ್ಷಿಸದೃಶವಾಗಿ ಊರ್ಧ್ವಭಾಗದಲ್ಲಿ ಇರತಕ್ಕ ದ್ವಾರ ಒಂದೇ. ಈ ಒಂದು ಭಾಗದಲ್ಲಿ ಮುಕ್ತರಾದ ಭಾರತೀದೇವಿಯು ರೆಂದು ಕರಸಿದ ಸರಸ್ವತೀದೇವಿಯರೂ, ಉದಾನನಾಮಕ ಮುಕ್ತಬ್ರಹ್ಮ ಇವರು ಹೊರಭಾಗದಲ್ಲಿ ದ್ವಾರಪಾಲಕರು. ಊರ್ಧ್ವದ್ವಾರಕ್ಕೆ ಒಳಭಾಗದಲ್ಲಿ ಶುಭ್ರವರ್ಣದಿಂದ ವಿಶಿಷ್ಟರಾಗಿ ಪ್ರಕಾಶಮಾನರಾಗಿ ಇರತಕ್ಕ ಮಾಯಾರೂಪ ರಾದ ಲಕ್ಷ್ಮೀದೇವಿಯರು, ವಾಸುದೇವರೂಪನಾದ ಪರಮಾತ್ಮ ಇವರನ್ನು

ದ್ವಾರಪಾಲಕರಾಗಿ ತಿಳಿಯಬೇಕು. ಊರ್ಧ್ವದ್ವಾರಾಭಿಮಾನಿಗಳಾದವರ ಆಜ್ಞಾದಿಂದ ಗರುಡದೇವರು, ಶೇಷದೇವರು, ಇಂದ್ರದೇವರು ಮೊದಲಾದ ಪುಷ್ಕರನೇ ಅಂತ್ಯವಾಗಿ, ಈ ಮಧ್ಯಗತ ಅವಶಿಷ್ಟರಾದ ಸಮಸ್ತ ದೇವತೆಗಳು ಊರ್ಧ್ವದ್ವಾರದಿಂದ ಒಳಗೆ ಪ್ರವೇಶರಾಗಿ, ವಾಸುದೇವನ ಸಂದರ್ಶನ ಮಾಡಿ ಇಚ್ಛಾವರಣ ಅಪಸರಿತರಾಗಿ, ಅರಮನೆಯ ಮಧ್ಯಗತನಾದ ಪರಮಮಂಗಳ ಕರನಾದ ಮುಕ್ತಿಪ್ರದನಾದ ಶ್ರೀವಾಸುದೇವನ ಕರಚರ್ಣ ಅವಯವಗಳು ಎನತಕ್ಕ ಮನೆಗಳ ಐದಿ, ಅಂಗಸಾಯುಜ್ಯರೂಪದಿಂದ ಯುಕ್ತರಾಗಿ ಸರ್ವಕಾಲ ದಲ್ಲೂ ಸ್ವರೂಪಾನಂದವನ್ನು ಭೋಗಿಸುತ್ತಾ, ಹೃದಯಾಕಾಶಗತ ಮುಕುಂದನ ತಮ್ಮ ತಮ್ಮ ಕಾಲಕ್ಲೃಪ್ತ್ಯಾನುಸಾರ ನೋಡಿ ಆನಂದಪಡುತ್ತಾ ಇರೋವರಾಗಿ ದ್ದಾರೆ. ||೨೦||

### ಭಾವಪ್ರಕಾಶಿಕೆ

ಮೇಲಿನ ಬಾಗಿಲ ಪಾಲಕರು, ಪ್ರಧಾನವಾಯುದೇವರು. ಇವರು ಉದಾನನಾಮಕರಾಗಿ ಪತ್ನೀಸಮೇತರಾಗಿರುವರು. ಅವರಂತರ್ಯಾಮಿ ಮಾಯಾಪತಿಯಾದ ಶ್ರೀವಾಸುದೇವ ಮೂರ್ತಿಯು. ಪೂರ್ವಾದಿ ದಿಕ್ಕು ಗಳಲ್ಲಿ ಜಯವಿಜಯಾದಿ ದ್ವಾರಪಾಲಕರೆಂದು ಭಾಗವತಾದಿ ಪುರಾಣಗಳಲ್ಲಿ ಪ್ರಸಿದ್ಧವಾಗಿರುವುದು. ಇಲ್ಲಿ ಸೂರ್ಯ, ಚಂದ್ರ, ಅಗ್ನಿ ಮೊದಲಾದವರೆಂದು ಹೇಳಿರುವರು. ಪರಸ್ಪರ ವಿರೋಧ ಬಂತೆಂದರೆ, ಪಾಂಚರಾತ್ರಾಗಮದಲ್ಲಿ "ಪರಸ್ಯ ಬ್ರಹ್ಮಣಸ್ತ್ವೇತೇ ಪುರುಷಾಃ ಪಂಚ ಕೀರ್ತಿತಾಃ ದ್ವಾರಪಾ ಹೃದಯೇ ಚೈವ ವಿಷ್ಣುಲೋಕೇಚ ಸರ್ವದಾ । ಅಂತಶ್ಚ ದ್ವಾರಪಾಹ್ಯೇತೇ ಜಯಾದ್ಯಾ ಬಾಹ್ಯತಃ ಸ್ಮೃತಾಃ||" ಪರಬ್ರಹ್ಮನಾದ ಶ್ರೀಮನ್ನಾರಾಯಣನಿಗೆ ಮೇಲಿನ ಪದ್ಯಗಳಲ್ಲಿ ಹೇಳಿದಂತೆ ಪೂರ್ವಾದಿ ೪ ದ್ವಾರಗಳಲ್ಲಿ ಸೂರ್ಯ, ಚಂದ್ರ, ಅಗ್ನಿ, ಇಂದ್ರ ಇವರು ನಾಲ್ವರು, ಮೇಲ್ಭಾಗದಲ್ಲಿ ಉದಾನಪ್ರಾಣದೇವರು, ಈ ಐದು ಮಂದಿ ದೇವತೆಗಳು ಪರಮಾತ್ಮನ ಮನೆಯಲ್ಲೂ ಮತ್ತು ಹೃದಯಾ ಕಾಶದಲ್ಲೂ ಸಹ ಕಾದುಕೊಂಡಿರುವವರು ಒಳಗಿನ ದ್ವಾರಪಾಲಕರು. ಜಯ ವಿಜಯಾದಿಗಳು ಕೋಟೆಯ ಹೊರಬಾಗಿಲನ್ನು ಕಾಯುವರೆಂದು ಹೇಳಿರು

ವರು. ಈ ವಾಕ್ಯದಿಂದ ಮೇಲಿನ ವಿರೋಧವು ಪರಿಹಾರವಾದಂತಾಯಿತು. ಇಂತಹ ಮೇಲಿನ ದ್ವಾರದಿಂದ ಒಳಗೆ ಪ್ರವೇಶಮಾಡುವವರು ಗರುಡ, ಶೇಷ, ಇಂದ್ರ ಮೊದಲು,ಕರ್ಮಾಭಿಮಾನಿಯಾದ ಪುಷ್ಕರನವರೆಗೂ ಸರ್ವದೇವತೆಗಳೂ ಮುಕ್ತರಾಗಿ ಮುಕ್ತಿಸ್ಥಾನವನ್ನು ಹೊಂದಬೇಕಾದರೆ, ಈ ಪುರದ ಊರ್ಧ್ವ ದ್ವಾರದಿಂದ ಅಲ್ಲಿರುವ ಪ್ರಾಣದೇವರ ಪ್ರಸಾದದಿಂದ ಒಳಹೊಕ್ಕು ಅಪರಂತ ರ್ಯಾಮಿ ವಾಸುದೇವಮೂರ್ತಿಯನ್ನು ಸದಾ ಕಣ್ಣಿಂದ ನೋಡುತ್ತಾ ಸ್ವರೂಪಾನಂದವನ್ನು ಅನುಭವಿಸುತ್ತಾ ಸುಖದಿಂದಿರುವರು. ||೭೦||

**ಭಾವದರ್ಪಣ**

ಗರುಡಶೇಷರುದ್ರಾದಿ ಪುಷ್ಕರಾಂತ ದೇವತೆಗಳು ಊರ್ಧ್ವದ್ವಾರದಿಂದ ಪ್ರವೇಶರಾಗುತ್ತಾರೆಂದು ಹೇಳುತ್ತಾರೆ, ಗರುಡೇತಿ. ಉಕ್ತಂ ಚ ಪಂಚ ರಾತ್ರಾಗಮೇ. ಕೀರ್ತ್ಯೈಶ್ವರ್ಯಾತ್ಮಕೋ ನಿತ್ಯಮೂರ್ಧ್ವದ್ವಾರಪ ಏವ ಚ | ಪ್ರಧಾನವಾಯುರಾಕಾಶ ಸರ್ವಜ್ಞಾದುಸ್ನತೇಸ್ತಥಾ ! ಉದಾನ ಊರ್ಜಿತ ತ್ವಾತ್ಸಃ ಓತಃ ಪೂರ್ಣತ್ವತೋವಹಃ । ಪರಸ್ಯ ಬ್ರಹ್ಮಣಸ್ತ್ವೇತೆ ಪುರುಷಾಃ ಪಂಚ ಕೀರ್ತಿತಾಃ। ದ್ವಾರಪಾ ಹೃದಯೇ ಚೈವ ವಿಷ್ಣು ಲೋಕೇ ಚ ಸರ್ವದಾ। ಅಂತಶ್ಚ ದ್ವಾರಪಾಹ್ಯೇತೇ ಜಯಾದ್ಯಾ ಬಾಹ್ಯತಃ ಸ್ಮೃತಾ ಇತಿ | ಪೃಥಿವೀ ನಾಮಿಕಾ ಶ್ರೀಸ್ತು ದ್ಯೌರ್ದಿಶೋ ವಿದ್ಯುದೇವ ಚ | ವಾಯುಪತ್ನೀ ಸಮುದ್ದಿಷ್ಟಾ ತತ್ತದ್ವಾರಾಧಿಪಾಶ್ಚ ತಾಃ | ಅಧಿತಿಷ್ಠಂತಿ ತೇ ಸರ್ವೇ ನಾರಾಯಣಮನಾಮಯಮಿತಿ" ಛಾಂದೋಗ್ಯಭಾಷ್ಯಮಾನಾಜ್ಜ್ಞೇಯಂ ಶಿವಾದ್ಯಾ ವಾಯುಮಾಶ್ರಿತ್ಯ ಯಾಂತ್ಯೂರ್ಧ್ವೇಣ ಹರಿಂ ಸುರಾ। ಇತಿ ಚ ||

**ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಗರುಡ ಇತಿ|| ಅಥ ಯೋಸ್ಯೋರ್ಧ್ವಃ ಸುಷಿಃ ಸ ಉದಾನಃ ಸ ವಾಯುಃ ಸ ಆಕಾಶಃ ತದೇತದೋಜಶ್ಚ ಮಹಶ್ಚೇತ್ಯುಪಾಸೀತ ಓಜಸ್ವೀ ಮಹಸ್ವಾನ್ ಭವತಿ ಯ ಏವಂ ವೇದ || ತೇ ವಾ ಏತೇ ಪಂಚ ಬ್ರಹ್ಮ ಪುರುಷಾಃ|| ಇತಿ|| ಊರ್ಧ್ವದ್ವಾರಪ ಏವ ಚ || ಪ್ರಧಾನವಾಯುರಾಕಾಶಃ

ಸಾರ್ವಜ್ಞ್ಯಾತ್ ಉನ್ನತೇಃ ತಥಾ|| ಉದಾನಂ ಊರ್ಜಿತತ್ವಾತ್ ಸಃ ಓಜಃ ಪೂರ್ಣತ್ವತೋ ಮಹಃ । ಪರಸ್ಯ ಬ್ರಹ್ಮಣಸ್ತ್ವೇತೇ ಪುರುಷಾಃ ಪಂಚ ಕೀರ್ತಿತಾಃ || ದ್ವಾರಪಾಃ ಹೃದಯೇ ಚೈವ । ಏವಮೇತಾನ್ ಉಪಾಸ್ಯೈವ ತದ್ಗುಣಾಂಶಾಂಶಭಾಗ್ ಭವೇತ್ || ವಿಷ್ಣುಲೋಕಂ ತಥಾ ಗಚ್ಛೇತ್। ಭವೇದಪಿ ಸುಸಂತತಿಃ|| ಇತಿ ಛಾಂದೋಗ್ಯಂ ಪಂಚದ್ವಾರಪಬೋಧಕಂ ಆತ್ಮಪಂಚ ಪದ್ಯೇಷು ನಿಬಬಂಧ ಪರಲೋಕಬಂಧುಃ ಬಂಧುಕುಲಲಲಾಮಃ ||೨೦||

## ಕನ್ನಡಾರ್ಥ

ಈ ಹೃದಯಮಂದಿರದ ಊರ್ಧ್ವದ್ವಾರಪಾಲಕನು ಉದಾನನೆಂಬ ಮುಖ್ಯವಾಯುವು. ಅವನು ಉದಾನವಾಯ್ವಭಿಮಾನಿ ಹಾಗೂ ಸರ್ವಜ್ಞನಾದುದರಿಂದ ಆಕಾಶನಾಮಕನು. ಈ ಊರ್ಧ್ವದ್ವಾರಪಾಲಕನಾದ ಮುಖ್ಯವಾಯುವನ್ನು ಊರ್ಜಿತ (ಓಜ) ಪೂರ್ಣ (ಮಹ) ಎಂದು ಉಪಾಸಿಸಬೇಕು. ಹೀಗೆ ತಿಳಿದವನು, ಊರ್ಜಿತನೂ, ಪೂರ್ತಿಯುಳ್ಳವನೂ ಆಗುತ್ತಾನೆ.

ಹೃದಯಸ್ಥ ಪರಮಾತ್ಮನ ದ್ವಾರಪಾಲಕರು ಈ ಹೃದಯಕ್ಕಷ್ಟೇ ಅಲ್ಲ ಸ್ವರ್ಗಲೋಕಕ್ಕೂ ವಿಷ್ಣುವಿನ ವೈಕುಂಠಲೋಕಕ್ಕೂ ದ್ವಾರಪಾಲಕರಾಗಿರುತ್ತಾರೆ. "ಜಯವಿಜಯ ಮುಂತಾದವರು ಬಹಿದ್ವಾರಪಾಲಕರು. ಸೂರ್ಯ ಮುಂತಾದವರು ಅಂತದ್ವಾರಪಾಲಕರು" ಎಂದು ಸೂಕ್ಷ್ಮ ತಿಳಿಯಬೇಕು ಎಂದು ಛಾಂದೋಗ್ಯಭಾಷ್ಯಗಳಲ್ಲಿ ನಿರೂಪಿತವಾದ ರಹಸ್ಯವನ್ನು ಈ ಐದು ಪದ್ಯಗಳಲ್ಲಿ ನಿರೂಪಿಸಿರುತ್ತಾರೆ. (ಸಂಗ್ರಹಿಸಿ). ವೈಷ್ಣವದಾಸರಲ್ಲಿ ಶ್ರೇಷ್ಠರಾದ ದಾಸರಾಯರ 'ಪರಲೋಕಬಂಧುಭಾವವನ್ನು ಎಷ್ಟು ಸ್ಮರಿಸಿದರೂ ಸಾಲದು.

## ಶ್ರೀಗುರುಹೃದಯಪ್ರಕಾಶಿಕೆ

ಗರುಡ ಶೇಷ ದೇವೇಂದ್ರ ಇವರು ಮೊದಲುಮಾಡಿ ಪುಷ್ಕರಾಂತವಾಗಿ ಇರುವ ಅಖಿಳ ನಿರ್ಜರರೆಂಬ ಸಮಸ್ತದೇವತೆಗಳೂ, ದೇವರ ಲೋಕದ ಊರ್ಧ್ವದ್ವಾರವೆಂಬ ಮೇಲುಭಾಗ ಬಾಗಲಲ್ಲಿರುವ, ಭಾರತೀ ಉದಾನ ವಾಯುದೇವರಂತರ್ಗತನಾಗಿ ಮೆರೆವ ಅಂದರೆ ಶೋಭಿಸುವ ಮಾಯಾಪತಿ

ವಾಸುದೇವನ ಪರಮಂಗಳರೂಪ ಅವಯುವಗಳೆಂಬ ಮನೆಯನ್ನು ಹೊಂದಿ ಸದಾ ಮುಕ್ತಿಪ್ರದ ದೇವರನ್ನು ನೋಡುತ್ತಾ ಸುಖಿಸುವರು. ||೨೦||

# ಸರ್ವವ್ಯಾಖ್ಯಾನಸಾರಸಂಗ್ರಹ

ವೈಕುಂಠಾಲಯದ ಊರ್ಧ್ವಭಾಗದಲ್ಲಿರುವ ದ್ವಾರದ ಮೂಲಕ ಪ್ರವೇಶಿಸಿ, ಅಲ್ಲಿ ವಿರಾಜಮಾನನಾಗಿರುವ ಮಾಯಾಪತಿ ವಾಸುದೇವನನ್ನು ಹೊಂದಿ ಸ್ತುತಿಸುವ ಗರುಡಾದಿ ಪುಷ್ಕರ ಪರ್ಯಂತ ಇರುವ ಸಮಸ್ತ ದೇವತಾ ಗಣದ ವಿಷಯ ತಿಳಿಸುತ್ತಾರೆ.

ಮುಕ್ತಿಧಾಮಾಖ್ಯವಾದ ವೈಕುಂಠದ ಊರ್ಧ್ವಗತ ದ್ವಾರದ ಮೂಲಕ ಮುಕ್ತಗರುಡ, ಶೇಷ, ಸುರಾಧಿಪನಾದ ಇಂದ್ರನೇ ಮೊದಲಾದ ಪುಷ್ಕರ ಪರ್ಯಂತ ದೇವತೆಗಳು ಪ್ರವೇಶಿಸುವರು.

ಅಮರ–ಎಂದರೆ ದೇವತೆಗಳು. ಅವರಿಗೆ ಅಧಿಪತಿಯಾದ ಇಂದ್ರ ದೇವರು. ಮುಕ್ತರಾಗುವ ದೇವತಾವರ್ಗದಲ್ಲಿ ಪುಷ್ಕರನೇ ಕೊನೆಯುವನು. ದೇವತೆಗಳಿಗೆ ದೇಹವಿಕಾರವಿಲ್ಲ. ಅವರ ಶರೀರವು ವೈಕಾರಿಕತತ್ತ್ವದಿಂದ ಉಂಟಾಗಿದೆ. ಅವರಿಗೆ ಮುಪ್ಪು ಇಲ್ಲದಿರುವುದರಿಂದ ದೇವತೆಗಳಿಗೆ ನಿರ್ಜರ ರೆಂದು ಹೆಸರು.

ಮುಕ್ತಿಧಾಮದ ಊರ್ಧ್ವಗತ ದ್ವಾರದಲ್ಲಿ ಉದಾನನಾಮಕರಾದ ಪ್ರಧಾನವಾಯುದೇವರು ಇದ್ದಾರೆ. ಅವರೇ ಮುಕ್ತಬ್ರಹ್ಮರು. ಅವರ ಪತ್ನಿ ಭಾರತೀನಾಮಕ ಮುಕ್ತಸರಸ್ವತಿಯು. ಅಂತಹ ಉದಾನನಾಮಕ ವಾಯ್ವಂತರ್ಗತನಾಗಿ, ಮಾಯಾಪತಿ ವಾಸುದೇವನಿರುವನು. ಶ್ರೀಲಕ್ಷ್ಮೀ ದೇವಿಯು ಮಾಯನಾಮಕಳು. ಅವಳ ಪತಿಯೇ ಮೋಕ್ಷದಾಯಕ ವಾಸುದೇವನು.

ಗರುಡಶೇಷಾದಿ ಸಮಸ್ತ ದೇವತೆಗಳು ಮುಕ್ತಿಧಾಮದ ಊರ್ಧ್ವದ್ವಾರ

ದಿಂದ ಪ್ರವೇಶಿಸಿ, ಅಲ್ಲಿ ಉದಾನನಾಮಕ ವಾಯ್ವಂತರ್ಗತ ಮಾಯಾಪತಿ ವಾಸುದೇವನ ಸರ್ವೋತ್ಕೃಷ್ಟಗಳಾದ ಶುಭಾಂಗಗಳಲ್ಲಿ ಆಶ್ರಯಹೊಂದಿ, ಅಂಗ ಸಾಯುಜ್ಯರೂಪವಾದ ಮುಕ್ತಿಯನ್ನು ಪಡೆಯುವರು. ಆ ದಿವ್ಯ ಮಂಗಳ ಮೂರ್ತಿಯನ್ನು ಸದಾ ಸ್ಮರಿಸುತ್ತಾ, ನಿರಂತರ ನೋಡಿ, ನಿತ್ಯಾನಂದವನ್ನು ಹೊಂದಿ ವಿಹರಿಸುತ್ತಿರುವರು.

## ಮುಖ್ಯಪ್ರಮೇಯ

ಭಾಗವತಾದಿ ಪುರಾಣಗಳಲ್ಲಿ ಶ್ರೀಪರಮಾತ್ಮನ ವೈಕುಂಠಾಲಯದ ಪೂರ್ವಾದಿ ದಿಕ್ಕುಗಳಲ್ಲಿ ಜಯವಿಜಯಾದಿಗಳು ದ್ವಾರಪಾಲಕರಾಗಿರುವರೆಂದು ಹೇಳಿದೆ. ಆದರೆ ಈ ಐದು ಪದ್ಯಗಳಲ್ಲಿ ಸೂರ್ಯ, ಚಂದ್ರ, ಅಗ್ನಿ ಮೊದಲಾದವರು ಇದ್ದಾರೆಂದು ದಾಸರಾಯರು ತಿಳಿಸಿರುತ್ತಾರೆ. ಪರಸ್ಪರ ವಿರೋಧ ಬಂದಿತಲ್ಲಾ ಎಂಬ ಆಕ್ಷೇಪ ಬಂದರೆ ಅದಕ್ಕೆ ಸಮಾಧಾನವು ಪಾಂಚರಾತ್ರಾಗಮದಲ್ಲಿ ಇದೆ.

ಪೂರ್ವಾದಿ ನಾಲ್ಕು ದ್ವಾರಗಳಲ್ಲಿ ಸೂರ್ಯ, ಚಂದ್ರ, ಅಗ್ನಿ ಮತ್ತು ಇಂದ್ರ-ಈ ನಾಲ್ವರು ದ್ವಾರಪಾಲಕರಾಗಿಯೂ, ಊರ್ಧ್ವದ್ವಾರದಲ್ಲಿ ಉದಾನ ನಾಮಕ ಪ್ರಾಣದೇವರು ಪಾಲಕರಾಗಿಯೂ ಒಳಗಿನ ಆವರಣದಲ್ಲಿ (ಪರಮಾತ್ಮನ ಮಂದಿರ ಮತ್ತು ಹೃದಯಾಕಾಶ) ಕಾದುಕೊಂಡಿದ್ದಾರೆ. ಜಯವಿಜಯಾದಿಗಳು ಮಂದಿರದ ಕೋಟೆಯ ಹೊರಬಾಗಿಲಿನ ದ್ವಾರಪಾಲಕರಾಗಿದ್ದಾರೆ ಎಂದು ತಿಳಿಯಬೇಕು.

ಉದಾನನಾಮಕ ವಾಯುದೇವರು ಆಕಾಶಾಭಿಮಾನಿಯು. ಇದರಿಂದ ಊರ್ಧ್ವಗತ ದ್ವಾರಪಾಲಕನು. ಸರ್ವಜ್ಞನಾದ ಪ್ರಧಾನವಾಯುವನ್ನು ಊರ್ಜಿತ (ಓಜ) ಮತ್ತು ಪೂರ್ಣ (ಮಹ) ಎಂದು ಉಪಾಸಿಸಬೇಕು. ಹೀಗೆ ಉಪಾಸಿಸುವನು ಊರ್ಜಿತನೂ (ಓಜೋವಂತನೂ) ಮತ್ತು ಅವನ ಯೋಗ್ಯತಾನುಸಾರ ಪೂರ್ಣನೂ ಆಗುತ್ತಾನೆ. ||೨೦||

## ಪದ್ಯ ೨೧

### ಮೂಲ

ದ್ವಾರಪಂಚಕಪಾಲಕರೊಳಿಹ ।
ಭಾರತೀಪ್ರಾಣಾಂತರಾತ್ಮಕ ।
ನಾರಮಣನೈರೂಪ ತತ್ತದ್ವಾರದಲಿ ಬಪ್ಪ ॥
ಮೂರೆರಡು ವಿಧ ಮುಕ್ತಿಯೋಗ್ಯರ ।
ತಾರತಮ್ಯವನರಿತವರ ಕಂ ।
ಸಾರಿ ಸಂಸಾರಾಬ್ಧಿ ದಾಟಿಸಿ ಮುಕ್ತರನ ಮಾಳ್ಪ ॥ ॥೨೧॥

### ಅವತರಣಿಕೆ

ದೇವಾದಿ ಮಾನುಷೋತ್ತಮರ ಪರ್ಯಂತವಾಗಿರುವ ಮುಕ್ತಿಯೋಗ್ಯರಾದ ಪಂಚಜೀವರ ತಾರತಮ್ಯವನ್ನು ತಿಳಿದವರಿಗೆ ಕಂಸಾರಿಯು ಸಂಸಾರ ತಾರಣ ಮಾಡಿಸಿ, ಮುಕ್ತಿಪ್ರದನಾಗಿ, ನಿತ್ಯಾನಂದರೂಪವಾದ ಮುಕ್ತಿಯ ಸುಖವನ್ನೀಯುವನೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ದ್ವಾರಪಂಚಕ**= ಶ್ವೇತದ್ವೀಪಗತ ಶ್ರೀವಾಸುದೇವನ ಅರಮನೆಯ ಐದು ದ್ವಾರಗಳಲ್ಲಿರುವ, **ಪಾಲಕರೊಳಿಹ**= ದ್ವಾರಾಧಿಪತಿಗಳಾಗಿರುವ ಸೂರ್ಯ, ಚಂದ್ರ, ಅಗ್ನಿ, ಇಂದ್ರ ಮತ್ತು ಉದಾನನಾಮಕ ಶ್ರೀವಾಯು ದೇವರು ಇವರಲ್ಲಿರುವ, **ಭಾರತೀ**= ಭಾರತೀ ಸಾಂಕೇತರಾದ ಮುಕ್ತ ಸರಸ್ವತೀದೇವಿ, **ಪ್ರಾಣ**= ಪ್ರಾಣಸಾಂಕೇತ ಮುಕ್ತಬ್ರಹ್ಮದೇವರು ಪ್ರಾಣಾದಿ ಪಂಚರೂಪಗಳಿಂದ, **ಅಂತರಾತ್ಮಕ**= ಅವರ ಅಂತರ್ಯಾಮಿಯಾಗಿರುವ, **ನಾರಮಣನ**= ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, **ಐರೂಪ**= ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಪಂಚ ಭಗವದ್ರೂಪಗಳನ್ನು, **ತತ್ತದ್ವಾರದಲಿ ಬಪ್ಪ**= ಆಯಾಯಾ

ಐದು ದ್ವಾರಗಳ ಮೂಲಕ ಅರಮನೆಯನ್ನು ಪ್ರವೇಶಿಸುವ, **ಮೂರೆರಡು ವಿಧ**= ಪಂಚವಿಧವಾದ (ಮೂರು + ಎರಡು = ಐದು) **ಮುಕ್ತಿಯೋಗ್ಯರ** = ಮಾನುಷೋತ್ತಮರು, ಪಿತೃಗಳು, ಋಷಿಗಣ, ದೇವಗಂಧರ್ವರು ಮತ್ತು ಗರುಡಾದಿ ದೇವತಾಗಣ ಎಂಬ ಪಂಚಮುಕ್ತಿಯೋಗ್ಯ ಚೇತನರ, **ತಾರತಮ್ಯವ**= ಅವರವರ ಸ್ವರೂಪಯೋಗ್ಯತಾ ತಾರತಮ್ಯವನ್ನು, **ಅರಿತವರ** = ತಿಳಿದವರಾದ ಭಗವದ್ಭಕ್ತರನ್ನು, **ಕಂಸಾರಿ**= ಕಂಸನನ್ನು ಸಂಹರಿಸಿದ ಶ್ರೀಕೃಷ್ಣನು, **ಸಂಸಾರಾಬ್ಧಿ ದಾಟಿಸಿ**= ಸಂಸಾರಸಮುದ್ರವನ್ನು ದಾಟಿಸಿ, **ಮುಕ್ತರನ ಮಾಳ್ಪ**= ಕರ್ಮವಿಮೋಚನಾದ್ವಾರಾ, ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಸುಖವನ್ನು ಕೊಡುವನು. ||೨೦||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಸುದೇವನ ಅರಮನೆಯ ಊರ್ಧ್ವದ್ವಾರದಿಂದ ಬ್ರಹ್ಮಪ್ರವೇಶನಾಗಿ ಇಚ್ಛಾವರಣ ಅಪಸರಣವೆಂದು ಹೇಳತಾರೆ.

ವಾಸುದೇವನ ಅರಮನೆಗೆ ಪೂರ್ವೋಕ್ತ ಪ್ರಕಾರ ದ್ವಾರಗಳು ಐದು ದಿಕ್ಕಿನಲ್ಲಿ ಹದಿಮೂರು ದ್ವಾರಗಳು ಅವೆ. (ದಿಕ್ಕು ಒಂದಕ್ಕೆ ಮೂರು ಬಾಗಿಲುಗಳ ಪ್ರಕಾರ ನಾಲ್ಕುದಿಕ್ಕುಗಳಿಗೆ ಹನ್ನೆರಡು ಬಾಗಿಲುಗಳು, ಊರ್ಧ್ವದ್ವಾರ ಒಂದು ಅಂತು ಹದಿಮೂರು ದ್ವಾರಗಳು). ಪ್ರತಿದಿಕ್ಕಿನಲ್ಲಿ ಪ್ರಥಮ ದ್ವಾರಕ್ಕೆ ಪಾಲಕರಾದವರ ಒಳಬಾಗಿಲಿನಲ್ಲಿ ಇರತಕ್ಕ ದ್ವಿತೀಯ ದ್ವಾರಕ್ಕೆ ಪಾಲಕರಾಗಿ ಇರತಕ್ಕ, ಮುಕ್ತರಾದ ಭಾರತೀಸಾಂಕೇತರಾದ ಸರಸ್ವತೀದೇವಿಯರು, ಪ್ರಾಣಸಾಂಕೇತ ಮುಕ್ತಬ್ರಹ್ಮ ಪ್ರಾಣಾದಿ ಐದು ರೂಪಗಳಿಂದ ಹಾಗೂ ಸರಸ್ವತೀದೇವಿಯರು ಐದು ರೂಪಗಳಿಂದ ಇರೋವರಾಗಿದ್ದಾರೆ. ಎರಡನೇ ದ್ವಾರದ ಆಚೇಲಿ ಇರತಕ್ಕ ಮೂರನೇ ದ್ವಾರದಲ್ಲಿ ಲಕ್ಷ್ಮೀಪತಿಯಾದ ನಾರಾಯಣನ ಸ್ವಾತ್ಮಕವಾದ ನಾರಾಯಣಾದಿ ಅನಿರುದ್ಧಾಂತ ಐದುರೂಪಗಳಿಂದ ಇದ್ದು, ಆಯಾ ದ್ವಾರಗಳಿಂದ ಬರತಕ್ಕ ಮೂರೆರಡುಗಳು ಅಂದರೆ

ಆರುವಿಧ ಎಂತ ತಾತ್ಪರ್ಯ. ಅದರ ವಿವರ (ವ್ಯಾಖ್ಯಾನದ ಕೊನೆಯಲ್ಲಿ ಕೊಟ್ಟಿದೆ). ಆರನೇ ವಿಧರಾದ ಬ್ರಹ್ಮದೇವರು ಸರಸ್ವತೀದೇವಿಯರು ಊರ್ಧ್ವದ್ವಾರದಿಂದ ರುದ್ರಾದಿಗಳ ಅನಂತರ ಪ್ರವೇಶಮಾಡಿ ವಾಸುದೇವನಿಂದ ಇಚ್ಛಾವರಣ ಅಪಸರಿತರಾಗಿ, ಆ ವಾಸುದೇವನಲ್ಲಿ ಸರ್ವಾಂಗಸಾಯುಜ್ಯವನ್ನ ಐದೋವರಾದರೆಂದು ತಾತ್ಪರ್ಯ.

ಈ ಪ್ರಕಾರ ಆರು ವಿಧ ಮುಕ್ತಿ. ರುದ್ರಶಬ್ದದಿಂದ ಶೇಷದೇವರು ಎಂತ ಅರ್ಥ.

ಮುಕ್ತಿಯೋಗ್ಯರ ಇಚ್ಛಾವರಣ ಮಾತ್ರ ಅವಶಿಷ್ಟವುಳ್ಳ ಮುಕ್ತಿಯೋಗ್ಯರ ಸ್ವರೂಪಯೋಗ್ಯತಾ ತಾರತಮ್ಯವನ್ನು ತಿಳಿದು ಇರುವ ಆ ಅಧಿಕಾರಿಗಳಾದ ಜೀವರನ್ನ ಶ್ರೀಕೃಷ್ಣದೇವರು ಸಂಸಾರಸಮುದ್ರಸಾಂಕೇತವಾದ ಲಿಂಗದೇಹ ಭಂಗ ಐದಿಸಿ, ಇಚ್ಛಾವರಣ ಮಾತ್ರ ಉಳಿಸಿ ಅಮುಕ್ತರೆಂತ ಕರಸಿದವರ ಪುನಃ ಸೃಷ್ಟಿಕಾಲದಲ್ಲಿ ವಾಸುದೇವರೂಪದಿಂದ ಇಚ್ಛಾವರಣ ಅಪಸರಣ ಮಾಡಿ, ದೋಷರಹಿತರಾದ ಮುಕ್ತರನ್ನು ಮಾಡೋವನಾಗುತಾನೆ. ಮುಕ್ತಸ್ಥಾನದಲ್ಲಿ ವಾಯು ರುದ್ರ ಶಬ್ದಗಳು ಬ್ರಹ್ಮ ಶೇಷ ಎಂತ ತಿಳಿಯಬೇಕು. ಮುಕ್ತಾದಿ ಬ್ರಹ್ಮರೇ ಪ್ರಾಣಾದಿ ಪಂಚನಾಮಗಳಿಂದ ದ್ವಾರಪಾಲಕರಾಗಿದ್ದಾರೆಂದು ತಾತ್ಪರ್ಯ. ||೨೦||

ಐದು ದ್ವಾರಗಳಿಂದ ಬರತಕ್ಕವರ ವಿವರ.

| | | |
|---|---|---|
| ೧. ಪೂರ್ವದ್ವಾರ | ಮಾನುಷಗಂಧರ್ವರಾರಭ್ಯ ತೃಣಾಂತ | ನಾರಾಯಣ |
| ೨. ಪಶ್ಚಿಮದ್ವಾರ | ಋಷಿಗಣ | ಸಂಕರ್ಷಣ |
| ೩. ಉತ್ತರದ್ವಾರ | ದೇವಗಂಧರ್ವರು | ಅನಿರುದ್ಧ |
| ೪. ದಕ್ಷಿಣದ್ವಾರ | ಪಿತೃಗಣ | ಪ್ರದ್ಯುಮ್ನ |
| ೫. ಊರ್ಧ್ವದ್ವಾರ | ಗರುಡ ಶೇಷರು ಮತ್ತು ಬ್ರಹ್ಮ ಸರಸ್ವತಿ ಇತರ ನಿರ್ಜರರು | ವಾಸುದೇವ |

**ಭಾವಪ್ರಕಾಶಿಕೆ**

ಪೂರ್ವ ದಕ್ಷಿಣ ಪಶ್ಚಿಮ ಉತ್ತರ ಊರ್ಧ್ವ ಹೀಗೆ ಐದು ದ್ವಾರಗಳಲ್ಲಿ ಅಂತರ್ದ್ವಾರಪಾಲಕರಾದ ಸೂರ್ಯ ಚಂದ್ರ ಅಗ್ನಿ ಇಂದ್ರ ಪ್ರಧಾನವಾಯು ಹೀಗೆ ೫ ದ್ವಾರಪಾಲಕರಂತರ್ಯಾಮಿಯಾಗಿ ವಾಯುದೇವರು, ಪ್ರಾಣ ಅಪಾನ ವ್ಯಾನ ಸಮಾನ ಉದಾನ ಎಂಬ ೫ ರೂಪಗಳಿಂದ ಇರುವರು. ಇವರ ಪತ್ನಿಯಾದ ಭಾರತೀದೇವಿಯರು ೫ ರೂಪಗಳಿಂದ ಇರುವರು. ಪೃಥಿವೀನಾಮಿಕಾ ಶ್ರೀಸ್ತು ದ್ಯೌರ್ದಿಶೋ ವಿದ್ಯುದೇವ ಚ || ವಾಯುಪತ್ನೀ ಸಮುದ್ದಿಷ್ಟಾ ತತ್ತದ್ವಾರಾಧಿಪಾಶ್ಚತಾಃ|| ಪೃಥ್ವಿದೇವಿಯರು, ಶ್ರೀದೇವಿಯರು, ದ್ಯುದೇವಿಯರು, ದಿಗ್ದೇವಿಯರು, ವಿದ್ಯುದ್ದೇವಿಯರು ಎಂದು ಭಾರತೀದೇವಿಯರಿಗೆ ೫ ರೂಪಗಳಿರುವುವು. ಇವರು ಪ್ರಾಣಾಪಾನ ವ್ಯಾನಾದಿ ಪ್ರಾಣದೇವರ ೫ ರೂಪಗಳಿಗೂ ಪತ್ನಿಯಾಗಿ ಪತ್ನಿಯಿಂದೊಡಗೂಡಿ ಆಯಾ ದ್ವಾರಗಳಲ್ಲಿರುವರು ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿರುವರು. ಈ ಪಂಚರೂಪಿಯಾದ ಪ್ರಾಣದೇವರ ಅಂತರಾತ್ಮಕನಾದ ಪರಮಾತ್ಮನು ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ೫ ರೂಪಗಳಿಂದ ಲಕ್ಷ್ಮಿ, ಮಾಯಾ, ಜಯಾ, ಕೃತಿ, ಶಾಂತಿ ಎಂಬ ೫ ರೂಪವುಳ್ಳ ಲಕ್ಷ್ಮೀದೇವಿಯರಿಂದೊಡಗೂಡಿ, ಪೂರ್ವಾದಿ ದ್ವಾರಗಳಿಗೆ ಬರುವ ಮನುಷ್ಯೋತ್ತಮರು, ಪಿತೃಗಣರು, ಗಂಧರ್ವರು, ದೇವತೆಗಳು ಎಂಬ ೫ ವಿಧ ಮುಕ್ತಿಯೋಗ್ಯರನ್ನು ಅವರವರ ತಾರತಮ್ಯವನ್ನು ತಿಳಿದು ಕಂಸಾರಿಯಾದ ಶ್ರೀಹರಿಯು ಸಂಸಾರ ಸಮುದ್ರದಿಂದ ಅವರನ್ನು ದಾಟಿಸಿ ಅವರವರ ಯೋಗ್ಯತಾನುಸಾರ ಸ್ವರೂಪಸುಖವನ್ನು ಮುಕ್ತಿಯಲ್ಲಿ ಅಭಿವ್ಯಕ್ತಿ ಮಾಡಿ ಕೊಡಿಸುವನು. ಕಂಸಾರಿ ಎಂದರೆ ಕಂಸನನ್ನು ಕೊಂದ ಕೃಷ್ಣರೂಪದಿಂದಲೇ ಮುಕ್ತಿಯನ್ನು ಕೊಡುತ್ತಾನೆಂದು ಅರ್ಥವಲ್ಲ. ಕಸಿ ಹಿಂಸಾಯಾಮಿತಿ ಧಾತೋಃ ಕಂಸ ಎಂದರೆ ಮುಕ್ತಿಮಾರ್ಗಕ್ಕೆ ಪ್ರತಿಬಂಧಕರೂಪವಾಗಿ ಧರ್ಮವನ್ನು ಹಿಂಸಿಸುವುದು ಸಂಸಾರ. ಇದಕ್ಕೆ ಕಂಸ ಎಂದು ಹೆಸರು. ಇಂತಹ ಸಂಸಾರಮೋಚಕನಾದ ಶ್ರೀಹರಿಯೆಂದು ತಾತ್ಪರ್ಯ. ||೨೮||

**ಭಾವದರ್ಪಣ**

ದ್ವಾರ ಪಂಚಕೇತಿ. ಮೂರೆರಡು ವಿಧ. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಸಾರ್ಷ್ಟಿ ಎಂದು ಪಂಚವಿಧ ಮುಕ್ತಿ ಎಂಬರ್ಥ.

**ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ದ್ವಾರ ಇತಿ|| ಐ– ಐದು|| ಬಪ್ಪ–ಬರುವ ||೨೦||

**ಕನ್ನಡಾರ್ಥ**

ಈ ಹೃದಯಸ್ಥ ಹರಿಯು ದ್ವಾರಪಾಲಕರಲ್ಲಿರುವ ಭಾರತೀ ಹಾಗೂ ಪ್ರಾಣದೇವರ ಐದೈದು ರೂಪಗಳನ್ನೂ, ಅಲ್ಲಿರುವ ಶ್ರೀಲಕ್ಷ್ಮೀನಾರಾಯಣರ ರೂಪಗಳನ್ನೂ ದಿನಾಲು ಚಿಂತಿಸಿ ಧ್ಯಾನೋಪಾಸನೆಯು ಮಾಡುವವನಿಗೆ ಫಲವನ್ನು ನಿರೂಪಿಸಿರುತ್ತಾರೆ. ಈ ಪದ್ಯದಿಂದ. ||೨೦||

**ಶ್ರೀಗುರುಹೃದಯ ಪ್ರಕಾಶಿಕೆ**

ದೇವರ ಈ ಐದು ಬಾಗಿಲ ಅಧಿಪತಿಗಳಲ್ಲಿರುವ ಭಾರತೀಪ್ರಾಣಾಂತರಾತ್ಮಕ ಅಂದರೆ, ಇವರ ಅಂತರ್ಯಾಮಿಯಾದ ಶ್ರೀರಮಣನ ಐದು ರೂಪಗಳನ್ನು ಆಯಾಯ ಬಾಗಿಲಲ್ಲಿ ಬರುವ ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಮನುಷ್ಯೋತ್ತಮರೆಂಬ ಐದುವಿಧ ಮುಕ್ತಿಯೋಗ್ಯಜೀವರ ತಾರತಮ್ಯ ತಿಳಿದವರನ್ನು ಕಂಸಾರಿಯಾದ ಶ್ರೀಕೃಷ್ಣನು ಸಂಸಾರಸಮುದ್ರ ದಾಟಿಸಿ ಮುಕ್ತರನ್ನು ಮಾಡುವನು.

**ಪ್ರಮಾಣ**

ಪ್ರಾಣಾಭಿಮಾನೀ ಚಕ್ಷುಶ್ಚ ಸೂರ್ಯ ಏವ ಹ್ಯದಾಹೃತಃ ।
ತೇಜೋಽನ್ನಾದ್ಯಭಿಮಾನೀ ಚ ಪ್ರಾಗ್‌ದ್ವಾರಾಧಿಪತಿರ್ಹರೇಃ ॥
ದಕ್ಷಿಣಾಧಿಪತಿಸ್ಸೋಮಃ ವ್ಯಾನಃ ಶ್ರೋತ್ರಾಭಿಮಾನವಾನ್ ।

ಯಶೋಲಾವಣ್ಯರೂಪಶ್ಚ ಪಶ್ಚಿಮದ್ವಾರಪಸ್ತಥಾ ||
ವಾಗಪಾನತ್ಮಕೋ ವಹ್ನಿರ್ಬ್ರಹ್ಮತೇಜೋನ್ನದೇವತಾ |
ಉತ್ತರದ್ವಾರಪಸ್ತ್ವೇಂದ್ರಃ ಸಮಾನ ಮನ ಆತ್ಮಕಃ ||
ಕೀರ್ತ್ಯೈಶ್ವರ್ಯಾತ್ಮಕೋ ನಿತ್ಯಮೂರ್ಧ್ವದ್ವಾರಪ ಏವ ಚ |
ಪ್ರಧಾನವಾಯುರಾಕಾಶಸ್ಸರ್ವಜ್ಞಾದುನ್ನತೇಸ್ತಥಾ ||
ಉದಾನ ಊರ್ಜಿತತ್ವಾತ್ಸ ಓಜಃ ಪೂರ್ಣತ್ವತೋ ಮಹಃ |
ಪರಸ್ಯ ಬ್ರಹ್ಮಣಸ್ತ್ವೇತೇ ಪುರುಷಾಃ ಪಂಚಕೀರ್ತಿತಾಃ ||

ದ್ವಾರಪಾ ಹೃದಯೇ ಚೈವ ವಿಷ್ಣುಲೋಕೇ ಚ ಸರ್ವದಾ |
ಅಂತರದ್ವಾರಪಾ ಹ್ಯೇತೇ ಜಯಾದ್ಯಾ ಬಾಹ್ಯತಃ ಸ್ಮೃತಾಃ ||
ಏವಮೇತಾನುಪಾಸ್ಯೈವ ತದ್ಗುಣಾಂಶಾಂಶಭಾಗ್ಭವೇತ್ |
ವಿಷ್ಣುಲೋಕಂ ತಥಾ ಗಚ್ಛೇದ್ಭವೇದಪಿ ಸುಸಂತತಿಃ ||
ಯೋಸೌ ವೈಕುಂಠಗೋವಿಷ್ಣುಃ ಸತ್ಯಲೋಕೋಪರಿಸ್ಥಿತಃ |
ಸ ಏವ ಸರ್ವಲೋಕೇಷು ವಿಶ್ವತೋ ಬ್ರಹ್ಮಣಸ್ತಥಾ |
ಉಚ್ಚೇಷೂತ್ತಮ ಲೋಕೇಷು ತಥಾ ಪ್ರತ್ಯವರೇಷು ಚ |
ಪುರುಷೇಷು ಚ ಸರ್ವೇಷು ಸ ಏಕಸ್ಸುವ್ಯವಸ್ಥಿತಃ ||
ಇತಿ ವೈಕುಂಠವರ್ಣನಾಯಾಂ ||

ಮತ್ತು

ಸೂರ್ಯಪ್ರಸಾದತ್ತು ನರಾಃ ಪೂರ್ವದ್ವಾರೇಣ ಕೇಶವಂ |
ಪ್ರಾಪ್ನುವಂತ್ಯಥ ಸೋಮಸ್ಯ ಪ್ರಸಾದಾತ್ಪಿತರಸ್ತಥಾ ||
ದ್ವಾರೇಣ ದಕ್ಷಿಣೇನೈವ ಗಂಧರ್ವಾಃ ಪಶ್ಚಿಮೇನ ತು |
ಅಗ್ನಿಪ್ರಸಾದಾದೃಷಯಃ ಉತ್ತರೇಣೇಂದ್ರ ಸಂಶ್ರಯಾತ್ ||
ಶಿವಾದ್ಯಾ ವಾಯುಮಾಶ್ರಿತ್ಯ ಯಾಂತ್ಯೂರ್ಧ್ವೇಣ ಹರಿಂ ಸುರಾಃ ||

ಈ ಛಾಂದೋಗ್ಯಭಾಷ್ಯಾರ್ಥ ಸಹ ವಿವರಿಸಲ್ಪಟ್ಟಿರುತ್ತೆ. ||೨೦||

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ಹೃನ್ಮಂದಿರವೆಂಬ ಆಲಯದ ಪಂಚದ್ವಾರಗಳಲ್ಲಿರುವ ದ್ವಾರಾಧಿಪತಿಗಳು, ಅವರ ಅಂತಸ್ಥ ಭಾರತೀಸಹಿತರಾದ ಶ್ರೀವಾಯು ದೇವರ ಪಂಚರೂಪಗಳು, ವಾಯ್ವಂತರ್ಗತ ನಾರಾಯಣಾದಿ ಪಂಚಭಗವ ದ್ರೂಪಗಳು. ಮುಕ್ತಧಾಮವನ್ನು ಪ್ರವೇಶಿಸುವ ಪಂಚವಿಧ ಮುಕ್ತಿಯೋಗ್ಯ ಚೇತನರ ತಾರತಮ್ಯವನ್ನು ತಿಳಿದು, ಕೊಂಡಾಡುತ್ತಿರುವ ಜ್ಞಾನಿಗಳನ್ನು ಕಂಸಾರಿಯು ಸಂಸಾರವೆಂಬ ಘೋರ ಸಮುದ್ರದಿಂದ ದಾಟಿಸಿ, ಮುಕ್ತರನ್ನು ಮಾಳ್ಪನೆಂದು ತಿಳಿಸುತ್ತಾರೆ.

ಹೃನ್ಮಂದಿರವೆಂಬ ಆಲಯ ಹಾಗೂ ಶ್ರೀಹರಿಯ ಮುಕ್ತಧಾಮವೆಂಬ ಮಂದಿರದ ಐದು ದ್ವಾರಗಳಲ್ಲಿ ಅಂದರೆ, ೧. ಪೂರ್ವದ್ವಾರ. ೨. ದಕ್ಷಿಣ ದ್ವಾರ, ೩. ಪಶ್ಚಿಮದ್ವಾರ, ೪. ಉತ್ತರದ್ವಾರ ಮತ್ತು ೫. ಊರ್ಧ್ವಗತ ದ್ವಾರ, ಇವುಗಳನ್ನು ದ್ವಾರಪಂಚಕವೆಂದಿದ್ದಾರೆ.

ಅಂತಹ ದ್ವಾರಪಂಚಪಾಲಕರ ಅಂತಸ್ಥಿತರಾಗಿ ಭಾರತೀಸಹಿತರಾದ ಶ್ರೀವಾಯುದೇವರು ಪಂಚರೂಪಗಳಿಂದ ವಿದ್ಯಮಾನರಾಗಿದ್ದಾರೆ.

ಭಾರತೀದೇವಿಯರ ಪಂಚರೂಪಗಳು-

ಪೃಥ್ವೀದೇವಿ, ಶ್ರೀದೇವಿ, ದ್ಯುದೇವಿ, ದಿಗ್ದೇವಿ ಮತ್ತು ವಿದ್ಯುದ್ದೇವಿ ಎಂದು ಶ್ರೀಭಾರತೀದೇವಿಯರಿಗೆ ಪಂಚರೂಪಗಳಿವೆ.

ಪಂಚರೂಪಾತ್ಮಕರಾದ ಭಾರತೀದೇವಿಯರಲ್ಲಿ ಉಪಾಸಿಸಬೇಕಾದ ವಾಯುದೇವರ ಪಂಚರೂಪಗಳು-

ಪ್ರಾಣ, ಅಪಾನ, ವ್ಯಾನ, ಉದಾನ, ಮತ್ತು ಸಮಾನ ಈ ಪಂಚ ನಾಮಕರಾಗಿ ಪ್ರಧಾನವಾಯುದೇವರಿದ್ದಾರೆ.

ಪಂಚದ್ವಾರಾಧಿಪಾಂತಸ್ಥಿತ ಪಂಚರೂಪಾತ್ಮಕಪ್ರಾಣಾಂತರ್ಗತನಾಗಿ ಶ್ರೀಪರಮಾತ್ಮನು ಶ್ರೀಲಕ್ಷ್ಮೀದೇವಿಯರ ಪಂಚರೂಪಗಳಿಂದ ಸಹಿತನಾಗಿ, ಪಂಚರೂಪಗಳಿಂದ ವಿರಾಜಮಾನನಾಗಿದ್ದಾನೆ.

ಮಾ ರಮಣ ಎಂದರೆ ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನು.

ಶ್ರೀಲಕ್ಷ್ಮೀದೇವಿಯರ ಪಂಚರೂಪಗಳು–

ಲಕ್ಷ್ಮೀ, ಮಾಯಾ, ಜಯಾ, ಕೃತಿ ಮತ್ತು ಶಾಂತಿ.

ಭಾರತೀಪ್ರಾಣಾಂತರಾತ್ಮಕ ಮಾರಮಣನ ಸ್ವರೂಪಗಳು–

ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ.

ಮುಕ್ತಿಯೋಗ್ಯಚೇತನರು ಐದುಪ್ರಕಾರ ಇರುವರು. ಅವರಿಗೆ ಪಂಚಜೀವರು ಎಂದು ಹೆಸರು. ಆ ಪಂಚಮುಕ್ತಿಯೋಗ್ಯಜೀವರು, ಮನುಷ್ಯೋತ್ತಮರು, ಪಿತೃದೇವತೆಗಳು, ಋಷಿಗಳು, ಗಂಧರ್ವರು ಮತ್ತು ದೇವತೆಗಳು ಎಂದು ಐದು ಪ್ರಕಾರ.

ಇವರ ತಾರತಮ್ಯವನ್ನು ಅರಿತ, ಅಂದರೆ, ಪಂಚಜೀವರು–ಪಂಚ ದ್ವಾರಾಧಿಪತಿಗಳು– ಪಂಚಭಾರತೀವಾಯುದೇವರರೂಪಗಳು– ತದಂತರ್ಗತ ಮಾರಮಣನ ಪಂಚಭಗವದ್ರೂಪಗಳನ್ನು ಈ ಕ್ರಮದಲ್ಲಿ ತಿಳಿದು ಉಪಾಸಿಸುವ ಭಕ್ತರೇ ತಾರತಮ್ಯವನರಿತವರು.

ಕಂಸಾರಿ ಎಂದರೆ ತನ್ನ ಸೋದರಮಾವನಾದ ದುರುಳ ಕಂಸಾಸುರನನ್ನು ಸಂಹರಿಸಿದ ಶ್ರೀಕೃಷ್ಣ. ಮತ್ತು

"ಕಸಿ ಹಿಂಸಾಯಾಮಿತಿ ಧಾತೋಃ ಕಂಸಃ"

ಎಂದರೆ ಮುಕ್ತಿಮಾರ್ಗಕ್ಕೆ ಪ್ರತಿಬಂಧಕರೂಪವಾದ ಧರ್ಮವನ್ನು ಹಿಂಸಿಸುವುದು ಸಂಸಾರ. ಇದಕ್ಕೆ ಕಂಸ ಎಂದು ಹೆಸರು. ಇಂತಹ ಸಂಸಾರಮೋಹಕನಾದ ಶ್ರೀಹರಿಗೆ ಕಂಸಾರಿ ಎಂದು ಹೆಸರು.

ಸಂಸಾರಕ್ಕೆ ಮುಖ್ಯಕಾರಣವು ಸ್ವರೂಪದೇಹಕ್ಕೆ ಇರುವ ಲಿಂಗದೇಹದ ಸಂಪರ್ಕ. ಇದನ್ನಪಹರಿಸಿ, ತದ್ದ್ವಾರಾ ಕರ್ಮವಿಮೋಚನೆಗೈದು, ಸ್ವರೂಪಗತ ಆನಂದವನ್ನು ಅಭಿವ್ಯಕ್ತಗೊಳಿಸಿ, ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಕೊಡುವನು.

| ವಿವರಗಳು | ಪೂರ್ವದ್ವಾರ | ದಕ್ಷಿಣದ್ವಾರ | ಪಶ್ಚಿಮದ್ವಾರ | ಉತ್ತರದ್ವಾರ | ಊರ್ಧ್ವದ್ವಾರ |
|---|---|---|---|---|---|
| ಭಗದ್ರೂಪಗಳು | ನಾರಾಯಣ | ಪ್ರದ್ಯುಮ್ನ | ಪ್ರದ್ಯುಮ್ನ | ಅನಿರುದ್ಧ | ವಾಸುದೇವ |
| ರಮಾರೂಪಗಳು | ಲಕ್ಷ್ಮೀ | ಕೃತೀ | ಕೃತೀ | ಶಾಂತಿ | ಮಾಯಾ |
| ವಾಯುದೇವರ ಪಂಚರೂಪಗಳು | ಪ್ರಾಣ | ವ್ಯಾನ | ಅಪಾನ | ಸಮಾನ | ಉದಾನ |
| ಭಾರತೀದೇವಿಯರ ಪಂಚರೂಪಗಳು | ಪೃಥ್ವೀದೇವಿ | ದ್ಯುದೇವಿ | ಶ್ರೀದೇವಿ | ದಿಗ್ದೇವಿ | ವಿದ್ಯುದ್ದೇವಿ |
| ಪಂಚದ್ವಾರಾಧಿಪತಿಗಳು | ಸಂಜ್ಞಾ ಸಹಿತ ಸೂರ್ಯ | ರೋಹಿಣೀ ಸಹಿತ ಚಂದ್ರ | ಸ್ವಾಹಾ ಸಹಿತ ಅಗ್ನಿ | ಶಚೀ ಸಹಿತ ಇಂದ್ರ | ಭಾರತೀ ಸಹಿತ ಪ್ರಧಾನವಾಯು |
| ಪಂಚಮುಕ್ತಿಯೋಗ್ಯರು | ಮಾನುಷೋತ್ತಮರು | ಪಿತೃಗಣ | ಋಷಿಗಣ | ದೇವ ಗಂಧರ್ವರು | ಗರುಡಾದಿ ದೇವತೆಗಳು |

## ಪದ್ಯ ೨೨

**ಮೂಲ**

ಬೆಳಗಿಧೂಜಿಯು ನೋಳ್ಪರಿಗೆ ಥಳ ।
ಥಳಿಸುತಲಿ ಕಂಗೊಳಿಸುವಂದದಿ ।
ತೊಳೆದು ದೇಹವ ನಾಮಮುದ್ರೆಗಳಿಂದಲಂಕರಿಸಿ ॥
ಒಲಿಸಿ ನಿತ್ಯ ಕುತರ್ಕಯುಕ್ತಿಗ ।
ಳಲವಬೋಧರ ಶಾಸ್ತ್ರಮರ್ಮವ ।
ತಿಳಿಯದಿಹ ನರ ಬರಿದೆ ಇದರೊಳು ಶಂಕಿಸಿದರೇನು॥ ॥೨೨॥

**ಅವತರಣಿಕೆ**

ತಮ್ಮ ಬಾಹ್ಯವೇಷದಿಂದ ನೋಳ್ಪ ಜನರನ್ನು ವಂಚಿಸುತ್ತಾ, ಶ್ರೀಮನ್ಮಧ್ವಮುನಿಗಳಿಂದ ವಿರಚಿತ ಸಚ್ಛಾಸ್ತ್ರಗಳ ರಹಸ್ಯವನ್ನರಿಯದ ವೇಷ ಧಾರಿಗಳು ಈ ಗ್ರಂಥೋಕ್ತ ವಿಷಯದಲ್ಲಿ ಸಂದೇಹಪಡುವುದರಿಂದ ಏನು ಪ್ರಯೋಜನ ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಬೆಳಗಿದ**= ಚೆನ್ನಾಗಿ ತೊಳೆಯಲ್ಪಟ್ಟ, **ಹೂಜಿಯು**=ಹೂಜಿಯ ಆಕಾರದಲ್ಲಿರುವ ಪಾತ್ರೆಯು, **ನೋಳ್ಪರಿಗೆ**= ದೂರದಿಂದ ನೋಡತಕ್ಕ ಜನ ರಿಗೆ, **ಥಳಥಳಿಸುತಲಿ**=ಫಳಫಳನೆ ಹೊಳೆಯುತ್ತ, **ಕಂಗೊಳಿಸುವಂದದಿ** = ಕಣ್ಣಿಗೆ ಅಪ್ಯಾಯಮಾನವಾಗಿ ತೋರುವಂತೆ, **ದೇಹವ**= ಹೂಜಿ ಸಾಂಕೇತವಾದ ಈ ಶರೀರವನ್ನು, **ತೊಳೆದು**= ಚೆನ್ನಾಗಿ ತಿಕ್ಕಿ, ನೀರಿನಿಂದ ಸ್ವಚ್ಛಗೊಳಿಸಿ, **ನಾಮ**= ದ್ವಾದಶನಾಮಗಳಿಂದಲೂ, **ಮುದ್ರೆಗಳಿಂದ**= ಪಂಚ ಮುದ್ರೆಗಳಿಂದಲೂ, **ಅಲಂಕರಿಸಿ**= ಅಲಂಕಾರ ಮಾಡಿ, **ಒಲಿಸಿ**= ತನ್ನ ಬಾಹ್ಯ ವೇಷಭೂಷಣಗಳಿಂದ ಜನರ ಮನಸ್ಸನ್ನು ಒಲಿಸಿಕೊಂಡು,

**ನಿತ್ಯ**= ಯಾವಾಗಲೂ, **ಕುತರ್ಕ**= ಕುತ್ಸಿತವಾದ ತರ್ಕಗಳನ್ನು ಮಾಡುತ್ತಾ, **ಯುಕ್ತಿಗಳ**= ಅದನ್ನನುಸರಿಸಿ ಕುತ್ಸಿತ ಯುಕ್ತಿಗಳನ್ನು ಮಾಡುತ್ತಾ, **ಅಲವಬೋಧರ**= ಪೂರ್ಣಬೋಧರಾದ ಶ್ರೀಮದಾನಂದತೀರ್ಥರಿಂದ ವಿರಚಿತ, **ಶಾಸ್ತ್ರಮರ್ಮವ**= ಸಚ್ಛಾಸ್ತ್ರಗತ ರಹಸ್ಯಾರ್ಥಗಳನ್ನು, **ತಿಳಿಯದಿಹ** = ಅರಿಯದಿರುವ, **ನರ**= ಕೇವಲ ಡಾಂಭಿಕವಾದ ಮನುಷ್ಯನು, **ಬರಿದೆ**= ನಿಷ್ಪ್ರಯೋಜನವಾಗಿ, **ಇದರೊಳು**= ಪ್ರಸಕ್ತ ಗ್ರಂಥಸ್ಥ ವಿಷಯದಲ್ಲಿ, **ಶಂಕಿಸಿದರೇನು** = ದೋಷಾರೋಪಣೆ ಮಾಡಿ, ಸಂದೇಹಿಸುವುದರಿಂದ ಏನು ಪ್ರಯೋಜನ ? ||೨೨||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಮಧ್ವಾಚಾರ್ಯರಿಂದ ಕೃತವಾದ ಸಚ್ಛಾಸ್ತ್ರಮರ್ಮ ಅರಿಯದೆ ಈ ಗ್ರಂಥೋಕ್ತಿಗಳಲ್ಲಿ ಶಂಕೆ ಮಾಡೋಣದರಿಂದ ಈ ಗ್ರಂಥ ದೋಷಿಯಾಗುವುದಿಲ್ಲ ಎಂದು ಹೇಳತಾರೆ.

ಚಂದಾಗಿ ತೊಳೆಯಲ್ಪಟ್ಟ ಕಂಚಿನ ಹೂಜಿಯು ದೂರದಿಂದ ನೋಡತಕ್ಕವರಿಗೆ ಬೆಳ್ಳಿಯಂತೆ ಥಳಥಳಮಾನಾಯವಾಗಿ ಕಣ್ಣಿಗೆ ಒಪ್ಪುವದಾಗತದೆ. ವಿಚಾರ ಮಾಡಿ ನೋಡಿದರೆ ಬೆಳ್ಳಿಯೇನೋ ಅಲ್ಲ. ತದ್ವತ್ ಮತ್ತು ಹೂಜಿಯ ಬಾಯಿ ಸಣ್ಣದಾಗಿರೋಣದರಿಂದ ಕೈಹಾಕಿ ಒಳಗೆ ತೊಳಿಯೋದಕ್ಕೆ ಬರುವುದಿಲ್ಲ. ಮೇಲೆ ಮಾತ್ರ ಛಂದಾಗಿ ನಿರ್ಮಲವಾಗಿ ತೊಳಿಯುತ್ತಾನೆ. ಒಳಗೆ ಕಶ್ಮಲರೂಪವಾದ ಪಾಚಿ ಅಲ್ಲೇ ಇರುತ್ತದೆ. ಈ ಹೂಜಿಯಂತೆ, ಹೂಜಿಸಾಂಕೇತವಾದ ದೇಹವನ್ನ ಚಂದಾಗಿ ತಿಕ್ಕಿ ಜಲದಿಂದ ತೊಳೆದು, ದ್ವಾದಶನಾಮಗಳಿಂದಲೂ ಪಂಚಮುದ್ರೆಗಳಿಂದಲೂ ಈ ಉಭಯವಿಧದಿಂದ ದೇಹಕ್ಕೆ ಅಲಂಕಾರ ಮಾಡಿ, ಬಾಹ್ಯವೇಷದಿಂದ ಜನರಿಂದ ಮಹಾಸಜ್ಜನ ತಾನೆಂದು ಎನಿಸಿ, ಹೂಜಿ ಒಳಗೆ ವಿದ್ಯಾಮಾನವಾದ ಕಶ್ಮಲದಂತೆ ಅಹಂಮಮತಾದಿಂದಲೂ, ಕಾಮಕ್ರೋಧಾದಿ ಅರಿಷಡ್ವರ್ಗದಿಂದಲೂ ಮಹಾ

ಕಶ್ಮಲದಿಂದ ಇರುವವಗೆ ಫಲ ಕೊಡತಕ್ಕ ದೇವತೆಗಳಿಂದ ಯೋಗ್ಯ ಎಂತ ಎನಿಸಿಕೊಂಬನೇ ? ಕಂಚಿನ ಹೂಜಿ ಬೆಳ್ಳಿ ಸದೃಶ ಹೊಳೆಯೋ ಮಾತ್ರದಿಂದ ಬೆಳ್ಳಿಯ ಯೋಗ್ಯತಾ ಬಂದೀತೆ? ಬರಲಾರದು. ಏತಾದೃಶನಾದ ಅಧಿಕಾರಿ ಸ್ವಲ್ಪವಲ್ಲದೆ, ಅಪರಿಚ್ಛಿನ್ನವಾದ ಪರಮಾತ್ಮನ ಮಹಾಮಹಿಮೆಯನ್ನು ಸಜ್ಜನರಿಗೆ ಬೋಧನ ಮಾಡತಕ್ಕ, ಜೀವೋತ್ತಮರಾದ ಶ್ರೀಮದಾನಂದತೀರ್ಥರಿಂದ ಕೃತವಾದ ಸಚ್ಛಾಸ್ತ್ರದಲ್ಲಿರುವ ಗೋಪ್ಯವಾದ ಮಹಾ ಅರ್ಥಗಳ ತಿಳಿಯದೆ ಮಂದನಾಗಿ ಪೂರ್ವೋಕ್ತ ಲಕ್ಷಣೋಪೇತನಾದ ಮನುಷ್ಯ ನಿಷ್ಫಯೋಜನವಾದ ಕುತ್ಸಿತವಾದ ತರ್ಕಶಾಸ್ತ್ರಾಭ್ಯಾಸ ಮಾಡಿ, ಅದರನ್ನ ಅನುಸರಿಸಿ ಕುತ್ಸಿತ ಉಕ್ತಿಗಳ ಈ ಗ್ರಂಥದೊಳು ಆರೋಪಣಮಾಡಿ ಪ್ರತಿದಿನದಲ್ಲೂ ಶಂಕಾರೂಪವಾದ ದೋಷಗಳು ಹೇಳಿ ಸಂದೇಹಪಡುವುದರಿಂದ ಆಗತಕ್ಕ ಕಾರ್ಯವೇನೋ ಕಾಣೆ. ಆದ್ದರಿಂದ ಸಚ್ಛಾಸ್ತ್ರಮರ್ಮವ ಗುರುಮುಖದಿಂದ ತಿಳಿದು, ತದನುಷ್ಠಾನಪರರಾದ ಭಗವದ್ಭಕ್ತರಿಗೆ ಪ್ರಯೋಜನವೇ ಹೊರತು ಡಾಂಭಿಕರಾಗಿ ಪಂಡಿತಮಾನಿಗಳಾದ ಅಯೋಗ್ಯರಿಗೆ ಇದು ಅವಲೋಕನಕ್ಕೆ ಯೋಗ್ಯವಾಗಲಾರದು ಎಂತ ತಾತ್ಪರ್ಯ. ||೨೨||

## ಭಾವಪ್ರಕಾಶಿಕೆ

ಸಣ್ಣದಾದ ಬೂದಿಯು ಕಂಚಿನ ಹೂಜಿಯನ್ನು ಥಳಥಳಿಸುವಂತೆ ತೊಳದು ಇಟ್ಟಿರಲು ಒಳಗೆ ಕಶ್ಮಲವು ತುಂಬಿದ್ದರೂ ಹೊರಗೆ ನೋಡುವವರಿಗೆ ಹೇಗೆ ಥಳಥಳ ಹೊಳೆಯುತ್ತ ಕಂಗೊಳಿಸುವುದೋ ಹಾಗೆ ಚೆನ್ನಾಗಿ ಸ್ನಾನ ಮಾಡಿ ೧೨ ನಾಮಗಳು, ಮೈ ತುಂಬ ಮುದ್ರೆಗಳನ್ನು ಹಾಕಿಕೊಂಡು ದೊಡ್ಡ ಪಂಡಿತರೆಂದು ಪ್ರಖ್ಯಾತಿ ಪಡೆದು ಬರೆ ಯುಕ್ತಿಶಾಸ್ತ್ರವೆನಿಸುವ ಕುತರ್ಕಶಾಸ್ತ್ರಗಳ- ಅಂದರೆ ಶ್ರುತಿ ಮೊದಲಾದ ಶಾಸ್ತ್ರಗಳನ್ನನುಸರಿಸದೆ ಬರೆ ಯುಕ್ತಿಗಳಿಂದ ಹೇಳುವ ತರ್ಕಕ್ಕೆ ಕುತರ್ಕವೆಂದು ಹೆಸರು- ಇಂತಹ ತರ್ಕಶಾಸ್ತ್ರವನ್ನೋದಿ ತಾರ್ಕಿಕರೆಂದು ಪ್ರಸಿದ್ಧಿಯನ್ನು ಪಡೆದು ಶ್ರೀಮನ್ಮಧ್ವಶಾಸ್ತ್ರದ ಮರ್ಮವನ್ನೇ ತಿಳಿಯದಿರುವವರು, ತಮ್ಮ ಕುತರ್ಕಯುಕ್ತಿಗಳಿಂದ ಈ ಗ್ರಂಥದ ಮೇಲೆ ಆಕ್ಷೇಪಣೆ ಹೊರೆಸಿದರೇನು ಪ್ರಯೋಜನ. ಈ ಗ್ರಂಥದ ಯೋಗ್ಯತೆಯು

ಭಗವದ್ಭಕ್ತರಿಗೆ ಗೊತ್ತಾಗುವುದೇ ಹೊರತು ಒಳಗೆ ಭಕ್ತಿಯಿಲ್ಲದೆ ಹೊರಗೆ ಮಾತ್ರ ವೇಷಧಾರಿಗಳಾಗಿ ಪಂಡಿತರೆಂಬ ಹೆಸರು ಪಡೆದ ತಾರ್ಕಿಕರು ಮೊದಲಾದವರಿಗೆ ಎಂದಿಗೂ ರುಚಿಸಲಾರದು. ಹೂಜಿಯ ಉಪಮಾನವನ್ನು ಏಕೆ ಕೊಟ್ಟರೆಂದರೆ ಹೂಜಿಯ ಮೇಲ್ಭಾಗವನ್ನು ಸುಲಭವಾಗಿ ಶುದ್ಧಿ ಮಾಡಬಹುದು. ಒಳಗೆ ತೊಳೆಯುವುದು ಕಷ್ಟ. ಹಾಗೆಯೇ ಒಳಗೆ ಕಶ್ಮಲವನ್ನು ಇಟ್ಟುಕೊಂಡು ದೇಹವನ್ನು ಮಾತ್ರ ತೊಳೆದು ಅಲಂಕಾರ ಮಾಡಿಕೊಂಡರೆ ಒಳಗಿನ ಕಳಂಕವು ಹೋದೀತೆ ? ಒಳಗೆ ಶುದ್ಧನಾಗಬೇಕಾದರೆ ಭಕ್ತಿಯಿಂದ ಭಗವದನುಗ್ರಹವನ್ನು ಸಂಪಾದಿಸದರೇನೇ ಶುದ್ಧನಾಗುವನು. ಅಂತಹ ಭಕ್ತನು ಎಂದಿಗೂ ಈ ಗ್ರಂಥವನ್ನು ಧಿಕ್ಕರಿಸಲಾರನೆಂಬ ಭಾವ. ||೨೨||

## ಭಾವದರ್ಪಣ

ಮೋಕ್ಷಸ್ಯ ಕಾರಣಂ ಸಾಕ್ಷಾತ್ತತ್ತ್ವಜ್ಞಾನಂ ಖಗೇಶ್ವರ । ಎಂಬ ಗರುಡ ಪುರಾಣದ ಭಾವ ಮನಸ್ಸಿನಲ್ಲಿಟ್ಟು ಈ ತತ್ತ್ವಜ್ಞಾನರಹಿತರಾದವರು ಇದರಲ್ಲಿ ಆಕ್ಷೇಪಿಸಿದರೆ ಏನೂ ಉಗಯೋಗವಿಲ್ಲವೆಂದು ಸದೃಷ್ಟಾಂತ ಹೇಳುತ್ತಾರೆ, ಬೆಳಗಿಧೂಜೀತಿ. ||೨೨||

## ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತದೇತತ್ ಸರ್ವಂ ಗುಹ್ಯರೀತಂ ಅವಿಜ್ಞಾಯ ಅಹರಹಃ ದುಸ್ತರ್ಕಗೋಚರ ವಿಚಾರಕಲಿಲಾಂತಃಕರಣಾಃ ಅವಿದಿತ ಗುರುಸಂಪ್ರದಾಯಾಃ ವೇದವಿಚ್ಛೇದಕಾಃ ಕುತರ್ಕದಾವದಗ್ಧಾಃ ಅತ್ರ ಮಹಾಮೃತಾಂಬೋಧೌ ಯಥೇಚ್ಛಂ ವಿಚಾರಸ್ನಾನಂ ಇಚ್ಛಂತಿ ಚೇತ್ ನಾರ್ಹತಾ ಭವತಾಮ್ ಪಲ್ವಲೋದಸ್ನಾಯಿನಾಂ ತತ್ಪಾಯಿನಾಂ । ಯತ್ರ ನಾಸ್ತಿ ಪದನ್ಯಾಸಃ ನಹಿ ತತ್ಪ್ರಾಪ್ಯಮ್ ॥ ಅವಿದ್ವಾನ್ ತೇನ ಚ ಪಥಾ ಪ್ರತಿಷ್ಠಮಾನಃ ನೋಽಸ್ಮತ್ತ್ರ ಇತಿ ಪೀಯೂಷಕಲ್ಪವಾಣ್ಯಾ ಸುಧಾಗತಯಾ ದೂರೀಕಾರ್ಯಾಃ ನೋರೀಕಾರ್ಯಾಃ ಇತ್ಯತ್ರ ಪ್ರಯಾಗಸಿಕತಾಕ್ತ ವಾರಾಣಸೀ ಪಾತ್ರವಿಶೇಷ ನಿದರ್ಶನಮಾಹ-"ಬೆಳಗಿ" ಇತಿ ||೨೨||

## ಕನ್ನಡಾರ್ಥ

ರಹಸ್ಯಮಯವಾದ ಸಮಸ್ತ ಪ್ರಮೇಯವನ್ನು ತಿಳಿಯದೇ ಇದ್ದು, ಹಗಲು ರಾತ್ರಿ ಕುತರ್ಕವಿಚಾರದಿಂದ ಕಲುಷಿತಾಂತಃಕರಣರೂ, ಗುರು ಸಂಪ್ರದಾಯವನ್ನರಿಯದವರೂ, ವೇದವಿಚ್ಛೇದಕರೂ ಆದ ಕೆಲವರು ಈ ಜ್ಞಾನಾಮೃತಸಾಗರದಲ್ಲಿ ಸ್ವೈರವಾದ ಸ್ನಾನಪಿಚಾರ ವಿಹಾರವನ್ನು ಬಯಸ ಬಹುದು. ಆದರೆ ಅವರಿಗೆ ಗುಂಡಿಯ ನೀರಿನಲ್ಲಿ ಮಿಂದು ಅದನ್ನೇ ಕುಡಿ ಯುವವರಿಗೆ ಈ ಸಾಗರದಲ್ಲಿ ಅರ್ಹತೆಯಿಲ್ಲ, ಎಂದು ಉತ್ತರಿಸುತ್ತೇವೆ. ಆ ಮಾರ್ಗದಲ್ಲಿ ಹೆಜ್ಜೆಯನ್ನಿಡದವನಿಗೆ ಸ್ನಾನವು ಹೇಗೆ ಸಿಗುವುದು ? ಅಜ್ಞಾನಿಯು ಅದೇ ಮಾರ್ಗದಿಂದಲೇ ನಡೆಯುವವನು ಎಂದು ಅಮೃತ ಸದೃಶವಾದ ಸುಧಾಗತವಾಕ್ಯಗಳಿಂದ ಅವರನ್ನು ಅಂಗೀಕರಿಸದೇ ನಿರಾಕರಿಸ ಬೇಕು. ಈ ವಿಷಯದಲ್ಲಿ ಪ್ರಯಾಗದ ಮಳಲಿನಿಂದ ಉಜ್ಜಲ್ಪಟ್ಟ ಕಾಶೀ ಕೊಡದ ದೃಷ್ಟಾಂತವನ್ನು ಹೇಳುತ್ತಾರೆ–ಬೆಳಗಿ ಎಂಬ ಪದ್ಯದಿಂದ. ||೨೨||

## ಶ್ರೀಗುರುಹೃದಯಪ್ರಕಾಶಿಕೆ

ಸದೃಷ್ಟಾಂತವಾಗಿ ಅಜ್ಞಜನಾಪೇಕ್ಷ ಸರಿಯಲ್ಲವೆಂದು ತಿಳಿಸುತ್ತಾರೆ, ಬೆಳಗಿ ಎಂದು. ಹೂಜಿಯ ಎಂದರೆ ಗಿಂಡಿಯನ್ನು ಮೇಲೆ ಬೆಳ್ಳಗೆ ತೊಳೆದು ನೋಡುವವರಿಗೆ ಒಪ್ಪುವಂತೆ ಇದ್ದಾಗ್ಯೂ, ಒಳಗೆ ಕೊಳೆಯಿರುವಂತೆ ಸ್ನಾನ ದಿಂದ ದೇಹ ತೊಳೆದು ದ್ವಾದಶನಾಮಮುದ್ರೆಗಳಿಂದ ಅಲಂಕರಿಸಿದಾಗ್ಯೂ, ಅಲಮಬೋಧರೆಂಬ ಪೂರ್ಣಪ್ರಜ್ಞರ ಶಾಸ್ತ್ರದ ಹೃದಯವನ್ನು ತಿಳಿಯದೆ ಕುತರ್ಕಯುಕ್ತಿಗಳನ್ನು ಒಲಿಸಿ ಎಂದರೆ ಘಟ್ಟಿ ಮಾಡಿಕೊಂಡು, ಅಹಂಕಾರಾದಿ ದೋಷದಿಂದ ಈ ಗ್ರಂಥವನ್ನು ಆಕ್ಷೇಪಿಸಿದರೆ ಹಾನಿಯಿಲ್ಲವೆಂದು ಅಭಿಪ್ರಾಯ. ||೨೨||

# ಸರ್ವವ್ಯಾಖ್ಯಾನಸಾರಸಂಗ್ರಹ

ಕೇವಲ ಕುತರ್ಕಿಗಳಾಗಿ ಈ ಗ್ರಂಥೋಕ್ತ ವಿಷಯಗಳನ್ನು ಉತ್ತಮ ಜ್ಞಾನಾನುಸಂಧಾನವಿಲ್ಲದೇ ದೋಷಾರೋಪಣೆ ಮಾಡುವ ಡಾಂಭಿಕರ ವಿಷಯ ತಿಳಿಸುತ್ತಾರೆ.

ಸಣ್ಣ ಕಂಠವುಳ್ಳ, ಮಧ್ಯಭಾಗವು ಅಗಲವಾಗಿರುವ ಪಾತ್ರೆಗೆ ಹೂಜಿ ಎಂದು ಹೆಸರು. ಅಂತಹ ಕಂಚಿನ ಹೂಜಿಯು ಮೇಲ್ಭಾಗವನ್ನು ಚೆನ್ನಾಗಿ ತಿಕ್ಕಿ ತೊಳೆದರೆ, ಅದು ನೋಡುವವರ ಕಣ್ಣಿಗೆ ಥಳಥಳನೆ ಹೊಳೆಯುತ್ತಿರುವಂತೆ ಕಾಣಿಸುವುದು. ಆದರ ಕಂಠವು ಕಿರಿದಾಗಿರುವುದರಿಂದ, ಒಳಗೆ ಕೈ ಹಾಕಿ ತೊಳೆಯಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಕಂಚಿನ ಹೂಜಿಯು ಬಾಹ್ಯದಲ್ಲಿ ಶುದ್ಧವಾಗಿ ತೋರುವುದೇ ಹೊರತು, ಒಳಭಾಗದಲ್ಲಿ ಸ್ವಚ್ಛವಾಗಿರುವುದಿಲ್ಲ.

ಅದರಂತೆ, ಈ ಜಡದೇಹವನ್ನು ಚೆನ್ನಾಗಿ ತಿಕ್ಕಿ, ಸ್ನಾನಮಾಡಿ, ನೀರಿನಿಂದ ತೊಳೆದರೆ, ಅದು ಬಾಹ್ಯಶುದ್ಧಿಯನ್ನು ಹೊಂದುವುದು. ಸ್ನಾನಾನಂತರ, ದೇಹವನ್ನು ದ್ವಾದಶನಾಮಗಳಿಂದಲೂ ಮತ್ತು ಪಂಚಮುದ್ರೆಗಳಿಂದಲೂ ಅಲಂಕರಿಸಿಕೊಂಡು, ಹೊರಗಿನಿಂದ ನೋಡುವವರಿಗೆ ಮಹಾಜ್ಞಾನಿಯೆಂದೆನಿಸಿಕೊಂಡು, ಕೇವಲ ಡಾಂಭಿಕತನದ ಜೀವನವನ್ನು ನಡೆಯಿಸುವ ವೇಷಧಾರಿಗಳಾದ ವಂಚಕರನ್ನು ಬೆಳಗಿದ ಹೂಜಿಯ ಸಾದೃಶ್ಯದಿಂದ ತಿಳಿಸುತ್ತಾರೆ.

ಶ್ರುತಿಸ್ಮೃತ್ಯಾದಿ ಸಚ್ಛಾಸ್ತ್ರಗಳ ರಹಸ್ಯಾರ್ಥವನ್ನು ಅರಿಯದೇ ಕೇವಲ ಯುಕ್ತಿ ಮಾತುಗಳನ್ನಾಡುತ್ತಾ, ಕುತರ್ಕಗಳನ್ನು ಮಾಡುವ ಡಾಂಭಿಕರು, ತಮ್ಮ ಮಾತಿನ ಚಮತ್ಕಾರದಿಂದ ಮೂಢಜನರನ್ನು ಮೋಸಗೊಳಿಸುವರು. ಜನರು ಅವರ ಬಾಹ್ಯ ವೇಷಭೂಷಣಗಳನ್ನು ನೋಡಿ, ಅವರನ್ನು ಮಹಾ

ಜ್ಞಾನಿ ಎಂದು ಭಾವಿಸಿ ಗೌರವಿಸುವರು. ಮಾನವರ ಬಾಹ್ಯವೇಷಗಳಿಂದ ಅವರ ಅಂತರಂಗವನ್ನು ಅರಿಯಲು ಸಾಧ್ಯವಿಲ್ಲ.

ಪೂರ್ಣಬೋಧರೆಂದು ಪ್ರಸಿದ್ಧರಾದ ಶ್ರೀಮನ್ಮಧ್ವಮುನಿಗಳಿಂದ ವಿರಚಿತ ಸಚ್ಛಾಸ್ತ್ರಗಳನ್ನು ರಹಸ್ಯ ಪ್ರಮೇಯಾರ್ಥಗಳನ್ನು ತಿಳಿಯದೇ ಡಾಂಭಿಕರು ಕೇವಲ ಕುಯುಕ್ತಿಗಳಿಂದ ಜನರನ್ನು ವಂಚಿಸುವರು. ಪೂರ್ವಗ್ರಹ ಪೀಡಿತರಾಗಿ, ತಾವು ಹೇಳಿದ್ದೇ ಸರಿ ಎಂದು ವಾದಿಸುವ ಹಠಮಾರಿಗಳು. ಅವರ ಅಂತರಂಗವು ಕಾಮಾದಿ ಅರಿಷಡ್ವರ್ಗಗಳಿಂದ ದೋಷಭೂಯಿಷ್ಟವಾಗಿರುವುದು. ಪ್ರಸಕ್ತ ಗ್ರಂಥವಿಷಯದಲ್ಲಿ ಅಂತಹ ಡಾಂಭಿಕರು ಶಂಕಿಸಿದರೇನೂ ಅದರಿಂದ ಬಾಧಕವಿಲ್ಲ. ||೨೨||

## ಪದ್ಯ ೨೩

### ಮೂಲ

ಉದಧಿಯೊಳು ಊರ್ಮಿಗಳು ತೋರ್ಪಂ ।
ದದಲಿ ಹಂಸೋದ್ಗೀಥ ಹರಿ ಹಯ ।
ವದನ ಕೃಷ್ಣಾದ್ಯಮಿತನವತಾರಗಳು ನಿತ್ಯದಲಿ ।
ಪದುಮನಾಭನೊಳಿರುತಿಹವು ಸ ।
ರ್ವದ ಸಮಸ್ತ ಪ್ರಾಣಿಗಳ ಚಿದ್ ।
ಹೃದಯಗತ ರೂಪಗಳನವ್ಯವಧಾನದಲಿ ಬಿಡದೆ ॥ ||೨೩||

### ಅವತರಣಿಕೆ

ಆ ಸ್ವಗತಭೇಧವಿವರ್ಜಿತನಾದ ಶ್ರೀಪರಮಾತ್ಮನನ್ನು ಸಮುದ್ರಗತ ತರಂಗಗಳ ದೃಷ್ಟಾಂತದಿಂದ ಕೊಂಡಾಡುತ್ತಾರೆ.

**ಪ್ರತಿಪದಾರ್ಥ**

**ಉದಧಿಯೊಳು**= ಸಮುದ್ರದಲ್ಲಿ, **ಊರ್ಮಿಗಳು**= ತರಂಗಗಳು (ನಿರಂತರ ಉಂಟಾಗುತ್ತಿರುವ ಅಲೆಗಳು), **ತೋರ್ಪಂದದಲಿ**= ಅಭಿವ್ಯಕ್ತವಾಗುವಂತೆ, **ಹಂಸ**= ಹಂಸನಾಮಕ ಶ್ರೀಪರಮಾತ್ಮ, **ಉದ್ಗೀಥ**= ಉದ್ಗೀಥರೂಪಾತ್ಮಕನು, **ಹರಿ**= ಹರಿಯ ರೂಪವು, **ಹಯವದನ**= ಹಯಗ್ರೀವರೂಪವು, **ಕೃಷ್ಣ**= ಶ್ರೀಕೃಷ್ಣರೂಪವು, **ಆದಿ**= ಇವೇ ಮೊದಲಾದ, **ಅಮಿತನ**= ಮಿತಿ ಇಲ್ಲದ ಅಖಂಡರೂಪಿಯಾದ ಮೂಲರೂಪೀ ಶ್ರೀಮನ್ನಾರಾಯಣನ, **ಅವತಾರಗಳು**= ಮೂಲರೂಪದಿಂದ ಅಭಿವ್ಯಕ್ತವಾದ ಅಭೇದವಾದ ಅನಂತಾನಂತ ಅವತಾರ ರೂಪಗಳು, **ನಿತ್ಯದಲಿ**= ಯಾವತ್ತೂ (ಅನಾದ್ಯನಂತ ಕಾಲದಲ್ಲೂ), **ಪದುಮನಾಭನೊಳು**= ಪದ್ಮನಾಭನಾಮಕ ಶ್ರೀಪರಮಾತ್ಮನಲ್ಲಿ, **ಇರುತಿಹವು**= ಇರುವುದಾಗಿವೆ. (ಸಮುದ್ರದ ಉದಕಕ್ಕೂ ಅದರಿಂದ ಅಭಿವ್ಯಕ್ತವಾದ ತರಂಗಗಳಿಗೂ ಅಭೇದವಾಗಿರುವಂತೆ) **ಸರ್ವದ**= ಎಲ್ಲಾ ಕಾಲಗಳಲ್ಲಿಯೂ, **ಸಮಸ್ತ ಪ್ರಾಣಿಗಳ**= ಸ್ಪೃಶ್ಯ, ಅಸ್ಪೃಶ್ಯ, ಮುಕ್ತ ಇತ್ಯಾದಿ ಸಕಲ ತ್ರಿವಿಧಜೀವರ, **ಚಿದ್ ಹೃದಯಗತ**= ಸ್ವರೂಪದೇಹದ ಹೃದಯಗತ (ಚಿನ್ಮಯಹೃನ್ಮಂದಿರ), **ರೂಪಗಳ**= ಬಿಂಬರೂಪಗಳನ್ನು, **ಬಿಡದೆ**= ಮೂಲರೂಪವಾದ ಅಖಂಡರೂಪವನ್ನು ಬಿಡದೆ, **ಅವ್ಯವಧಾನದಲಿ**= ಸಮುದ್ರ ತರಂಗಗಳಂತೆ ಎಡಬಿಡದೆ (ಸಾವಕಾಶವಿಲ್ಲದಂತೆ) **ಇರುತಿಹವು**= ನ್ಯೂನಾಧಿಕರಹಿತವಾಗಿ ಇರುತಿರುವುವು. ||೨೩||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮೂಲರೂಪ ಅವತಾರರೂಪಗಳು ಎಂಥಾವೆಂದರೆ ಅದರನ್ನ ಹೇಳುತಾರೆ.

ಸಮುದ್ರದಲ್ಲಿ ಅಲೆಗಳು ತೋರಿದಂತೆ ಸಮುದ್ರನಾದ ತಾನು ಅಲೆಗಳ ತೋರಿಸುವನಾಗುತ್ತಾನೆ. ಅಲೆಗಳು ಸಮುದ್ರವನ್ನು ಬಿಟ್ಟು ಇರೋದಿಲ್ಲ. ಉದಕ, ತರಂಗ ಬಿಟ್ಟು ಇರೋದಿಲ್ಲ. ಇರದೇನೇ ತರಂಗಗಳು ಬೇರೆ ಬೇರೆ ಕಾಣುತ್ತಾ ಇರುತ್ತವೆ. ಆ ತರಂಗಗಳು ಇತಸ್ತತಃ ಚಲನ ವಾಗುತ್ತಾ ಹೋಗುತ್ತಾ ಬರುತ್ತಾ ಇರುತ್ತವೆ. ವ್ಯಕ್ತವಾದ ತರಂಗಗಳು ಪುನಶ್ಚ ಆ ಉದಕದಲ್ಲೇ ಸೇರುತ್ತವೆ. ಇದರಂತೆ ಎಂದರೆ ಸಮುದ್ರ ಸದೃಶ ನಾಗಿ ಅಪರಿಚ್ಛಿನ್ನ ವ್ಯಾಪ್ತನಾದ ಪರಮಾತ್ಮನು ಅಪರಿಚ್ಛಿನ್ನ ಅಖಂಡರೂಪ ವುಳ್ಳವನು. ಸರ್ವತಃ ಪಾಣಿಪಾದಾದಿ ಸರ್ವಅವಯವಗಳುಳ್ಳವನಾದ್ದರಿಂದ ಸಮುದ್ರಸದೃಶವಾದ ಅಖಂಡರೂಪದಿಂದ, ಊರ್ಮಿಗಳ ಸದೃಶವಾದ ಅವತಾರರೂಪಗಳಾದ ಮೂಲಾವತಾರಕ್ಕೆ ಅವಿಯೋಗಗಳಾದ ಶ್ರೀಹಂಸ ನಾಮಕರೂಪವು, ಉದ್ಗೀಥರೂಪವು, ಶ್ರೀಹರಿರೂಪವು, ಹಯಗ್ರೀವರೂಪವು ಶ್ರೀಕೃಷ್ಣರೂಪವು ಇವೇ ಮೊದಲಾದ, ಮಿತರಹಿತನಾದ ಅಖಂಡರೂಪಿ ಯಾದ ಮೂಲರೂಪಿ ಪರಮಾತ್ಮ ನಾರಾಯಣ ಎಂತಲೂ, ಆದರಿಂದ ವಾಸು ದೇವಾದಿ ರೂಪಗಳ ಅಭಿವ್ಯಕ್ತಿ ಎಂತಲೂ ಹೇಳುತ್ತದೆ. ಆ ನಾರಾಯಣ ರೂಪ ಕೂಡ ಅಖಂಡರೂಪ, ತರಂಗಸದೃಶ ಅವತಾರ ರೂಪವೆಂತಲೇ ತಾತ್ಪರ್ಯ. ಏವಂ ಸಂಮೋಳನೇ ಖಂಡರೂಪಗಳು ಯಾವತ್ತೂ ಅವತಾರ ರೂಪಗಳೆಂತಲೇ ಗ್ರಾಹ್ಯ. ಸಮುದ್ರ ಸದೃಶ ಈ ಮೂಲರೂಪವೂ, ಅವತಾರ ರೂಪಗಳೂ ತರಂಗವತ್ ಅವಿಯೋಗಗಳಾಗಿ ತರಂಗವತ್ ಗಮನಾಗಮನ ಗಳಿಂದ ಯುಕ್ತವಾಗಿ ಇವೆ. ಈ ಅವತಾರ ರೂಪಗಳು ಅನಾದ್ಯನಂತ ಕಾಲಕ್ಕೂ ಅಖಂಡರೂಪದಲ್ಲೇನು, ಪ್ರತಿ ಅವತಾರಗಳಾದ ಪದ್ಮನಾಭಾದಿ ಅನಂತಾನಂತ ಅವತಾರಗಳಾದ ಪರಮಾತ್ಮನೊಳು ಇರುವುದಾಗಿ ಇವೆ. ಒಂದು ತರಂಗಗತ ಅನೇಕ ಉದಕ ಬಿಂದುಗಳಂತೆ ಅನಾದ್ಯಂತಕಾಲಕ್ಕೂ ಸೃಜ್ಯಾಸೃಜ್ಯ, ಮುಕ್ತ ಏತಾದೃಶ ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರ, ಸ್ವರೂಪದೇಹದ ಹೃದಯಗತ ಬಿಂಬರೂಪಗಳನ್ನು, ಅಖಂಡರೂಪವನ್ನು ಬಿಡದೆ, ಉದಕ ತರಂಗಗಳಂತೆ ವ್ಯವಧಾನರಹಿತವಾಗಿ ಇರುವುದಾಗಿ ಅವೆ. ಅಖಂಡ ಅಪರಿ ಚ್ಛಿನ್ನರೂಪಗತ ವಿದ್ಯಮಾನಗಳು ಖಂಡರೂಪಗಳಲ್ಲಿ, ತದ್ಗತಗಳು ಅಖಂಡ ರೂಪದಲ್ಲಿ ನ್ಯೂನಾಧಿಕ್ಯಗಳು ಇಲ್ಲದೆ ಸಮಾನವಾಗಿ ಇವೆ ಎಂತ ತಾತ್ಪರ್ಯ.

**ವಿಶೇಷಾರ್ಥ**

ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಂ ।
ಯಸ್ಯಾಂಶಾಂಶೇನ ಸೃಜ್ಯಂತೇ ದೇವತಿರ್ಯಙ್ ನರಾದಯಃ ॥
ಎಂತ ಭಾಗವತತಾತ್ಪರ್ಯ. ||೨೩||

**ಭಾವಪ್ರಕಾಶಿಕೆ**

ಸಮುದ್ರದಲ್ಲಿ ಅಲೆಗಳು ತರಂಗತರಂಗವಾಗಿ ಒಂದರ ಹಿಂದೆ ಒಂದೊಂದಾಗಿ ಬೇರೆ ಬೇರೆ ಕಂಡು ಬಂದರೂ ಆ ಅಲೆಗಳು ಸಮುದ್ರವನ್ನು ಬಿಟ್ಟು ಬೇರೆ ಎಂದು ಹೇಳಲಾಗುವುದಿಲ್ಲ. ಅಖಂಡವಾದ ಸಮುದ್ರೋದಕವೇ ಖಂಡವಾಗಿ ಅಲೆಗಳೆಂಬ ಹೆಸರಿನಿಂದ ಕಂಡುಬರುವುದು. ಆದರೂ ಸಮುದ್ರಕ್ಕೂ ಅಲೆಗಳಿಗೂ ಭೇದವಿಲ್ಲ. ಹಾಗೆಯೇ ಮೂಲರೂಪವಾದ ಪದ್ಮನಾಭರೂಪದಿಂದ ಹಂಸ, ಹರಿ, ಹಯಗ್ರೀವ, ರಾಮಕೃಷ್ಣಾದಿ ರೂಪಗಳು ಸಮುದ್ರದಿಂದ ಅಲೆಗಳು ತರಂಗತರಂಗವಾಗಿ ಹೊರಡುವಂತೆ ಹೊರಡುತ್ತಿರುವವು. ಆ ಅಲೆಗಳು ಮತ್ತೂ ಸಮುದ್ರದಲ್ಲೇ ಲಯವಾಗುವವು. ಅದರಂತೆ ರಾಮಕೃಷ್ಣಾದಿ ರೂಪಗಳೂ ಸಹ ಪದ್ಮನಾಭಮೂರ್ತಿಯಲ್ಲೇ ಲಯವಾಗುವವು. ಮತ್ತೂ ಸರ್ವಪ್ರಾಣಿಗಳ ಸ್ವರೂಪದೇಹ ಹೃದಯಾಕಾಶದಲ್ಲಿ ಶೋಭಿಸುವ ಅನಂತಾನಂತ ರೂಪಗಳೂ ಸಹ ಪದ್ಮನಾಭರೂಪದಲ್ಲೇ ಸೇರುವವು. ಭಾಗವತ ಪ್ರಥಮಸ್ಕಂಧ ೩ನೆಯ ಅಧ್ಯಾಯದಲ್ಲಿ ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಂ ॥ ಯಸ್ಯಾಂಶಾಂಶೇನ ಸೃಜ್ಯಂತೇ ದೇವ ತಿರ್ಯಙ್ ನರಾದಯಃ ॥ ಈ ಪದ್ಮನಾಭರೂಪವೇ ನಾನಾವಿಧವಾದ ಮತ್ಸ್ಯ ಕೂರ್ಮಾದಿ ಎಲ್ಲಾ ಅವತಾರಗಳಿಗೂ ಬೀಜಸ್ಥಾನವಾದುದು. ನಿಧಾನಂ= ಅಂತತೋತ್ರ ಸರ್ವಾವತಾರಾನಿಧೀಯಂತೇ ಏಕೀಕ್ರಿಯಂತ ಇತಿ ನಿಧಾನಂ ಅಂತ್ಯದಲ್ಲಿ ಎಲ್ಲಾ ಅವತಾರಗಳೂ ಈ ರೂಪದಲ್ಲೇ ಐಕ್ಯ ಹೊಂದುವದರಿಂದ ನಿಧಾನ ಎಂದು ಹೆಸರು. ನಾಶಹೊಂದದೆ ಅವತಾರರೂಪಗಳು ಈ ಮೂಲರೂಪದಲ್ಲಿ ಸೇರುವುದರಿಂದ ಅವ್ಯಯವೆಂದರು. ಈ ಪದ್ಮನಾಭದೇವರ ಸಾಮರ್ಥ್ಯೇಕದೇಶದಿಂದಲೇ ದೇವತೆಗಳು, ದಾನವರು, ಮಾನವ ಮೊದಲಾದ ಸರ್ವಪ್ರಾಣಿ

ಗಳು ಹುಟ್ಟುವರು ಎಂದು ಹೇಳಿರುವರು. ಮತ್ತು ಅವತಾರಾಹ್ಯ ಸಂಖ್ಯೆಯಾಃ ಹರೇಃ ಸತ್ವನಿಧೇರ್ದ್ವಿಜಾಃ||ಯಥಾವಿದಾಸಿನಃ ಕುಲ್ಯಾಃ ಸರಸಸ್ಯುಃ ಸಹಸ್ರಸಃ ಋಷಯೋ ಮಾನವೋ ದೇವಾ ಮನುಪುತ್ರಾ ಮಹೌಜಸಃ ಕಲಾಃ ಸರ್ವೇ ಹರೇರೇವ ಸಪ್ರಜಾಪತಯಃ ಸ್ಮೃತಾಃ|| ಸತ್ವನಿಧಿಯಾದ ಪರಮಾತ್ಮನ ಅವತಾರಗಳನ್ನು ಎಣಿಸಲು ಸಾಧ್ಯವಿಲ್ಲ. ಎತ್ತರವಾದ ಸ್ಥಳದಿಂದ ಕೆಳಗೆ ಬೀಳುವ ನೀರು ಹೇಗೆ ನದಿಗಳಾಗಿಯೂ ಸಹಸ್ರಾರು ಕ್ಷುದ್ರ ನದಿಗಳಾಗಿಯೂ ಅವುಗಳಿಂದ ಕಾಲುವೆಗಳು ಹೊರಡುವವೋ ಹಾಗೆ ಎಣಿಸಲು ಸಾಧ್ಯವಿಲ್ಲದ ಭಗವದ್ರೂಪಗಳು ಇರುವವು. ಇವಲ್ಲದೆ, ಋಷಿಗಳು, ಮನುಗಳು, ದೇವತೆಗಳು, ಮನುಪುತ್ರರು, ಇವರೆಲ್ಲರೂ ಪರಮಾತ್ಮನ ಭಿನ್ನಾಂಶರು ಎಂದು ಹೇಳಿರುವರು. ಹೀಗೆ ಸ್ವಾಂಶರೂಪಗಳು, ಭಿನ್ನಾಂಶರೂಪಗಳು, ಬಿಂಬ ರೂಪಗಳು, ಅಂತರ್ಯಾಮಿರೂಪಗಳು ಇವೆಲ್ಲವೂ ಸಮುದ್ರದಲ್ಲಿರುವ ಅಲೆಗಳು ಹೇಗೆ ಸಮುದ್ರವನ್ನು ಬಿಟ್ಟಿರುವುದಿಲ್ಲವೋ ಹಾಗೆಯೇ ಭಗವಂತನನ್ನು ಬಿಟ್ಟಿರದೆ ಎಲ್ಲವೂ ಭಗವದ್ರೂಪಗಳೇ ಆಗಿವೆ. ಇವೆಲ್ಲವೂ ಪದ್ಮನಾಭರೂಪ ದಲ್ಲೇ ಸೇರಿರುವವು. ||೨೩||

### ಭಾವದರ್ಪಣ

ಸಮುದ್ರದ ತೆರೆಯು ಹಾಗೆ ಮೂಲರೂಪಿಯಾದಂಥಾ ಶ್ರೀಹರಿಯು ಅನಂತಾನಂತರೂಪದಿಂದ ಚಿದ್ಘಲದಯುಗತನೆಂದು ತಿಳಿಯಬೇಕು ಎಂತ ಹೇಳುತ್ತಾರೆ, ಉದಧೀತಿ. ||೨೩||

### ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಉದಧಿ ಇತಿ|| ಊರ್ಮಿ ತೆರೆ. ಸಶ್ಲೇಷ ಏವ ಇತ್ಯುಕ್ತೇಃ ||೨೩||

### ಕನ್ನಡಾರ್ಥ

ಸಮುದ್ರ ತರಂಗಗಳಂತೆ ಮೂಲರೂಪಗಳಿಂದ ಅವತಾರ ರೂಪಗಳು

ಪ್ರಾದುರ್ಭವಿಸುವುವು. ಅವುಗಳಿಗೆ ಪರಸ್ಪರ ಭೇದವಿಲ್ಲ ಎಂದು ತಿಳಿಸುತ್ತಾರೆ ಉದಧಿಯೊಳು ಎಂಬ ಪದ್ಯದಿಂದ ||೨೩||

## ಶ್ರೀಗುರುಹೃದಯಪ್ರಕಾಶಿಕೆ

ದೇವರ ರೂಪ ಗುಣಾನಂತ್ಯವನ್ನು ಸದೃಷ್ಟಾಂತ ತೋರಿಸುತ್ತಾರೆ, ಉದಧಿ ಎಂದು. ಉದಧಿ ಎಂಬ ಸಮುದ್ರದಲ್ಲಿ ಊರ್ಮಿ ಎಂಬ ಅಲೆಗಳು ಪರಂಪರೆಯಾಗಿ ಅನಂತಾನಂತ ಕಾಣಿಸುವಂತೆ ಹಂಸ, ಉದ್ಗೀಥ, ಹರಿ, ಹಯವದನ, ಕೃಷ್ಣಾದಿ ಅಮಿತರೂಪನಾದ ದೇವರ ಅವತಾರಗಳು ಸದಾ ಪದ್ಮನಾಭರೂಪದಲ್ಲಿ ಇರುವುವು. ಸರ್ವಪ್ರಾಣಿಗಳ ಜ್ಞಾನಸ್ವರೂಪಹೃದಯ ಗತ ಅನಂತರೂಪಗಳೂ ಸಹ ಸದಾ ಎಡೆಬಿಡದೆ ಇರುವುವು.

ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಂ ।
ಯಸ್ಯಾಂಶಾಂಶೇನ ಸೃಜ್ಯಂತೆ ದೇವತಿರ್ಯಙ್ನರಾದಯಃ ||

ಎಂಬ ಭಾಗವತಾರ್ಥವು ವಿವರಿಸಲ್ಪಟ್ಟಿರುತ್ತೆ. ||೨೩||

# ಸರ್ವವ್ಯಾಖ್ಯಾನಸಾರಸಂಗ್ರಹ

ಸ್ವಗತಭೇದವಿವರ್ಜಿತನಾದ ಶ್ರೀಪರಮಾತ್ಮನ ಮೂಲರೂಪಕ್ಕೂ, ಅದರಿಂದ ಅಭಿವ್ಯಕ್ತಗಳಾದ ಅನಂತಾನಂತ ರೂಪಗಳಿಗೂ ಸ್ವಲ್ಪವೂ ಭೇದ ವಿಲ್ಲ ಎಂಬ ತತ್ತ್ವವನ್ನು, ಸಮುದ್ರಗತ ತರಂಗಗಳ ದೃಷ್ಟಾಂತದಿಂದ ತಿಳಿಸು ತ್ತಾರೆ.

ಉದಧಿಯ ನೀರಿಗೂ ಮತ್ತು ತಜ್ಜನ್ಯವಾದ ತರಂಗಗಳಿಗೂ ಅಭೇದ. ಉದಧಿಯ ನೀರೇ ತರಂಗಗಳ ರೂಪದಲ್ಲಿ ಒಂದಾದರ ಮೇಲೊಂದು, ನಿರಂತರ ದಲ್ಲಿ ಉತ್ಪತ್ತಿಯಾಗಿ, ಕಡಲತೀರದ ಕಡೆಗೆ ಹರಿಯುತ್ತಿರುವುವು. ಸಮುದ್ರವು ಜಲದ ಅಖಂಡರೂಪ. ತರಂಗಗಳು ಉದಧಿಯ ಖಂಡರೂಪಗಳು. ಅವು ಗಳಿಗೆ ಪರಸ್ಪರ ಅಭೇದ. ಉದಧಿಯ ಜಲವನ್ನು ಬಿಟ್ಟು ತರಂಗಗಳಿಲ್ಲ. ತರಂಗಗಳು ಉದಧಿ ಜಲದಿಂದ ಅವಿಭಾಜ್ಯ ಭಾಗಗಳು.

ಶ್ರೀಪರಮಾತ್ಮನು ಸಮುದ್ರಸದೃಶನು. ಸಮುದ್ರದಂತೆ ಅವನ ಅನಂತಾನಂತರೂಪ, ಗುಣ ಕ್ರಿಯಾದಿಗಳು ಅಪಾರ, ಅಸದೃಶ ಮತ್ತು ಅಪರಿಚ್ಛಿನ್ನ. ಸಮುದ್ರವು ಅಖಂಡ ಜಲರಾಶಿ. ಅದರಂತೆ ಅಖಂಡಸ್ವರೂಪನು. ಸಮುದ್ರದ ಉದರದಿಂದ ಜನ್ಯವಾದ ತರಂಗಗಳು, ಸಮುದ್ರಜಲದಿಂದ ಅಭಿನ್ನವಾಗಿರುವಂತೆ ಕೃಷ್ಣಾದಿ ಶ್ರೀಪರಮಾತ್ಮನ ಅನಂತಾನಂತ ರೂಪಗಳು ಅಖಂಡಸ್ವರೂಪದಿಂದ ಅಭಿವ್ಯಕ್ತಳಾದ ಖಂಡರೂಪಗಳು. ಶ್ರೀಪರಮಾತ್ಮನ ಅಖಂಡ ರೂಪಗಳಿಗೂ, ಅವತಾರರೂಪವಾದ ಖಂಡರೂಪಗಳಿಗೂ ವ್ಯತ್ಯಾಸ ವಿಲ್ಲ. ಸರ್ವದಾ ಅಭೇದ ಮತ್ತು ಅಪರಿಚ್ಛಿನ್ನ ಹಾಗೂ ಪರಿಪೂರ್ಣ.

ಇಂತು, ಉದಧಿಯ ಜಲವು ಊರ್ಮಿಗಳ ರೂಪದಲ್ಲಿ ಅಭಿವ್ಯಕ್ತವಾಗಿ ತೋರುವಂತೆ ಶ್ರೀಪರಮಾತ್ಮನ ಮೂಲರೂಪನಾದ ಶ್ರೀಮನ್ನಾರಾಯಣನು ಕ್ಷೀರಸಮುದ್ರದಲ್ಲಿ ಪದ್ಮನಾಭರೂಪನಾಗಿ ಶಯನಿಸಿದನು. ಅದರಿಂದ ಅಭಿವ್ಯಕ್ತಗಳಾದ, ಅಭಿನ್ನವಾದ, ಹಂಸರೂಪ, ಉದ್ಗೀಥರೂಪ, ಹರಿರೂಪ, ಹಯಗ್ರೀವರೂಪ, ಕೃಷ್ಣರೂಪ, ಇತ್ಯಾದಿ ಶ್ರೀಪರಮಾತ್ಮನ ಅನಂತಾನಂತ ರೂಪಗಳು ಪೂರ್ವೋಕ್ತ ಭಗವದ್ರೂಪಗಳೆಲ್ಲವೂ ಪದುಮನಾಭನಲ್ಲಿ ನಿತ್ಯದಲ್ಲಿ ಇರುತಿಹವು.

ಬ್ರಹ್ಮಾದಿ ತೃಣಾಂತ ಸಮಸ್ತರಾದ ತ್ರಿವಿಧಜೀವರ ಸ್ವರೂಪಗತ ಹೃದಯಪದ್ಮದಲ್ಲಿ ಬಿಂಬರೂಪನಾಗಿ ಶ್ರೀಹರಿ ಇದ್ದಾನೆ. ಮೂಲರೂಪದಿಂದ ಅಭಿವ್ಯಕ್ತಗಳಾದ ಬಿಂಬರೂಪಗಳೇ ಆಯಾಯಾ ಜೀವರ ಅಂತರ್ಯಾಮಿರೂಪವಾಗಿದ್ದು ಅನಾದ್ಯನಂತಕಾಲದಿಂದಲೂ ಜೀವರಿಗೆ ನಿತ್ಯಾವಿಯೋಗಿಯಾಗಿ, ಮೂಲರೂಪಕ್ಕೂ ಬಿಂಬರೂಪಕ್ಕೂ ಬೇಧವಿಲ್ಲದಂತೆ ಶಾಶ್ವತವಾಗಿ ಇರುತ್ತಿರುವುವು ಎಂದು ತಾತ್ಪರ್ಯಾರ್ಥವು. ||೨೩||

## ಪದ್ಯ ೨೪

### ಮೂಲ

ಶರಧಿಯೊಳು ಮಕರಾದಿ ಜೀವರು ।
ಇರುಳುಹಗಲೇಕಪ್ರಕಾರದಿ ।
ಚರಿಸುತನುಮೋದಿಸುತ ಇಪ್ಪಂದದಿ ಜಗತ್ರಯವು ॥
ಇರುತಿಹವು ಜಗದೀಶನುದರದಿ ।
ಕರೆಸುವುದು ಪ್ರತಿಬಿಂಬನಾಮದಿ ।
ಧರಿಸಿಹುದು ಹರಿನಾಮರೂಪಂಗಳನು ಅನವರತ ॥ ॥೨೪॥

### ಅವತರಣಿಕೆ

ಚರಾಚರಾತ್ಮಕವಾದ ಜಗತ್ರಯಗಳಲ್ಲಿ ಶ್ರೀಹರಿಯು ತತ್ತನ್ನಾಮಕನಾಗಿ ತದಾಕಾರ, ತದ್ರೂಪಗಳಿಂದ, ಅವುಗಳಲ್ಲಿ ವ್ಯಾಪಿಸಿದ್ದು ವಿಹರಿಸುತ್ತಿರುವನೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಶರಧಿಯೊಳು**= ಸಮುದ್ರದಲ್ಲಿ, **ಮಕರಾದಿ ಜೀವರು**= ಮೊಸಳೆ, ಮೀನು, ತಿಮಿಂಗಿಲಾದಿ ಜಲಚರ ಪ್ರಾಣಿಗಳು, **ಇರುಳು ಹಗಲು**= ರಾತ್ರಿ ಮತ್ತು ಹಗಲು ಕಾಲಗಳಲ್ಲಿ, ಅಂದರೆ ನಿರಂತರ, **ಏಕಪ್ರಕಾರದಿ**= ಒಂದೇ ಸಮನಾಗಿ, **ಚರಿಸುತ**= ಸಮುದ್ರದಲ್ಲಿ ಸಂಚರಿಸುತ್ತಾ, **ಅನುಮೋದಿಸುತ**= ಸ್ವಜಾತಿ ಸ್ನೇಹಗಳಿಂದ ಸಂತೋಷಪಡುತ್ತಾ, **ಇಪ್ಪಂದದಿ**= ಇರುವಂತೆ, **ಜಗತ್ರಯವು**= ಮೂರುಲೋಕಗಳು (ಬ್ರಹ್ಮಾದಿ ತೃಣಾಂತ ಜೀವರೂ ಮತ್ತು ಶುದ್ಧ ಜಡವಸ್ತುಗೂ) **ಜಗದೀಶನ**= ಜಗತ್ತಿಗೆ ಪ್ರಭುವಾದ ಶ್ರೀಪರಮಾತ್ಮನ, **ಉದರದಿ**= ಗರ್ಭದಲ್ಲಿ, **ಇರುತಿಹವು**= ಇವೆ. **ಪ್ರತಿಬಿಂಬನಾಮದಿ**= ಚರಾಚರಾತ್ಮಕವಾದ ಜಗತ್ತಿನಲ್ಲಿ ಓತಪ್ರೋತನಾಗಿ

ವ್ಯಾಪಿಸಿರುವ ಶ್ರೀಪರಮಾತ್ಮನೇ ಬಿಂಬನು. ಆ ಬಿಂಬನ ಪ್ರತೀಕರೂಪದಲ್ಲಿ ಅಂದರೆ ಪ್ರತಿಬಿಂಬ ಭೂತವಾಗಿ, **ಕರೆಸುವುದು**= ಪ್ರತಿಬಿಂಬ ಎಂಬ ಹೆಸರಿನಿಂದ ಕರೆಯಿಸುವುದು. **ಅನವರತ**= ಅನಾದ್ಯನಂತ ಕಾಲದಿಂದಲೂ, ಎಡಬಿಡದೆ, **ಹರಿ**= ಬಿಂಬನಾದ ಶ್ರೀಪರಮಾತ್ಮ, **ನಾಮ**= ಹೆಸರುಗಳನ್ನು, **ರೂಪಂಗಳನು**= ರೂಪ ಆಕಾರಗಳನ್ನೂ, **ಧರಿಸಿಹುದು**= ಧರಿಸಿಕೊಂಡಿವೆ. ಅಂದರೆ, ಶ್ರೀಪರಮಾತ್ಮನು ಸರ್ವಶಬ್ದವಾಚ್ಯನು. ಸರ್ವನಾಮವಾಚ್ಯನು. ಆಯಾಯಾ ವಸ್ತುಗಳ ನಾಮದಿಂದಲೇ ವಿರಾಜಮಾನನಾಗಿದ್ದಾನೆ. ಆಯಾಯಾ ವಸ್ತುಗಳ ರೂಪ, ಆಕಾರಗಳಿಂದಲೇ ಬಿಂಬನೆನಿಸಿದ್ದಾನೆ. ಸರ್ವಜೀವರ ಅಂತರ್ಯಾಮಿಯಾಗಿದ್ದು, ಆಯಾಯ ಜೀವರ ಆಕಾರ ರೂಪಗಳಿಂದ, ತತ್ತನ್ನಾಮಗಳಿಂದ ಅಪರಿಚ್ಛಿನ್ನನಾಗಿದ್ದಾನೆ. ಜೀವರು ಮತ್ತು ಜೀವಾಂತರ್ಗತ ಬಿಂಬ ಎರಡೂ ಅನಾದಿಗಳೇ, ನಿತ್ಯಗಳೇ. ಅನಾದಿಯಿಂದ ಶ್ರೀಹರಿಯ ರೂಪನಾಮಗಳು ಜೀವರಿಗೆ ಉಂಟು. ಈಶಾಧೀನರಾದ ಜೀವರಲ್ಲಿ ಇದು ಔಪಚಾರಿಕ. ಶ್ರೀಹರಿಯಲ್ಲಿ ಪರಮ ಅನ್ವರ್ಥಕ. ||೨೪||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಚರಾಚರ ಜಗತ್ತುಗಳು ಪರಮಾತ್ಮನ ಉದರದಲ್ಲಿರುವ ಕ್ರಮಹೇಳತಾರೆ.

ಸಮುದ್ರದಲ್ಲಿ ಮೊಸಳೆ, ಮೀನು ಮೊದಲಾದ ಯಾವತ್ತೂ ಜಲಚರ ಪ್ರಾಣಿಗಳು ರಾತ್ರಿಕಾಲದಲ್ಲಿ, ಹಗಲುಕಾಲದಲ್ಲಿ ಒಂದೇ ಪ್ರಕಾರದಿಂದ ತಿರುಗಾಡುತ್ತಾ, ತಮ್ಮ ತಮ್ಮ ಸ್ವಜಾತಿಗಳ ಸ್ನೇಹದಿಂದ ಅನುಸರಿಸಿ ಸಂತೋಷ ಪಡುತ್ತಾ ಇರುವಂತೆ, ಮಕರಾದಿ ಸಾಮ್ಯರಾದ ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರು, ಹಾಂಗೇ ಶುದ್ಧ ಜಡಗಳು, ಸಮುದ್ರಸದೃಶವಾದ ಅಪರಿಚ್ಛಿನ್ನ ಅಖಂಡರೂಪಿಯಾದ ಚರಾಚರಜಗತ್ತಿಗೆ ಈಶನಾದ ಪರಮಾತ್ಮನ ಉದರದಲ್ಲಿ ಇರೋವಾಗಿ ಅವೆ. ಆಕಾಶದ ಗರ್ಭದಲ್ಲಿ ಸರ್ವ ಪದಾರ್ಥಗಳೂ ಇರೋವಾಗಿ ಅವೆ. ತದ್ವ್ಯತಿರಿಕ್ತ ಬೇರೆ ಮಾರ್ಗಾಂತರವೇ ಇಲ್ಲ. ತದ್ವತ್ ಪರ

ಮಾತ್ಮನ ಉದರದಲ್ಲಿ ಜಗತ್ತು ಇರೋದಾಗಿದೆ. ಉದರ ವ್ಯತಿರಿಕ್ತ ದಾವದೂ ಇಲ್ಲ. ಚರಾಚರ ಜಗದಂತರ್ಗತನಾಗಿ ಪರಮಾತ್ಮ ಬಿಂಬ ಎಂತ ಕರಸತಾನೆ. ಈ ಜಗತ್ತುಗಳು ಪ್ರತಿಬಿಂಬನಾದುದರಿಂದ ಇದ್ದು ಸ್ವಜಾತಿಯುಕ್ತಗಳ ಕೂಡ ಸಂತೋಷಯುಕ್ತವಾಗಿ ಇವೆ. ಈ ಇದ್ದ ಜಗತ್ತು ಪ್ರತಿಬಿಂಬ ಎಂತ ಕರಸತದೆ. ಲೋಕದಲ್ಲಿ ದರ್ಪಣದದಲ್ಲಿ ಪ್ರತಿಬಿಂಬ ಪ್ರತಿಫಲಿಸಿದಂತೆ, ಪ್ರತಿ ಬಿಂಬರಾದ ಜೀವರು ಪ್ರತಿಫಲಿಸಿದವರಲ್ಲ. ಇಲ್ಲಿ ಏಕದೇಶದೃಷ್ಟಾಂತ ಗ್ರಾಹ್ಯ. ಉಪಾಧಿಯಲ್ಲಿ ಪ್ರತಿಫಲಿಸಿದ ಪ್ರತಿಬಿಂಬ ದಾವರೀತ್ಯಾ ಬಿಂಬಾಧೀನವೋ ತದ್ವತ್, ಬಿಂಬರಾದ ಜೀವರು ಅಂತರ್ಗತನಾದ ಬಿಂಬರೂಪೀ ಪರಮಾತ್ಮನ ಅಧೀನರೆಂದು ತಾತ್ಪರ್ಯ. ಈ ಪ್ರಕಾರ ಜಗತ್ತು ಪ್ರತಿಬಿಂಬನಾದುದರಿಂದ ಕರಸುತ್ತದೆ. ಮತ್ತು ಬಿಂಬ ಸದೃಶವಾಗಿ ಉಪಾಧಿಯಲ್ಲಿ ಪ್ರತಿಫಲಿಸಿದ ಪ್ರತಿ ಬಿಂಬ ಇರೋದಾಗತದೆ. ತದ್ವತ್ ಉಪಾಧಿಯಿಲ್ಲದ ಪ್ರತಿಬಿಂಬರೆಂದು ತಾತ್ಪರ್ಯ. ಮತ್ತು ಜೀವಾಂತರ್ಗತನಾದ ಬಿಂಬ ಜೀವಾಕಾರದಂತೆ ಇರತಾನಾದ ಕಡಿಯಿಂದ, ಈ ರೀತ್ಯಾ ಪ್ರತಿಬಿಂಬರು ಜೀವರೆಂತಲೂ ತಾತ್ಪರ್ಯವೇ. ಇದೇ ಕ್ರಮ ಶುದ್ಧ ಜಡಗಳಲ್ಲಿ ಸಮನ್ವಯವು. ಈ ಪ್ರತಿಬಿಂಬಾಖ್ಯ ಜಗತ್ತು ನಿರಂತರದಲ್ಲೂ ಅಂತರ್ಗತ ಬಿಂಬನಾದ ಹರಿನಾಮಕ ಪರಮಾತ್ಮಗೆ ದಾವ ನಾಮವೋ ಅದೇ ನಾಮದಿಂದಲೆ, ಅಂತರ್ಗತನಾದ ಪರಮಾತ್ಮನ ರೂಪ ಕುರಿಯೋ, ಅಶ್ವವೋ ದಾವುದೋ ಅಂಥಾದ್ದೇರೂಪಗಳನ್ನು ಧರಿಸಿ ಇರೋ ದಾಗಿ ಅದೆ. ಅಂದರೆ, ಆ ರೂಪದ ಜೀವರು ಈಶ್ವರನಿಂದ ರಚಿತರಲ್ಲ. ಜೀವಾಂತರ್ಗತಬಿಂಬ ಮಧ್ಯಕಾಲದಲ್ಲಿ ಪ್ರವೇಶನಾಗಿ ಬಿಂಬನಾದವನಲ್ಲ. ಎರಡೂ ಅನಾದಿಯೇ. ಜೀವರು ಈಶಾಧೀನರು ಎಂಬುದೂ ಅನಾದಿಯೇ. ಆದ್ದರಿಂದ ಸರ್ವರೂಪವೂ ಸರ್ವನಾಮವೂ ದೇವರಿಗೆ ಉಂಟು. ಅನ್ಯರಾದವ ರಿಗೆ ಇಲ್ಲ. ಅನಾದಿಯಿಂದ ಪರಮಾತ್ಮನ ರೂಪ, ನಾಮ ಜೀವರು ಧರಿಸೋವರಾಗಿದ್ದಾರೆ, ಆದರೂ ಪರಮಾತ್ಮನಲ್ಲಿ ಅನ್ವರ್ಥಕ, ಜೀವರಲ್ಲಿ ಔಪಚಾರಿಕ ಎಂತ ತಾತ್ಪರ್ಯ. ||೨೪||

## ಭಾವಪ್ರಕಾಶಿಕೆ

ಸಮುದ್ರದಲ್ಲಿ ಮೀನು ಮೊಸಳೆ ಮೊದಲಾದ ಅನಂತಾನಂತ ಜೀವರಾಶಿ

ಗಳು ರಾತ್ರಿ ಹಗಲು ಒಂದೇ ರೀತಿಯಿಂದ ಸಂಚರಿಸುತ್ತ ತಮ್ಮ ಗುಂಪುಗಳೊಂದಿಗೆ ಸುಖಪಡುತ್ತಿರುವಂತೆ ಈ ಮೂರು ಲೋಕವು ಪರಮಾತ್ಮನ ಪ್ರತಿಬಿಂಬವೆನಿಸಿ, ನಾನಾ ಪ್ರಕಾರವಾದ ರೂಪ ನಾಮ ಭೇದಗಳಿಂದ ಪರಮಾತ್ಮನ ಅಂಶಾಂಶಿರೂಪಗಳು ಶ್ರೀಪರಮಾತ್ಮನ ಉದರದಲ್ಲಿ ಶೋಭಿಸುತ್ತಿರುವವು. ||೨೪||

**ಭಾವದರ್ಪಣ**

ಶರಧೀತಿ. ||೨೪||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಶರಧಿ ಇತಿ || ಸರ್ವೇಷಾಂ ಹರಿಣಾ ಸ್ವನಾಮದಾನಂ ಉಭಯತ್ರ ಪ್ರಸಿದ್ಧಪಾದಭಾಷ್ಯೇ ಸ್ಪಷ್ಟಮ್ ||೨೪||

**ಕನ್ನಡಾರ್ಥ**

ಧರಿಸುಹುದು ಹರಿನಾಮರೂಪಂಗಳನು ಅನವರತ ಎಂಬ ಪದ್ಯದ ಕೊನೆಯ ಪಾದದಲ್ಲಿ ಶ್ರೀಹರಿನಾಮಗಳು ಜೀವಾದಿಗಳಿಗೆ ಬಂದವೆಂದು ತಿಳಿಸಿರುತ್ತಾರೆ. ಸರ್ವರಿಗೂ ಶ್ರೀಹರಿಯು ತನ್ನಲ್ಲಿಯೇ ಮುಖ್ಯವಾಗಿ ವಾಚಕವಾಗಿರುವ ಶಬ್ದಗಳಲ್ಲಿ ಕೆಲವು ಶಬ್ದಗಳನ್ನು ಅಮುಖ್ಯವೃತ್ತಿಯಿಂದ ವ್ಯವಹಾರದಲ್ಲಿ ಬಳಸಲು ಜೀವಾದಿಗಳಿಗೆಲ್ಲರಿಗೂ ಕೊಟ್ಟಿರುತ್ತಾನೆ, ಎಂಬ ಸಂಗತಿಯನ್ನು ಉಭಯತ್ರಪ್ರಸಿದ್ಧನಾಮಪಾದದಲ್ಲಿ ಭಾಷ್ಯದಲ್ಲಿ ಸ್ಪಷ್ಟಪಡಿಸಲಾಗಿರುತ್ತದೆ.

ಋತೇ ನಾರಾಯಣಾದೀನಿ ನಾಮಾನಿ ಪುರುಷೋತ್ತಮಃ || ಪಾದಾತ್ ಅನ್ಯತ್ರ ಭಗವಾನ್ ರಾಜೇ ವರ್ತೇ ಸ್ವಕಂ ಪುರಮ್ || ಇತಿ ಸ್ಕಾಂದೇ.

ಚತುರ್ಮುಖಃ ಶತಾನಂದೋ ಬ್ರಹ್ಮಣಃ ಪದ್ಮಭೂಃ ಇತಿ|| ಉಗ್ರೋ ಭಸ್ಮಧರೋ ನಗ್ನಃ ಕಪಾಲೀತಿ ಶಿವಸ್ಯ ಚ | ವಿಶೇಷನಾಮಾನಿ ದದೌ ಸ್ವಕೀಯಾನ್ಯಪಿ ಕೇಶವಃ ಇತಿ ಚ ಬ್ರಾಹ್ಮೇ ||

ರಾಜನು ತನ್ನಂತಃಪುರವನ್ನು ಉಳಿದು ಮಿಕ್ಕವುಗಳನ್ನು ತನ್ನ ಸೇವಕರಿಗೆ ಕೊಡುವಂತೆ ಭಗವಾನ್ ಪುರುಷೋತ್ತಮನು ನಾರಾಯಣ ಮೊದಲಾದ ನಾಮಗಳನ್ನು ಬಿಟ್ಟು ಕೆಲವು ನಾಮಗಳನ್ನು ರುದ್ರಾದಿಗಳಿಗೆ ಕೊಟ್ಟನು. ಬ್ರಹ್ಮನಿಗೆ ಚತುರ್ಮುಖ, ಶತಾನಂದ, ಪದ್ಮಭೂ ಎಂದೂ, ರುದ್ರನಿಗೆ ಉಗ್ರ, ಭಸ್ಮಧರ, ನಗ್ನ (ದಿಗಂಬರ) ಎಂದೂ, ತನ್ನವೇ ಆದ ವಿಶೇಷ ನಾಮಗಳನ್ನು ಕೊಟ್ಟನು ಎಂದು ಭಾಷ್ಯಾರ್ಥ. ||೨೪||

## ಶ್ರೀಗುರುಹೃದಯಪ್ರಕಾಶಿಕೆ

ಜೀವರು ದೇವರನ್ನು ಆಶ್ರಯಿಸಿ ಅಧೀನರಾಗಿರುವುದರಿಂದ ದೇವರ ರೂಪದಂತೆ ಅಭೇದ (ಇಲ್ಲದವರು) ಎಂದರೆ, ಪ್ರತಿಬಿಂಬರು ಎಂಬುದಾಗಿ ತಿಳಿಸುತ್ತಾರೆ, ಶರಧಿಯೊಳು ಎಂತ. ಶರಧಿ ಎಂದರೆ ಸಮುದ್ರದಲ್ಲಿ ಮೊಸಳೆ ಮೊದಲಾದ ಜೀವರು ಏಕಪ್ರಕಾರಸಂಚರಿಸುತ್ತಾ ಸಂತೋಷಪಡುತ್ತಾ ಪ್ರತ್ಯೇಕವಾಗಿರುವಂತೆ, ಈ ಜಗತ್ರಯದ ಜೀವರುಗಳು ಜಗದೀಶನಾದ ದೇವರ ಉದರವನ್ನು ಆಶ್ರಯಿಸಿ ಅತ್ಯಂತ ಅಧೀನರಾದ್ದರಿಂದ ಪ್ರತಿಬಿಂಬ ರೆಂದು ಕರೆಸುವರು. ಇದೇ ನಿಮಿತ್ತ ದೇವರ ನಾಮರೂಪಗಳನ್ನು ಸಹ ಧರಿಸಿರುವರು. ಆದ್ದರಿಂದ ಜೀವರು ಪ್ರತ್ಯೇಕರೆಂದು ಅಭಿಪ್ರಾಯ. ಅನಾದಿ ಯಿಂದ ದೇವರ ರೂಪ ನಾಮ ಧರಿಸಿದಾಗ್ಯೂ ಅವು ಔಪಚಾರಿಕವೆಂದು· ಪರಮಾತ್ಮನಲ್ಲಿ ಅನ್ವರ್ಥಕವೆಂದೂ ತಾತ್ಪರ್ಯ. ||೨೪||

# ಸರ್ವವ್ಯಾಖ್ಯಾನಸಾರಸಂಗ್ರಹ

ಜಗತ್ಪತಿಯ ಉದರದಲ್ಲಿ ಇರುವ ಚರಾಚರಾತ್ಮಕವಾದ ಜಗತ್ರಯಗಳ ವಿಚಾರ ತಿಳಿಸುತ್ತಾರೆ.

ಶರಧಿಯಲ್ಲಿ ಮೊಸಳೆ, ಮೀನು, ತಿಮಿಂಗಿಲ ಇತ್ಯಾದಿ ಜಲಚರಜಂತು ಗಳಿರುವುವು. ಇವೇ ಮಕರಾದಿ ಜೀವರು.

ಮಕರಾದಿ ಜೀವರು ಹಗಲುರಾತ್ರಿ, ನಿತ್ಯದಲ್ಲಿ ಒಂದೇಸಮನಾಗಿ, ಸಮುದ್ರದ ನೀರಿನಲ್ಲಿ ಸ್ವೇಚ್ಛೆಯಾಗಿ ಸಂಚರಿಸುತ್ತಿರುವುವು. ಈ ಮಕರಾದಿ

ಜಲಚರ ಜಂತುಗಳು ತಮ್ಮ ತಮ್ಮ ಗುಂಪುಗಳಲ್ಲಿ ಸೇರಿಕೊಂಡೂ ಸ್ವಜಾತಿ ಸ್ನೇಹದಿಂದ ಒಂದನ್ನೊಂದು ಅನುಸರಿಸಿಕೊಂಡು ಸುಖದಿಂದಿರುವುವು.

ಬ್ರಹ್ಮಾಂಡಗತವಾದ ಚರಾಚರಾತ್ಮಕವಾದ ಮೂರುಲೋಕಗಳು ಆ ಜಗತ್ಪತಿಯ ಉದರದಲ್ಲಿ ವಿದ್ಯಮಾನವಾಗಿವೆ. ಬ್ರಹ್ಮಾದಿ ತೃಣಾಂತ ಸಮಸ್ತ ಜೀವಗಣ ಹಾಗೂ ಶುದ್ಧ ಜಡಗಳು ಅನಾದ್ಯನಂತಕಾಲದಿಂದ ಈಶಾಧೀನ ವಾಗಿವೆ. ಸರ್ವ ದೇಶ, ಕಾಲಗಳಲ್ಲಿ ಓತಪ್ರೋತನಾಗಿ ವ್ಯಾಪಿಸಿರುವ ಶ್ರೀಪರಮಾತ್ಮನು ಸರ್ವ ತ್ರಿವಿಧ ಜೀವರುಗಳಲ್ಲಿ ಅಂತರ್ಯಾಮಿಯಾಗಿ ಬಿಂಬನಾಗಿಯೂ ಇದ್ದಾನೆ. ಆದರೂ ಅವರಿಂದ ಭಿನ್ನ. ಶುದ್ಧ ಜಡವಸ್ತು ಗಳಲ್ಲಿ ಎಡಬಿಡದೆ ವ್ಯಾಪ್ತರೂಪಗಳಿಂದ ವ್ಯಾಪಿಸಿಕೊಂಡಿದ್ದರೂ ಅವುಗಳಿಂದ ಭಿನ್ನ. ಶ್ರೀಹರಿಯ ಸನ್ನಿಧಾನ ವಿಶೇಷದಿಂದಲೇ ಸರ್ವಜೀವರ ವ್ಯಾಪಾರ ಗಳ ಅಭಿವ್ಯಕ್ತಿ. ಸಕಲ ಜಡವಸ್ತುಗಳ ಗುಣಧರ್ಮಗಳ ಅಭಿವ್ಯಕ್ತಿ. ಆದ್ದ ರಿಂದಲೇ ಜೀವರು ಪರಮಾತ್ಮನ ಚಲಪ್ರತೀಕರೆಂದೂ, ಜಡಗಳು ಅಚಲ ಪ್ರತೀಕಗಳೆಂದೂ ಪ್ರಸಿದ್ಧ.

ಸರ್ವಜೀವರ ಬಿಂಬನಾದ ಶ್ರೀಪರಮಾತ್ಮನು ಸರ್ವಶಬ್ದವಾಚ್ಯನು. ಇದರಿಂದ ಸಕಲ ಜೀವರೂ ಮತ್ತು ಶುದ್ಧಜಡಗಳೂ ಶ್ರೀಹರಿಯ ನಾಮ ಗಳನ್ನೇ ರೂಪಗಳನ್ನೇ ಧರಿಸಿ ಪ್ರತಿಬಿಂಬರೂಪದಲ್ಲಿವೆ.

ಜೀವರ ನಿತ್ಯತ್ವಧರ್ಮಕ್ಕೆ ಅವರಲ್ಲಿ ಅಂತರ್ಯಾಮಿಯಾಗಿರುವ ಬಿಂಬನ ಸನ್ನಿಧಾನ ವಿಶೇಷವೇ ಮುಖ್ಯ ಕಾರಣ. ಹೀಗೆ ಈಶ-ಜೀವ–ಜಡ ಇವುಗಳ ಪರಸ್ಪರ ಸಂಬಂಧವು ಇರುವುದರಿಂದ, ಅನವರತ ಎಂದಿದ್ದಾರೆ. ಜೀವರ ವಿಷಯದಲ್ಲಿ ಶ್ರೀಹರಿಯ ನಾಮರೂಪಗಳ ಧಾರಣೆಯು ಕೇವಲ ಔಪಚಾರಿಕ. ಶ್ರೀಪರಮಾತ್ಮನ ವಿಷಯದಲ್ಲಿ ಅದು ಪರಮ ಅನ್ವರ್ಥಕ.||೨೪||

### ಪದ್ಯ ೨೫

### ಮೂಲ

ಜನನಿ ಸೌಷ್ಠಪದಾರ್ಥಗಳ ಭೋ ।
ಜನವ ಮಾಡಲು ಗರ್ಭಗತ ಶಿಶು ।
ದಿನದಿನದಲಭಿವೃದ್ಧಿ ಐದುವ ತೆರದಿ ಜೀವರಿಗೆ ॥
ವನಜನಾಭನು ಸರ್ವರಸ ಉಂ ।
ಡುಣಿಸಿ ಸಂರಕ್ಷಿಸುವ ಜಾಹ್ನವಿ ।
ಜನಕ ಜನ್ಮಾದ್ಯಖಿಳದೋಷವಿದೂರ ಗಂಭೀರ ॥ ॥೨೫॥

### ಅವತರಣಿಕೆ

ಜೀವರ ಭೋಕ್ತೃತ್ವಶಕ್ತಿಯೂ ಸಹ ಈಶಾಧೀನವೆಂದು ದೃಷ್ಟಾಂತ ಪೂರ್ವಕ ತಿಳಿಸುತ್ತಾರೆ.

### ಪ್ರತಿಪದಾರ್ಥ

**ಜನನಿ**=ತಾಯಿಯು, **ಸೌಷ್ಠಪದಾರ್ಥಗಳ**=ಆಯಾಯಾ ಜಾತಿಗೆ ಯೋಗ್ಯವಾದ ಪೌಷ್ಟಿಕ ಆಹಾರವನ್ನು, **ಭೋಜನವ ಮಾಡಲು**=ಊಟ ಮಾಡುವುದರಿಂದ, **ಗರ್ಭಗತಶಿಶು**=ಅವಳ ಗರ್ಭದಲ್ಲಿರುವ ಶಿಶುವು, **ದಿನದಿನದಲಿ**=ದಿನದಿನಕ್ಕೆ, **ಅಭಿವೃದ್ಧಿ**=ದೇಹದ ಬೆಳವಣಿಗೆಯನ್ನು, **ಐದುವ ತೆರದಿ**=ಹೊಂದುವ ರೀತಿಯಲ್ಲಿ, **ಜೀವರಿಗೆ**=ಸರ್ವ ತ್ರಿವಿಧರಾದ ಜೀವರಿಗೆ, **ವನಜನಾಭನು**=ಪದ್ಮನಾಭರೂಪೀ ಶ್ರೀಪರಮಾತ್ಮನು, **ಸರ್ವರಸ**=ಸರ್ವ ಭೋಜನ ವಸ್ತುಗತ ರಸವಿಶೇಷಗಳನ್ನು, **ಉಂಡು**=ಸ್ವಾಖ್ಯರಸಗಳನ್ನು ತಾನು ಸ್ವೀಕರಿಸಿ, **ಉಣಿಸಿ**=ಬಿಂಬಕ್ರಿಯಾದ್ವಾರಾ ಜೀವರ ದೇಹಕ್ಕೆ ಉಪಚಯ ರೂಪವಾದ ಅಭಿವೃದ್ಧಿಯನ್ನು ಕೊಡುತ್ತಾ, (ಇದು ಸ್ಥೂಲದೇಹದ ಅಭಿವೃದ್ಧಿ ರೂಪವಾದ ಸಂರಕ್ಷಣೆ) **ಜಾಹ್ನವಿಜನಕ**=ಗಂಗಾಪಿತನಾದ ಶ್ರೀಹರಿಯು, **ಜನ್ಮಾದಿ**=ಜನನ ಮರಣಸ್ಥಿತಿಗಳಿಗೆ

ಕಾರಣಗಳಾದ, **ಅಖಿಳದೋಷವಿದೂರ**= ಸಮಸ್ತವಾದ ದೋಷಗಳಿಂದ ದೂರನಾದ, **ಗಂಭೀರ**= ತನ್ನ ಮಹಾಮಹಾತ್ಮ್ಯೆ ಎಂಬ ಆಳವನ್ನು ಯಾರಿಂದಲೂ ಅಳಿಯುವುದಕ್ಕಾಗಲೀ, ಸಾಕಲ್ಯೇನ ಅರಿಯಲೂ ಅಶಕ್ಯನಾದ ಶ್ರೀಪರಮಾತ್ಮನು, **ಸಂರಕ್ಷಿಸುವ**= ಸಮಸ್ತ ಜೀವರನ್ನೂ ಅವರವರ ದೇಹ ಪೋಷಣಾದ್ವಾರಾ, ಅವರಿಗೆ ಅಪೇಕ್ಷಿತವಾದ ವಸ್ತುಗಳನ್ನು ಪೂರೈಸಿ ಸದಾ ಕಾಪಾಡುತ್ತಿರುವನು. ||೨೫||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರಿಗೆ ಭೋಕ್ತೃತ್ವಶಕ್ತಿ ಸಹ ದೇವರ ಅಧೀನವೆಂದು ದೃಷ್ಟಾಂತ ತಿಳಿಸುತ್ತಾರೆ. ಪರಮಾತ್ಮ ಜೀವರನ್ನ ಸಂರಕ್ಷಣೆ ಮಾಡುವ ಕ್ರಮ ಹೇಳ ತಾರೆ.

ಶುಕ್ಲಶೋಣಿತ ಸಂಬಂಧದಿಂದ ಗರ್ಭವನ್ನು ಧರಿಸತಕ್ಕ ಜನನಿಸಾಂಕೇತ ರಾದ ತ್ರಿವಿಧರಾದ ಮಾನುಷ ಪಶ್ವಾದಿ ಸ್ತ್ರೀಜಾತಿ ಇಂಥಾ ತಾಯಿಯರು, ಆಯಾ ಜಾತಿಗೆ ಯೋಗ್ಯಗಳಾದ ಭೋಜನಯೋಗ್ಯವಾದ ಪದಾರ್ಥಗಳ ಊಟಮಾಡುವುದರಿಂದ ಪ್ರತಿದಿನದಲ್ಲೂ ತಾಯಿ ಭೋಜನ ಮಾಡಿದ್ದರಲ್ಲಿ ಶಿಶುವಿಗೆ ಸೇರತಕ್ಕ ಭಾಗ ಶಿಶುವಿಗೆ, ತಾಯಿಗೆ ಸೇರತಕ್ಕ ಭಾಗ ತಾಯಿಗೆ ಸೇರಿ, ಗರ್ಭಸ್ಥ ಶಿಶು ಅಭಿವೃದ್ಧಿಯನ್ನು ಐದೋದಾಗತದೆ. ತಾಯಿ ಭೋಜನ ಮಾಡಿದ ಹೊರತು ಗರ್ಭಗತ ಶಿಶುಜೀವಗೆ ಭೋಜನವಾಗೋದಿಲ್ಲ ಹ್ಯಾಂಗೋ,ಇದರಂತೆ ಪದ್ಮನಾಭರೂಪಿಯಾದ ಪರಮಾತ್ಮ ಸರ್ವಪ್ರಾಣಿಗಳಿಗೆ ಎಂದರೆ, ಸ್ಥೂಲದೇಹಗಳ ಧರಿಸಿದ ಸರ್ವಪ್ರಾಣಿಗಳ ಸ್ಥೂಲದೇಹದಲ್ಲಿ ತದಾ ಕಾರನಾಗಿ, ಬಿಂಬನಾಗಿ ಜನನಿಸದೃಶನಾಗಿದ್ದು ಜನನಿಯಂತೆ ತದ್ಗತ ಸ್ವಾಖ್ಯ ರಸಗಳ ತಾನು ಉಂಡು ತನ್ನ ಭೋಜನಕ್ರಿಯಾದ್ವಾರಾ ಜೀವನ ದ್ವಾರಾ ದೇಹಕ್ಕೆ ಜಡಪದಾರ್ಥಗಳ ಉಣಿಸಿ, ಆ ಜಡರಸವನ್ನ ದೇಹಕ್ಕೆ ಉಪಚಯು ಮಾಡಿ ಸ್ಥೂಲದೇಹವನ್ನು ಅಭಿವೃದ್ಧಿ ರೂಪವಾದ ಸಂರಕ್ಷಣ ಮಾಡತಾನೆ.

ಈ ಪ್ರಕಾರ ಅನುಸಂಧಾನ ಮಾಡಿ ಭೋಜನ ಮಾಡತಕ್ಕ ಅಧಿಕಾರಿಗಳನ್ನು ತನ್ನ ಮಹಾ ಮಾಹಾತ್ಮ್ಯವೆಂಬ ಆಳವನ್ನ ದಾರಿಂದಲೂ ತಿಳಿಯುವುದಕ್ಕೆ ಅಶಕ್ಯನಾದ ಗಂಗಾದೇವಿಪಿತನಾದ ಶ್ರೀಪರಮಾತ್ಮನು ಜನನ ಮರಣ ಸ್ಥಿತಿಗಳಿಗೆ ಕಾರಣವಾದ ಸಮಸ್ತ ದೋಷಗಳಿಂದ ವಿಶೇಷಾಕಾರದಿಂದ ದೂರಮಾಡಿ ಸಂರಕ್ಷಿಸುತ್ತಾನೆಂದು ತಾತ್ಪರ್ಯ. ||೨೫||

## ಭಾವಪ್ರಕಾಶಿಕೆ

ಗರ್ಭಿಣಿಸ್ತ್ರೀಯು ಸ್ವಾದುವಾದ ಪದಾರ್ಥಗಳನ್ನು ಭೋಜನ ಮಾಡಿದರೆ ಆ ರಸವು ಆಕೆಯ ನಾಭಿಯಿಂದ ಹೊರಟಿರುವ ನಾಡಿಯ ದ್ವಾರಾ ಆಕೆಯ ಗರ್ಭದಲ್ಲಿರುವ ಮಗುವಿನ ಹೊಟ್ಟೆಯಲ್ಲಿ ಸೇರಿ ಆ ಮಗು ದಿನೇದಿನೇ ವೃದ್ಧಿ ಹೊಂದುವುದು. ಅದರಂತೆ ಪರಮಾತ್ಮನು ಭೂಮಿಯಲ್ಲಿರುವ ಸಕಲ ವಿಧವಾದ ಭೋಜ್ಯಪದಾರ್ಥಗಳ ರಸಗಳನ್ನು ತಾನು ಸ್ವೀಕರಿಸಿ ಜೀವರಿಗೆ ಉಣಿಸಿ ಸಂರಕ್ಷಿಸುವನು. ಆ ರಸವನ್ನು ಪರಮಾತ್ಮನು ತನ್ನ ಹೊಟ್ಟೆ ತುಂಬುವುದಕ್ಕಾಗಿ ತಾನು ಸ್ವೀಕರಿಸುವುದಿಲ್ಲ. ಏಕೆಂದರೆ ಅವನನುಗ್ರಹಕ್ಕೆ ಪಾತ್ರರಾದ ದೇವತೆಗಳಿಗೇನೇ ಹಸಿವು ನೀರಡಿಕೆ ಇಲ್ಲ. ಹಾಗಿರಲು ಪರಮಾತ್ಮನಿಗೆ ನೀರಡಿಕೆ ಯಾವುದು ? ಹಸಿವು ಯಾವುದು ? ಇಲ್ಲಿರುವ ಜಾಹ್ನವಿ ಜನಕ, ಜನ್ಮಾದ್ಯಖಿಳ ದೋಷವಿದೂರ ಎಂಬ ಎರಡು ವಿಶೇಷಣಗಳಿಂದ ಹಸಿವು ನೀರಡಿಕೆ ಇಲ್ಲವೆಂಬುದನ್ನು ದಾಸರಾಯರು ಸೂಚಿಸಿರುವರು. ಗಂಗಾಜನಕ= ಗಂಗೆಯನ್ನು ಪಾದದಿಂದ ಸೃಷ್ಟಿಸಿದ ಪರಮಾತ್ಮನಿಗೆ ನೀರು ಬೇಕೆಂಬ ಅಪೇಕ್ಷೆಯು, ಇಲ್ಲವೆಂಬುದನ್ನು ಸೂಚಿಸುವುದು. "ಜನ್ಮಾದ್ಯಖಿಳದೋಷವಿದೂರ" ಎಂಬ ಪದದಿಂದ ಹುಟ್ಟಿದವರಿಗೆ ಹೊಟ್ಟೆ ತುಂಬಿಕೊಂಡು ದೇಹವನ್ನು ವೃದ್ಧಿಪಡಿಸಬೇಕೆಂಬ ಆಶೆಯು ಇರುವುದು. ಮತ್ತೆ ಮರಣಭಯವು ಉಂಟು. ಹುಟ್ಟುವಿಕೆ ಸಾಯುವಿಕೆ ಮೊದಲಾದ ದೋಷಗಳೇ ಇಲ್ಲದಮೇಲೆ ಆಶೆಯೆಲ್ಲಿಯದು? ಆದ್ದರಿಂದ ಕರುಣದಿಂದ ಜೀವರನ್ನು ಉದ್ಧರಿಸುವುದಕ್ಕಾಗಿ ತಾನು ರಸವನ್ನುಂಡು ಜೀವರಿಗುಣಿಸುವನೇ ಹೊರತು ಸ್ವಪ್ರಯೋಜನಕ್ಕಲ್ಲ. ಗರ್ಭಿಣಿಯ ಭೋಜನದ್ವಾರಾ ಮಗುವಿಗೆ ತೃಪ್ತಿಯೇ ಹೊರತು

ಹೊಟ್ಟೆಯ ಒಳಗಿರುವ ಮಗುವಿಗೆ ಅನ್ನವನ್ನು ಉಣಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಬಿಂಬಕ್ರಿಯಾ ಹೊರತು ಪ್ರತಿಬಿಂಬನಿಗೆ ತೃಪ್ತಿಯಾಗುವುದಿಲ್ಲವಾದ್ದರಿಂದ ಪರಮಾತ್ಮನುಂಡೇ ಉಣಿಸುವನು. ||೨೫||

**ಭಾವದರ್ಪಣ**

ಜನನೀತಿ. ||೨೫||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಜನನಿ ಇತಿ ||೨೫||

**ಕನ್ನಡಾರ್ಥ**

ಗರ್ಭಗತ ಶಿಶುವಿಗೆ ಸಂಗೋಪನಾಭಿವೃದ್ಧಿಗಳು ಜನನಿಯಿಂದ ಆಗುವಂತೆ ಸರ್ವರಿಗೂ ಪರಮಾತ್ಮನಿಂದ ಪೋಷಣೆಯಾಗುವದೆಂದು ತಿಳಿಸುತ್ತಾರೆ, ಜನನಿ ಎಂಬ ಪದ್ಯದಿಂದ. ||೨೫||

**ಶ್ರೀಗುರುಹೃದಯಪ್ರಕಾಶಿಕೆ**

ಜೀವರಿಗೆ ಭೋಕ್ತೃತ್ವಶಕ್ತಿ ಸಹ ದೇವರದೆಂದು, ಪರಮಾತ್ಮ ಜೀವರನ್ನು ಸಂರಕ್ಷಣೆ ಮಾಡುವ ಕ್ರಮವನ್ನು ಸದೃಷ್ಟಾಂತ ತಿಳಿಸುತ್ತಾರೆ, ಜನನಿ ಎಂದು. ಗರ್ಭಿಣಿಯಾದ ತಾಯಿ ಸೌಷ್ಠವವೆಂಬ ಒಳ್ಳೇ ಪದಾರ್ಥಗಳನ್ನು ಭೋಜನ ಮಾಡಿದ ಹೊರತು, ಗರ್ಭಗತ ಶಿಶುವಿಗೆ ಹೇಗೆ ಅಭಿವೃದ್ಧಿಯಾಗುವುದಿಲ್ಲವೋ ಹಾಗೆ, ವನಜನಾಭನೆಂಬ ಪದ್ಮನಾಭರೂಪೀ ದೇವರು ತನಗೆ ಅತ್ಯಂತಾಧೀನರಾಗಿರುವ ಜೀವರಿಗೆಲ್ಲ ತತ್ತದ್ಯೋಗ್ಯರಸಗಳನ್ನು ತಾನು ಮೊದಲು ತೆಗೆದುಕೊಂಡು, ಅವರವರಿಗೆ ಉಣಿಸಿ ಸಂರಕ್ಷಿಸುವನು. ಹೀಗೆ ಸರ್ವಾಂತರ್ಯಾಮಿಯಾಗಿ ಕಾರ್ಯಗಳನ್ನು ಮಾಡುತ್ತಿದ್ದಾಗ್ಯೂ, ಪಾಪರಹಿತನಾದ ಗಂಗೆಯನ್ನು ಪಡೆದ ಅಗಾಧಸ್ವರೂಪನಾದ ಸ್ವಾಮಿಯು ಜನ್ಮಾದ್ಯಖಿಳ ದೋಷವಿಲ್ಲದವನು, ಜೀವರ ರಸ ಸ್ವೀಕಾರದೋಷವಿಲ್ಲದವನು. ||೨೫||

# ಸರ್ವವ್ಯಾಖ್ಯಾನಸಾರಸಂಗ್ರಹ

ಸಕಲಜೀವರ ಭೋಕ್ತೃತ್ವಶಕ್ತಿಯು ಶ್ರೀಪರಮಾತ್ಮನ ಅಧೀನವೆಂದು, ದೃಷ್ಟಾಂತ ಪೂರ್ವಕ ತಿಳಿಸುತ್ತಾರೆ.

ಜನನಿಯು ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ದೇಹ ಪೋಷಣೆಗಾಗಿ, ಪುಷ್ಟಿಕರವಾದ ಸಾರವತ್ತಾದ ಆಹಾರವನ್ನು ಸ್ವೀಕರಿಸುವಳು. ಜನನಿಯು ಸೌಷ್ಠವ ಆಹಾರ ವಸ್ತುಗಳನ್ನು ಸೇವಿಸುವುದರಿಂದ, ಅದು ರಕ್ತ ಗತವಾಗಿ, ಜನನಿಯ ಗರ್ಭಗತ ಶಿಶುವಿನ ದೇಹವನ್ನು ಸೇರುವುದು. ಇದರಿಂದ ಗರ್ಭಸ್ಥ ಶಿಶುವಿನ ದೇಹೋಪಚಯವಾಗಿ, ಅದು ದಿನೇ ದಿನೇ ಅಭಿವೃದ್ಧಿ ಯಾಗುವುದು.

ಈ ದೃಷ್ಟಾಂತದಲ್ಲಿ ಶ್ರೀಪರಮಾತ್ಮನು ಜನನಿಯ ಸದೃಶ. ಸಕಲ ಜೀವರೂ ಜನನಿಯ ಗರ್ಭಗತ ಶಿಶುಗಳ ಸದೃಶ. ಶಿಶುವೇ ನೇರವಾಗಿ ಆಹಾರವನ್ನು ಸೇವಿಸಲು ಸಾಧ್ಯವಿಲ್ಲ. ಜನನಿಯ ದ್ವಾರವೇ ಶಿಶುವಿನ ದೇಹದ ಪೋಷಣೆ ಮತ್ತು ಅಭಿವೃದ್ಧಿಯಾಗಬೇಕು.

ವನಜನಾಭನು ಆಹಾರವಸ್ತುಗಳಲ್ಲಿರುವ ಸರ್ವ ರಸಗಳಲ್ಲಿ ಅಂತರ್ಯಾಮಿ ಯಾಗಿದ್ದು, ರಸಪದವಾಚ್ಯನಾಗಿ, ರಸಾಂತರ್ಗತ ಭಗವದ್ರೂಪಗಳಲ್ಲಿ ಕ್ರೀಡಿಸು ವನು. ಇದೇ ಶ್ರೀಪರಮಾತ್ಮನ ಬಿಂಬಕ್ರಿಯಾರೂಪವಾದ ವ್ಯಾಪಾರ. ಅದರ ದ್ವಾರಾಪ್ರತಿಬಿಂಬಭೂತರಾದ ಜೀವರಿಗೆ ತೃಪ್ತಿ ಎಂಬ ಆನಂದಾನುಭವವುಂಟಾ ಗುವುದು. ಇದು ರಸವಿಭಾಗದಿಂದ ಸ್ಥೂಲದೇಹದ ಉಪಚಯಕ್ಕೆ ಕಾರಣವಾಗು ವುದು.

ಶ್ರೀಹರಿಗೆ ಹಸಿವು, ತೃಷೆಗಳ ಬಾಧೆಯಿಲ್ಲ. ಆ ಬಾಧೆಯಿಂದ ಪೀಡಿತ ರಾಗಿರುವ ಜೀವರ ಹಸಿವೆ ತೃಷೆಗಳನ್ನು ಪರಿಹರಿಸುವ ಪರಮಕರುಣಾ ನಿಧಿಯು.

ಜೀವರಿಗೆ ಜನನ, ಸ್ಥಿತಿ, ಮರಣಾದಿಗಳೆಂಬ ಅವಸ್ಥೆಗಳುಂಟು. ಜನನ ರೂಪವಾದ ಉತ್ಪತ್ತಿ ಜೀವರಿಗೆ. ಅವರಿಗೆ ಹಸಿವೆ ನೀರಡಿಕೆಗಳ ಬಾಧೆ

ಉಂಟಾಗುವುದು. ಜಗದ್ವಿಲಕ್ಷಣನಾದ ಶ್ರೀಪರಮಾತ್ಮನಿಗೆ ಜನನ, ಸ್ಥಿತಿ, ಮರಣ ಇತ್ಯಾದಿ ಯಾವ ದೋಷಗಳೂ ಇಲ್ಲ. ಇದರಿಂದ ಜನ್ಮಾದಿ ಅಖಿಳ ದೋಷವಿದೂರನು.

ಅವನ ಮಹಾಮಹಿಮೆಗಳು ಅಪಾರ. ಅವನ ಮಹಿಮೆ ಎಂಬ ಮಹಾ ಸಮುದ್ರದ ಆಳವನ್ನು ಸಾಕಲ್ಯೇನ ಕಂಡವರಿಲ್ಲ. ಅಂತಹ ಅಪರಿಮಿತ ಮಹಿಮಾಸಂಪನ್ನನಾದುದರಿಂದ ಶ್ರೀಹರಿಯು ಗಂಭೀರನು. ||೨೫||

## ಪದ್ಯ ೨೬

### ಮೂಲ

**ಆಸೆಗೊಳಗಾದವನು ಜನರಿಗೆ |**
**ದಾಸನೆನಿಸುವನಾಸೆಯನು ನಿಜ |**
**ದಾಸಗೈದಿಹ ಪುಂಸಗೆಲ್ಲರು ದಾಸರೆನಿಸುವರು ||**
**ಶ್ರೀಶನಂಘ್ರಿಸರೋಜಯುಗಳ ನಿ |**
**ರಾಶೆಯಿಂದಲಿ ಭಜಿಸೆ ಒಲಿದು ರ |**
**ಮಾಸಹಿತ ತನ್ನನೆ ಕೊಡುವ ಕರುಣಾಸಮುದ್ರ ಹರಿ ||೨೬||**

### ಅವತರಣಿಕೆ

ಅಲ್ಪಾಯುಗಳೂ ಅಲ್ಪಸಮರ್ಥರೂ ಆದ ಮಾನವರಿಗೆ ದಾಸನಾಗದೆ, ಶಾಶ್ವತನೂ, ಸರ್ವೋತ್ತಮನೂ ಆದ ರಮಾರಮಣನ ದಾಸನಾಗಿ ಕೃತಕೃತ್ಯ ನಾಗೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಆಸೆಗೊಳಗಾದವನು**= ಅಹಂಕಾರ ಮಮಕಾರಗ್ರಸ್ತನಾಗಿ ಕೇವಲ ವಿಷಯೋಪಭೋಗಗಳಲ್ಲಿಯೇ ಆಸಕ್ತ ಮನಸ್ಸುಳ್ಳ ಮಾನವನು, **ಜನರಿಗೆ**

= ಅವನ ಅಪೇಕ್ಷೆಗಳನ್ನು ಪೂರೈಸುವ ಜನರಿಗೆ, **ದಾಸನೆನಿಸುವ** = ಕಿಂಕರ ನೆನಿಸುತ್ತಾನೆ. **ನಿಜದಾಸಗೈದಿಹ** = ಆಶಾ ತ್ಯಾಗಮಾಡಿ, ಕೇವಲ ವಿರಾಗಿ ಯಾಗಿರುವ, **ಪುಂಸಗೆ** = ಪುರುಷಶ್ರೇಷ್ಠನಾಗಿರುವವಗೆ, **ಎಲ್ಲರು** = ಇತರ ರೆಲ್ಲರೂ, **ದಾಸರೆನಿಸುವರು** = ದಾಸಾನುದಾಸರಾಗಿರುತ್ತಾರೆ. **ಶ್ರೀಶನ** = ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ, **ಅಂಘ್ರಿಸರೋಜಯುಗಳ** = ಚರಣಾರ ವಿಂದದ್ವಯಗಳನ್ನು, **ನಿರಾಶೆಯಿಂದಲಿ** = ಫಲಾಪೇಕ್ಷರಹಿತನಾಗಿ (ನಿಷ್ಕಾ ಮನ ಬುದ್ಧಿಯಿಂದ), **ಭಜನೆ** = ಧ್ಯಾನೋಪಾಸನಾದಿ ಸತ್ಸಾಧನೆ ಮಾಡಿದರೆ, **ಒಲಿದು** = ಅವನನ್ನು ಅನುಗ್ರಹಿಸಿ (ಅಪರೋಕ್ಷ ದ್ವಾರಾ ಭಕ್ತನಿಗೆ ವಶನಾಗಿ) **ಕರುಣಾಸಮುದ್ರ** = ದಯಾಸಾಗರನಾದ, **ಹರಿ** = ಬಿಂಬರೂಪಿಯಾದ ಶ್ರೀಪರಮಾತ್ಮನು, **ರಮಾಸಹಿತ** = ಲಕ್ಷ್ಮೀಸಮೇತನಾಗಿ, **ತನ್ನನೆ ಕೊಡುವ** = ಭಕ್ತರ ನಿಷ್ಕಾಮನಾಭಕ್ತಿಗೆ ಒಲಿದು ಅವನಿಗೆ ತಾನೇ ವಶನಾಗಿ, ತನ್ನ ಅಪರೋಕ್ಷರೂಪವಾದ ಸಂದರ್ಶನ ಭಾಗ್ಯವನ್ನೇ ಕರುಣಿಸುವನು. ||೨೬||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಮನುಷ್ಯನಾದವ ಆಶಾ ತ್ಯಾಗ ಮಾಡಿದರೆ ಸುಖವಂತನಾಗತಾನೆಂತ ಹೇಳತಾರೆ.

ಪರಮಾತ್ಮನ ವಿಸ್ಮೃತಿಪೂರ್ವಕ ಸಮಸ್ತ ಪದಾರ್ಥಗಳ ಸಂಗ್ರಹ ಮಾಡುವ ವಿಷಯದಲ್ಲಿ ಬುದ್ಧಿ ಇಟ್ಟು, ಅಹಂ ಮಮತಾ ಎಂಬ ಆಶಾಕ್ಕೆ ವಶನಾದ ಪುರುಷ ಸರ್ವರಿಗೂ ದಾಸನಾಗುತ್ತಾನೆ. ದೇವನ, ಸ್ಮೃತಿಪೂರ್ವಕ ಸರ್ವ ಪದಾರ್ಥದಲ್ಲಿ ಇಚ್ಛಾರಹಿತನಾಗಿ, ತಾನು ಆಶಾ ತ್ಯಾಗ ಮಾಡಿರುವ ಪುರುಷಗೆ ಸಮಸ್ತರೂ ನಮ್ರೀಭೂತರಾಗಿ ದಾಸಾನುದಾಸರಾಗಿ ಇರುತ್ತಾರೆ. ಆದ್ದರಿಂದ ಇದರಂತೆ ಲಕ್ಷ್ಮೀಪತಿಯಾದ ನಾರಾಯಣದೇವರ ಪಾದಗಳೆಂಬೋ ಕಮಲದ್ವಯಗಳ, ಫಲಾಪೇಕ್ಷರಹಿತನಾಗಿ ಶ್ರೀಶನ ಪ್ರೀತಿಪೂರ್ವಕ ಧ್ಯಾನೋ ಪಾಸನಾದಿ ಸತ್ಸಾಧನ ಮಾಡಿದರೆ ಹೃದಯಾಂತರ್ಗತನಾದ ಪರಮಾತ್ಮ

ಅಪರೋಕ್ಷದಿಂದ ವಶನಾಗಿ ಬಿಂಬರೂಪಿಯಾದ ಶ್ರೀದೇವರು ಲಕ್ಷ್ಮೀಸಮೇತನಾಗಿ, ತಾನು ವಶನಾಗಿ ಮಹಾ ಅಪರೋಕ್ಷವನ್ನೇ ಕೊಟ್ಟು ಸಂರಕ್ಷಣೆ ಮಾಡುತ್ತಾನೆ. ತನ್ನ ದಾಸರಲ್ಲಿ ಪರಮಾತ್ಮನಿಗೆ ಕರುಣಾವಿಶೇಷವು ಎಂತ ಅರ್ಥ. ||೨೬||

**ಭಾವಪ್ರಕಾಶಿಕೆ**

ಲೋಕದಲ್ಲಿ ಯಾವನೇ ಆಗಲಿ ನಿಸ್ಪೃಹಸ್ಯ ತೃಣಂ ಜಗತ್ ಎಂಬಂತೆ ಯಾವ ಪದಾರ್ಥದಲ್ಲೂ ತನಗೆ ಅಪೇಕ್ಷೆ ಇಲ್ಲದಿದ್ದರೆ ಮಹಾರಾಜನಿಂದಲಾದರೂ ತನಗುವದೇನು? ಆಶಾನಾಮಹಿಲೋಕೇಸ್ಮಿನ್ಕಾಚಿದಾಶ್ಚರ್ಯ ಶೃಂಖಲಾ ॥ ಯಯಾಬ್ಧದಾಃ ಪ್ರಧಾವಂತಿ ಮುಕ್ತಾಸ್ತಿಷ್ಠಂತಿ ಪಂಗುವತ್'' ಆಶೆಯೆಂಬುವದು ಈ ಲೋಕದಲ್ಲಿ ಒಂದು ಆಶ್ಚರ್ಯಕರವಾದ ಬೇಡಿಯು. ಅದೇಕೆಂದರೆ ಸಾಮಾನ್ಯವಾಗಿ ಲೋಕದಲ್ಲಿ ಒಬ್ಬನಿಗೆ ಕಾಲಿಗೆ ಬೇಡಿ ಹಾಕಿದರೆ ಅವನು ಕಾಲಿಲ್ಲದವನಂತೆ ಕೂತುಬಿಡುವನು. ಆ ಬೇಡಿಯನ್ನು ತೆಗೆದ ಕೂಡಲೇ ಸಂತೋಷದಿಂದ ಓಡಿಹೋಗುವನು. ಈ ಆಶಾಬೇಡಿಯು ಅಂತಹುದಲ್ಲ. ಆಶೆಯೆಂಬ ಬೇಡಿಯು ಕಾಲಿಗೆ ಬಿದ್ದ ಕೂಡಲೇ ಆ ದೇಶಕ್ಕೆ ಹೋಗಲಿ, ಈ ದೇಶಕ್ಕೆ ಹೋಗಲಿ ಎಂದು ಓಡುತ್ತಿರುವನು. ಆಶೆಯೆಂಬ ಬೇಡಿಯು ಹೋದರೆ ಕಾಲಿಲ್ಲದವನಂತೆ ಕೂತು ಬಿಡುವನು ಎಂದು ಶ್ಲೋಕಾರ್ಥ. ಇಂತಹ ಆಶೆಗೆ ಒಳಗಾದವನು ಕಂಡವರಿಗೆ ದಾಸನಾಗಿ ಬೇಡಿದರೂ ಆಶೆಪೂರ್ತಿ ಕಾಣದೆ ಕಷ್ಟಪಡುವನು. ಯಾವನಿಗೆ ಆಶೆಯೇ ಇಲ್ಲವೋ, ಆಶೆಯನ್ನು ತನ್ನ ದಾಸನನ್ನಾಗಿ ಮಾಡಿಕೊಂಡಿರುವನೋ, ಅಂದರೆ ಆಶೆಯು ತಾನು ಹೇಳಿದಂತೆ ಕೇಳಬೇಕೇ ಹೊರತು ತಾನು ಆಶೆಗೆ ಒಳಗಾದವನಲ್ಲ, ಆಶೆ ಬಿಟ್ಟವನು ಯಾವನೋ ಅವನಿಗೆ ಈ ಜಗತ್ತಿನಲ್ಲಿ ಯಾವುದರಿಂದಾದರೂ ಏನು ಪ್ರಯೋಜನ? ಅವನಿಗೆ ಜಗತ್ತೆಲ್ಲವೂ ತೃಣಪ್ರಾಯವೇ. ಆದ್ದರಿಂದ ಇಂತಹ ಆಶೆಯನ್ನು ಬಿಟ್ಟು ಫಲವನ್ನು ಅಪೇಕ್ಷಿಸದೆ ಪರಮಾತ್ಮನನ್ನು ಭಜಿಸಿದರೆ ಕರುಣಾಸಮುದ್ರನಾದ ಹರಿಯು ರಮಾ ಸಮೇತನಾಗಿ ತಾನೇ ಪ್ರಸನ್ನನಾಗಿ ತನ್ನನ್ನೇ ಕೊಡುವ. ಪಾಂಡವರಿಗೆ ಕೃಷ್ಣರೂಪದಿಂದ ತಾನೇ ಪ್ರಸನ್ನನಾಗಿ ತಾನೇ ದಾಸ

ನಂತೆ ಕಾದಿರಲಿಲ್ಲವೆ? ಬಲಿಚಕ್ರವರ್ತಿಯ ಮನೆಯಲ್ಲಿ ವಾಮನರೂಪದಿಂದ ಮನೆಬಾಗಿಲು ಕಾಯುತ್ತಿರುವನು. ಹಾಗೆ ನಿಷ್ಕಾಮಭಕ್ತರಿಗೆ ಪ್ರಸನ್ನನಾಗಿ ಇಹಪರಂಗಳಲಿ ಸರ್ವಪ್ರಕಾರದಿಂದಲೂ ಅವರನ್ನು ರಕ್ಷಿಸುವನು. ||೨೬||

**ಭಾವದರ್ಪಣ**

ದಾಸಭಾವಲಕ್ಷಣ ಹೇಳುತ್ತಾರೆ, ಆಶೇತಿ. ||೨೬||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಆಶೆ ಇತಿ॥ ಆಶಾಯಾಃ ದಾಸಾಃ ಯೇ॥ ಇತ್ಯರ್ಥಂ ವಕ್ತಿ|| ತನ್ನನ್ನೇ ಇತಿ॥ ದಾಸ್ಯತ್ಯಾತ್ಮಾನಮಪ್ಯಜಃ ಇತ್ಯುಕ್ತೇಃ ||೨೬||

**ಕನ್ನಡಾರ್ಥ**

ಆಶಾಯಾಃ ಯೇ ದಾಸಾಃ ಎಂಬ ಸುಭಾಷಿತ ಶ್ಲೋಕದ ಅರ್ಥವನ್ನೇ ಇಲ್ಲಿ ನಿರೂಪಿಸಿರುತ್ತಾರೆ. ಭಕ್ತಿಯಿಂದ ತನ್ನಲ್ಲಿ ಮನಸ್ಸನ್ನು ಇತ್ತವರಿಗೆ ಪರಮಾತ್ಮನು ತನ್ನ ಸ್ವರೂಪಭೂತ ವೈಕುಂಠಾದಿ ಲೋಕಗಳನ್ನು ಸಹ ಕೊಡು ವನು ಎಂದು ವಚನವಿರುವುದರಿಂದ "ತನ್ನನ್ನೇ" ಎಂದು ಹೇಳಿರುತ್ತಾರೆ.॥೨೬॥

**ಶ್ರೀಗುರುಹೃದಯಪ್ರಕಾಶಿಕೆ**

ದೇವರು ಪೂರ್ಣಾನಂದಸ್ವರೂಪ ನಿರಪೇಕ್ಷನಾದ್ದರಿಂದ, ಸರ್ವೋ ತ್ತಮನು. ಜೀವರು ಮುಕ್ತಿಯಲ್ಲಿಯೂ ಸಹ ಸ್ವತಂತ್ರವಿಲ್ಲದೆ, ಅವನ ಅಪೇಕ್ಷೆ ಉಳ್ಳವರಾದ್ದರಿಂದ ಭೃತ್ಯರೆಂದು ಸದೃಷ್ಟಾಂತ ತಿಳಿಸುತ್ತಾರೆ, ಆಶೆ ಎಂದು. ಸಂಬಳ ಮೊದಲಾದ್ದರ ಆಶೆಗೆ ಅಧೀನನಾದವನು ಅರಸನಿಗೆ ಆಳು ಆದಂತೆ. ಆಶಾಭಿಮಾನಿದೇವತೆಯನ್ನು, ನಿಜ ಎಂದರೆ ತನ್ನ ಸ್ವಂತ ದಾಸಿಯ ನ್ನಾಗಿ ಮಾಡಿಕೊಂಡಿರುವ ಪರಮಪುರುಷನಾದ ದೇವರಿಗೆ ಎಲ್ಲಾ ಮುಕ್ತಾ ಮುಕ್ತಜೀವರು ಭೃತ್ಯರುಗಳೆನಿಸುವರು. ಆದ್ದರಿಂದಲೇ ಶ್ರೀಶನಾದ ದೇವರ ಪಾದಕಮಲದ್ವಂದ್ವವನ್ನು ನಿರಾಶೆಯಿಂದಲಿ ಭಜಿಸೆ ಎಂದರೆ, ಮೋಕ್ಷವನ್ನೂ

ಸಹ ಸ್ವಸುಖಾರ್ಥ ಬಯಸದೆ ದೇವರ ನಿರುಪಾಧಿಕ ಸೇವೆಯನ್ನೇ ಅಪೇಕ್ಷಿಸುವ ಏಕಾಂತಭಕ್ತಜನಕ್ಕೆ ರಮಾಸಮೇತ ತನ್ನ ಸಾಯುಜ್ಯವನ್ನು ಕೊಡುವನು. ಆದ್ದರಿಂದ ಶ್ರೀಹರಿ ಕರುಣಾಸಮುದ್ರನು. ಗಂಭೀರ ಎಂದರೆ ಅಗಾಧಗುಣವುಳ್ಳವನು ಎಂಬ ಶಾಸ್ತ್ರಾರ್ಥ ವರ್ಣಿಸಿರುತ್ತಾರೆ.

ಆಶಾಯಾಃ ದಾಸಾಃ ಯೇ ತೇ ದಾಸಾಸ್ಸರ್ವಲೋಕಸ್ಯ ।
ಆಶಾದಾಸೀ ಏಷಾಂ ತೇಷಾಂ ದಾಸಾಯತೇ ಲೋಕಃ ॥ ||೨೬||

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಶನ ದಾಸರಾದವರಿಗೆ ಏನೂ ಭಯವಿಲ್ಲ, ತಾಪತ್ರಯ ಪರಿಹಾರವೆಂದು ತಿಳಿಸುತ್ತಾರೆ.

"ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ"–ಎಂಬಂತೆ ಆಶಾಬದ್ಧನಾದವನಿಗೆ ತೃಪ್ತಿಪಡಿಸುವುದಸಾಧ್ಯ. ತನ್ನ ಹಲವಾರು ಪ್ರಾಪಂಚಿಕ ಆಶೆಗಳನ್ನು ಪೂರ್ತಿಸಿಕೊಳ್ಳುವ ಸಲುವಾಗಿ ಮನುಷ್ಯನು ಇನ್ನೊಬ್ಬರ ಆಶ್ರಯದಲ್ಲಿ ಬೀಳುವನು. ಅವರಿಗೆ ದಾಸಾನುದಾಸನೆನಿಸುವನು. ಅದರಿಂದ ದುಃಖಪ್ರಾಪ್ತಿಯೇ ವಿನಾ, ಶಾಶ್ವತಸುಖ ದೊರೆಯುವುದಿಲ್ಲ.

ಆಶಾರಹಿತನಾದವನಿಗೆ ಜಗತ್ತೇ ದಾಸನೆನಿಸುವುದು. ಅವನಿಗೆ ಪ್ರಾಪಂಚಿಕ ಆಶೆಗಳು ಮತ್ತು ವಿಷಯೋಗಭೋಗಗಳು ತೃಣಪ್ರಾಯ. ದೃಷ್ಟಾಂತವಾಗಿ ಜಡಭರತನ ನಿದರ್ಶನ. ಆ ಅವಧೂತಚರ್ಯನಿಗೆ ಯಾವುದರಲ್ಲಿಯೂ ಆಶೆ, ವ್ಯಾಮೋಹಾದಿಗಳೇ ಇಲ್ಲ. ಸ್ಥಿತಪ್ರಜ್ಞನಾಗಿರುತ್ತಿದ್ದನು. ಅಂತಹ ಅವಧೂತರು ದ್ವಂದ್ವಾತೀತರು. ಆಶೆಗೆ ನಾವು ದಾಸರಾಗಬಾರದು. ಆಶೆಯು ನಮಗೆ ದಾಸನಾಗಬೇಕು.

ಯಾರು ಆಶಾಬದ್ಧರೋ ಅವರು ಲೋಕಕ್ಕೆ ದಾಸರಾಗುವರು. ಆಶಾರಹಿತನಿಗೆ ಲೋಕವೇ ದಾಸನಾಗುವುದು.

ಮಹಿಮಾಸಂಪನ್ನನಾದ ಮಾರಮಣನ ಪಾದ ಕಂಜಗಳನ್ನು ಆಶ್ರಯಿಸಿ, ಅವನಿಗೆ ದಾಸನೆನಿಸುವವನು ಪರಮಸುಖಿ. ಇಹಪರಗಳೆರಡರಲ್ಲೂ ಆ ಪರ

ಮಾತ್ಮನು ತನ್ನ ನಿಜದಾಸರಿಗೆ ಸುಖಪ್ರದನಾಗಿರುವನು. ರಮಾಸಹಿತ ತನ್ನನ್ನೇ ಅವನಿಗೆ ಕೊಡುವನು. ಅಂದರೆ ಅಪರೋಕ್ಷರೂಪವಾದ ತನ್ನ ಸಂದರ್ಶನ ಭಾಗ್ಯವನ್ನು ಕರುಣಿಸಿ ಭಕ್ತರ ವಶನಾಗುವನು. ||೨೮||

### ಪದ್ಯ ೨೭

**ಮೂಲ**

**ದ್ಯುನದಿಯಾದ್ಯಂತವನು ಕಾಣದೆ |**
**ಮನುಜ ಏಕತ್ರದಲಿ ತಾ ಮ |**
**ಜ್ಜನವ ಗೈಯೆ ಸಮಸ್ತದೋಷದಿ ಮುಕ್ತನಹ ತೆರದಿ ||**
**ಅನಘನಮಲಾನಂತಾನಂತ ಸು |**
**ಗುಣಗಳೊಳಗೊಂದೆ ಗುಣೋಪಾ |**
**ಸನವಗೈವ ಮಹಾತ್ಮ ಧನ್ಯ ಕೃತಾರ್ಥನೆನಿಸುವನು || ||೨೭||**

**ಅವತರಣಿಕೆ**

ಸಮಸ್ತದೋಷವಿದೂರನೂ, ಶುಭಗುಣಗಣರತ್ನಾಕರನೂ ಆದ ಶ್ರೀಪರಮಾತ್ಮನ ಅನಂತಾನಂತ ಗುಣರೂಪಗಳಲ್ಲಿ, ಒಂದು ಗುಣವನ್ನಾದರೂ ಧ್ಯಾನದ್ವಾರ ಉಪಾಸನಾ ಮಾಡುವವರು ಮುಕ್ತರಾಗುತ್ತಾರೆ. ಅವರ ಬಾಳು ಪರಮ ಸಾರ್ಥಕವೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ದ್ಯುನದಿಯ**= ಸುರನದಿ ಎಂದು ಪ್ರಖ್ಯಾತವಾದ ಗಂಗಾನದಿಯ, **ಆದಿ**= ಮೂಲ, ಅಂದರೆ, ಉತ್ಪತ್ತಿಸ್ಥಾನ, **ಅಂತವನೆ**= ಅದರ ಕೊನೆ, ಅಂದರೆ, ಸಂಗಮಸ್ಥಾನಗಳನ್ನು, **ಕಾಣದೆ**= ಅರಿಯದೆ, **ಮನುಜ**=

ಮನುಷ್ಯನಾದವನು, **ಏಕತ್ರದಲಿ**= ಆ ಗಂಗಾನದಿಯ ಒಂದು ಪ್ರದೇಶದಲ್ಲಿ, **ತಾ ಮಜ್ಜನವಗೈಯೆ**= ತಾನು ವಿಧಿಪೂರ್ವಕ ಸ್ನಾನ ಮಾಡಿದರೆ, **ಸಮಸ್ತ ದೋಷದಿ**= ಸಕಲಪಾಪಗಳಿಂದ, **ಮುಕ್ತನಹ ತೆರದಿ**= ಶ್ರೀಹರಿಯ ಪಾದೋದ್ಭವೆಯಾದ ಗಂಗೆಯ ಪ್ರಭಾವದಿಂದ ಪರಿಹಾರಹೊಂದುವೋಪಾದಿಯಲ್ಲಿ, **ಅನಘನ**= ಸಕಲ ದೋಷವಿದೂರನಾದ, **ಅಮಲ**= ಅತ್ಯಂತ ಶುದ್ಧಗಳಾದ, **ಅನಂತಾನಂತ**= ಅಪರಿಚ್ಛಿನ್ನ ಹಾಗೂ ಪರಿಪೂರ್ಣಗಳಾದ, **ಸುಗುಣಗಳೊಳಗೆ**= ಕಲ್ಯಾಣಗುಣಗಳಲ್ಲಿ **ಒಂದೆ**= ಒಂದೇ ಒಂದಾದ, **ಗುಣೋಪಾಸನೆಗೈವ**= ಗುಣ ರೂಪ ಉಪಾಸನೆ ಮಾಡತಕ್ಕ, **ಮಹಾತ್ಮ**= ಭಕ್ತನಾದ ಮಹಾಪುರುಷನು, **ಧನ್ಯ**= ಪರಮಧನ್ಯನು, **ಕೃತಾರ್ಥನೆನಿಸುವನು**= ಬಾಳಿದ್ದಕ್ಕೆ ಸಾರ್ಥಕ್ಯವನ್ನು ಹೊಂದಿ ಕೃತಕೃತ್ಯನೆಂದನಿಸುವನು.

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ ಗುಣೋಪಾಸನೆ ಮಾಡತಕ್ಕವ ಮುಕ್ತನಾಗುತ್ತಾನೆ ಎಂತ ಹೇಳತಾರೆ.

ಭಾಗೀರಥಿಯ ಉತ್ಪತ್ತಿಸ್ಥಾನವೇನು ಇವುಗಳನ್ನು ತಿಳಿಯದೆ, ಆ ಭಾಗೀರಥೀನದಿಯ ಒಂದು ಪ್ರದೇಶದಲ್ಲಿ ಮನುಷ್ಯನಾದವನು ವಿಧಿಪೂರ್ವಕ ಅತ್ಯಂತ ಅನುಸಂಧಾನದಿಂದ ಸ್ನಾನ ಮಾಡಿದರೆ, ಆ ಗಂಗಾದೇವಿ, ತನ್ನ ಯೋಗ್ಯತಾನುಸಾರವಾಗಿ ಸ್ನಾನಮಾಡುವ ಅಧಿಕಾರಿಯ ಜ್ಞಾನಾನುಸಂಧಾನುಸಾರವಾಗಿ ಪಾಪಗಳ ಪರಿಹಾರ ಮಾಡತಾಳೆ, ಸಮಸ್ತ ಪಾಪಗಳ ಪರಿಹಾರ ಮಾಡುವುದಿಲ್ಲ. ಈ ಭಾಗೀರಥಿಯಂತೆ, ಈ ಭಾಗೀರಥೀನದಿಸದೃಶನಾದವ ದೋಷದೂರನಾದವ ಇಂಥಾ ಶ್ರೀಪರಮಾತ್ಮನ ನಿರ್ದೋಷಗಳಾದ ಅಪರಿಚ್ಛಿನ್ನಗಳಾದ ಭಾಗೀರಥೀನದಿಗತ ಜಲದಂತೆ ವಿಸ್ತಾರವಾದ ಸಮೀಚೀನವಾದ ಗುಣಸಾಂಕೇತವಾದ ಒಂದೇ ಗುಣಸಾಂಕೇತವಾದ ಜಲದೊಳಗೆ ಗುಣೋಪಾಸನರೂಪವಾದ ಸ್ನಾನವನ್ನ ಮಾಡತಕ್ಕ ಮಹಾಪುರುಷ, ಜನನ ಮರಣಕ್ಕೆ

ಕಾರಣವಾದ ಸರ್ವದೋಷದಿಂದ ದೂರನಾಗಿ, ಭಗವದಪರೋಕ್ಷ ಹೊಂದಿ ಲಿಂಗಭಂಗ ಐದಿ ತಥಾ ಜೀವನ್ಮುಕ್ತನಾಗಿ ಮೋಕ್ಷವನ್ನು ಐದುವನು. ತಥಾ ಮಹರಾದಿಲೋಕಗಳಲ್ಲಿ ವಾಸವಾಗಿರುತ್ತಾನೆ. ಈ ಪ್ರಕಾರ ಗುಣೋಪಾಸನ ಮಾಡತಕ್ಕವನು ಧನ್ಯ. ಮಾಡಲ್ಪಟ್ಟ ಸುಗುಣೋಪಾಸನಕರ್ಮದಿಂದ ಪ್ರಯೋಜನಕರವಾದ ಭಗವಂತನ ಪಾದಾರವಿಂದ ಹೊಂದಕ್ಕವನೆಂದು ದೇವತೆಗಳಿಂದ ಕರೆಸಲ್ಪಡುತ್ತಾನೆಂದು ತಾತ್ಪರ್ಯ.

ಏಕಗುಣೋಪಾಸಕ ತೃಣಜೀವ. ಚತುರ್ಗುಣೋಪಾಸಕರು ಮನು ಜೋತ್ತಮರು. ಅನಂತಗುಣೋಪಾಸಕ ಬ್ರಹ್ಮ. ಅನಂತಗುಣ ಉಪಾಸನ ಮಾಡಿದವರಿಗೆ ಸದ್ಗತಿ ಎಂತಲೂ, ಏಕಗುಣೋಪಾಸಕಗೆ ಸದ್ಗತಿ ಇಲ್ಲವೆಂತಲೂ ತಾತ್ಪರ್ಯವಲ್ಲ. ಅವರವರ ಯೋಗ್ಯತಾನುಸಾರ ಗುಣೋಪಾಸನ ಅಧಿಕಾಧಿಕ ಮಾಡಿ ಸದ್ಗತಿಯನ್ನು ಹೊಂದುತ್ತಾರೆ. ತೃಣಜೀವ ತನ್ನ ಯೋಗ್ಯತಾನುಸಾರ ಏಕಗುಣೋಪಾಸನ ಮಾಡಿ ಸದ್ಗತಿ ಹೊಂದುತ್ತಾನೆಂದು ತಾತ್ಪರ್ಯ. ಕಲಿಗಿಂತಲೂ, ನಿತ್ಯ ಸಂಸಾರಿಗಳೊಳಗೆ ಪುರಂಜನಗಿಂತಲೂ ಏಕಗುಣೋಪಾಸಕರಾದಮುಕ್ತಿಯೋಗ್ಯರಲ್ಲಿ ಅತ್ಯಂತ ಕನಿಷ್ಠನಾದ ತೃಣಜೀವ ಶ್ರೇಷ್ಠ ಧನ್ಯ ಕೃತಾರ್ಥ ಎನಿಸೋವನಾಗುತ್ತಾನೆ. ಇವನು ಮುಕ್ತಿಯೋಗ್ಯನಾದ ಅಧಮ ಜೀವ, ಕಲಿ ಪುರಂಜನನಕ್ಕಿಂತಲೂ ಉತ್ತಮ ಎಂತ ತಾತ್ಪರ್ಯ. ||೨೭||

**ಭಾವಪ್ರಕಾಶಿಕೆ**

ಗಂಗೆಯ ಮೊದಲು ಕೊನೆಯನ್ನು ನೋಡಲಪೇಕ್ಷಿಸದೆ ಭಕ್ತಿಯಿಂದ ಯಾವುದೋ ಒಂದು ಸ್ಥಳದಲ್ಲಿ ಸ್ನಾನ ಮಾಡುವವರು ಸಕಲ ಪಾಪಗಳಿಂದ ಮುಕ್ತರಾಗುವರು. ಗಂಗೆಯ ಮಹಾತ್ಮೆಜ್ಞಾನ ಒಂದಿದ್ದರೆ ಸಾಕು. ಅದರ ಮೊದಲು ಕೊನೆಯನ್ನು ತಿಳಿಯಬೇಕಾದುದು ಅನಾವಶ್ಯಕ. ಅದರಂತೆ ನಿರ್ದೋಷಿಯಾದ ಪರಮಾತ್ಮನ ಅನಂತಾನಂತ ಗುಣಗಳ ಪೈಕಿ ಒಂದು ಗುಣದ ಸ್ವಲ್ಪ ಭಾಗವನ್ನಾದರೂ, ತಿಳಿದು ಭಕ್ತಿಯಿಂದ ಉಪಾಸನೆಯನ್ನು ಮಾಡಿದರೆ ಅವನೇ ಮಹಾತ್ಮನು, ಕೃತಾರ್ಥನು, ಧನ್ಯನೆಂದು ಲೋಕದಲ್ಲಿ ಪ್ರಖ್ಯಾತನಾಗುವನು. ||೨೭||

**ಭಾವದರ್ಪಣ**

ಶ್ರೀಹರಿಯ ಒಂದು ಗುಣ ಉಪಾಸನ ಮಾಡಿದಾಗ್ಯೂ ಧನ್ಯನಾಗುವನೆಂದು ಹೇಳುತ್ತಾರೆ, ದ್ಯುನದೀತಿ.

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ದ್ಯುನದಿ ಇತಿ || ಗೈಯೆ= ಮಾಡಲು ||೨೭||

**ಕನ್ನಡಾರ್ಥ**

ಭಗವಂತನ ಅನಂತಾಗುಣಗಳಲ್ಲಿ ಒಂದು ಗುಣವನ್ನು ಅದನ್ನು ತನ್ನ ಯೋಗ್ಯತೆಗೆ ಅನುಸಾರವಾಗಿ ಉಪಾಸಿಸಿದರೂ ಆ ಭಕ್ತನು ಕೃತಾರ್ಥನಾಗುವನೆಂಬಲ್ಲಿ ಭಾಗೀರಥೀಸ್ನಾನದ ದೃಷ್ಟಾಂತವನ್ನು ಹೇಳುತ್ತಾರೆ. ದ್ಯುನದಿ ಎಂಬ ಪದ್ಯದಿಂದ. ||೨೭||

**ಶ್ರೀಗುರುಹೃದಯಪ್ರಕಾಶಿಕೆ**

ದೇವರ ಜ್ಞಾನಾನಂದಾದ್ಯನಂತಗುಣ ತಿಳಿದು ಉಪಾಸನೆ ಮಾಡುವುದು ಅಶಕ್ಯವಾದರೂ, ಸ್ವಯೋಗ್ಯವಾದ ಗುಣಗಳನ್ನು ಉಪಸಂಹಾರ ಮಾಡಿ ಅಥವಾ ಆತ್ಮಾ ಎಂದರೆ ಸ್ವಾಮಿ ಎಂಬ ಒಂದು ಗುಣದೊಳಗೆ ಅನಂತಗುಣಗಳಿರುವ ಕಾರಣ ತದುಪಾಸನೆಯಿಂದ ಮುಕ್ತಿ ದೊರಕುವುದೆಂದು ಸದೃಷ್ಟಾಂತ ತಿಳಿಸುತ್ತಾರೆ, ದ್ಯುನದಿ ಎಂದು. ದ್ಯುನದಿ ಎಂಬ ಗಂಗೆಯು ಆದ್ಯಂತವನ್ನು ಕಾಣದಿದ್ದರೂ ಮನುಷ್ಯನು ಒಂದು ಪ್ರದೇಶದಲ್ಲಿ ಸ್ನಾನಮಾಡಿದಾಗ್ಯೂ ಸಮಸ್ತ ಪಾಪದಿಂದ ಮುಕ್ತನಾಗುವಂತೆ, ಅನಘನೆಂಬ ನಿರ್ದೋಷನಾದ ದೇವರ (ಸಚ್ಚಿದಾನಂದಾತ್ಮ) ಅಮಲವೆಂಬ ನಿರ್ದೋಷ ಆನಂದಾದ್ಯನಂತಾನಂತ ಸುಗುಣಗಳೊಳಗೆ ಒಂದೇ ಗುಣವಾದ (ಆತ್ಮಾ) ಸ್ವಾಮಿ ಎಂಬ ಗುಣವನ್ನ ತಿಳಿದು ಉಪಾಸನೆ ಮಾಡಿದವನು ಧನ್ಯ ಎಂದರೆ ಸ್ವಾನಂದಪೂರ್ಣನಾಗಿ, ಕೃತಾರ್ಥ ಎಂದರೆ ಪ್ರಾರಬ್ಧಾದಿ ಕರ್ಮಬಂಧಮುಕ್ತನೆನಿಸುವನು.

**ವಿಶೇಷಾರ್ಥ**

ಮನುಜೋತ್ತಮರು ಚತುರ್ಗುಣೋಪಾಸಕರು, ತೃಣಜೀವರು ಏಕ ಗುಣೋಪಾಸಕರು, ಬ್ರಹ್ಮ ಅನಂತಗುಣೋಪಾಸಕ. ||೨೭||

## ಸರ್ವವ್ಯಾಖ್ಯಾನಸಾರಸಂಗ್ರಹ

ಅನಂತಾನಂತಕೋಟಿ ಗುಣಗಣಪೂರ್ಣನಾದ ಶ್ರೀಪರಮಾತ್ಮನ ಅಪಾರ ಗುಣಗಳ ಪೈಕಿ, ಯಾವುದಾದರೊಂದು ಗುಣವನ್ನು ತನ್ನ ಯೋಗ್ಯತಾನುಸಾರ ಉಪಾಸನ ಮಾಡಶಕ್ಕವನು ಸಮಸ್ತ ಪಾಪಗಳಿಂದ ದೂರನಾಗುವನು ಮತ್ತು ಮುಕ್ತಿಭಾಜನನಾಗುವನು ಎಂದು ತಿಳಿಸುತ್ತಾರೆ.

ದ್ಯುನದಿ ಎಂದರೆ ಗಂಗಾನದಿಯು. ವಾಮನನಾಗಿ ಬಂದ ಶ್ರೀಪರಮಾತ್ಮ ಬಲಿಚಕ್ರವರ್ತಿಯಿಂದ ಮೂರು ಪಾದಗಳಷ್ಟು ಭೂಮಿಯನ್ನು ಬೇಡಿದ. ತ್ರಿವಿಕ್ರಮನಾಗಿ ಬೆಳೆದ. ಆ ತ್ರಿವಿಕ್ರಮನ ಪಾದಾಂಗುಷ್ಠದ ನಖಾಗ್ರವು ಬ್ರಹ್ಮಾಂಡ ಖರ್ಪರವನ್ನು ಸೀಳಿತು. ಆ ದ್ವಾರದಿಂದ ಬ್ರಹ್ಮಾಂಡದ ಒಳಗೆ ಇಳಿದ ಬಾಹ್ಯೋದಕವೇ ಪಾವನ ಗಂಗೆಯು. ಸ್ವರ್ಗಲೋಕದಲ್ಲಿ ಹರಿದ ಆ ನದಿಗೆ ದ್ಯುನದಿ ಎಂದು ಹೆಸರಾಯಿತು.

ಮಾನವನೋರ್ವನು ಅಪಾರವಾದ ಗಂಗಾನದಿಯ ಆದಿ, ಅಂದರೆ, ಉತ್ಪತ್ತಿಸ್ಥಾನ ಮತ್ತು ಅಂತ, ಅಂದರೆ ಅದು ಕೊನೆಯಲ್ಲಿ ಸೇರುವ ಸಂಗಮಸ್ಥಾನ. ಇವುಗಳನ್ನು ಅರಿಯದೆ ಗಂಗಾನದಿಯ ಯಾವುದಾದರೊಂದು ಪ್ರದೇಶದಲ್ಲಿ ವಿಧ್ಯುಕ್ತವಾಗಿ ಸ್ನಾನಮಾಡಿದರೆ ಅದರಿಂದ ಸಮಸ್ತ ಪಾಪಗಳಿಂದ ಮುಕ್ತನಾಗಿ ಪವಿತ್ರನಾಗುವನು. ಅದರಂತೆಯೇ ಶ್ರೀಪರಮಾತ್ಮನ ಅನಂತಾನಂತಕಲ್ಯಾಣಗುಣಗಣಗಳು ವಿಸ್ತಾರವಾದ ಗಂಗಾನದಿಯಂತೆ ಶ್ರೀಪರಮಾತ್ಮನ ಅನಂತಾನಂತಕಲ್ಯಾಣಗುಣಗಳ ಪೈಕಿ, ಯಾವುದಾದರೂ ಒಂದು ಗುಣವನ್ನು ಗುರೂಪದೇಶದ್ವಾರಾ ತಿಳಿದು, ತನ್ನ ಯೋಗ್ಯತಾನುಸಾರ ಅನುಸಂಧಾನಪೂರ್ವಕವಾಗಿ ಉಪಾಸನೆ ಮಾಡುವವನನ್ನು ಶ್ರೀಹರಿಯು ಸಮಸ್ತ ಪಾಪಗಳಿಂದ ಮುಕ್ತನನಾಗಿ ಮಾಡುವನು. ಒಂದು ಗುಣೋಪಾಸನೆ ಗಂಗಾನದಿಯ ಏಕತ್ರಪ್ರದೇಶದಲ್ಲಿ ಮಜ್ಜನಮಾಡುವನಂತೆ.

ಶ್ರೀಪರಮಾತ್ಮನು ಸಕಲ ಪಾಪಗಳಿಂದ ದೂರನು. ಶ್ರೀಹರಿಯು ಅಮಲನೂ, ಅನಘನೂ ಆದ್ದರಿಂದ, ತನ್ನ ಗುಣೋಪಾಸಕರ ಸಮಸ್ತ ಪಾಪಗಳನ್ನು ಕ್ಷಾಳನಗೈದು, ಪಾವನಗೊಳಿಸುವನು. ಅಂತಹವರು ಶ್ರೀಹರಿಯ ಗುಣೋಪಾಸನೆಯಿಂದ ತಮ್ಮ ಬಾಳಿನ ಸಾರ್ಥಕ್ಯವನ್ನು ಪಡೆಯುವರು.॥೨೭॥

## ಪದ್ಯ ೨೮

### ಮೂಲ

ವಾಸುದೇವನು ಕರೆಸುವನು ಕಾ ।
ರ್ಪಾಸನಾಮದಿ ಸಂಕರುಷಣನು ।
ವಾಸವಾಗಿಹ ತೂಲದೊಳು ತಂತುಗನು ಪ್ರದ್ಯುಮ್ನ ॥
ವಾಸರೂಪನಿರುದ್ಧದೇವನು ।
ಭೂಷಣನು ತಾನಾಗಿ ತೋರ್ಪ ಪ- ।
ರೇಶ ನಾರಾಯಣನು ಸರ್ವದ ಮಾನ್ಯ ಮಾನದನು॥ ॥೨೮॥

### ಅವತರಣಿಕೆ -

ಜಗತ್ತಿನಲ್ಲಿ ಮರ್ಯಾದೆ ಕೊಡುವುದು, ಹೊಂದುವುದು ಇತ್ಯಾದಿ ಕ್ರಿಯೆಗಳನ್ನು ಶ್ರೀಪರಮಾತ್ಮನು ವಾಸುದೇವಾದಿ ಪಂಚರೂಪಗಳಿಂದ ತಾನೇ ಮಾಡಿ ಮಾಡಿಸುವನೆಂದು ವಸ್ತ್ರದ ದೃಷ್ಟಾಂತದಿಂದ ಹೇಳುತ್ತಾರೆ.

### ಪ್ರತಿಪದಾರ್ಥ

**ವಾಸುದೇವನು**= ಶ್ರೀವಾಸುದೇವನಾಮಕನಾದ ಶ್ರೀಪರಮಾತ್ಮನು, **ಕಾರ್ಪಾಸನಾಮದಿ**= ಬೀಜಸಹಿತವಾದ ಹತ್ತಿಯ ಹೆಸರಿನಿಂದ, **ಕರೆಸುವನು**= ಹತ್ತಿಯ ನಾಮಕನಾಗಿದ್ದಾನೆ. ಅಂದರೆ ವಸ್ತ್ರಗಳ ನಿರ್ಮಾಣ ಕಾರ್ಯದಲ್ಲಿ ಮೂಲ ದ್ರವ್ಯವಸ್ತುವಾದ ಹತ್ತಿಯಲ್ಲಿ ವಾಸುದೇವನಿರುವನು. **ಸಂಕರುಷಣನು**= ಸಂಕರ್ಷಣರೂಪೀ ಶ್ರೀಪರಮಾತ್ಮನು, **ತೂಲದೊಳು** = ಬೀಜವನ್ನು ತೆಗೆದು ಶುದ್ಧ ಮಾಡಿದ ಹತ್ತಿಯಲ್ಲಿ (ಕಳದ ಹತ್ತಿ), **ವಾಸವಾಗಿಹ**= ಸ್ಥಿತನಾಗಿದ್ದಾನೆ. **ಪ್ರದ್ಯುಮ್ನ**= ಪ್ರದ್ಯುಮ್ನನಾಮಕನು,

**ತಂತುಗನು**= ದಾರಗಳಲ್ಲಿರುತ್ತಾನೆ. **ಅನಿರುದ್ಧದೇವನು**= ಅನುರುದ್ಧಾಖ್ಯ ಶ್ರೀಪರಮಾತ್ಮನು, **ವಾಸರೂಪನು**= ದಾರಗಳಿಂದ ನೇಯಿದ ವಸ್ತ್ರದಲ್ಲಿ ವಾಸನಾಮದಿಂದ (ವಾಸ–ಬಟ್ಟೆ) ಇದ್ದಾನೆ. **ಪರೇಶ**= ಪರನಾಮಕಳಾದ ಶ್ರೀಲಕ್ಷ್ಮೀದೇವಿಯರಿಗೆ ಅಧಿಪತಿಯೂ ನಿಯಾಮಕನೂ ಆದ, **ನಾರಾಯಣನು**= ನಾರಾಯಣನಾಮಕ ಶ್ರೀಪರಮಾತ್ಮನು, **ಭೂಷಣನು**= ವಸ್ತ್ರಧಾರಣೆಯಿಂದ ಈ ದೇಹಕ್ಕೆ ಅಲಂಕಾರಪ್ರಾಯನಾಗಿ,**ತಾನಾಗಿ ತೋರ್ಪ** = ಸ್ವಯಂ ಭೂಷಣ ಶಬ್ದವಾಚ್ಯನಾಗಿ ಗೋಚರಿಸುವನು. **ಮಾನ್ಯ**= ವಸ್ತ್ರಗತ ಗೌರವ ಅಥವಾ ಮರ್ಯಾದೆ, **ಮಾನದನು**= ಆ ವಸ್ತ್ರಧಾರಿಯಾದ ಮಾನವನಿಗೆ ಗೌರವದಾಯಕನೂ ಆಗಿದ್ದು, **ಸರ್ವದ**= ಯಾವಾಗಲೂ ಅನಿರುದ್ಧಾದಿ ಪಂಚರೂಪಗಳಿಂದ ವಿರಾಜಿಸುತ್ತಿದ್ದಾನೆ. ಸಮಾಜದಲ್ಲಿ ಗೌರವ ತರುವ ವಸ್ತ್ರಧಾರಣ ಸಮಯದಲ್ಲಿ ಪೂರ್ವೋಕ್ತ ಪಂಚರೂಪಗಳನ್ನು ಧ್ಯಾನಿಸಬೇಕೆಂದು ತಾತ್ಪರ್ಯ. ||೨೮||

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಮನುಷ್ಯನಾದವನು ಮಾನ ಮಾಡಿಸಿಕೊಳ್ಳುವುದು, ಮಾನ ಮಾಡುವುದು ಯಾವದರಿಂದ ಅಂದರೆ, ವಸ್ತ್ರದೃಷ್ಟಾಂತದಿಂದ ಹೇಳಿ,ವಸ್ತ್ರಧಾರಣಾನುಸಂಧಾನಕ್ರಮ ಹೇಳುತ್ತಾರೆ.

ಶ್ರೀವಾಸುದೇವರೂಪನಾದ ಪರಮಾತ್ಮನು ಬೀಜಸಹಿತವಾದ ಜಡೆಹತ್ತಿ ನಾಮದಿಂದ ಪ್ರಥಮತಃ ಜಡೆಹತ್ತಿ ಎಂತ ಕರಸತಾನೆ. ಅನಂತರ ಸಂಕರ್ಷಣ ರೂಪೀ ಪರಮಾತ್ಮನು, ಬೀಜದಿಂದ ರಹಿತವಾಗಿಮಾಡಿದರೆ ಅದು ಕಳದ ಹತ್ತಿ ಎಂತ ಎನತಕ್ಕ ಶುದ್ಧವಾದ ಬರೀ ಹತ್ತಿಯಲ್ಲಿ ಶುದ್ಧವಾದ ಸಮೂಹ ವಿಶಿಷ್ಟವಾಗಿ ಹತ್ತಿ ಎಂತ ಇರುವ ಮೂಟೆಯಲ್ಲಿ ಇರತಾನೆ. ಇದರಿಂದ ನಿರ್ಮಿತವಾದ ದಾರಗಳಲ್ಲಿ ಪ್ರದ್ಯುಮ್ನನಾಮಕ ಪರಮಾತ್ಮ ವಾಸವಾಗಿರುತ್ತಾನೆ. ಈ ದಾರಗಳಿಂದ ನಿರ್ಮಿತವಾದ ವಸ್ತ್ರಗಳಲ್ಲಿ ವಾಸನಾಮದಿಂದ ಅನಿರುದ್ಧದೇವನು ಇದ್ದಾನೆ. ಪರಮ ಉತ್ತಮರಾದ ಲಕ್ಷ್ಮೀದೇವಿಯರಿಗೆ ಸ್ವಾಮಿ

ಯೊದ ನಾರಾಯಣದೇವರು, ಈ ವಸ್ತ್ರ ಜನರು ಧರಿಸೋಣದರಿಂದ ದೇಹಕ್ಕೆ ಅಲಂಕಾರವಾಗಿ ಇರುತ್ತದೆ, ಇಂಥಾ ಅಲಂಕಾರಸಾಂಕೇತವಾದ ಭೂಷಣದಲ್ಲಿ ಭೂಷಣಶಬ್ದವಾಚ್ಯನು ತಾನೇ ಆಗಿ ಭೂಷಣವೈಚಿತ್ರ್ಯಗಳ ಪ್ರಾಣಿಗಳ ನೇತ್ರಗಳಿಗೆ ತೋರಿಸುತ್ತಿದ್ದಾನೆ. ಇದೇ ನಾರಾಯಣದೇವರೇ ವಿಚಿತ್ರ ವಸ್ತ್ರಗಳ ಧರಿಸಿದವನ ಆಯಾ ವಸ್ತ್ರಗತ ಗೌರವದಿಂದ ಮಾನಮಾಡುವುದಕ್ಕೆ ಅಧಿಕಾರಿ ಎಂತ ಅನ್ಯರ ಮನಸ್ಸಿನಲ್ಲಿ ಪ್ರೇರಿಸೋವನಾಗಿ, ಸ್ವಭಾವ ಅಲ್ಪವಾಗಿದ್ದು ವಸ್ತ್ರ ವಿಶೇಷಗಳ ದ್ವಾರಾ ಯಾವನೋ ದೊಡ್ಡ ಮನುಷ್ಯನೆಂದು ಜನರಿಗೆ ಪ್ರೇರಿಸಿ ವಿಶೇಷಾಕಾರದಿಂದ ಬಹುಮಾನ ತಂದುಕೊಟ್ಟು, ಮಾನ್ಯ ಮಾನದ ನಾಮಗಳಿಂದ ಕರಸುವನಾಗತಾನೆ. ಈ ಪೂರ್ವೋಕ್ತಪ್ರಕಾರರೂಪಗಳಿಂದ ಪಟದಲ್ಲಿ ಇರೋವನಾಗಿದ್ದಾನೆ. ಈ ಪ್ರಕಾರ ವಸ್ತ್ರಗಳಲ್ಲಿ ತಿಳದು ದೇಹಾಂತರ್ಗತ ತದಾಕಾರ ಬಿಂಬನ್ನ, ಪಟಾಂತರ್ಗತ ತದಾಕಾರ ಬಿಂಬನ್ನ ಐಕ್ಯಚಿಂತನ ಮಾಡಿ, ವಸ್ತ್ರಧಾರಣ ಮಾಡಿ, ದೇಹಾಂತರ್ಗತ ಬಿಂಬಗೆ ವಸ್ತ್ರಗಳ ಸಮರ್ಪಿಸಬೇಕಂತ ತಾತ್ಪರ್ಯ. ಸದಾ ಸರ್ವಕಾಲದಲ್ಲೂ ವಸ್ತ್ರದಲ್ಲಿ ಅನಿರುದ್ಧಾದಿ ರೂಪಗಳನ್ನ ಚಿಂತಿಸಿ, ಪರಮಾತ್ಮ ಆವಾಸನಾಗಿದ್ದಾನೆಂದು ತಿಳದು ಅನುಸಂಧಾನ ಮಾಡಬೇಕು.

## ವಿಶೇಷಾರ್ಥ

ಪಕ್ವಯೋಗಿಗಳಾಗಿ ವಸ್ತ್ರದಿಂದ ಹೀನರಾದ ತನ್ನ ಭಕ್ತರನ್ನ ಪರಮಾತ್ಮ ತಾನೇ ವಸ್ತ್ರರೂಪವಾಗಿ ಅವರನ್ನು ಸುತ್ತಿಕೊಂಡಿರುತ್ತಾನೆಂದು ತಾತ್ಪರ್ಯ. ||೨೮||

## ಭಾವಪ್ರಕಾಶಿಕೆ

ವಾಸುದೇವನು ಹತ್ತಿ ಎಂಬ ಹೆಸರಿನಿಂದ ಹತ್ತಿಯಲ್ಲಿರುವನು. ಸಂಕರ್ಷಣನು ಬೀಜ ಬಿಡಿಸಿದ ಹತ್ತಿಯಲ್ಲಿ ತನ್ನಾಮದಿಂದ ಇರುವನು. ಪ್ರದ್ಯುಮ್ನನು ದಾರಗಳಲ್ಲಿ ದಾರನಾಮಕನಾಗಿ ಇರುವನು. ಅನಿರುದ್ಧನು ವಸ್ತ್ರರೂಪದಿಂದ ವಸ್ತ್ರನಾಮಕನಾಗಿ ವಸ್ತ್ರದಲ್ಲಿರುವನು. ಭೂಷಣಗಳಲ್ಲಿ ಮುಖ್ಯವಾದುದು ವಸ್ತ್ರವೆಂದು ಪ್ರಸಿದ್ಧಿಯಾಗಿರುವುದು. ಅಂತಹ ಭೂಷಣ

ಸ್ಥಾನೀಯನು ಪರೇಶನಾದ ಶ್ರೀಮನ್ನಾರಾಯಣನು. ಹೀಗೆ ಅನುಸಂಧಾನ ಪೂರ್ವಕವಾಗಿ ವಸ್ತ್ರಗಳನ್ನು ಧರಿಸಿದರೆ ಅವನು ಕೃತಾರ್ಥನಾಗುವನು. ವಸ್ತ್ರವನ್ನು ಧರಿಸುವವನಲ್ಲಿದ್ದು ಮಾನ್ಯನಾಗುವನು. ಅದೇ ನಾರಾಯಣನೇ ನೋಡುವವರಲ್ಲಿದ್ದು ಮಾನವನ್ನು ಕೊಡುವನು. ||೨೮||

**ಭಾವದರ್ಪಣ**

ನಿರಂತರ ವಸ್ತ್ರಧಾರಣ ಮಾಡತಕ್ಕ ಪುರುಷರು ಹರಿಚಿಂತನ ಮಾಡತಕ್ಕ ಕ್ರಮ ಹೇಳುತ್ತಾರೆ. ವಾಸುದೇವೇತಿ. ||೨೮||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ವಾಸುದೇವನು ಇತಿ || ಕಾರ್ಪಾಸ= ಹತ್ತಿ || ತೂಲ=ಸಮೀಕೃತ ಹತ್ತಿ|| ವಾಸ=ವಸ್ತ್ರ|| ಆಚ್ಛಾದನಾತ್ ವಸ್ತ್ರನಾಮಾ ಇತಿ ವಿಷ್ಣುರಹಸ್ಯೇ || ನಾರಾಯಣಸ್ಯ ವಸ್ತ್ರಾತ್ಮಾ ಚತುರೂಪೋ ಜನಾರ್ದನಃ || ಇತಿ ಚ ||೨೮||

**ಕನ್ನಡಾರ್ಥ**

ವಸ್ತ್ರಗಳಲ್ಲಿ ಇರುವ ಭಗವದ್ರೂಪಗಳನ್ನು ತಿಳಿಸುತ್ತಾರೆ, ವಾಸುದೇವನು ಎಂಬ ಪದ್ಯದಿಂದ.

ಕಾರ್ಪಾಸ=ಕಸತೆಗೆಯದ ಹತ್ತಿ, ತೂಲ=ಕಾಳಕಸವನ್ನು ಕಳೆದು ಸ್ವಚ್ಛವಾಗಿ ಹಿಂಜಿಸಿದ ಹತ್ತಿ. ವಾಸ=ಅರಿವೆ. ವಿಷ್ಣುರಹಸ್ಯದಲ್ಲಿ ಶರೀರವನ್ನು ಆಚ್ಛಾದಿಸು(ಹೊದಿಸು)ವದರಿಂದ ವಸ್ತ್ರವೆಂದು ಕರೆಯುತ್ತಾರೆ. ನಾರಾಯಣರೂಪಕ್ಕೆ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ರೂಪಗಳಿಂದ ಹರಿಯೇ ವಸ್ತ್ರರೂಪನಾಗಿರುತ್ತಾನೆ. ಎಂದು ಉಕ್ತವಾಗಿರುತ್ತದೆ. ||೨೮||

**ಶ್ರೀಗುರುಹೃದಯಪ್ರಕಾಶಿಕೆ**

ಭೋಗಶಕ್ತಿ ಜೀವಗೆ ಪರಮಾತ್ಮಾಧೀನವೆಂದು ಮೇಲೆ ಹೇಳಿದ ವಿಷಯವನ್ನೇ ವಿವರಿಸುತ್ತಾ, ವಸ್ತ್ರಧಾರಣಶಕ್ತಿ ದೇವರ ಅಧೀನವಾದ್ದರಿಂದ, ಚತು

ಮೂರ್ತಿಯಾದ ದೇವರೆ ವಸ್ತ್ರದಲ್ಲಿದ್ದು ಜನರಿಗೆ ಶೀತಾದಿ ದುಃಖ ಪರಿಹರಿಸು ವನೆಂದು ಸ್ಮರಣೋಪಾಸನೆ ಎರಡು ಪದ್ಯಗಳಿಂದ ತಿಳಿಸುತ್ತಾರೆ, ವಾಸುದೇವ ಎಂದು. ಕಾರ್ಪಾಸವೆಂಬ ಹತ್ತಿಯಲ್ಲಿದ್ದು ವಾಸುದೇವರೂಪನು ಕಾರ್ಪಾಸ ನಾಮದಿಂದ ಕರೆಸುವನು. ತೂಲವೆಂಬ ಬೀಜ ತೆಗೆದ (ಯಕ್ಕಿದ ಹತ್ತಿಯಲ್ಲಿ) ಸಂಕರ್ಷಣರೂಪನು ವಾಸವಾಗಿರುವನು. ತಂತುಗ ಎಂದರೆ ನೂಲಿನಲ್ಲಿರು ವವನು ಪ್ರದ್ಯುಮ್ನರೂಪನು. ವಸ್ತ್ರದಲ್ಲಿ ತದ್ರೂಪ ತನ್ನಾಮಕ ಅನಿರುದ್ಧ ರೂಪನು. ದೇಹದಲ್ಲಿರುವ ಪರೇಶನೆಂಬ ನಾರಾಯಣನ ರೂಪಕ್ಕೆ ಮಾನವನ್ನು ಕೊಡುತ್ತಾ, ತನಗೆ ತಾನೇ ಭೂಷಣನಾಗಿ, ಮಾನ್ಯ ಎಂದರೆ ಪೂಜ್ಯನಾದ ದೇವರು ತೋರ್ಪ ಎಂದರೆ ಹೀಗೆ ತನಗೆ ತಾನೇ ಪೂಜ್ಯ ಪೂಜಕನಾಗಿ ಕಾಣಿಸು ವನು. ॥೨೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ನರರಿಗೆ ಇಂತಹ ಗೌರವಗಳನ್ನು ಕೊಡುವ ಮಾನ್ಯದನಾದ ಭೂಷಣ ಶಬ್ದವಾಚ್ಯನಾದ ಶ್ರೀಪರಮಾತ್ಮನ ಮಹಿಮೆಯನ್ನು ವಸ್ತ್ರದ ದೃಷ್ಟಾಂತದಿಂದ ತಿಳಿಸುತ್ತಾರೆ.

ವಸ್ತ್ರದ ನಿರ್ಮಾಣಕ್ಕೆ ಮೂಲವಸ್ತುವು ಹತ್ತಿಯು. ಶುದ್ಧಪಡಿಸದೇ ಇರುವ ಹತ್ತಿಗೆ ಕಾರ್ಪಾಸ ಎಂದು ಹೆಸರು.

ವಸ್ತ್ರಕ್ಕೆ ಕಾರಣವಾದ ಕಾರ್ಪಾಸದಲ್ಲಿ ಮಾಯಾಪತಿ ಶ್ರೀವಾಸುದೇವ ನಾಮಕ ಪರಮಾತ್ಮನು ಕಾರ್ಪಾಸಶಬ್ದವಾಚ್ಯನಾಗಿ ತನ್ನಾಮಕನಾಗಿ ಇದ್ದಾನೆ.

ಅಶುದ್ಧ ಹತ್ತಿಯಲ್ಲಿರುವ ಬೀಜಗಳನ್ನು ತೆಗೆದು, ಶುದ್ಧೀಕರಣಮಾಡಿದ ಹತ್ತಿಗೆ ತೂಲ ಎಂತ ನಾಮ. ಇಂತಹ ತೂಲದಲ್ಲಿ (ಕಳದ ಹತ್ತಿ) ಜಯಾ ರಮಣ ಸಂಕರ್ಷಣನಾಮಕನಿದ್ದು, ತೂಲಶಬ್ದವಾಚ್ಯನಾಗಿದ್ದಾನೆ.

ತೂಲದಿಂದ ನಯವಾದ ದಾರಗಳನ್ನು (ತಂತು) ತೆಗೆಯುವರು. ಕೃತಿ ಪತಿ ಪ್ರದ್ಯುಮ್ನನು ಆ ದಾರಗಳಲ್ಲಿ ತಂತುಗನಾಗಿದ್ದಾನೆ.

ದಾರಗಳಿಂದ ಓತಪ್ರೋತವಾಗಿ ನೇಯಿದ ವಸ್ತ್ರದಲ್ಲಿ ಶಾಂತೀರಮಣ ಅನಿರುದ್ಧನು ಬಟ್ಟೆ ಎಂಬ ಅಭಿಧಾನದಿಂದ ಇದ್ದಾನೆ.

ಅಂತಹ ವಸ್ತ್ರವನ್ನು ಧರಿಸುವವನ ಅಲಂಕಾರ ಅಥವಾ ಭೂಷಣಕ್ಕೆ ಕಾರಣನಾಗಿ ಲಕ್ಷ್ಮೀಪತಿ ಶ್ರೀಮನ್ನಾರಾಯಣನಿದ್ದಾನೆ.

ಪರೇಶನಾದ ಶ್ರೀಮನ್ನಾರಾಯಣನು ವಾಸುದೇವಾದಿ ರೂಪಚತುಷ್ಟಯಗಳಿಂದ ವಸ್ತ್ರದಲ್ಲಿ ಇದ್ದವನಾಗಿ, ಸ್ವಯಂ ವಸ್ತ್ರವಾಚ್ಯನಾಗಿದ್ದು, ಅಂತಹ ಉತ್ತಮ ವಸ್ತ್ರದಿಂದ ಅಲಂಕೃತನಾದ ಮಾನವನಿಗೆ ಯಾವಾಗಲೂ, ಗೌರವಪ್ರದನಾಗಿ ಇದ್ದಾನೆ. ಮಾನ್ಯ ಎಂದರೆ, ವಸ್ತ್ರಾಲಂಕಾರದಿಂದ ಭೂಷಿತನಾದವನ ಅಂತರ್ಯಾಮಿ ರೂಪ. ಆದ್ದರಿಂದ ಶ್ರೀಹರಿಯು ಮಾನ್ಯ ಮಾನದ. ||೨೮||

| ಅಧಿಷ್ಠಾನ | ಅಧಿಷ್ಠಾನಗತ ಭಗವದ್ರೂಪ | ವಿವರಣೆ |
|---|---|---|
| ಕಾರ್ಪಾಸ | ವಾಸುದೇವ | ಮೂಲದ್ರವ್ಯ |
| ತೂಲ | ಸಂಕರ್ಷಣ | ಶುದ್ಧ ಹತ್ತಿ |
| ತಂತು | ಪ್ರದ್ಯುಮ್ನ | ದಾರದ ಎಳೆಗಳು |
| ವಸ್ತ್ರ | ಅನಿರುದ್ಧ | ನಿರ್ಮಿತ ವಸ್ತ್ರ |
| ಭೂಷಣ– | ನಾರಾಯಣ | ಗೌರವಪ್ರದನು |
| ಮಾನ್ಯಮಾನದನಾಗಿ | | ಗೌರವಾರ್ಹನು. |

## ಪದ್ಯ ೨೯

**ಮೂಲ**

ಲಲನೆಯಿಂದೊಡಗೂಡಿ ಚೈಲಗ ।
ಳೊಳಗೆ ಓತಪ್ರೋತರೂಪದಿ ।
ನೆಲೆಸಿಹನು ಚತುರಾತ್ಮಕ ಜಗನ್ನಾಥ ವಿಠ್ಠಲನು ॥
ಛಳಿ ಬಿಸಿಲು ಮಳೆಗಾಳಿಯಿಂದರ ।
ಘಳಿಗೆ ಬಿಡದೆಲೆ ಕಾವನೆಂದರಿ ।
ದಿಳೆಯೊಳರ್ಚಿಸುತಿರು ಸದಾ ಸರ್ವಾಂತರಾತ್ಮಕನ ॥ ॥೨೯॥

**ಅವತರಣಿಕೆ**

ಸರ್ವಾಂತರಾತ್ಮಕನಾದ ಆ ಸರ್ವೇಶನನ್ನು ಅರಘಳಿಗೆ ಬಿಡದೆ ಭಜಿಸು ತ್ತಿರಬೇಕೆಂದು ಸಂಧಿಯನ್ನು ಉಪಸಂಹರಿಸುತ್ತಾರೆ.

**ಪ್ರತಿಪದಾರ್ಥ**

**ಲಲನೆಯಿಂದೊಡಗೂಡಿ**= ಶ್ರೀಮನ್ನಾರಾಯಣನು ತನ್ನ ಪತ್ನಿಯಾದ ಶ್ರೀಲಕ್ಷ್ಮೀದೇವಿಯರ ಸಹಿತನಾಗಿ, **ಚೈಲಗಳೊಳಗೆ**= ವಸ್ತ್ರಗಳಲ್ಲಿ, **ಓತ ಪ್ರೋತರೂಪದಿ**=ಅಡ್ಡವಾಗಿ ಮತ್ತು ಉದ್ದವಾಗಿ ನೇಯ್ದಿರುವ ದಾರಗಳಂತೆ **ಚತುರಾತ್ಮಕ**= ಸ್ವಾಭಿನ್ನ ಅನಿರುದ್ಧಾದಿ ನಾಲ್ಕು ಭಗವದ್ರೂಪಗಳಿಂದ, **ಜಗನ್ನಾಥವಿಠ್ಠಲನು**=ಜಗತ್ಸ್ವಾಮಿಯಾದ, ದಾಸವರ್ಯರ ಅಂಕಿತಸಾಕೇಂತ ನಾದ ಶ್ರೀಪರಮಾತ್ಮನು, **ನೆಲೆಸಿಹನು**= ತದಾಕಾರನಾಗಿ ವ್ಯಾಪಿಸಿದ್ದಾನೆ, **ಛಳಿ**= ತಣ್ಣಗೆ ಕೊರೆಯುತ್ತಿರುವ ಛಳಿಗಾಲವೇನು, **ಬಿಸಿಲು**= ಸುಡು ತ್ತಿರುವ ಬಿಸಿಲುಗಾಲವೇನು, **ಮಳೆಗಾಳಿಯಿಂದ**= ಬೀಸುತ್ತಿರುವ ಗಾಳಿ ಯಿಂದ ಯುಕ್ತವಾದ ಮಳೆಗಾಲವೇನು, ಈ ನಾಲ್ಕುವಿಧವಾದ ಕಾಲಭೇದ ಗಳಿಂದ ದೇಹಕ್ಕೆ ಉಂಟಾಗುವ ಕ್ಲೇಶರೂಪವಾದ ಬಾಧೆಯಿಂದ, **ಅರಘಳಿಗ ಬಿಡದೆಲೆ**= ಅರಕ್ಷಣವೂ ಜೀವರನ್ನು ಬಿಟ್ಟು ಅಗಲದ ಬಿಂಬರೂಪೀ ಶ್ರೀಪರ ಮಾತ್ಮನು, **ಕಾವನೆಂದು**= ಜೀವರನ್ನು ಸಂರಕ್ಷಿಸುತ್ತಾನೆ ಎಂದು, **ಅರಿತು** = ದೃಢನಂಬಿಕೆಯಿಂದ ತಿಳಿದು, **ಇಳೆಯೊಳು**= ಈ ಭೂಮಿಯ ಮೇಲೆ,

**ಸರ್ವಾಂತರಾತ್ಮಕನ=** ಸರ್ವತ್ರ ವ್ಯಾಕಪನಾದ ಅಂತರ್ಯಾಮಿರೂಪನಾದ ಬಿಂಬಮೂರ್ತಿಯನ್ನು' **ಸದಾ=**ಎಡಬಿಡದೆ (ಯಾವಾಗಲೂ), **ಅರ್ಚಿಸು ತಿರು=** ಐಕ್ಯಚಿಂತನಾಕ್ರಮದಿಂದ ಪೂಜೆಮಾಡುತ್ತಿರು ಎಂದು ಪ್ರಸಕ್ತ ಸಂಧಿಗತ ಪ್ರಕರಣವನ್ನು ಉಪಸಂಹಾರ ಮಾಡುತ್ತಾರೆ. ||೨೯||

# ವ್ಯಾಖ್ಯಾನಗಳು

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಸ್ತ್ರಾಂತರ್ಗತನಾಗಿ ಪರಮಾತ್ಮ ಪ್ರಾಣಿಗಳನ್ನು ರಕ್ಷಿಸುವ ವಿಧವನ್ನ ಹೇಳತಾರೆ.

ಶ್ರೀನಾರಾಯಣದೇವರು ತನ್ನ ಪತ್ನಿಯಿಂದ ಸಮೇತನಾಗಿ, ಅಂಶರೂಪ ಗಳಾದ ಅನಿರುದ್ಧಾದಿ ನಾಲ್ಕುರೂಪಗಳಿಂದ ಉದ್ದ ಮತ್ತು ಅಡ್ಡ ಎರಡು ವಿಧ ದಾರಗಳಿಂದ ಯುಕ್ತವಾದ ತತ್ತ್ವಾತ್ಮಕವಾದ ವಸ್ತ್ರಗಳೊಳಗೆ ತದಾಕಾರ ದಿಂದ ಪ್ರತಿತಂತುವಿನಲ್ಲಿ ಐದು ಐದು ರೂಪಗಳಿಂದ ಆವಾಸನಾಗಿ ಇರೋವ ನಾಗಿದ್ದಾನೆ. ಈ ಪ್ರಕಾರ ಇರತಕ್ಕ ಜಗತ್ತಿಗೇ ಸ್ವಾಮಿಯಾದ ವಿಠ್ಠಲಸಾಂಕೇತ ನಾದ ಪರಮಾತ್ಮನು ಆಯಾ ವಸ್ತ್ರಗಳ ದ್ವಾರಾ, ಛಳಿಯೇನು, ಬಿಸಿಲೇನು, ಮಳೆಯೇನು, ಗಾಳಿಯೇನು, ಈ ನಾಲ್ಕರಿಂದ ಪ್ರಾಪ್ತವಾಗತಕ್ಕ ದೇಹಕ್ಕೆ ಆಗತಕ್ಕ ಬಾಧೆಯಿಂದ ಸಂರಕ್ಷಣೆ ಮಾಡತಾನೆಂದು ತಿಳಿದವನಾಗಿ, ಸಾಧನ ಭೂಮಿಯಾದ ಈ ಭರತಖಂಡದಲ್ಲಿ ಸರ್ವತ್ರವ್ಯಾಪ್ತನಾದ ಪರಮಾತ್ಮನಲ್ಲಿ ನಿನ್ನ ಬಿಂಬನಾದ ಅಂತರಾತ್ಮಕನ ಐಕ್ಯ ಚಿಂತಿಸಿ, ಅರ್ಧಘಳಿಗೆಯಾದರೂ ವಿಸ್ಮೃತನಾಗಿ ಇರದಂತೆ ನಿರಂತರ ಐಕ್ಯಚಿಂತನಾರೂಪದಿಂದ ಪೂಜೆ ಮಾಡತಾ ಇರಬೇಕೆಂದು ತಾತ್ಪರ್ಯ. ||೨೯||

## ಭಾವಪ್ರಕಾಶಿಕೆ

ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವನೆಂಬ ೪ ಮೂರ್ತಿ ಗಳ ಸ್ವರೂಪಭೂತನಾದ, ಜಗನ್ನಾಥವಿಠ್ಠಲಾತ್ಮಕನಾದ ಶ್ರೀಮನ್ನಾರಾ ಯಣನು ವಸ್ತ್ರಗಳಲ್ಲಿ ಅಡ್ಡವಾಗಿಯೂ, ಉದ್ದವಾಗಿಯೂ (ಓತಪ್ರೋತ)

ಹೆಣೆದಿರುವ ದಾರಗಳ ರೂಪದಿಂದ ಇದ್ದು ಛಳಿ ಬಿಸಿಲು ಮಳೆಗಾಳಿಯಿಂದ ಅರ್ಧಘಳಿಗೆಯಾದರೂ ಬಿಡದೆ ಸದಾ ನಮ್ಮನ್ನು ರಕ್ಷಿಸುತ್ತಿರುವನೆಂದು ತಿಳಿದು ಪೂಜಿಸುತ್ತಿರು. ದಾರಗಳು ಬಟ್ಟೆಗೆ ಹೇಗೋ ಹಾಗೆ ಶ್ರೀಪರಮಾತ್ಮನ ರೂಪಗಳು ನಮ್ಮ ಶರೀರಕ್ಕೆ ಒಳಗೂ ಹೊರಗೂ ಸೇರಿಕೊಂಡಿವೆ ಎಂದು ಭಾವವು. ||೨೯||

**ಭಾವದರ್ಪಣ**

ಸ್ವಸ್ತ್ರೀ ಸಹಿತನಾಗಿ ವಸ್ತ್ರದಲ್ಲಿದ್ದು ಶೀತಾದಿಗಳ ಕಳೆದು ಕಾಪಾಡುವನೆಂದು ಹೇಳುತ್ತಾರೆ. ಲಲನಾ ಇತಿ. ||೨೯||

**ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಉಪಸಂಹರತಿ–ಲಲನೆ ಇತಿ|| ಲಲನೆ= ರಮಾ||೨೯||

**ಕನ್ನಡಾರ್ಥ**

ಶ್ವಾಸಸಂಧಿಯನ್ನು ಕೊನೆಗಾಣಿಸುತ್ತಾರೆ– ಲಲನೆಯಿಂದೊಡಗೂಡಿ ಎಂಬ ಪದ್ಯದಿಂದ.

ರಮಾಪತಿ ಜಗನ್ನಾಥವಿಠ್ಠಲನು ವಸ್ತ್ರಗಳಲ್ಲಿ ಹತ್ತಿ, ಹಂಜಿ, ನೂಲು, ಅರಿವೆ ಹೀಗೆ ಇಷ್ಟಗಳಲ್ಲಿ ನಾಲ್ಕು ರೂಪದಿಂದ ಓತಪ್ರೋತನಾಗಿ ವ್ಯಾಪಿಸಿದ್ದು ಚಳಿ, ಮಳೆ, ಗಾಳಿಗಳಿಂದ ನಮ್ಮನ್ನು ಸಂರಕ್ಷಿಸುತ್ತ ಇರುವನಾದುದರಿಂದ ವಸ್ತ್ರದಲ್ಲಿರುವ ಈ ನಾಲ್ಕು ಭಗವದ್ರೂಪಗಳನ್ನೂ–ನಾರಾಯಣರೂಪವನ್ನೂ ಸದಾ ಸ್ಮರಿಸಬೇಕು ಎಂದು ಉಪಸಂಹಾರ ಪದ್ಯದ ಭಾವ. ||೨೯||

**ಶ್ರೀಗುರುಹೃದಯಪ್ರಕಾಶಿಕೆ**

ಚೈಲಗಳೆಂಬ ವಸ್ತ್ರಗಳಲ್ಲಿ ಲಲನೆಯೆಂಬ ತನ್ನ ಸ್ತ್ರೀಯಾದ ರಮಾರೂಪದಿಂದ ಕೂಡಿ ಓತಪ್ರೋತರೂಪವೆಂಬ ಹಾಸು ಹೊಕ್ಕು ಎಂಬ ಅಡ್ಡ ಉದ್ದವಾಗಿರುವ ನೂಲುಬಟ್ಟೆಯಲ್ಲಿ ಮೇಲೆ ಹೇಳಿದ ಚತುರ್ಮೂರ್ತಿ ಜಗನ್ನಾಥ ವಿಠ್ಠಲದೇವರು ಸ್ಥಿರವಾಗಿರುವನು. ಛಳಿ ಬಿಸಿಲು ಮಳೆ ಗಾಳಿಯಿಂದ ಅರೆ ಘಳಿಗೆಯೂ ಬಿಡದೆ ಕಾಯುವನು, ಎಂದರೆ ಛಳಿ ಮೊದಲಾದ ಬಾಧೆ ಅಭಿಮಾನ ಮೂಲಕ ಜೀವಗೆ ಆಗದಂತೆ ರಕ್ಷಿಸುವನು ಎಂದು ತಿಳಿದು ಸರ್ವಾಂತ

ರಾತ್ಮಕಸ್ವಾಮಿಯನ್ನು ಸದಾ ಅರ್ಚಿಸುತ್ತಿರು, ಎಂದರೆ ಸ್ಮರಣಾದಿ ಪೂಜೆಯನ್ನು ಭಾವಿಸುವುದು. ||೨೯||

# ಸರ್ವವ್ಯಾಖ್ಯಾನಸಾರಸಂಗ್ರಹ

ವಸ್ತ್ರಗತ ಚತುರ್ರೂಪಾತ್ಮಕನಾದ ಶ್ರೀಮನ್ನಾರಾಯಣನು ಈ ಜಗತ್ತಿನಲ್ಲಿ ಸರ್ವತ್ರ ಓತಪ್ರೋತನಾಗಿ ವ್ಯಾಪಿಸಿದ್ದು ನಮ್ಮ ಶರೀರವನ್ನು ಚಳಿ, ಬಿಸಿಲು, ಗಾಳಿ, ಮಳೆಗಳಿಂದ ಕಾಪಾಡಿ ಸಂರಕ್ಷಿಸುತ್ತಿರುವನೆಂದು ತಿಳಿಸುತ್ತಾ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ.

ನೂಲುಗಳಿಂದ (ತಂತುಗಳು) ನಿರ್ಮಿತವಾದ ವಸ್ತ್ರಕ್ಕೆ ಚೈಲವೆಂದು ಹೆಸರು. ನಮ್ಮ ಶರೀರವನ್ನು ಚೈಲಗಳಿಂದ ಅಲಂಕರಿಸಿಕೊಂಡಾಗ ಅಂತಹ ಚೈಲಗಳಲ್ಲಿ ಶ್ರೀಮನ್ನಾರಾಯಣರೂಪೀ ಶ್ರೀಪರಮಾತ್ಮನು, ವಾಸುದೇವ, ಸಂಕರ್ಷಣ,ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಸ್ವಾಭಿನ್ನರೂಪಚತುಷ್ಟಯಗಳಿಂದ ಸಪತ್ನಿಕನಾಗಿ ವ್ಯಾಪಿಸಿಕೊಂಡು ನಮ್ಮ ದೇಹವನ್ನು ಮಳೆ ಬಿಸಿಲು ಗಾಳಿ ಛಳಿಗಳಿಂದ ಸಂರಕ್ಷಿಸುತ್ತಾನೆ.

ಲಲನೆಯರಿಂದ ಒಡಗೂಡಿದ ಚತುರ್ರೂಪಾತ್ಮಕ ಶ್ರೀಜಗನ್ನಾಥವಿಠ್ಠಲ ನಾಮಕನು ವಸ್ತ್ರಗಳಲ್ಲಿ ಓತಪ್ರೋತನಾಗಿ ವ್ಯಾಪಿಸಿಕೊಂಡಿರುವನು. ಅಂತೆಯೇ ಈ ಚರಾಚರಾತ್ಮಕವಾದ ಬ್ರಹ್ಮಾಂಡದಲ್ಲಿ ಅಂತರ್ಬಹಿಶ್ಚ ವ್ಯಾಪ್ತನಾಗಿದ್ದಾನೆ.

ಈ ರೀತಿಯಲ್ಲಿ ಉತ್ತಮ ಜ್ಞಾನಾನುಸಂಧಾನಪೂರ್ವಕ ಆ ಜಗದ್ರಕ್ಷಕನನ್ನು ಸ್ಮರಿಸಿಕೊಳ್ಳುತ್ತಾ ಹಗಲಿರುಳೂ ಶ್ರೀಜಗನ್ನಾಥವಿಠ್ಠಲನನ್ನು ಕೊಂಡಾಡಿ ವಸ್ತ್ರಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಕ್ರಮದಿಂದ ಪೂಜಿಸುತ್ತಿರು ಎಂದು ಜ್ಞಾನಮಾರ್ಗವನ್ನು ತೋರುತ್ತಾ, **ಶ್ವಾಸಸಂಧಿ** ಪ್ರಕರಣವನ್ನು ಉಪಸಂಹಾರ ಮಾಡಿರುತ್ತಾರೆ. ||೨೯||

|| ಇಂತು ೧೫ನೆಯ ಸಂಧಿಯ ಸರ್ವವ್ಯಾಖ್ಯಾನಸಾರಸಂಗ್ರಹ ಸಮಾಪ್ತಿ ||

|| ಶ್ರೀಮಧ್ವೇಶಾರ್ಪಣಮಸ್ತು ||